ಹತ್ತು ಕುಟುಂಬ ಹದಿನೆಂಟು ಗೋತ್ರದ

ಕೊಡಗು ಗೌಡ ಜನಾಂಗದ ಸಂಸ್ಕೃತಿ ಆಚರಣೆಗಳ ಸಂಗ್ರಹ

ಅಕ್ಷಯ



ಲೇಖಕರು

ಬೈತಡ್ಕ ಜಾನಕಿ ಬೆಳ್ಯಪ್ಪ

ಹತ್ತು ಕುಟುಂಬ ಹದಿನೆಂಟು ಗೋತ್ರದ
ಕೊಡಗು ಗೌಡ ಜನಾಂಗದ
ಸಂಸ್ಕೃತಿ ಆಚರಣೆಗಳ ಸಂಗ್ರಹ

ಅಕ್ಷಯ

ಲೇಖಕರು :

ಬೈತಡ್ಕ ಜಾನಕಿ ಬೆಳ್ಯಪ್ಪ

ಪ್ರಕಾಶಕರು :

ಕೊಡಗು ಗೌಡ ಮಹಿಳಾ ಒಕ್ಕೂಟ, ಮಡಿಕೇರಿ, ಕೊಡಗು

'AKSHAYA', A Collection of 'Kodagu Gowda Janapada' folk articles in Kannada & Gowda Kannada (Are Base) languages; Published by Kodagu Gowda Mahila Okkuta, Madikeri, Kodagu, written by Bythadka Janaki Belliappa, Madikeri, Kodagu.

ಕ್ರಯ : ರೂ. 100-00 Price : Rs. 100-00

ಪ್ರಕಟಣೆ : ಮಾರ್ಚ್ **2009**

ಗೌಡ ವಿದ್ಯಾ ಸಂಘದ ಶತಮಾನೋತ್ಸವದ ಸುಸಂದರ್ಭ

ಪ್ರಕಾಶಕರು :

ಕೊಡಗು ಗೌಡ ಮಹಿಳಾ ಒಕ್ಕೂಟ, ಮಡಿಕೇರಿ, ಕೊಡಗು

ಮುದ್ರಕರು :

ಶ್ರೀ ಕೃಷ್ಣ ಕಂಪ್ಯೂಟರ್ಸ್ & ಪ್ರಿಂಟರ್ಸ್

ಮಡಿಕೇರಿ .

Ph : 08272-224919, 9448135592

ಲೇಖಕರ ವಿಳಾಸ :

ಬೈತಡ್ಕ ಜಾನಕಿ ಬೆಳ್ಯಪ್ಪ

21 -16, ರೇಸ್ ಕೋರ್ಸ್ ರಸ್ತೆ,

ಎಲ್.ಐ.ಸಿ. ಹತ್ತಿರ

ಮಡಿಕೇರಿ, ಕೊಡಗು

ದೂರವಾಣಿ : 228047

ಮುನ್ನುಡಿ

ಪ್ರತಿಯೊಂದು ಜನಾಂಗಗಳು ಹುಟ್ಟು, ಸಾವು, ಮದುವೆ, ಹಬ್ಬ, ಹರಿದಿನಗಳಲ್ಲಿ ತಮ್ಮದೇ ಆದ ಸಂಪ್ರದಾಯ ಮತ್ತು ಆಚರಣೆಯ ಪದ್ಧತಿಗಳನ್ನು ಇಟ್ಟುಕೊಂಡಿರುತ್ತಾರೆ. ಇವುಗಳನ್ನು ಕಟ್ಟುನಿಟ್ಟಾಗಿ ಆಚರಿಸುವಂತೆ ನೋಡಿಕೊಳ್ಳಲು ಪ್ರತಿ ಸಮಾಜದ ಹಿರಿಯರು ಮುಂದೆ ನಿಂತು ಪ್ರಯತ್ನಿಸುತ್ತಾ ಇರುತ್ತಾರೆ. ಯುವ ಪೀಳಿಗೆ ಇವುಗಳನ್ನು ಏಕೆ, ಏನು, ಎಂತ ಪ್ರಶ್ನೆ ಹಾಕುವುದು-ಉತ್ತರಕ್ಕೆ ಬದಲಾಗಿ ಬೈಗಳು ಪಡೆಯುವುದು ಶತಮಾನಗಳಿಂದ ನಡೆದು ಬಂದಿದೆ. ಇಂದಿನ ಹಿರಿಯರು ಅವರ ಬಾಲ್ಯದ ದಿನಗಳನ್ನು ನೆನಪಿಸಿಕೊಳ್ಳುತ್ತಾರೆ.

ಬೈತಡ್ಕ ಜಾನಕಿ ಬೆಳ್ಯಪ್ಪನವರು ಜನಾಂಗದವರ ಆಚರಣೆಗಳನ್ನು ಬಹಳ ಶ್ರಮಪಟ್ಟು ಸಂಗ್ರಹಿಸಿದ್ದಾರೆ. ಮುಖಚಿತ್ರದಲ್ಲಿ ಕಾಣಿಸುವ ಆಭರಣ ತುಂಬುವ ಕರಡಿಗೆ-ಬಣ್ಣ ಬಂಗಾರ, ವೀಳ್ಯ, ನೆಲ್ಲಕ್ಕಿ ದೀಪ "ಅಕ್ಷಯ" ಎನ್ನುವ ಹೆಸರು ಈ ಸಂಗ್ರಹಣೆಗೆ ಅದರದೇ ಆದ ಪಾವಿತ್ರ್ಯ ಮತ್ತು ಮೆರಗನ್ನು ತಂದುಕೊಟ್ಟಿದೆ.

ಸೋದರಿ ಜಾನಕಿಯವರು-ಕೊಡಗು ಸಂಗಾತಿ ಪತ್ರಿಕೆಯ ಶ್ರೀ ಪಟ್ಟಡ ಪ್ರಭಾಕರರೊಂದಿಗೆ ಜನಾಂಗದಲ್ಲಿ ಈಗಾಗಲೇ ಹೆಸರು ಮಾಡಿದ ವ್ಯಕ್ತಿ. ಹುಟ್ಟಿದ ಮತ್ತು ಹತ್ತಿದ ಮನೆ ಎರಡು ಮನೆಗಳಿಗೆ ಕೀರ್ತಿ ತರುತ್ತಿರುವವರು. ಹೆಣ್ಣು ಇಳಿಸಿ ಕೊಡುವಾಗ ಹೇಳುವ ಹಿರಿಯರ ಆಶೀರ್ವಾದದಂತೆ ಸಾರ್ಥಕ ಜೀವನ ನಡೆಸುತ್ತಿರುವವರು.

ಇವರ ಆಕಾಶವಾಣಿಯ ಕಾರ್ಯಕ್ರಮಗಳು ಮಡಿಕೇರಿ ಆಕಾಶವಾಣಿಯಲ್ಲಿ ಬಹಳ ಜನಪ್ರಿಯವಾಗಿದೆ. ನಮ್ಮೂರಿನ ಸುಬ್ರಾಯ ಸಂಪಾಜೆ ಅರೆಭಾಷೆ ಕಾರ್ಯಕ್ರಮಕ್ಕೆ ನನ್ನನ್ನು ಸಂಪರ್ಕಿಸಿದಾಗ, ಇವರ ಬಗ್ಗೆ ಮತ್ತು ಇತರ ಮಹಿಳಾ ಒಕ್ಕೂಟದ ಸದಸ್ಯರ ಬಗ್ಗೆ ಅನೇಕ ಒಳ್ಳೆಯ ಅಭಿಪ್ರಾಯ ವಿನಿಮಯ ನಡೆಯುತ್ತಿರುವುದನ್ನು ಇಲ್ಲಿ ನೆನೆಸಿಕೊಳ್ಳುತ್ತೇನೆ. ಈ ಸಂಗ್ರಹದಲ್ಲಿರುವ ಲೇಖನಗಳು ಆಕಾಶವಾಣಿ ಮತ್ತು ಅನೇಕ ಪತ್ರಿಕೆ ಸಂಸ್ಮರಣಾ ಸಂಚಿಕೆಗಳಲ್ಲಿ ಈಗಾಗಲೇ ಜನಪದರಿಗೆ ತಲುಪಿದೆ. ಹಾಗೂ ಸ್ವೀಕರಿಸಲ್ಪಟ್ಟಿದೆ. ಈ ಸಂಗ್ರಹದ ಮೂಲಕ ಜನಾಂಗದ ಪ್ರತಿ ಮನೆಯ ಪುಸ್ತಕ ಭಂಡಾರವನ್ನು ಸೇರಲಿದೆ.

ಗೌಡ ಜನಾಂಗದವರಿಗೆ ಶೃಂಗೇರಿ ಮಠಕ್ಕಿರುವ ನಂಟು ಎಂಬ ಲೇಖನ ಇದರೊಳಗೆ ಸೇರಿರುವುದನ್ನು ಲೇಖಕಿಯವರು ನನ್ನೊಡನೆ ಸಂಕೋಚದಿಂದ ಹೇಳಿಕೊಂಡರು. ಇತ್ತೀಚೆಗೆ ಶೃಂಗೇರಿಗೆ ನಾನು ಮತ್ತು ಪುರುಷೋತ್ತಮ ಬಿಳಿಮಲೆಯವರು ವಿರೋಧಿಸುವವರೆಂಬ ಪ್ರಚಾರ ಇದೆ. ಪಕ್ಕಲಿಗರಿಗೆ ಪ್ರತ್ಯೇಕ ಮಠ ಇಲ್ಲದೆ ಇರುವಾಗ ಸಾರ್ವತ್ರಿಕ ಹಿಂದುಗಳಿಗೆ ಇದ್ದಂತಹ ಶೃಂಗೇರಿ ಮಠಕ್ಕೆ ನಾವು ನಡುಕೊಳ್ಳುತ್ತಿದ್ದೆವು. ಯಾವುದೋ ಕಾರಣಕ್ಕೆ ಇದು ನಿಂತುಹೋಗಿತ್ತು. 1985ರಲ್ಲಿ ಕೊಡಗು ಮತ್ತು ದಕ್ಷಿಣ ಕನ್ನಡ ಜಿಲ್ಲೆಯವರು ಒಂದಾಗಿ ನಡೆಸಿದ ಬೃಹತ್ ಸಮ್ಮೇಳನದಲ್ಲಿ ಶ್ರೀ ಕ್ಷೇತ್ರ ಆದಿಚುಂಚನಗಿರಿಯ ಸ್ವಾಮೀಜಿಯವರಾದ ಶ್ರೀಶ್ರೀಶ್ರೀ ಬಾಲಗಂಗಾಧರನಾಥ ಸ್ವಾಮೀಜಿಯವರನ್ನು ಗುರುಗಳಾಗಿ ಸ್ವೀಕರಿಸಿರುವುದು ಎಲ್ಲರಿಗೂ ತಿಳಿದ ವಿಚಾರ.ಅನಂತರದ ಎರಡು ದಶಕಗಳಲ್ಲಿ ನಮ್ಮ ಜನಾಂಗಕ್ಕೆ ಸಿಕ್ಕಿದ ಸಾಮಾಜಿಕ,

ರಾಜಕೀಯ ಬೆಳವಣಿಗೆ ಎಲ್ಲರಿಗೂ ಅರ್ಥವಾಗಿದೆ. ಈ ಬಗ್ಗೆ ಗೊಂದಲ ಸೃಷ್ಟಿಸಿಕೊಳ್ಳುವುದು ಸರಿಯಲ್ಲ. ಇದೆ ಪುಸ್ತಕದಲ್ಲಿ ಆದಿಚುಂಚನಗಿರಿಗೆ ಪ್ರವಾಸ ಹೋದ ಚಿಕ್ಕ ಲೇಖನವೂ ಇದೆ. "ನಮಗೆ ಗುರು ಮುಂದೆ-ನಾವು ಗುರುವಿನ ಹಿಂದೆ "ಎನ್ನುವ ಜ್ಞಾನೋದಯ ಉಂಟಾದರೆ, ಜನಾಂಗದ ಸಮಗ್ರ ಅಭಿವೃದ್ಧಿ ಮುಂದಿನ ದಿನಗಳಲ್ಲಿ ಸಾಧ್ಯವಾಗಬಹುದು.

ಬ್ರಿಟೀಷರ ಒಡೆದು ಆಳುವ ನೀತಿಯಿಂದ ಸೋಮವಾರಪೇಟೆಯವರೆ ಬೇರೆ-ವಿರಾಜಪೇಟೆಯವರೆ ಬೇರೆ- ಇಷ್ಟೇ ಯಾಕೆ ಕನ್ನಡ ಜಿಲ್ಲೆಯವರೂ ಬೇರೆ ಎನ್ನುವ ಸಣ್ಣತನ ಕೆಲವು ದಶಕಗಳಿಂದ ಇತ್ತು. "ಮಲೆನಾಡಿನ ಶೈವ ಒಕ್ಕಲಿಗರು" ಡಾ|| ವೈ.ಸಿ. ಭಾನುಮತಿಯವರ ಅಧ್ಯಯನ ಗ್ರಂಥ ಓದಿದ ಮೇಲೆ ನಾವು ಮಲೆನಾಡು ಕನ್ನಡಿಗರಲ್ಲಿ ಇರುವ ಸಾಮ್ಯತೆಯನ್ನು ಗುರುತಿಸಿ ಅವರು ಬೇರೆಯವರಲ್ಲ ಎನ್ನುವ ಜ್ಞಾನೋದಯ ಉಂಟಾಗುತ್ತದೆ. ಅದೇ ರೀತಿ ಜಾನಕಿಯವರ "ಅಕ್ಷಯ"ದಿಂದ ಜಿಲ್ಲೆಯ ಸಮಗ್ರ ಒಕ್ಕಲಿಗರನ್ನು ಒಂದುಗೂಡಿಸಲು ಉಪಯೋಗವಾಗಲಿ.

ಬ್ರಿಟಿಷರ ಆಳ್ವಿಕೆಯ ವಿರುದ್ಧ ಅಮರಕ್ರಾಂತಿ ಬಂಡಾಯದ ಮುಂದಾಳತ್ವ ವಹಿಸಿದ ಗುಡ್ಡೆಮನೆ ಅಪ್ಪಯ್ಯ, ಕೆದಂಬಾಡಿ ರಾಮಯ್ಯ ಗೌಡರಿಂದಾಗಿ ಇಡೀ ಗೌಡ ಜನಾಂಗವೇ ಒಂದೂವರೆ ಶತಮಾನದಲ್ಲಿ ಅವನತಿಯ ಪರಮಾವಧಿಯನ್ನು ಕಂಡಿತು. ಇಪ್ಪತ್ತನೇ ಶತಮಾನದ ಆದಿಯಲ್ಲಿ ಕುಂಬಗೌಡನ ಕುಶಾಲಪ್ಪಗೌಡರ ಮುಂದಾಳತ್ವದಲ್ಲಿ ಗೌಡ ವಿದ್ಯಾ ಸಂಘ ಸ್ಥಾಪನೆಯಾಯಿತು.

1921ರಲ್ಲಿ ನಮ್ಮಪ್ಪ ದಿ| ಸಣ್ಣಯ್ಯ ಪಟೇಲರು ಸ್ಥಾಪಕ ಕಾರ್ಯದರ್ಶಿಯಾಗಿ ಇಲ್ಲಿಯ ಬೈಲಾವನ್ನೇ ಆಯ್ದುಕೊಂಡು ದಕ್ಷಿಣ ಕನ್ನಡ ಗೌಡ ವಿದ್ಯಾಸಂಘವನ್ನು ಸ್ಥಾಪಿಸಿದರು. ಅದರ ಮೂಲಕ ನಮ್ಮ ಸಮಾಜದ ಸೇವೆಯನ್ನು ಮಾಡುತ್ತಾ ಮೂರು ದಶಕ ಅಧ್ಯಕ್ಷರಾಗಿ ಸೇವೆ ಸಲ್ಲಿಸಿ ಜನಪ್ರಿಯತೆಯ ನಾಲ್ಕು ದಶಕಗಳಲ್ಲಿ ಹಾಸ್ಟೆಲ್ ಕಟ್ಟಿಸುವುದು, ಸ್ಕಾಲರ್‌ಶಿಪ್ ನೀಡುವುದು, ಉದ್ಯೋಗ ಕೊಡಿಸುವುದು, ಮದುವೆ ಸಂಬಂಧ ಮಾಡಿಸಿಕೊಡುವುದು ಇತ್ಯಾದಿ ಜನಾಂಗದೊಂದಿಗೆ ಸ್ಪಂದಿಸುತ್ತಾ ಜನ ಸೇವೆ ಮಾಡಿದರು.

ಅವರ ದೂರದೃಷ್ಟಿಗೆ ಒಂದು ಉದಾಹರಣೆಯೆಂದರೆ ತಮ್ಮ ಮೊಮ್ಮಗಳನ್ನು ಹಾಸನ ಜಿಲ್ಲೆಯ ಎಲ್.ಟಿ. ಕಾರ್ಲೆಯವರಿಗೆ ವಿವಾಹ ಮಾಡಿಕೊಟ್ಟದ್ದು ಪ್ರಮುಖ ಅನ್ನಿಸುತ್ತದೆ. ಇದರಿಂದಾಗಿ ಮಾಜಿ ಪ್ರದಾನಿ ದೇವೇಗೌಡರೂ ನಮಗೆ ದೂರ ಸಂಬಂಧಿ ಅಂದುಕೊಳ್ಳಬಹು ದಾಗಿದೆ. ಹೊರಜಿಲ್ಲೆಯ ಸಂಬಂಧಗಳಿಂದ ದಶಕಗಳ ಹಿಂದೆ ನಮ್ಮನ್ನು ಕೀಳಾಗಿ ಕಾಣುತ್ತಿದ್ದ, ನಗಣ್ಯರೆಂದು ಭಾವಿಸಿದ್ದ ಇತರ ಜನಾಂಗೀಯರಿಗೆ ನಮ್ಮ ಮುನ್ನಡೆ ಅಚ್ಚರಿ ಮೂಡಿಸುವಂತಾಗಿದೆ.



ರೈತ ಜನಾಂಗಗಳೆಲ್ಲ ಒಂದೇ ಎನ್ನುವ ಒಗ್ಗಟ್ಟು ಸಾಧಿಸಲು ಸೋದರಿ ಬೈತಡ್ಕ ಜಾನಕಿ ಬೆಳ್ಯಪ್ಪ ಅವರ ಶ್ರಮಕ್ಕೆ ಸಹಾನುಭೂತಿ, ಜನಪ್ರೀತಿ, ಗೌರವ ಎಲ್ಲಾ ರೀತಿಯ ಶುಭ ಸನ್ಮಂಗಳ ಲಭಿಸುವಂತಾಗಲಿ ಎಂದು ಹಾರೈಸುತ್ತೇನೆ.

ಎನ್.ಎಸ್. ದೇವಿಪ್ರಸಾದ್, ಸಂಪಾಜೆ.





ಪ್ರಾತನೆ

ಮಣ್ಣ್‌ಲಿ ಹುಟ್ಟವ್‌ಳು | ಮಣ್ಣ್‌ಲಿ ಬೆಳಿಯವ್‌ಳು |
ಮಣ್ಣ್‌ಲಿ ಕಣ್ಣ್ ಬುಡುವೊಳು || ಜಗಜ್ಯೋತಿ
ನಮ್‌ಗಾಗಿ ಬೆಳ್‌ಗ್ ಸತ್ಯಂದ ||

ಬಾಗ್‌ಲ್ ಬಾಗ್‌ಲ್ ಪೊರ್ಲು | ಈ ಮನೆ ಬಾಗ್‌ಲ್ ಪೊರ್ಲು |
ಬಾಗ್‌ಲ್ ಮ್ಯಾಲೆ ಕೆತ್ತ್ಯೊಳೊ || ಕೆತ್ತನೆ
ಗಿಳಿ ಗುಬ್ಬಿ ಪಾರಿವಾಳದ ಹಿಂಡ್||

ಅಂದುಳ್ಳ ಮನೆಗೆ | ಚೆಂದುಳ್ಳ ಬಾಗ್‌ಲ್|
ಚಿನ್ನದ ಗಿಳಿ ಹಿಂಡ್ ಕೆತ್ತನೆ | ಒಳಗೆಂದ
ವಜ್ರದ ತಾಳ ಚಿಲಕನಾ ||

ರನ್ನದ ಅಟ್ಟಕ್ಕೆ | ಬಣ್ಣದೇಣಿ ಮಾಡಿ |
ಸಾಲೆಣ್ಣೆ ನೆಲ್ಲಕ್ಕಿ ದೀವಿಗೆಗೆ | ಚೊಂಬುನ
ಬಾಯ್‌ಬಿಚ್ಚಿ ಹೊಯ್ಯೊನ ||

ಎಣ್ಣೆನ ಹೊಯ್‌ದರೆ | ಪುಣ್ಯದ ಫಲ ನೀವ್‌ಗೆ |
ಒಂದು ಬಟ್‌ಲಿ ಒಲಿಬಂದ್| ಜ್ಯೋತ್ಯವ್ವ
ದೀವಿಗೆ ಬೆಳ್‌ಕ್ ಗುಡಿತುಂಬಿ ||



ತಲಕಾವೇರಿ



ಕುಲದೇವರು ಶ್ರೀ ವೆಂಕಟರಮಣ ದೇವರ ಹರಿಸೇವೆ





ಹಸೆಮಣೆ, ಕಂಚಿಮಿ, ಗೋಡೆಯಲ್ಲಿ ಬರೆಯುವ ಹಸೆ



ಎಣ್ಣೆ ಶಾಸ್ತ್ರದ ತಯಾರಿ



ವೀಳ್ಯ ಶಾಸ್ತ್ರ



ಮದುರಂಗಿ ಕುಯ್ಯುವುದು



ಗೌಡ ಸಾಂಪ್ರದಾಯಕ ಜಾನಪದ ಕೋಲಾಟ



ಐನ್‌ಮನೆಯಲ್ಲಿ ಕೈಲ್‌ಪೊದು



ಕಾವೇರಿ ಸಂಕ್ರಮಣದಲ್ಲಿ ಗದ್ದೆಗೆ ಹಿಟ್ಟು ಮಡಗುವುದು



ಹುತ್ತರಿಯಲ್ಲಿ ಕದಿರು ಕುಯ್ಯುವುದು



ನೆಲ್ಲಕ್ಕಿಯಲ್ಲಿ
ಹುತ್ತರಿ ಕದಿರು



ಹೊಸಭತ್ತ ಕುಟ್ಟುವ ಮೊದಲು
ನೆಲ್ಲಕ್ಕಿಯಲ್ಲಿ ತಯಾರಿ



ಕಿಡಾಸ ಆಚರಣೆ



ಹೊನ್ನಮ್ಮನ ಕೆರೆ



ಅಂದು - ಇಂದು
ವಧು-ವರರ ಮದುವೆಯ ಉಡುಪು



ಚಿಹ್ನೆ ರಚನೆ
ಪಟ್ಟಡ ಪ್ರಭಾಕರ



ಸೋಬಾನೆ ಸಂಗ್ರಹ ಹಸೆಮಣೆ ಕೃತಿಗೆ ಗೌರಮ್ಮ ಪ್ರಶಸ್ತಿ



ಕೊಡಗು ಗೌಡ ಮಹಿಳಾ ಒಕ್ಕೂಟ 1997





ಕಾವೇರಿ ಉತ್ಸವದಲ್ಲಿ ಜನಾಂಗದ ಮಹಿಳೆ ಮತ್ತು ಪುರುಷರಿಂದ ಸಾಂಪ್ರದಾಯಕ ಉಡುಪಿನ ಪ್ರದರ್ಶನ ಮತ್ತು ಕೋಲಾಟ



ಸಾಂಪ್ರದಾಯಿಕ ಆಭರಣಗಳು

ಪ್ರಕಾಶಕರ ನುಡಿ

ಹತ್ತು ಕುಟುಂಬ ಹದಿನೆಂಟು ಗೋತ್ರದ ಗೌಡ ಜನಾಂಗದವರ ಸಂಸ್ಕೃತಿ ಆಚರಣೆಗಳ ಭಂಡಾರವೆ ಅಕ್ಷಯ. ಇದರಲ್ಲಿ ತುಂಬಿರುವ ವಿವರಣೆಗಳು ಕ್ರಮವಾಗಿ ತಿಳಿದಷ್ಟು ಅರ್ಥಪೂರ್ಣವಾಗಿ ಸಂಗ್ರಹಿಸಲ್ಪಟ್ಟಿದೆ. ಜನಾಂಗದ ಸಂಸ್ಕೃತಿ ಆಚರಣೆಗಳನ್ನು ಸಂಗ್ರಹಿಸಿ ಉಳಿಸಿ ಬೆಳೆಸಿ ಮುಂದಿನ ಪೀಳಿಗೆಗೆ ನೀಡುವ ಶಾಶ್ವತ ಪ್ರಯತ್ನ ಪಡುವ ನಿಟ್ಟಿನಲ್ಲಿ ಲೇಖಕಿ ಶ್ರೀಮತಿ ಬೈತಡ್ಕ ಜಾನಕಿ ಬೆಳ್ಯಪ್ಪ ಇವರು ಯಶಸ್ವಿಯಾಗಿದ್ದಾರೆ. ಕರ್ನಾಟಕದ ಜಾನಪದ ಸಂಸ್ಕೃತಿ ಪರಂಪರೆಯ ನೆಲೆಯಲ್ಲಿ ಗೌಡ ಜನಾಂಗದ ಸಂಸ್ಕೃತಿಯು ತನ್ನದೇ ಆದ ಕಾರ್ಯಗಳಲ್ಲಿ ಸ್ವಲ್ಪ ಭಿನ್ನತೆ ಕಾಣುತ್ತಿದ್ದರೂ ಅದರ ಸಿರಿವಂತಿಕೆಯನ್ನು ಸಾರುವ ಸೋಬಾನೆ ಹಾಡುಗಳ ಸಂಗ್ರಹದ **'ಹಸೆಮಣೆ'** ಎಂಬ ಮೊಟ್ಟ ಮೊದಲ ಕೃತಿಯ ಮೂಲಕ ಹಾಗೂ ಆಕಾಶವಾಣಿಯ ಮೂಲಕ ಜನಾಂಗದ ಆಚಾರ, ಸಂಪ್ರದಾಯ ಮನೆ -ಮನ ಮುಟ್ಟಿ ಎಚ್ಚರಿಸಿದೆ. ಆಚಾರ ಸಂಪ್ರದಾಯ ಹಾಗೂ ಆಚರಣೆಗಳ ಸಂಗ್ರಹದ ಈ ಕೃತಿ **'ಅಕ್ಷಯ'** ದಲ್ಲಿ ನಮ್ಮ ಹಿಂದಿನ ತಲೆಮಾರಿನವರು ಉಳಿಸಿ-ಬೆಳೆಸಿದಂತೆ ಅನೇಕ ವಿಷಯಗಳು ಬೆಳಕಿಗೆ ಬಾರದೆ ಇರುವಂತದು ಇದರಲ್ಲಿ ತುಂಬಿವೆ. ಮುಖಪುಟವು ಅತ್ಯಂತ ಆಕರ್ಷಣೀಯವಾಗಿ ಅದರದೆ ಆದ ಮಹತ್ವ ಮತ್ತು ಅಪೂರ್ವ ವಸ್ತುಗಳಾಗಿವೆ.

ಇವರ ಹಸೆಮಣೆ ಕೃತಿಯು 2000ನೇ ಇಸವಿಯಲ್ಲಿ ಶ್ರೀಮಾನ್ ತೋಟಂಬೈಲು ನಾಣಯ್ಯ ಆಗಿನ ಅಧ್ಯಕ್ಷರು, ಕೊಡಗು ಗೌಡ ಸಮಾಜ ಇವರಿಂದ ಅನಾವರಣಗೊಂಡು, 2006ನೇ ವರ್ಷದ ಜಿಲ್ಲಾ ಮಹಿಳಾ ಲೇಖಕಿಯವರ ಸ್ಪರ್ಧಾ ವಿಭಾಗದಲ್ಲಿ ಮೊದಲ ಸ್ಥಾನ ಪಡೆದು ಕೊಡಗಿನ ಮೊದಲ ಮಹಿಳಾ ಕತೆಗಾರ್ತಿ **"ಗೌರಮ್ಮ ದತ್ತಿ ಪ್ರಶಸ್ತಿ"**ಯನ್ನು ಕೊಡಗು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಮೂಲಕ ಲಭಿಸಿಕೊಂಡ ಕೀರ್ತಿ ಇವರದ್ದಾಗಿದೆ. ಗೃಹಿಣಿ ಯಾಗಿ ಇವರು ಬಿಡುವಿನ ವೇಳೆಯನ್ನು ಸದುಪಯೋಗಪಡಿಸಿಕೊಳ್ಳುತ್ತಾ ಜನಾಂಗದ ಜಾನಪದ ಕಲೆ, ಸಂಸ್ಕೃತಿ ಮತ್ತು ಸಾಹಿತ್ಯದ ಬಗ್ಗೆ ಆಳವಾಗಿ ಅರಗಿಸಿ ತನ್ನ ಪ್ರತಿಭೆಯನ್ನು ಹೊರಹಾಕಿ ದ್ದಾರೆ. ನಶಿಸುತ್ತಿರುವ ಗೌಡ ಸಂಸ್ಕೃತಿಯನ್ನು ಪುಸ್ತಕ ರೂಪದಲ್ಲಿ ಒಟ್ಟುಗೂಡಿಸುವ ಶ್ರಮದಾ ಯಕ ಪ್ರಯತ್ನ ಇವರದಾಗಿದ್ದು, ನಶಿಸುತ್ತಿರುವ ಗೌಡ ಸಂಸ್ಕೃತಿ ಹಾಗೂ ಕೊಡಗಿನ ಗೌಡರ ಆಚರಣೆಗಳ ಮೇಲೆ ಬೆಳಕು ಚೆಲ್ಲಲು ಪ್ರಯತ್ನಿಸಿದ ಲೇಖಕಿ ಬೈತಡ್ಕ ಜಾನಕಿ ಅರೆಭಾಷೆ ಗೌಡ ಜನಾಂಗದ ಹೆಣ್ಣುಮಗಳನ್ನು ಪ್ರೋತ್ಸಾಹಿಸುವ ಹೆಮ್ಮೆಯ ಕಾರ್ಯ ನಮ್ಮದಾಗಿದೆ.

ಇವರು ಮಡಿಕೇರಿ ತಾಲೋಕು ಅವಂದೂರಿನ ನಿಸರ್ಗರಮಣೀಯ ಬೆಟ್ಟಗುಡ್ಡಗಳ ನೆಲೆ ಶ್ರೀ ಗೋಪಾಲಕೃಷ್ಣ ದೇವರ ಮಣ್ಣಿನಲ್ಲಿ ನೆಲೆಸಿರುವ ಕಬರ್ ಗೋತ್ರದ ಪಟ್ಟಡ ಮನೆತನದಲ್ಲಿ ಜನಿಸಿ, ಪಾಲೂರಿನ ಶ್ರೀ ಕಾಳಿಕಾಂಬೆ (ಕನ್ನಂಬಾಡಿ) ದೇವಿ ನೆಲೆ ನಿಂತಿರುವ ಹೆಮ್ಮನ ಗೋತ್ರದ ಬೈತಡ್ಕ ಮನೆ ಮೆಟ್ಟಿಲು ಹತ್ತಿದವರು. ಪತಿ ವಾಯುಪಡೆ ಹಾಗೂ ಜೀವವಿಮಾ ಸಂಸ್ಥೆಯಲ್ಲಿ ದುಡಿದು ನಿವೃತ್ತಿ ಹೊಂದಿದವರು. ಇಬ್ಬರು ಗಂಡು ಮಕ್ಕಳ ಸಂಸಾರ ಇವರದು.

ಇದೇ ಪುಸ್ತಕದಲ್ಲಿ ಅವರೇ ಸಂಗ್ರಹಿಸಿ ಪತ್ರಿಕೆಗಳಿಗೆ ಬರೆದ ಲೇಖನಗಳು ಮತ್ತು ರಚಿಸಿದ ಗೌಡ ಸಾಂಪ್ರದಾಯಕ ಜಾನಪದ ಕೋಲಾಟ, ಕವನಗಳಲ್ಲಿ "ಕಾವೇರಿ" ಬಹಳ ಸುಂದರವಾಗಿ ಮೂಡಿ ಬಂದಿದ್ದು ನಾವೆಲ್ಲರೂ ಕಾವೇರಿ ಮಣ್ಣಿನ ಮಕ್ಕಳೆಂಬುವುದನ್ನು ತೋರಿಸಿದ್ದಾರೆ.

ಗೌಡ ಜನಾಂಗದ ಧಾರ್ಮಿಕ, ಸಂಪ್ರದಾಯಕ ಆಭರಣಗಳು, ಸಾಂಸ್ಕೃತಿಕ ಆಚರಣೆಗಳು, ಕೃಷಿ ಸಂಪ್ರದಾಯಗಳು, ಪ್ರಾಕೃತಿಕ ಕೊಡುಗೆಗಳು, ಜಾನಪದ ಕ್ರೀಡಾ ಸಂಸ್ಕೃತಿ, ಜನಾಂಗದ ಶ್ರದ್ಧೆ, ಭಕ್ತಿಭಾವ, ಸ್ವಾತಂತ್ರ ಹೋರಾಟ, ಜನಾಂಗದ ಕಟ್ಟುಕಟ್ಟಳೆಗಳು, ಹಳೆಗನ್ನಡದ ಮೂಲ ರೂಪವನ್ನು ಹೊಂದಿರುವ ಅರೆಭಾಷೆ ಮತ್ತು ಸಂಸ್ಕೃತಿ ಇತ್ಯಾದಿ ಹಲವು ವಿಚಾರಗಳನ್ನೊಳಗೊಂಡ ಈ ಕೃತಿಯನ್ನು ಜನಾಂಗದ ಜಾನಪದ ಸಂಸ್ಕೃತಿ, ಕಲೆ, ಸಾಹಿತ್ಯವನ್ನು ಉಳಿಸುವ ಬೆಳೆಸುವ ನಿಟ್ಟಿನಲ್ಲಿ ಈ ಪುಸ್ತಕದ ರಚನೆ ಹಾಗೂ ಸಂಗ್ರಹಕಾರರು ಶ್ರೀಮತಿ ಬೈತಡ್ಕ ಜಾನಕಿ ಬೆಳ್ಯಪ್ಪ ಇವರಿಂದ ಸಂಗ್ರಹಿಸಲ್ಪಟ್ಟು -ಕೊಡಗು ಗೌಡ ಮಹಿಳಾ ಒಕ್ಕೂಟದಿಂದ "ಅಕ್ಷಯ" ರೂಪದಲ್ಲಿ ಹೊರಬಂದಿದೆ. ಇವರ ಸಂಸಾರಕ್ಕೆ ವೆಂಕಟರಮಣ ಸ್ವಾಮಿ ಹಾಗೂ ಶೃಂಗೇರಿ ಶಾರದೆ ಮತ್ತು ಕಾವೇರಿ ಮಾತೆಯ ಕೃಪೆಯಿರಲೆಂದು ಪ್ರಾರ್ಥಿಸುವ.

ನೀರ್ಪಾಡಿ ನಾಗವೇಣಿ
ಉಪಾಧ್ಯಕ್ಷರು
ಕೊಡಗು ಗೌಡ ಮಹಿಳಾ ಒಕ್ಕೂಟದ ಪರವಾಗಿ

ಲೇಖಕಿಯ ನುಡಿ

ಒಂದೊಂದು ಸಂಸ್ಕೃತಿಯ ಪರಂಪರೆಯಲ್ಲಿ ಗೌಡ ಸಂಸ್ಕೃತಿಯು ವಿಶಾಲವಾಗಿದ್ದು ತನ್ನದೇ ಆದ ಕೊಡುಗೆಯನ್ನು ಜಾನಪದ ಸೋಬಾನೆ ಕಂಪಿನ ಮೂಲಕ ಕರ್ನಾಟಕ ಜಾನಪದ ಸಾಹಿತ್ಯ ರಂಗಕ್ಕೆ ನೀಡಿದೆ. ಮಲೆನಾಡಿನ ಸಂಸ್ಕೃತಿ ವೈಭವವನ್ನು ಹೊಂದಿದ ಅರೆಭಾಷೆಯನ್ನಾಡುವ ಕೊಡಗು ಗೌಡ ಜನಾಂಗದವರು ತಮ್ಮದೇ ಆದ ಆಚರಣೆಗಳನ್ನು ಹೊಂದಿ ಉಳಿಸಿ ಬೆಳೆಸಿಕೊಂಡು ಬಂದಿರುತ್ತಾರೆ.

ಬರೆಯಬೇಕೆಂಬ ಹಂಬಲ ನನ್ನ ಮನಸ್ಸಿನ ಎಲ್ಲೋ ಮೂಲೆಯಲ್ಲಿತ್ತು. ಬರೆಯಬೇಕೆಂಬ ಕನಸು ಕನವರಿಸುತ್ತಿತ್ತು. ಆದರೆ ಗೌಡ ಜನಾಂಗದ ಕಲೆ, ಸಂಸ್ಕೃತಿ, ಆಚರಣೆಗಳ ಪ್ರಸಾರ ಸಂಗ್ರಹದ ರಾಶಿಯು, "ಅಕ್ಷಯ ಎಂಬ ಹೆಸರಿನ ಪುಸ್ತಕ ರೂಪದಲ್ಲಿ ಹೊರಬರಬಹುದೆಂದು ನನ್ನ ಅರಿವಿಗೆ ಬರಲೇ ಇಲ್ಲ. ಒಂದು ಜನಾಂಗ ಜೀವನದ ವಿಶಿಷ್ಟ ಆಚಾರ ಸಂಪ್ರದಾಯ ಗಳನ್ನು ಇನ್ನಷ್ಟು ಆಳವಾಗಿ ಕಲೆ ಹಾಕಿ ಉಳಿಸಿ ಬೆಳೆಸುವ ದೃಷ್ಟಿಯಲ್ಲಿ ನನಗೆ ಒದಗಿ ಬಂದ ಈ ಅವಕಾಶವು ನನ್ನ ಸೌಭಾಗ್ಯವೆಂದು ತಿಳಿದಿದ್ದೇನೆ.

ಮೊದಲ ಕೃತಿ **'ಹಸೆಮಣೆ'** ಅನುಭವ ಅಭಾವದಿಂದ ಹೊರಬಂದ ವಿಚಾರಗಳ ಕೊರತೆಯನ್ನು ಮೀರಲು ನನ್ನ ಎರಡನೇ ಪ್ರಯತ್ನ ಸಾಧನೆಯು ನಮ್ಮ ಕೊಡಗು ಗೌಡ ವಿದ್ಯಾ ಸಂಘದ ಶತಮಾನೋತ್ಸವ ಆಚರಣೆಯ ಸುಸಂದರ್ಭದ ಮುಂದೆ ನಿಂತಿತು. ಗೌಡ ಜನಾಂಗ ಸಂಸ್ಕೃತಿ ಆದರ ಆಚರಣೆ ವಿಧಿ -ವಿಧಾನಗಳನ್ನು ಸರ್ವೇ ಸಾಮಾನ್ಯವಾಗಿ ಕೊಡಗಿನಲ್ಲಿ ಹೇಗೆ ಅನುಸರಿಸುತ್ತಿದ್ದಾರೆ ಎಂಬ ವಿಚಾರ ಧಾರೆಗಳನ್ನು ನಮ್ಮ ಯುವ ಜನತೆಗೆ ತಿಳಿಯ ಪಡಿಸಿ ಅವರು ಮುಂದೆ ಇನ್ನಷ್ಟು ಪ್ರಯತ್ನ ಶೀಲರಾಗಿ ಉಳಿಸಿ ಬೆಳಸಬೇಕೆಂಬುದೆ ನನ್ನ ಮುಖ್ಯ ಉದ್ದೇಶವಾಗಿದೆ. ಗೌಡರ "ಅಕ್ಷಯ" ಖಜಾನೆ ಖಾಲಿಯಾಗದೆ ಉಳಿಯುವಂತಹ ಉಪಯುಕ್ತ ಸಂಗ್ರಹ ಎಂದು ನನ್ನ ಭಾವನೆ.

ಮುಖ ಪುಟದಲ್ಲಿ ಕಾಣುವ ಮಣ್ಣಿನ ದೀಪ ಮತ್ತು ವೀಳ್ಯವು ಶುಭಕಾರ್ಯ ಸೂಚಕ. 'ಮುಡುಪು' ತಾಮ್ರದ ದುಂಡಗಿರುವ ಲೋಹದ ಭದ್ರವಾದ ಪಾತ್ರೆ. ಒಂದಿನ ತಲೆಮಾರಿನವರು ಅಮೂಲ್ಯ ಆಭರಣ ಮತ್ತು ಹಣವನ್ನು ಜೋಪಾನವಾಗಿ ಇಡಲು ಉಪಯೋಗಿಸುತ್ತಿದ್ದ ಪೆಟ್ಟಿಗೆಯಾಗಿದೆ. ಕದಿರು ಕೊಡಗಿನ ಹುತ್ತರಿಯ ನೆರೆಕಟ್ಟಿದ ಅಮೂಲ್ಯ ಭತ್ತದ ತೆನೆ. ಚಿತ್ರದಲ್ಲಿ ಕಾಣುವ ಚಿನ್ನದ ಪದಕ ಹಾಲೇರಿ ಅರಸರು ಕೊಡಗನ್ನು ಆಳುತ್ತಿದ್ದಾಗ ರೈತ ಸೈನಿಕರಿಗೆ ಅವರು ಕೊಟ್ಟ ಜಮ್ಮ ಉಡುಗೊರೆಯಾಗಿದ್ದು, ತಾಳಿ, ಡಾಬು, ಕಾಸ್ತಾಳಿ 300ಗ್ರಾಂ ತೂಕದ ಬೆಳ್ಳಿಯ ಕಾಲ್ ಗೆಜ್ಜೆಸರ ಮದುವಣಗಿತ್ತಿಯು ಧರಿಸುವಂತಹದಾಗಿದೆ. ಇದು ನಮ್ಮ ಸಂಪ್ರದಾಯವನ್ನು ಪ್ರತಿಬಿಂಬಿಸುವುದೆ ಮುಖ ಪುಟದ ಪೂರ್ಣ ಚಿತ್ರದ ಮಹತ್ವವಾಗಿದೆ.

ಸ್ವಾತಂತ್ರ ಬಂದು ಸುವರ್ಣ ಮಹೋತ್ಸವದ ಈ ಸಂದರ್ಭದಲ್ಲಿ ಪುರಸಭೆಯ

ವೇದಿಕೆಯಲ್ಲಿ ಒಕ್ಕೂಟದ ಮೂಲಕ ನಮ್ಮ ಕುಲದೇವರು ತಿರುಪತಿ ಶ್ರೀ ವೆಂಕಟರಮಣ ಸ್ವಾಮಿಯ ಹರಿಸೇವೆಯ ಗುಂಡವನ್ನು ಪ್ರದರ್ಶಿಸುವ ಅವಕಾಶ ಬಂತು. ಆಗ ನಮ್ಮ ಕಲೆ ಏನು ಎನ್ನುವುದನ್ನು ಅರಿಯದ ಸಂದರ್ಭದಲ್ಲಿ ನಮ್ಮ ನೆರವಿಗೆ ಬಂದವರು ಕನ್ನಡ ಸಂಸ್ಕೃತಿ ಇಲಾಖೆಯಲ್ಲಿ ಅಧಿಕಾರಿಯಾಗಿ ಮಡಿಕೇರಿಯಲ್ಲಿ ಆಗ ಸೇವೆ ಸಲ್ಲಿಸುತ್ತಿದ್ದ ನಾಗರಾಜ್ ಮೈಸೂರಿನವರು. ಇವರು ಗೌಡ ಜನಾಂಗದ ಮಹಿಳೆಯರನ್ನು ವಿವಿಧ ರೀತಿಯಲ್ಲಿ ಮುಂದೆ ತರಲು ಪ್ರೋತ್ಸಾಹಿಸಿದವರೆಂದು ಇದರ ಪರಿಣಾಮ ಜಾನಪದ ಸೊಗಡಿನ ಸೋಬಾನೆ ಸಂಗ್ರಹ, 'ಹಸೆಮಣೆ' ಕೃತಿಯನ್ನು ಹೊರ ತರಲು ನನಗೆ ಸಹಾಯವಾಯಿತೆಂದು ತಿಳಿಸಲು ಹೆಮ್ಮೆ ಪಡುತ್ತೇನೆ.

ಈ ಕೃತಿಯನ್ನು ಓದುಗರ ಮಡಿಲಿಗೆ ಹಾಕುವ ಮುನ್ನ ಇದಕ್ಕೊಂದು ಅರ್ಥಪೂರ್ಣ ಮುನ್ನುಡಿ ಇರಬೇಕೆಂದು ನಮ್ಮ ಜನಾಂಗದ ಹಿರಿಯ ಖ್ಯಾತ ಸಮಾಜ ಚಿಂತಕ ಹಾಗೂ ಸಾಹಿತಿಗಳಾದ ಶ್ರೀ ಎನ್. ಎಸ್. ದೇವಿಪ್ರಸಾದ್ ಸಂಪಾಜೆ ಅವರನ್ನು ಕೇಳಿಕೊಂಡಾಗ ಅವರು ಒಪ್ಪಿ ನನ್ನಂತಹ ಸಾಮಾನ್ಯ ಗೃಹಿಣಿ ಬರೆದಿರುವ ಈ ಕೃತಿಗೆ ಅವರದೇ ಆದ ಬದುಕಿನ ಆಯಾಮವಿರುವ ಗೌರವಾನ್ವಿತ ಶ್ರೀಯುತರು ಮುನ್ನುಡಿ ಬರೆದು ಹರಸಿರುವುದು ನನ್ನ ಭಾಗ್ಯ ಎಂದು ತಿಳಿದಿದ್ದೇನೆ. ಇನ್ನು ಮುನ್ನೂರ ಐವತ್ತು ವರ್ಷಗಳ ಹಿಂದಿನ ಗೌಡ ಜನಾಂಗದ ಇತಿಹಾಸವನ್ನು ನೆನಪಿಸಿ ನನ್ನ ಈ ಕೃತಿ 'ಅಕ್ಷಯ'ವು ನಮ್ಮ ಜನಾಂಗಕ್ಕೆ ಮಾರ್ಗದರ್ಶ ನೀಡಬಲ್ಲ ಸುಸಂಸ್ಕೃತಿಯನ್ನು ಪ್ರತಿಬಿಂಬಿಸುವ ಕೃತಿ ಎಂದು ತಮ್ಮ ಹಸ್ತದಿಂದ ಹಿನ್ನುಡಿ ಬರೆದು ಸಹಕರಿಸಿದ ಖ್ಯಾತ ಪತ್ರಕರ್ತರು ಹಾಗೂ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರು ಜನಪ್ರಿಯರಾದ ಶ್ರೀ ಟಿ. ಪಿ. ರಮೇಶ್ ಇವರುಗಳಿಗೆ ನನ್ನ ತುಂಬು ಹೃದಯದ ಕೃತಜ್ಞತೆಗಳು.

ಕೊನೆಯದಾಗಿ ಈ ಕೃತಿಯು ಉತ್ತಮವಾಗಿ ತಕ್ಕ ಛಾಯಾಚಿತ್ರಣಗಳೊಂದಿಗೆ ಹೊರ ತರಲು ನನ್ನೊಡನೆ ಸಹಕರಿಸಿದ ನನ್ನ ಕಿರಿಯ ಪುತ್ರ ಬೈತಡ್ಕ ದಿನೇಶ್ ಹಾಗೂ ಶ್ರಮಪಟ್ಟು, ತಾಳ್ಮೆ ವಹಿಸಿ ಅಂದವಾಗಿ ಮುದ್ರಿಸಿರುವ ಶ್ರೀ ಕೃಷ್ಣ ಕಂಪ್ಯೂಟರ್ಸ್, ಮಡಿಕೇರಿ ಹಾಗೂ ನನ್ನ ಪ್ರಯತ್ನಕ್ಕೆ ಸದಾ ಧೈರ್ಯ ತುಂಬಿ **'ಅಕ್ಷಯ'** ಶಿರೋನಾಮೆ ಸೂಚಿಸಿ ಪ್ರಕಾಶನ ನುಡಿ ನೀಡಿದ ಗೌಡ ಮಹಿಳಾ ಒಕ್ಕೂಟದ ಉಪಾಧ್ಯಕ್ಷೆಯವರಾದ ಸೀಪಾರ್ಡಿ ನಾಗವೇಣಿ ಅವರಿಗೂ ಹಾಗೂ ಕೆಲವು ಸೂಕ್ತ ಮಾಹಿತಿಗಳನ್ನು ನೀಡಿ ಸಹಕರಿಸಿದ ನನ್ನ ಪತಿ ಬೆಳ್ಯಪ್ಪನವರಿಗೂ, ಕೊಡಗು ಸಂಗಾತಿ ಪಾಕ್ಷಿಕ ಪತ್ರಿಕೆಯ ಗೌರವ ಸಂಪಾದಕರಾಗಿದ್ದ ನನ್ನ ಸಹೋದರ ಪಟ್ಟಡ ಪ್ರಭಾಕರ ಮತ್ತು ಕೋಳುಮುಡಿಯನ ಅನಂತಕುಮಾರ್ ಕಾರ್ಯದರ್ಶಿ ಗೌಡಸಮಾಜ ಮತ್ತು ಒಕ್ಕೂಟದ ಸೋದರಿಯರು ಇವರೆಲ್ಲರಿಗೂ ನಾನು ಅಭಾರಿಯಾಗಿದ್ದೇನೆ.

ಬೈತಡ್ಕ ಜಾನಕಿ ಬೆಳ್ಯಪ್ಪ
ಮಡಿಕೇರಿ

ಒಳ ಪುಟಗಳಲ್ಲಿ

ಕಾವೇರಿ

ಓಂ ನಮೋ ಕಾವೇರಿ ಮಾತೆ ಓ ಮಾತೆ ಕಾವೇರಿಯೆ
ಕೈ ಮುಗಿದು ತಲೆಬಾಗಿ ಬೇಡುವೆ -ಮಾತೆ ಕಾವೇರಿಯೆ
ಬ್ರಹ್ಮಗಿರಿ ಶಿಖರದಿಂದಾ ಜಲವಾಗಿ ಇಳಿ ಇಳಿದು ಬಂದು
ಗುಪ್ತಗಾಮಿನಿಯಾಗಿ ನಾಗತೀರ್ಥವಾಗಿ ಮಂದಗತಿಯಲಿ ಸಾಗಿ
ಜುಳು ಜುಳು ಇಳಿದು ಬಂದೆ -ಹರಿದು ಬಂದೆ -ಮಾತೆ ಕಾವೇರಿಯೆ
ತಲಕಾವೇರಿಯಲಿ ನೆಲೆಯಾಗಿ -ಭಾಗಮಂಡಲದಲಿ ಕೂಡಿ
ಕನಿಕೆ, ಕಾವೇರಿ, ಸುಜ್ಯೋತಿ - ತ್ರಿವೇಣಿ ಸಂಗಮವಾಗಿ
ಪಾಪ ತೊಳೆಯಲು ನೀ ನಿಂತೆ ಲೋಕ ಕಲ್ಯಾಣಕ್ಕಾಗಿ॥ ಓಂ ನಮೋ ಕಾವೇರಿಯೆ॥
ಪಿಂಡ ಪ್ರಧಾನ -ಸಂಗಮ ಸ್ನಾನ -ಭಗಂಡೇಶ್ವರನ ಸೇವೆಗೆಂದು
ಅಡ್ಡಬಿದ್ದು ಬೇಡುವರು ಜನಕೋಟಿ ಅಂದು
ವರ್ಷಕ್ಕೊಮ್ಮೆ ತುಲಾ ಸಂಕ್ರಮಣ ದಿನದಂದು ಜಲರೂಪಿಯಾಗಿ
ತೀರ್ಥೋದ್ಭವ ರೂಪದಲಿ ನೀ ಉಕ್ಕಿ ಬಂದು ಗಂಗೆಯಾಗಿ
ಮಂತ್ರ ಘೋಷಣೆ ಕುಂಕುಮಾರ್ಚನೆ ನಿನಗೆ
ಕಾತುರದಿ ಕಾಯುವ ಭಕ್ತರ ಕಣ್ಣುಗಳು ಕುಂಡಿಕೆ ಕಡೆಗೆ
ಯಾವ ಮಾಯದಿ ಉದ್ಭವಿಸುವೆಯೊ ಬ್ರಹ್ಮಲಿಪಿಯಂತೆ
ಪುಣ್ಯ ಪಡೆಯಲು ಭಕ್ತರು ಕಲ್ಯಾಣಿಗಿಳಿದು ಮುಳುಗಿ ಏಳಲು
ಅರ್ಚಕರು ಬರಬರನೆ ಸರಸರನೆ ತೀರ್ಥಹೊಯ್ಯಲು
ಜನ್ಮ ಪಾವನವಾಯಿತೆಂದು ಕುಂಡಿಕೆಯ ಸುತ್ತ ಬರಲು ॥ ಓಂ ನಮೋ ಕಾವೇರಿಯೆ॥
ಅಗಸ್ತೇಶ್ವರನಿಗೆ ಕೈ ಮುಗಿದು ಗಣಪ ಸುಬ್ರಮಣ್ಯರ ದರುಶನಾ
ಮೆಟ್ಟಿಲು ಹತ್ತಿ ಬ್ರಹ್ಮಗಿರಿ ತುತ್ತತುದಿಗೇರಲು
ಕಾಣುವುದು ಸಪ್ತರ್ಷಿ ಯಜ್ಞಕುಂಡವಾ ಕುರುಹುಗಳೆನ್ನುವರು
ನಾಡ ಜನರ ಮನವ ತಣಿಸುತಾ ಜಳ ಜಳನೆ ಮುಂದೆ ಸಾಗಿ
ಹಚ್ಚ ಹಸುರಿನ ಕಾಂತಿ ನಡುವೆ ಪ್ರಕೃತಿ ಮಾತೆಯಾಗಿ
ಅನ್ನದಾತೆ ಕಾವೇರಿ ಬೇಕು ಅವಳು ನಮ್ಮ ಕನ್ನಡ ನಾಡಿಗೆ
ನಮ್ಮ ನೆರೆ ರಾಜ್ಯ ತಮಿಳುನಾಡಿಗೆ
ಓಂ ಮಾತೆ ಕಾವೇರಿ। ಮಾತೆ ಕಾವೇರಿಯೆ
ರೈತ ಜನರ ಕೈಬೀಸಿ ಕರೆಯುತಾ ಸಾಗುವಳು ಮುಂದೆ
ಮತ್ತೆ ತಿರುಗಿ ಬರುವಳು ಮುಂದಿನಾ ತುಲಾ ಸಂಕ್ರಮಣಕೆ
ತೀರ್ಥರೂಪಿಣಿ ಅನ್ನದಾತೆ ಮಾತೆ ಕಾವೇರಿಯೆ
ನೀನು ಎಂದೆಂದಿಗೂ ಕನ್ನಡದ ಕುಲದೇವತೆಯೆ ॥

ಕೊಡಗು ಅರೆಗನ್ನಡ ಗೌಡ ಜನಾಂಗದ ಕುಲದೈವ ಶ್ರೀ ವೆಂಕಟರಮಣ ದೇವರ ಹರಿಸೇವೆ

ಕೊಡಗು ಜಿಲ್ಲೆಯಲ್ಲಿ ಅರೆ ಭಾಷೆ (ಅರೆಗನ್ನಡ ಭಾಷೆ)ಯನ್ನಾಡುವ ಗೌಡ ಜನಾಂಗದವರ ಪೂರ್ವಜರು ಸುಮಾರು ಐದು ಶತಮಾನಗಳ ಹಿಂದಿನಿಂದಲೂ ಶ್ರೀ ತಿರುಪತಿ ವೆಂಕಟರಮಣ ಸ್ವಾಮಿಯನ್ನು ತಮ್ಮ ಕುಲದೇವರನ್ನಾಗಿ ಸ್ವೀಕರಿಸಿ ಆರಾಧಿಸುತ್ತಾ ಬರುತ್ತಿರುವುದು ವಿಜಯನಗರ ಸಾಮ್ರಾಜ್ಯದ ಇತಿಹಾಸದ ಮತಗಳಿಂದ ತಿಳಿಯುತ್ತದೆ. ಹತ್ತು ಕುಟುಂಬ ಹದಿನೆಂಟು ಗೋತ್ರಕ್ಕೆ ಸೇರಿದ ಇವರ ಶುಭ ಕಾರ್ಯಗಳ ಪೈಕಿ ಬಹು ಪ್ರಮುಖವಾದ ಮತ್ತು ಸಾಂಪ್ರದಾಯಕ ಬದ್ಧವಾದ ಶ್ರೀ ವೆಂಕಟರಮಣ ದೇವರ ಹರಿಸೇವೆಯು ಒಂದು. ಕುಟುಂಬದ ಸದಸ್ಯರೆಲ್ಲರು ಸೇರಿ ಪ್ರತಿ ಐದು ಅಥವಾ ೭ ವರ್ಷಗಳಿಗೊಮ್ಮೆ ನೆರವೇರಿಸುತ್ತಾ ಬಂದಿರುತ್ತಾರೆ.

ಗೌಡ ಜನಾಂಗದ ಪ್ರತೀ ಕುಟುಂಬಕ್ಕೂ ಐನ್‌ಮನೆ (ದೊಡ್ಡ ಮನೆ, ಮೂಲ ಮನೆ)ಎಂಬುದು ಇರುತ್ತದೆ. ಐನ್‌ಮನೆಯ ನಡು ಬಾಡೆಯಲ್ಲಿ ದೇವರಿಗೆ ದೀಪ ಇಡುವ ನೆಲ್ಲಕ್ಕಿಯಲ್ಲಿ ನಿತ್ಯ ಬೆಳಿಗ್ಗೆ ಮತ್ತು ಸಂಜೆ ಶ್ರೀ ವೆಂಕಟರಮಣ ದೇವರ ಭಾವ ಚಿತ್ರವನ್ನು ಇಟ್ಟು ಪೂಜಿಸುತ್ತಾರೆ. ಕುಟುಂಬದ ಹರಿಕೆ ಹಣವನ್ನು ಮುಡುಪುನಲ್ಲಿಟ್ಟು (ಭಂಡಾರ ಪೆಟ್ಟಿಗೆ) ಬೀಗಮುದ್ರಿಸಿ ಐನ್‌ಮನೆಯ ಉಪ್ಪರಿಗೆ (ಅಟ್ಟ)ಯಲ್ಲಿ ಯಾರ ಕೈಗೂ ಎಟುಕದಂತೆ ನೇತು ಹಾಕುತ್ತಾರೆ. ಹೀಗೆ ಕಾಲಾನುಕಾಲದಿಂದ ಕೂಡಿಟ್ಟ ಹರಕೆ ಹಣವನ್ನು ತಿರುಪತಿ ತಿಮ್ಮಪ್ಪನ ಹುಂಡಿಗೆಗೆ ಹಾಕಬೇಕಾಗಿರುವುದರಿಂದ ಸದ್ರಿ 'ಮುಡುಪು ಹಣಕ್ಕೆ' ಪೂಜೆ ಸಲ್ಲಿಸಿ ವಿಜೃಂಭಣೆಯಿಂದ ದೇವರನ್ನು ಆರಾಧಿಸುವುದೇ 'ಹರಿಸೇವೆ' ಎಂದು ತಿಳಿಯಲಾಗಿದೆ. ವೈವಿಧ್ಯಮಯ ರೀತಿಯಲ್ಲಿ ಆಚರಿಸುವ ಹರಿಸೇವೆಗಳಲ್ಲಿ 'ಹರಿಸೇವೆ' ಮತ್ತು ಘನ ಹರಿಸೇವೆ ಎಂದು ೨ ವಿಧ. ಹಾಗೆಯೇ ಮಣೆ ಹರಿಸೇವೆ ಮತ್ತು ಪಾನಕ ಹರಿಸೇವೆ ಎಂದು ಇನ್ನು ೨ ವಿಧಗಳಿವೆ.

ಹರಿಸೇವೆ : ಕುಟುಂಬದ ಹಿರಿಯವ ಅಂದರೆ ಪಟ್ಟೆದಾರ, ಉಳಿದ ಸದಸ್ಯರವರನ್ನೂ ಸೇರಿಸಿ ಹರಿಸೇವೆ ಆಚರಿಸುವುದನ್ನು ಪ್ರಸ್ತಾಪಿಸಿ ಒಂದು ಶುಭ ದಿನದಂದು ನೆರವೇರಿಸಲು ತೀರ್ಮಾನ ತೆಗೆದುಕೊಳ್ಳುತ್ತಾರೆ. ಹರಿಸೇವೆಯನ್ನು ಸರ್ವ ಸಾಮಾನ್ಯವಾಗಿ ದಾಸಯ್ಯನವರಿಂದ ಮತ್ತು ಕೆಲವು ಕಡೆ ಬ್ರಾಹ್ಮಣರಿಂದ ಮಾಡಿಸುತ್ತಾರೆ. ಮೊದಲಿಗೆ ದಾಸಯ್ಯನವರನ್ನು ಭೇಟಿ ಮಾಡಿ ವೀಳ್ಯ ನೀಡಿ ಹರಿಸೇವೆಯ ದಿನಾಂಕವನ್ನು ಗೊತ್ತುಪಡಿಸಿ, ಅಗತ್ಯ ಪೂಜಾ ಸಾಮಗ್ರಿಗಳ ಪಟ್ಟಿಯನ್ನು ಪಡೆಯುತ್ತಾರೆ. ಈ ಪೂಜೆಯನ್ನು ಹೆಚ್ಚಾಗಿ ಶನಿವಾರದಂದೇ ಆಚರಿಸುವುದು ವಾಡಿಕೆ. ನಂತರ ಕುಟುಂಬದ ಪಟ್ಟೆದಾರ ಸೂಚಿಸುವ ಯಾವುದೇ ಸದಸ್ಯನನ್ನು 'ಪೂಜಾರಿ' ಎಂದು ಪರಿಗಣಿಸಿ ಆತನನ್ನು ಪೂಜೆ ಏರ್ಪಾಡಿಗೆ ಅಣಿಯಾಗಲು ತಿಳಿಸುತ್ತಾನೆ. ಪೂಜಾರಿಯು ಹರಿಸೇವೆ ಗೊತ್ತುಪಡಿಸಿದ ೮ ದಿನಗಳಿಂದ ಮುಂಚಿತವಾಗಿ ಪೂರ್ವಾಹ್ನ ಸ್ನಾನ ಇತ್ಯಾದಿ ಮುಗಿಸಿ, ನೆಲ್ಲಕ್ಕಿ ದೀಪವಿಟ್ಟು ಇತರ ಸದಸ್ಯರೊಡನೆ ದೇವರನ್ನು ಪ್ರಾರ್ಥಿಸಿ ಹರಿಸೇವೆ ಕಾರ್ಯವನ್ನು ಘೋಷಿಸಿ ಮಡಿಯುಟ್ಟು, ಬಾಳೆ ಗೊನೆ ಹೂ ಸಮೇತ ಕಡಿದು ತಂದು ಶುದ್ಧ ನೀರಿನಿಂದ ತೊಳೆದು ಧೂಪ ದೀಪಗಳಿಂದ ಅದನ್ನು ಪೂಜಿಸಿ ಅಟ್ಟದಲ್ಲಿ 'ಮುಡುಪು' ಪಕ್ಕದಲ್ಲಿ ತೂಗು ಹಾಕುತ್ತಾರೆ. ನಂತರ ಹರಿಸೇವೆಯ ದಿನದವರೆಗೂ ಪೂಜಾರಿಯು ಅತೀ ಶುದ್ಧ ಪ್ರತೀ ನಿತ್ಯ ಬೆಳಿಗ್ಗೆ ಮತ್ತು ಸಂಜೆ ಮುಡುಪು

ಮತ್ತು ಬಾಳೆ ಗೊನೆಗೆ ಧೂಪ ಸಾಂಬ್ರಾಣಿಯಿಂದ ಪೂಜೆ ಸಲ್ಲಿಸುತ್ತಾನೆ. ಈ ಮಧ್ಯೆ ಹರಿಸೇವೆಯ ಆಹ್ವಾನ ಪತ್ರಿಕೆಯನ್ನು ಮುದ್ರಿಸಿ, ಕುಟುಂಬದ ಆಪ್ತ ಬಂಧುಗಳಿಗೆ ಮುಖ್ಯವಾಗಿ ಹೆಣ್ಣು ಕೊಟ್ಟ ಮನೆಯವರು ಹೆಣ್ಣು ತಂದ ಮನೆಯವರು ಊರಿನವರು ಹಾಗೂ ಇತರ ನೆಂಟರಿಷ್ಟರಿಗೆಲ್ಲಾ ಕಳುಹಿಸಲಾಗುವುದು. ಸದ್ರಿ ಹರಿಸೇವೆ ದಿನದಂದು ದಾಸಯ್ಯ ಸಮಯಕ್ಕೆ ಮುಂಚೆ ಹಾಜರಾಗಿ ಪೂಜೆಗೆ ಸಕಲ ಸಿದ್ಧತೆಗಳನ್ನು ಮಾಡುವರು. ಅಂದಿನ ದಿನದ ಪೂಜೆಗೆ ಕುಟುಂಬ ಮತ್ತು ನೆರೆ ಕರೆಯವರಿಂದ ಸೇರಿದಂತೆ ಐದು ಅಥವಾ ಏಳು ಮಂದಿ ಭಕ್ತ ಮಹಾಶಯರನ್ನು ದಾಸಯ್ಯನವರ ಸಹಾಯಕ್ಕಾಗಿ ನೇಮಿಸಲಾಗುವುದು.

ದಾಸಯ್ಯ ಮತ್ತು ಭಕ್ತಾದಿಗಳು ದೇವರ ಗರ್ಭಗುಡಿ (ಗುಂಡ) ಕಟ್ಟಲು ಬಾಳೆದಿಂಡುಗಳನ್ನು ಕಡಿದು ತಂದು, ಕಾಡಿನಲ್ಲಿ ದೊರೆಯುವ ಒಂದು ಜಾತಿಯ ಮುಳ್ಳು (ಕಾರೆ ಮುಳ್ಳು)ಗಳ ಸಹಾಯದಿಂದ ಅಮೃತ ಶಿಲೆಯಂತೆ ಶೋಭಿಸುವ ಈ ಗುಂಡವನ್ನು ನಿರ್ಮಿಸುತ್ತಾರೆ. ಪೂಜೆಗೆ ಬರುವ ಸರ್ವ ಭಕ್ತ ಜನರು ಹಣ್ಣು ಕಾಯಿ ತಂದು ನೀಡುತ್ತಾರೆ. ಪೂಜೆ ಚಕ್ರವೃಂದದವರು ಕರಿ ಮೆಣಸು ಪುಡಿ ಮತ್ತು ಬೆಲ್ಲದಿಂದ ತಯಾರು ಮಾಡಿದ ಪಾನಕ ಮತ್ತು ಅವಲಕ್ಕಿ ಫಲಹಾರಗಳನ್ನು ನೈವೇದ್ಯಕ್ಕಾಗಿ ತಯಾರು ಮಾಡುತ್ತಾರೆ. ಐನ್‌ಮನೆಯ ಮುಂಭಾಗದ ಅಂಗಳದಲ್ಲಿ ಪೂಜೆ ಮಾಡುವ ಸ್ಥಳವನ್ನು ಚಪ್ಪರ ತೋರಣಗಳಿಂದಲೂ ಮಡಿವಾಳನು ಮಡಿಬಟ್ಟೆ (ಮೇಲ್ಕಟ್ಟು)ಗಳಿಂದ ಅಲಂಕರಿಸಿ ಆ ಚಪ್ಪರದ ಕೆಳಗೆ ಗರ್ಭಗುಡಿಯನ್ನು ಇಡುತ್ತಾರೆ. ಇಲ್ಲಿ ಒಂಟಿಗುಡಿ (ಗುಂಡ) ಅಥವಾ ಜೋಡು ಗುಂಡಗಳನ್ನು ತಯಾರು ಮಾಡುತ್ತಾರೆ. ಜೋಡು ಗುಂಡವನ್ನು ಘನ ಹರಿ ಸೇವೆಗೆ ಮಾತ್ರ ಕಡ್ಡಾಯವಾಗಿ ಕಟ್ಟುತ್ತಾರೆ. ಇದಾದನಂತರ ದಾಸಯ್ಯ ಮತ್ತು ಪೂಜಾ ಭಕ್ತರು ಸ್ನಾನಕ್ಕೆ ತೆರಳಲು ಅಣಿಯಾಗುತ್ತಾರೆ. ಸ್ನಾನಕ್ಕೆ ಮುಂಚಿತವಾಗಿ ಅವಲಕ್ಕಿ ಫಲಹಾರ ಸೇವಿಸಿ, ತಲೆಗೆ ಎಣ್ಣೆ ಸ್ವೀಕರಿಸಿ ವೀಳ್ಯ ಹಾಕುವ ಪದ್ಧತಿ ಇದೆ. ಸ್ನಾನ ಮಾಡಿ ಬಂದ ನಂತರ ದೇವರ ಹೆಸರಿನಲ್ಲಿ ಬಂದಂತಹ ಹಣ್ಣು ಕಾಯಿಗಳನ್ನು ಒಡೆದು ಗುಂಡದ ಮುಂದೆ ಇಟ್ಟು, ಪೂಜೆಗೆ ಸಿದ್ಧತೆಯಾಗುತ್ತದೆ. ನೈವೇದ್ಯಾದಿ ಪಾನಕಗಳನ್ನು ಇಡುತ್ತಾರೆ.

ಈಗ ಒಕ್ಕಲು ಯಜಮಾನ ಯಾ ಪೂಜಾರಿ ದಾಸಯ್ಯ ಭಕ್ತರೊಡಗೂಡಿ ಶಂಖ ಜಾಗಟೆಯೊಂದಿಗೆ 'ಗೋವಿಂದಾ' ಗೋವಿಂದಾ ಎಂದು ಒಕ್ಕೊರಲಿನಿಂದ ಹೇಳುತ್ತಾ ಅಟ್ಟಕ್ಕೆ ಹೋಗಿ ಅಲ್ಲಿರುವ ಮುಡುಪು ಮತ್ತು ಬಾಳೆಗೊನೆಗಳನ್ನು ಬಿಚ್ಚಿ ತಂದು, ಮುಡುಪನ್ನು ಗುಂಡದ ಮುಂದೆಯೂ ಮತ್ತು ಬಾಳೆಗೊನೆಯನ್ನು ಚಪ್ಪರದಲ್ಲಿ ತೂಗು ಹಾಕುತ್ತಾರೆ. ಗುಡಿಯೊಳಗೆ ಶ್ರೀ ವೆಂಕಟರಮಣ ದೇವರ ಪ್ರತಿಮೆಯನ್ನು ಇರಿಸಿರುತ್ತಾರೆ. ಹೀಗೆ ಸರ್ವ ರೀತಿಯ ಪೂಜಾ ಸಿದ್ಧತೆಯಾದ ನಂತರ ದಾಸಯ್ಯನವರು ಪೂಜೆ ಪ್ರಾರಂಭವಾಗುವುದೆಂದು ಘೋಷಿಸುತ್ತಾರೆ. ದಾಸಯ್ಯ ವಿಧಿವತ್ತಾಗಿ ಪೂಜೆ ಮಾಡುತ್ತಿದ್ದಾಗ ಒಡ್ಡೋಲಗವೂ ನಡೆಯುತ್ತಿರುತ್ತದೆ. ಭಕ್ತಸ್ತೋಮವು ತಮ್ಮ ಒಕ್ಕೊರಲಿನಿಂದ ಗೋವಿಂದಾ... ಗೋವಿಂದಾ ಎಂದು ಭಕ್ತಿಯಿಂದ ಜೋರಾಗಿ ಹೇಳುತ್ತಿದ್ದಂತೆ ದೇವರು ಮೊದಲೇ ವೀಳ್ಯಕೊಟ್ಟು ಆಮಂತ್ರಿಸಿಕೊಂಡಿದ್ದಂತ ದರ್ಶನಕಾರನ (ಮೈ ಮಾಸಿಕೆ ಬರುವಾತ) ಶರೀರದಲ್ಲಿ ಬಂದು ಕುಟುಂಬದ ಹಿರಿಯವನನ್ನು ಕರೆದು ಆಶೀರ್ವಾದಿಸುತ್ತಾನೆ. ಕುಟುಂಬದೊಳಗಿನ ನಷ್ಟ, ಕಷ್ಟಗಳಿಗೆ ಪರಿಹಾರ ಸೂಚನೆ ನೀಡುವುದಲ್ಲದೆ ಬಂದ ಭಕ್ತಸ್ತೋಮದಲ್ಲಿ ಇಚ್ಛಿಸುವವರು ತಮ್ಮ ತಮ್ಮ ಕಷ್ಟ ನಿವಾರಣೆಗಳ ಬಗ್ಗೆ ಸೂಚನೆ ಕೇಳಬಹುದು. ಇದಾದನಂತರ ಮಂಗಳಾರತಿಯೊಂದಿಗೆ ಮಹಾಪೂಜೆ

ಮುಕ್ತಾಯಗೊಳ್ಳುತ್ತದೆ. ಸಮಸ್ತ ಭಕ್ತರು ತಮ್ಮ ಭಕ್ತಿ ಕಾಣಿಕೆಯನ್ನು ಭಂಡಾರದ ತಟ್ಟೆಗೆ ಹಾಕಿ, ದಾಸಯ್ಯನಿಂದ ನೈವೇದ್ಯ ಪ್ರಸಾದ ಪಾನಕಗಳನ್ನು ಸ್ವೀಕರಿಸುತ್ತಾರೆ.

ಶ್ರೀ ವೆಂಕಟರಮಣ ಸ್ವಾಮಿಗೆ ಪೂಜೆ ಸಲ್ಲಿಸಿದ ನಂತರ ಆತನ ದ್ವಾರಪಾಲಕರಾದ ಕೆಂಚರಾಯ ಮತ್ತು ಕರಿರಾಯರಿಗೆ ಪೂಜೆ ನೆರವೇರಿಸುತ್ತಾರೆ. ಈಗ ಶ್ರೀ ವೆಂಕಟರಮಣ ದೇವರ ಗುಂಡವನ್ನು ತೆರೆ ಮರೆ ಮಾಡಿ, ಕೆಂಚರಾಯನ ಪ್ರತಿಮೆಗೆ ಪೂಜೆ ಸಲ್ಲಿಸಿ, ಸನಿಹ ದೂರದಲ್ಲಿ, ಕುರಿ ಅಥವಾ ಆಡನ್ನು ಬಲಿಕೊಡುವುದಿದೆ. ಕೆಂಚರಾಯ ಮೈಮಾನಿಕೆ ಬರುವಾತನನ್ನು ಆ ಸಂದರ್ಭದಲ್ಲಿ ಕೋಣೆಯೊಳಗೆ ಭದ್ರವಾಗಿ ಕೂಡಿಡುತ್ತಾರೆ. ಬಲಿಕೊಡುವ ಜಾಗದಲ್ಲಿ ಚಿಕ್ಕ ಚಪ್ಪರಹಾಕಿ ಬಲಿಕೊಟ್ಟ ನಂತರ 'ಕೆಂಚರಾಯ ದರ್ಶನಕಾರ'ನನ್ನು ಭದ್ರಕೋಣೆಯಿಂದ ಬಿಡುತ್ತಾರೆ. ಉಗ್ರಾವತಾರದಿಂದ ಈ ದರ್ಶನಕಾರನು ಬಲಿಯನ್ನು ಭಕ್ಷಿಸಲು ಮುನ್ನುಗುತ್ತಾನೆ. ಆದರೆ ಭಕ್ತರು ಇವನನ್ನು ತಡೆದು ನಿಲ್ಲಿಸುತ್ತಾರೆ. ಇದಕ್ಕೆ 'ಬೇಟೆ ಬೀಳುವುದೆಂದು ಹೇಳುತ್ತಾರೆ. ಆ ನಂತರ ಬಲಿ ನೀಡಿದ ಪ್ರಾಣಿಯನ್ನು ಸ್ವಚ್ಛಗೊಳಿಸಿ ಅದರ ಮಾಂಸದಿಂದ ಮಾಡಿದ ಅಡುಗೆಯನ್ನು ರೊಟ್ಟಿಯೊಂದಿಗೆ ಧೂತರಿಗೆ ಎಡೆ ಹಾಕುತ್ತಾರೆ. ಇಲ್ಲಿ ಪೂಜೆ ಮುಗಿಸಿದ ನಂತರ ನೆರೆದ ಸರ್ವ ಭಕ್ತಸ್ತೋಮಕ್ಕೆ ಊಟೋಪಚಾರ ನಡೆಯುತ್ತದೆ. ಊಟಕ್ಕೆ ಮುಂಚೆ ಭಕ್ತಾದಿಗಳು ತಮ್ಮ ಹಣ್ಣು ಕಾಯಿಗಳನ್ನು ಸ್ವೀಕರಿಸುತ್ತಿದ್ದಂತೆ ದೇವರ ಗುಂಡವನ್ನು ಭಕ್ತರು ಹೆಗಲ ಮೇಲೆ ಹೊತ್ತುಕೊಂಡು ಸ್ವಾಮಿಗೆ ಜಯಕಾರ ಹಾಕುತ್ತಾ ಅನತಿ ದೂರದಲ್ಲಿ ಯಾವುದಾದರೂ ಹಾಲು ಬರುವ ಮರದ ಬುಡದಲ್ಲಿ ಇಟ್ಟು ವಾಪಸ್ಸಾಗುತ್ತಾರೆ. ಭಂಡಾರಕ್ಕೆ ಬಿದ್ದ ಹಣವನ್ನು ಎಣಿಕೆ ಮಾಡಿ ಮುಡುಪನ್ನು ಅಟ್ಟಕ್ಕೆ ಏರಿಸುತ್ತಾರೆ. ಈ ಹಣವನ್ನು ತಿರುಪತಿಗೆ ತಲುಪಿಸುವುದು.

ಘನ ಹರಿಸೇವೆ ಕುಟುಂಬದಲ್ಲಿ ಯಾವುದಾದರು ಕಷ್ಟ ನಷ್ಟ ತಲೆದೋರಿದಾಗ ಘನ ಹರಿಸೇವೆ ನಡೆಸುತ್ತೇವೆಂದು ಪ್ರಾರ್ಥಿಸಿಕೊಳ್ಳುತ್ತಾರೆ. ಇದು ಬಹಳ ಶ್ರೇಷ್ಠಕರವಾದದ್ದು. ಹರಿಸೇವೆಯು ಭಕ್ತಿ ಪೂಜೆಯಿಂದ ನಿಗದಿಪಡಿಸಿದ ಕಾಲದಲ್ಲಿ ನೆರವೇರುವಂತಹದು. ಹರಕೆ ಹೊತ್ತು ಮಾಡುವ ಈ ಘನ ಹರಿಸೇವೆಯನ್ನು ಕೇವಲ ಕೆಲವೊಂದು ಕುಟುಂಬಗಳು ಮಾತ್ರ ಮಾಡುವ ಪದ್ಧತಿಯಾಗಿದೆ. ಇದರ ವಿಶೇಷತೆ ಎಂದರೆ ಜೋಡುಗುಂಡ ಕಡ್ಡಾಯವಾಗಿ ಇರಲೇಬೇಕು. ಒಂದು ಗುಂಡದಲ್ಲಿ ಶ್ರೀ ವೆಂಕಟರಮಣ ದೇವರ ಪ್ರತಿಮೆಯನ್ನು, ಇನ್ನೊಂದರಲ್ಲಿ ಕೆಂಚರಾಯನ ಪ್ರತಿಮೆಯನ್ನಿಟ್ಟು ಮಾಮೂಲು ಪೂಜೆಯಂತೆ ಹಿಂದೆ ತಿಳಿಸಿದಂತೆ ಮಹಾ ಪೂಜೆ ನೆರವೇರುತ್ತದೆ. ಮಹಾ ಪೂಜೆಯವರೆಗೆ ಪೂಜಾ ಕ್ರಮ ಒಂದೇ ತರವಿದ್ದು, ಶ್ರೀ ವೆಂಕಟರಮಣ ವಿಗ್ರಹವಿರುವ ಗುಂಡವನ್ನು ತೆರೆಮರೆ ಮಾಡಿ, ಕೆಂಚರಾಯ ವಿಗ್ರಹವನ್ನು ಹೊರ ತೆಗೆದು, ದಾಸಯ್ಯನವರು ಭಕ್ತವೃಂದದೊಂದಿಗೆ ಸನಿಹದಲ್ಲಿನ ನದಿ ಯಾ ಕೆರೆಗೆ ಜಲಕಕ್ಕೆ ಹೊರಡುತ್ತಾರೆ. ಕೆಂಚರಾಯನ ವಿಗ್ರಹವನ್ನು ಭಕ್ತಾದಿಗಳ ಪೈಕಿ ಹಿಂದೆ ತಿರುಪತಿ ಯಾತ್ರೆ ಕೈಗೊಂಡವನು ತನ್ನ ಹೆಗಲ ಮೇಲೆ ಹೊತ್ತುಕೊಂಡಿರುತ್ತಾನೆ. ಸ್ನಾನಾದಿ ಮುಗಿಸಿ ಅಲ್ಲೇ ವಿವಿಧ ಪೂಜಾ ಸಾಮಗ್ರಿಗಳಿಂದ ಬಾಳೆ ಎಲೆಯಲ್ಲಿ ಎಡೆ ಹಾಕಿ ಪ್ರಾರ್ಥನೆ ಮುಗಿಸಿಕೊಂಡಾಗ ದರ್ಶನಕಾರನಿಗೆ ವಿಶೇಷವಾಗಿ ದರ್ಶನ ಬರುತ್ತದೆ. ದರ್ಶನ ಬರುವ ಸ್ಥಳದಲ್ಲಿ ವೃತ್ತಾಕಾರವಾಗಿ ಮಂಡಲ ಬರೆದು, (ಇದು ಲಕ್ಷ್ಮಣ ರೇಖೆತರಹ) ದಾಸಯ್ಯನು ಅದರ ಮಧ್ಯದಲ್ಲಿ ಮಡಿ ಬಟ್ಟೆಯಲ್ಲಿ ಭತ್ತವ ಹೊದುರಿಯ ರಾಶಿ ಹಾಕಿ ಮಂತ್ರ ಪಠನ ಮಾಡುವಾಗ ಉಗ್ರ ನರಸಿಂಹವತಾರ ತಳೆದು ಕೆಂಚರಾಯ ಮೈಮಾನಿಕೆ ಬರುವವಾತನು ಭಕ್ಷಿಸಲು ಬೀಳುತ್ತಾನೆ. ಹೀಗೆ ಮನೆಗೆ ವಾಪಾಸಾಗುವ

ತನಕ 2-3ಕಡೆ ಈ ರೀತಿ ಬಲಿ ಬೀಳಿಸುವುದಿದೆ. ಇದಕ್ಕೆ ಗಾವು ಬೀಳುವುದು ಎನ್ನುತ್ತಾರೆ. ದಾರಿಯುದ್ದಕ್ಕೂ ಎರಡು ಕಡೆ ಜನಸ್ತೋಮ ಸಾಲುಕಟ್ಟಿ ಬರುತ್ತಿರುತ್ತಾರೆ. ಒಡ್ಡೋಲಗದೊಂದಿಗೆ ಕಳಸ ಕನ್ನಡಿ ಹಿಡಿದ ಇಬ್ಬರು ಬಾಲಕಿಯರು ಮುಂದೆ ಸಾಗುತ್ತಿರುತ್ತಾರೆ.

ಮಡಿವಾಳನು ತನ್ನ ಎರಡು ಕೈಗಳಲ್ಲಿ ಬೆಳಕಿನ ಪಂಜುಗಳನ್ನು ಹಿಡಿದಿರುತ್ತಾನೆ. ಕಾರಣ ಘನ ಹರಿಸೇವೆಯನ್ನು ರಾತ್ರಿಯಲ್ಲೇ ಮಾಡುವ ಕ್ರಮವಾಗಿದೆ. ದರ್ಶನಕಾರನು ಅರ್ಭಟಿಸುತ್ತಾ ಬೆಳಕಿನ ಪಂಜುಗಳನ್ನು, ಬಲಿಯನ್ನು (ಭತ್ತದ ಅರಳು ಮತ್ತು ಬಾಳೆ ಹಣ್ಣು) ಭಕ್ಷಿಸಲು ಮೇಲೆ ಎರಗುತ್ತಿರುವ ದೃಶ್ಯ ಮತ್ತು ಆತನು ತನ್ನ ಎರಡು ಕೈಗಳಲ್ಲಿ ಹೊಂಗೆ ಮರದ ಸೊಪ್ಪಿನ ಕೊಂಬೆಗಳನ್ನು (ಇದಕ್ಕೆ ಬ್ಯಾಟೆಸೊಪ್ಪು ಎನ್ನುತ್ತಾರೆ) ಹಿಡಿದು ಅರ್ಭಟಿಸುತ್ತಾ ಓಡುವುದು ತುಂಬಾ ರಮಣೀಯವಾಗಿರುತ್ತದೆ. ಹೀಗೆ ಐನ್ ಮನೆಯ ಅಂಗಳಕ್ಕೆ ಬಂದು ಸೇರುತ್ತಾರೆ. ಆ ನಂತರ ಇಲ್ಲಿಯೂ ಕೆಂಚರಾಯನಿಗೆ ಕುರಿ ಅಥವಾ ಆಡು ಬೇಟೆ ಬೀಳುವುದಿದೆ. ಇಲ್ಲಿಗೆ ಈ ಕಾರ್ಯಕ್ರಮವು ಮುಗಿಯುತ್ತದೆ.

ಮಣೆ ಹರಿಸೇವೆ : ಮಣೆ ಹರಿಸೇವೆಯಲ್ಲಿ ಗುಂಡವಿರುವುದಿಲ್ಲ. ಬೇಟೆ ಬೀಳುವ ಕ್ರಮ ನಿಷಿದ್ಧ. ವೆಂಕಟರಮಣ ದೇವರ ವಿಗ್ರಹವನ್ನು ಮಣೆ ಮೇಲೆ ಬಾಳೆ ಎಲೆ ಇಟ್ಟು ಅಕ್ಕಿಯಲ್ಲಿ ಕುಳ್ಳಿರಿಸಿ ಪೂಜಿಸುವ ಕ್ರಮದ ಪೂಜೆ. ಇದಕ್ಕೆ ಮನೆ ಪೂಜೆ ಎನ್ನುತ್ತಾರೆ.

ಪಾನಕ ಹರಿಸೇವೆ: ಇವರಲ್ಲಿಯೂ ದೇವರ ವಿಗ್ರಹವನ್ನು ಸೂಕ್ತ ಆಸನದಲ್ಲಿರಿಸಿ, ಬೆಲ್ಲ ಮತ್ತು ಕರಿಮೆಣಸಿನ ಪುಡಿಯಿಂದ ತಯಾರಿಸಿದ ಪಾನಕವಿಟ್ಟು ಲಘು ರೀತಿಯಲ್ಲಿ ನಡೆಯಿಸುವ ಪೂಜಾ ಕ್ರಮಗಳು ಈಗ ರೂಢಿಯಲ್ಲಿಲ್ಲವೆಂದು ಹೇಳಬಹುದು.

ಅರೆಭಾಷೆ ಗೌಡರು ಆಚರಿಸುವ ವೆಂಕಟರಮಣದೇವರ ಹರಿಸೇವೆ ಪೂಜಾ ಸಂದರ್ಭದಲ್ಲಿ ಮುತ್ತೈದೆಯರು ಸಾಂಪ್ರದಾಯಿಕವಾಗಿ ಹಾಡುವ ಗೀತೆ:-

ಹರಿಸೇವೆ ಹಾಡು

ಸಣ್ಣ ಸಣ್ಣಾ ನಾಮಾ। ಸಣ್ಣಾ ನೀಲಿಯ ನಾಮಾ। ಎಷ್ಟೊಂದು ನಾಮಾ ಹರಿನಾಮಾ ||
ಎಷ್ಟೊಂದು ನಾಮಾ ಹರಿನಾಮಾ ವೆಂಕಟನಾಮ । ಹಳ್ಳಾದ ಸಾಲಲಿ ಹರಿಸೇವೆ ||
ಹಳ್ಳಾದ ಸಾಲಲಿ ಹರಿಸೇವೆ ವೆಂಕಟನಾಮಾ । ಶನಿವಾರ- ದಾ ಶಂಖ ನುಡಿದಾವೊ
ಶನಿವಾರ-ದಾ ಶಂಖ ನುಡಿದಾವೊ ವೆಂಕಟರಮಣ। ಗಿರಿಯ ಮೇಲಾದ ಹರಿಸೇವೆ ||
ಗಿರಿಯಾ ಮೇಲಾದ ಹರಿಸೇವೆ । ವೆಂಕಟನಾಮಾ ಶನಿವಾರ -ದಾ ಶಂಖ ನುಡಿದಾವೊ ।
ಶನಿವಾರ -ದಾ ಶಂಖ ನುಡಿದಾವೊ ವೆಂಕಟರಮಣ । ಅಣ್ಣಾ ಗೋಲಾಡಿ ಬರುತ್ತಾರೆ||
ಅಣ್ಣನ ಗಿರಿ ಮೇಲೆ ಬಣ್ಣ ಒಂದರಡಿಕ್ಕಿರೆ । ಬಣ್ಣಾ ತುಂಬೀರೆ ಗಿರಿಗೆಲ್ಲಾ
ಬಣ್ಣಾ ತುಂಬೀರೆ ಗಿರಿಗೆಲ್ಲಾ ತಕ್ಕುನೈನ। ಹೊನ್ನು ತುಂಬೀರೆ ಕಳಶಕ್ಕೆ ||
ಅಪ್ಪ ನಾ ಗಿರಿ ಮೇಲೆ ಕೊಪ್ಪು ಒಂದೆರಡಿಕ್ಕಿರೆ । ಕೊಪ್ಪು ತುಂಬೀರೆ ಗಿರಿಗೆಲ್ಲಾ
ಕೊಪ್ಪು ತುಂಬೀರೆ ಗಿರಿಗೆಲ್ಲಾ ತಕುನೈನ। ಮುತ್ತು ತುಂಬೀರೆ ಕಳಶಕ್ಕೆ ||

ಹೊತ್ತು ಹೊತ್ತಿ-ನಾ ಸ್ವಾಮಿ ಯಾಕಾಗಿ ಹೋಗಿದಿರಿ ಸ್ವಾಮಿ ।

ಅಣ್ಣಾನ ಮನೆಯಾ ಕುಲಸ್ವಾಮಿ ॥ ವೆಂಕಟರಮಣ ಅಣ್ಣಾ ಗೋಲಾಡಿ ಬರುತ್ತಾರೆ ॥

ಸಂಜೆಯಾ ಹೊತ್ತಿನಲಿ ಯಾಕಾಗಿ ಹೋಗಿದಿರಿ ಸ್ವಾಮೀ?

ಅಪ್ಪ -ನಾ ಮನೆಯಾ ಕುಲಸ್ವಾಮಿ? ವೆಂಕಟರಮಣ ಅಣ್ಣಾ ಗೋಲಾಡಿ ಬರುತ್ತಾರೆ

ಹಾಲು ಕಾಸೀವಿ। ಹರಿವಾಣ ಬೆಳಗೀವಿ। ಕಿತ್ತಳೆ ಹಣ್ಣಾ ಮಡಗೀವಿ।

ಕಿತ್ತಳೆ ಹಣ್ಣಾ ಮಡಗೀವಿ ವೆಂಕಟರಮಣ। ಕಿಚ್ಚೆದ್ದು ಬರುವಾ ಪರಿಷೆಗೆ ॥

ತುಪ್ಪ ಕಾಸೀವಿ, ಕೊಪ್ಪನ್ನ ಬೆಳಗೀವಿ। ಬಾಳೆಯ ಹಣ್ಣಾ ಸುಲಿದೀವಿ।

ವೆಂಕಟರಮಣ ಮಿಂದೆದ್ದು ಬರುವಾ ಭಕುತಂಗೆ

ಸ್ವಾಮಿಯ ಪೂಜೆಗೆ ಏನೇನು ತರಬೇಕು ?

ಕರಿಯಾ ಕಬ್ಬಿನಾ ಜಲ್ಲೆ । ಎಳೆಯಾ ತೆಂಗಿನಕಾಯಿ । ಯಾಲಕ್ಕಿ ಬೆಲ್ಲಾ ಒಳ್ಳೆ ಮೆಣಸು।

ಸ್ವಾಮಿಯ ಪೂಜೆಗೆ ಘನವಾದೊ । ಸ್ವಾಮಿ ಗುಂಡ-ದಾ ಮುಂದೆ ಘನವಾದೊ ॥

ಸ್ವಾಮಿ-ಯ ಮದುವೆಗೆ ಭೂಮ್ಯೆಲ್ಲಾ ಚಪ್ಪರಾ । ಯಾಲಕ್ಕಿ ಕಂಬಾ ತಳವಾರ ಸ್ವಾಮಿಗೆ।

ಸ್ವಾಮಿಯು ಮದುವೆ ಶನಿವಾರ ಶನಿವಾರದಾ-ಶಂಖ-ನುಡಿದಾವೊ ॥

ಎಲ್ಲಾ ದೇವರಿಗೆ ಎಣ್ಣೇಲಿ ದೀವಿಗೆ । ನಮ್ಮೊಡೆಯ ತಿಮ್ಮಪ್ಪಗೆ

ತುಪ್ಪದಲಿ ದೀವಿಗೆ ಉರುಸ್ಯಾರೊ । ಎಣ್ಣೇಲಿ ದೀವಿಗ ಬೆಳಗ್ಯಾರೊ ॥

ಸ್ವಾಮಿ ಗುಂಡದ ಮುಂದೆ ಆರತಿ ಎತ್ತಿ । ತುಪ್ಪದಲಿ ದೀವಿಗೆ ಉರುಸ್ಯಾರೊ॥

ಎಣ್ಣೆಲಿ ಜ್ಯೋತಿ ಬೆಳಗ್ಯಾರೊ । ಎಣ್ಣೆಲಿ ಜ್ಯೋತಿ ಉರಿದಾವೊ ॥

ಹಾರು ಕಚ್ಚೆಯ ಹಾಕಿ। ಜರಿಯ ಮುಂಡಾಸು ಕಟ್ಟಿ । ಮೂರು ನಾಮವ ಧರುಸ್ಯಾರೊ ।

ನಮ್ಮ ಸ್ವಾಮಿ । ಜೋಳಿಗೆ ಹಿಡಿದು। ಬೆಟ್ಟಾದ ಮೇಲೆ ಹೊರಟಾರು

ಗಿರಿಯನ್ನು ಹತ್ತುತ್ತಾ। ಕಿರುಬೆವರ ಸುರಿಸುತ್ತಾ । ಎಡಬಲದಾ ಶಂಖಾ ನುಡಿಸುತ್ತಾ॥

ಎಡಬಲದಾ ಶಂಖಾ ನುಡಿಸುವ ಸ್ವಾಮಿಗೆ। ಗಿರಿಯಾ ಮೇಲೊಂದು ಹರಿಸೇವೆ ॥

ಗಿರಿಯಾ ಮೇಲೊಂದು ಹರಿಸೇವೆ ಸ್ವಾ-ಮಿ-ಗೆ

ಮಂಗಳಾರತಿ । ಜಯ-ಮಂಗಳಾರತಿ-ನಿತ್ಯಾ ಶುಭ ಮಂಗ-ಳಾರತಿ॥

ಶ್ರೀ ವೆಂಕಟರಮಣ ಸ್ವಾಮಿ ಪಾದಾರವಿಂದಕ್ಕೆ ।

ಗೋವಿಂದಾನ್ ಗೋವಿಂದಾ..ಗೋ..ವಿಂದಾ..॥

ಗೌಡ ಜನಾಂಗದವರ ಶೃಂಗೇರಿ ಮಠಕ್ಕಿರುವ ನಂಟು

ಸನಾತನ ಧರ್ಮ ಅಂದರೆ ಹಿಂದೂ ಧರ್ಮವನ್ನು ರಕ್ಷಿಸಲು ಭಾರತದ 4 ದಿಕ್ಕುಗಳಲ್ಲಿ ಮಠಗಳನ್ನು ಸ್ಥಾಪಿಸಲಾಯ್ತು. ಭಾರತದ ದಕ್ಷಿಣ ಭಾಗವಾದ ಶೃಂಗೇರಿಯಲ್ಲಿ ಜಗದ್ಗುರು ಶಂಕರಾಚಾರ್ಯರು ನೆಲೆಸಿದರು. ಹಾಗೂ ಮೊದಲ ಧರ್ಮದ ಪೀಠ ಶೃಂಗೇರಿಯಾಯ್ತು.

ಶೃಂಗೇರಿ ಕನ್ನಡ ನಾಡಿನವರೆಗೆಲ್ಲಾ ಪವಿತ್ರವಾದ ತೀರ್ಥ ಕ್ಷೇತ್ರವಾಗಿರುತ್ತದೆ. ಸದಾ ಹಸಿರಿನಿಂದ ಕೂಡಿದ ಶೃಂಗೇರಿಯಲ್ಲಿ ತುಂಗಾ ನದಿ ಹರಿಯುತ್ತಾ ಗಂಗಾಸ್ನಾನ-ತುಂಗಾಪಾನವೆಂಬ ಗಾದೆಯಂತೆ. ಅಂದರೆ ತುಂಗಾ ನದಿ ನೀರು ಬಹಳ ರುಚಿಕರವೆಂಬ ಗಾದೆಯನ್ನು ಹಿರಿಯರು ಮಾಡಿದ್ದಾರೆ.

ಹಿಂದೆ ಇದು ಋಷಿ ಮುನಿಗಳ ಬೀಡಾಗಿದ್ದು ಪವಿತ್ರ ನೆಲವಾಗಿರುತ್ತದೆ ಹಾಗೂ ಗೌಡ ಜನರು ಕಾಣಿಕೆಯನ್ನು ಅರ್ಪಿಸುವ ಮೂಲ ಸ್ಥಳವೂ ಆಗಿದ್ದು ಇಂದಿಗೂ ಅರೆ ಭಾಷೆ ಗೌಡರ ಮದುವೆಯಲ್ಲಿ ಶೃಂಗೇರಿ ಮಠಕ್ಕೆ ಹರಿಕೆ ಹಣ ಕಟ್ಟುವ ಕ್ರಮ ಪದ್ಧತಿ ರೂಢಿಯಲ್ಲಿರುತ್ತದೆ. ಶೃಂಗೇರಿಯ ಜಗದ್ಗುರುಗಳು ನಮ್ಮೆಗೆಲ್ಲರಿಗೂ ಹಿಂದೂ ಗುರುಗಳಾಗಿದ್ದರೆಂದು ನಾವೆಲ್ಲರು ತಿಳಿಯಬೇಕಾದುದು ಅವಶ್ಯವಾಗಿರುತ್ತದೆ.

ಶಂಕರಾಚಾರ್ಯರು ದೇಶ ಸಂಚಾರ ಮಾಡುತ್ತಾ ಶೃಂಗೇರಿಗೆ ಬರುವಾಗ ಅಲ್ಲಿನ ಬೆಟ್ಟಗಳು ಋಷಿವರ್ಯರು ತಪಸ್ಸು ಮಾಡುತ್ತಿರುವಂತೆ ಕಂಡಿತಂತೆ. ಅವರಿಗೆ ಈ ಸ್ಥಳವು ತುಂಬಾ ಇಷ್ಟವಾಗಿ ತುಂಗಾನದಿಯಲ್ಲಿ ಸ್ನಾನ ಮಾಡಲು ತೆರಳಿದಾಗ ಉರಿ ಬಿಸಿಲಿನಲ್ಲಿ ಬಸುರಿ ಕಪ್ಪೆಯೊಂದು ಪ್ರಸವ ವೇದನೆಯಿಂದ ಬಳಲುತ್ತಿದ್ದು-ಅದರ ರಕ್ಷಣೆಗಾಗಿ ನಾಗರ ಹಾವೊಂದು ತನ್ನ ಹೆಡೆ ಬಿಚ್ಚಿ ನೆರಳಾಗಿ ನಿಂತಿರುವುದನ್ನು ಕಂಡರಂತೆ. ಅದನ್ನು ಕಂಡ ಶಂಕರರು ಧರ್ಮರಕ್ಷಣೆಗಾಗಿ ಇದು ಪ್ರಶಾಂತವಾದ ಸ್ಥಳವೆಂದು ಅದೇ ಸ್ಥಳದಲ್ಲಿ ಮಠ ಸ್ಥಾಪನೆಗೆ ಕಾರಣ ಕರ್ತರಾದರು.

ಆದಿ ಶಂಕರರು ಮೊದಲು ಸ್ಥಾಪಿಸಿದುದು ಶೃಂಗೇರಿಯಲ್ಲಿ ಶಾರದಾ ಪೀಠವನ್ನು ತುಂಗಾ ತೀರದಲ್ಲಿ ಕಲ್ಲು ಬಂಡೆಯ ಮೇಲೆ ಶ್ರೀ ಚಕ್ರವನ್ನು ಬರೆದು ಪೂಜಿಸಿದರು. ಅಲ್ಲಿಯೇ ಶಾರದಾದೇವಿಯನ್ನು ಪ್ರತಿಷ್ಠೆ ಮಾಡಿದರು. ಪೀಠದ ರಕ್ಷಣೆಗಾಗಿ ಪೀಠದ ಪೂರ್ವಕ್ಕೆ ಕಾಲಭೈರವ (ಕೆಂಚರಾಯ) ದಕ್ಷಿಣಕ್ಕೆ ದುರ್ಗೆ (ಸುಬ್ಬಮ್ಮ)ಳನ್ನು ಪಶ್ಚಿಮಕ್ಕೆ ಆಂಜನೇಯ ಮತ್ತು ಉತ್ತರಕ್ಕೆ ಮಹಾಕಾಳಿ (ಕೆಂಚಮ್ಮ) ಎಂಬ ದೇವತೆಗಳನ್ನು ಪ್ರತಿಷ್ಠಾಪಿಸಿ ಅಷ್ಟ ದಿಗ್ಬಂಧನ ಮಾಡಿ ಪೂಜಿಸಲಾರಂಭಿಸಿದರು.

ತದ ನಂತರ ಇಲ್ಲಿನ ಗುರುಗಳೆ ವಿಜಯನಗರ ಸಾಮ್ರಾಜ್ಯವನ್ನು ಸ್ಥಾಪನೆ ಮಾಡಿದರು. 16-17ನೇ ಶತಮಾನದಲ್ಲಿ ಅನೇಕ ಗ್ರಂಥಗಳನ್ನು ಪುಸ್ತಕಗಳನ್ನು ಬರೆದರು. ಅಂದಿನ ಪದ್ಧತಿಯನ್ನೇ ಗೌಡ ಜನರು ಇಂದಿನ ತನಕ ಅನುಸರಿಸುತ್ತಾ ಬಂದಿರುವುದು ವಿಶೇಷವಾಗಿದೆ.

ಹೀಗೆ ಶೃಂಗೇರಿಯ ಶಾರದಾಂಬೆ ಸನಾತನ ಧರ್ಮದಲ್ಲಿ ಮೊದಲ ವಿದ್ಯಾ ದೇವಿಯಾಗಿ ಶೃಂಗೇರಿಯಲ್ಲಿ ಶಂಕರಾಚಾರ್ಯರಿಂದ ಪೂಜಿಸಲ್ಪಟ್ಟರು. ನವರಾತ್ರಿಯ ದಿನ ವಿಶೇಷವಾಗಿ ಶೃಂಗೇರಿಯಲ್ಲಿ ಶಾರದಾದೇವಿಯನ್ನು ಪೂಜಿಸುತ್ತಾರೆ. ಗೌಡ ಜನರು ಆ ಪ್ರದೇಶದಿಂದ ಜೀವನೋಪಾಯಕ್ಕಾಗಿ ಮುಂದೆ ಪಸರಿಸಿದಾಗ ಗುರುಗಳು ಪ್ರತಿಯೊಂದು ತಂಡದವರಿಗೂ ಆಶೀರ್ವದಿಸಿ ತನ್ನ ಕೈಗೆ ಸಿಕ್ಕಿದ ದೇವತೆಯನ್ನು ಎತ್ತಿ ಕೊಟ್ಟು ಕುಲದೇವರನ್ನಾಗಿ ಪೂಜಿಸಲು ತಿಳಿಸಿದರಂತೆ; ಹೀಗೆ ಗೌಡ ಜನರು ಶ್ರೀ ವೆಂಕಟರಮಣ, ಸಬ್ಬಮ್ಮ, ಕೆಂಚಮ್ಮ ಮತ್ತು ಆಂಜನೇಯ ಎಂಬ ನಾಲ್ಕು ದೇವತೆಗಳನ್ನೂ ಮನೆದೇವರಾಗಿ

ಸ್ವೀಕರಿಸಿದರು. ಅಂತೆಯೇ ಗೌಡ ಜನರು ಇಕ್ಕೇರಿ, ದಕ್ಷಿಣ ಕನ್ನಡ ಜಿಲ್ಲೆ, ಐಗೂರು ಸೀಮೆ ಮತ್ತು ಕೊಡಗಿನ ಕಡೆಯಲ್ಲಿ ಹೆಚ್ಚಾಗಿ ನೆಲೆಸಿದರು. ಇವರು ಒಂದು ಕಟ್ಟುಬದ್ಧಿನ ಶಿಸ್ತಿನ ಕಟ್ಟು ಕಟ್ಟಳೆಯನ್ನು ಮಾಡಿಕೊಂಡು ಕಟ್ಟೆ ಮನೆ ಸ್ಥಾನದ ಸುಪರ್ದಿಗೆ ವಹಿಸಿದರು. ಇವೇ ಮುಂದೆ ಹತ್ತು ಕುಟುಂಬ ಹದಿನೆಂಟು ಗೋತ್ರದ ನುಡಿಕಟ್ಟುಗಳಾದವು. ಈಗಲೂ ಸಹ ಮದುವೆ ಶುಭ ಕಾರ್ಯಗಳಲ್ಲಿ ಹತ್ತು ಕುಟುಂಬ ಹದಿನೆಂಟು ಗೋತ್ರ ದೇವ ಸಭೆ ಸಂಗಡ ಕೇಳಿ.... ಅನ್ನುವ ನುಡಿಮುತ್ತುಗಳು ಸಹ ಚಾಲ್ತಿಯಲ್ಲಿವೆ. ಹಿಂದೆ ಊರು ಗೌಡ, ನಾಡ್‌ಗೌಡ, ದೇಶಗೌಡ ಎಂಬ ನಾಮಾಂಕಿತದಿಂದ ಗೌಡರು ಕ್ರಮಬದ್ಧವಾಗಿ ತಂತಮ್ಮ ಕಾರ್ಯಗಳಲ್ಲಿ ನಿರತರಾಗಿ ತಮ್ಮ ಮದುವೆ ಕಾಣಿಕೆಯನ್ನು ತಿರುಪತಿಗೂ ಮತ್ತು ಸಬ್ಬಮ್ಮ ಅಂದರೆ ಶಾರದಾ ಪೀಠಕ್ಕೂ ಒಪ್ಪಿಸುವ ಪರಿಪಾಠ ಇತ್ತು. ಈಗೀಗ ಬಹು ಕಮ್ಮಿಯಾಗಿದೆ. ಸಬ್ಬಮ್ಮ ದೇವತೆಗೆಂದು ತೆಗೆದಿಟ್ಟ ಹಣವನ್ನು ಈಗಿನ ಸಂತತಿಯವರು ತಿರುಪತಿಗೆ ಒಪ್ಪಿಸುತ್ತಿದ್ದಾರೆ. ಶೃಂಗೇರಿ ತಾಯಿಗೆ ಕಳುಹಿಸಿಕೊಡುವ ಪರಿಪಾಠ ನಿಂತಿದೆ. ಸಬ್ಬಮ್ಮಳನ್ನು ಮರೆಯದೆ ಪ್ರೀತಿಸಿ ಭಕ್ತಿಯಿಂದ ನೆನೆದರೆ ತಮ್ಮ ಇಷ್ಟಾರ್ಥವು ನೆರವೇರುವುದೆಂಬ ಮಾತು ಹಿರಿಯರಿಂದ ಕೇಳಿದ್ದೇವೆ.

ಮುಂದೆ ಕನ್ನಡ ಜಿಲ್ಲೆಯಲ್ಲಿ ನೆಲೆಸಿದ ಗೌಡ ಸ್ತ್ರೀಯರು ಕನ್ನಡ ಸೀರೆಯನ್ನು, ಗಂಡಸರು ಹಾರು ಕಚ್ಚೆ, ಕೋಟು, ಶಾಲು ಮುಂತಾದವುಗಳನ್ನು ಧರಿಸಿದರು. ಆದರೆ ಕೊಡಗಿನಲ್ಲಿ ನೆಲೆಸಿದ ಗೌಡರು ಕೊಡಗು ರಾಜನ ಪ್ರಭಾವದಿಂದ ಗಂಡಸರು ಬಿಳಿ ಕುಪ್ಪಸ, ದಟ್ಟಿ, ರುಮಾಲು ಅನ್ನೂ, ಹೆಂಗಸರು ಮಲೆನಾಡಿನ ಪದ್ಧತಿಯಂತೆ ಸೀರೆ ಅಡ್ಡ ಕಟ್ಟುವುದು. ಅಂದರೆ ಗೇಂಟಿ ಕಟ್ಟಲು ಪ್ರಾರಂಭಿಸಿದರು. ರಾಜನ ಆಸ್ಥಾನಕ್ಕೆ ಬರಬೇಕಾದಾಗ ಪ್ರತಿಯೊಬ್ಬ ಗಂಡಸು ಜಾತಿ ಲೆಕ್ಕವಿಲ್ಲದೆ ಕುಪ್ಪಸ ದಟ್ಟಿಯ ಪದ್ಧತಿಯಲ್ಲಿಯೇ ಬರುವುದು ರೂಢಿಯಲ್ಲಿತ್ತು. ಅಂದಿನ ಪದ್ಧತಿ ಪ್ರಕಾರ ಉಡುಪುಗಳೆಲ್ಲಾ ದೇಶದ ನಾನಾ ಭಾಗಗಳಲ್ಲಿ ಕೆಲವೊಂದು ಚಿಕ್ಕ ಪುಟ್ಟ ಬದಲಾವಣೆಯೊಂದಿಗೆ ಸರ್ವೆ ಸಾಮಾನ್ಯವಾಗಿತ್ತು. ಗೇಂಟಿ ಸೀರೆ ಉಡುವನ್ನು ಧರಿಸುವ ಸ್ತ್ರೀಯರನ್ನು ಈಗಲೂ ಸಹ ಶಿವಮೊಗ್ಗದ ಆಸುಪಾಸಿನಲ್ಲಿ ಹೇರಳವಾಗಿ ಕಾಣಸಿಗುತ್ತಾರೆ. ಆದ್ದರಿಂದ ಗೇಂಟಿ ಉಡುಪು ಯಾವುದೇ ಒಂದು ಜಾತಿಯ ಅಥವಾ ಜನಾಂಗದ ಉಡುಪಾಗಿರದೆ ಪ್ರಾದೇಶಿಕ ಅನಿವಾರ್ಯತೆಯಿಂದ ನಡೆದು ಬಂತೆಂದು ತಿಳಿಯಬಹುದು.

ಹಳೇ ಕೊಡಗು ಅಂದರೆ 1834ರ ಹಿಂದೆ ಇದ್ದಂತಹ ಕೊಡಗಿನ ಭಾಗಗಳಾದ ಸುಳ್ಯ, ಪುತ್ತೂರು, ಬಂಟ್ವಾಳ, ಬೆಳ್ತಂಗಡಿ, ಸುಬ್ರಮಣ್ಯ, ಪಿರಿಯಾಪಟ್ಟಣ, ಐಗೂರು ಸೀಮೆ, ಅರಕಲ ಗೋಡು, ಮಂಜರಾಬಾದ್ ಹಾಗೂ ಈಗಿನ ಕೊಡಗು ಜಿಲ್ಲೆಯ ಮಡಿಕೇರಿ, ವೀರಾಜಪೇಟೆ, ಸೋಮವಾರಪೇಟೆ ತಾಲೂಕುಗಳಲ್ಲಿ ಒಂದು ಅಂದಾಜಿನಂತೆ ಸುಮಾರು 5 ಲಕ್ಷಕ್ಕಿಂತಲೂ ಹೆಚ್ಚು ಅರೆ ಭಾಷೆ ಗೌಡರಿರುವರೆಂದು 1985ರಷ್ಟು ಹಿಂದೆ ಸುಳ್ಯದಲ್ಲಿ ನಡೆದ "ಗೌಡ ಸಮ್ಮೇಳನದಲ್ಲಿಯೇ ಅಂದಾಜಿಸಲಾಗಿದೆ. ಈಗ ಕೊಡಗಿನ ಮಡಿಕೇರಿ ತಾಲ್ಲೂಕಿನಲ್ಲಿ ಗೌಡರ ಪ್ರಾಬಲ್ಯವಿದ್ದರೆ ಸೋಮವಾರಪೇಟೆಯಲ್ಲಿ ಒಕ್ಕಲಿಗರ ಪ್ರಾಬಲ್ಯವನ್ನು ನಾವಿಂದು ಕಾಣುತ್ತೇವೆ.

ನಮ್ಮಲಿ ಉಪ ಜಾತಿಗಳಿಲ್ಲ. ನಾವೆಲ್ಲ ಒಂದೇ ಮರದಡಿಯಲ್ಲಿ ಬರುವ ಗೌಡರು. ನಮ್ಮಲ್ಲಿ ಭಿನ್ನಾವಿಭಿನ್ನತೆಗಳಿಗೆ ಆಸ್ಪದವಿರಬಾರದು. ನಮ್ಮ ಹಿಂದಿನ ಪದ್ಧತಿಯನ್ನೇ ಅನುಸರಿಸಿಕೊಂಡು ದೇಶದ ಜನವಾಹಿನಿಯಲ್ಲಿ ಪ್ರಗತಿ ಪಥದತ್ತ ಸಾಗುವುದು ನಮಗೆಲ್ಲರಿಗೂ ಶ್ರೇಯಸ್ಕರ. ನಮ್ಮತನ, ತನ್ನತನ, ಸ್ವಂತಿಕೆಯನ್ನು ಉಳಿಸಿಕೊಂಡು ದೇಶದ ಅಭಿವೃದ್ಧಿಗೆ ಸಹಭಾಗಿಗಳಾಗಬೇಕು.

ಹರಿಕೆ ಹಣ ಕಟ್ಟುವಾಗ ಸಬ್ಬಮ್ಮ ದೇವಿಯ ಹಾಡು

ಕೊಡಗು ಮಲೆ ಅಣ್ಣಂದಿರಾ। ಮದುವೆ ಎಂಬ ಸುದ್ದಿ ಕೇಳಿ
ಹೊರಟಾಳು ತಾಯಿ ಸಬ್ಬಮ್ಮಾ-ತಾನೀಗಾ॥

ಐಗೂರು ಸೀಮೆಲಿ । ಹುಟ್ಟಿದಾ ಮಹಾತಾಯಿ
ಮಹಾಶಕ್ತಿ ದೇವಿ ತಾಯಿ ಸಬ್ಬಮ್ಮಾ ತಾನೀಗಾ॥

ಅಂಗಳ ಸಾರಿಸಿ। ರಂಗೋಲೆ ಬರೆಯಿಸಿ।
ಕೊಡಗಿನ ಮದುವೆಯಾ। ಓಲೆಯಾ ಸುದ್ದಿ ಕೇಳಿ।

ಆಕಾಶಕೆ ಒಂದಾಗಿ । ಭೂಮಿಗೆ ಮುಂದಾಗಿ।
ಚಪ್ಪರಾ ಹಾಸ್ಯಾರು । ತಾಯಿ ಸಬ್ಬಮ್ಮಾ ತಾನೀಗಾ॥

ಎಡಕ್ಕೈಲಿ ಗೆಜ್ಜೆ ಕತ್ತಿ ಬಲಕ್ಕೈಲಿ ಪನ್ಯಕೊಡೆ (ದೇವರಕೊಡೆ)
ಹಿಡಕೊಂಡು ಹೊರಟಾರೊ । ತಾಯಿ ಸಬ್ಬಮ್ಮಾ ತಾನೀಗಾ॥

ಆ ಘಟ್ಟಾ ನನ್ನದಲ್ಲಾ। ಈ ಘಟ್ಟಾ ನನ್ನದಲ್ಲಾ
ನಡುವಿನ ಘಟ್ಟವು ನನ್ನದೆಂದು ನಡೆದಾಳು ತಾಯಿ...

ಆ ತೋಟ ನನ್ನದಲ್ಲಾ ಈ ತೋಟಾ ನನ್ನದಲ್ಲಾ
ಅಡಿಕೆ ಹಿಂಗಾರ ತುಂಬಿರುವ ತೋಟ ನನದೆಂದು

ಕದಳಿಯ ವನಕಾಗಿ ನಡೆದಾಳು
ಮಹಾಶಕ್ತಿ ತಾಯಿ ಸಬ್ಬಮ್ಮಾ

ಆ ಮನೆ ನನ್ನದಲ್ಲಾ ಈ ಮನೆ ನನ್ನದಲ್ಲಾ
ನಡುವಿನ ನೆಲ್ಲಕ್ಕಿ ನಡುಬಾಡೆ ನನದೆಂದು ಹತ್ತಿದಳು, ತಾಯಿ...

ಬೆಳ್ಳಿಯ ಗಿಂಡಿ ಬೆಳಗಿದರು ಒಳಗಿಂದಾ
ಪಾತಾಳದ ಪನ್ನೀರು ತಂದಾರು

ನೆಲ್ಲಕ್ಕಿ ನಡುಬಾಡೆ ನಂದಾದೀವಿಗೆಗೆ ಎದುರಾಗಿ
ಕೈ ಮುಗಿದು ನಿಂತಾಳು ತಾಯಿ ಸಬ್ಬಮ್ಮಾ ತಾನೀಗಾ॥

ಎಡಕ್ಕೈಲಿ ಬೆಳ್ಳಿಗೊಟ್ಟ ಬಲಕ್ಕೈಲಿ ಗಜಕೋಲು
ಹಿಡಿದಾಳು ತಾಯಿ ಸಬ್ಬಮ್ಮ ತಾನೀಗಾ॥

ಚಿನ್ನಾದ ನಾಣ್ಯವ ಬೆಳ್ಳಿಯ ಗಜಕೋಲಲಿ
ಜಡಿಜಡಿದು ತುಂಬಿದಳು ತಾಯಿ ಸಬ್ಬಮ್ಮಾ ತಾನೀಗಾ॥

ಮೂಡಂದ ಬಂದೀತು ಮೆಣಸಿನ ಬೇರೊಂದು
ಐದನೆ ಒಳ್ಳೆಮೆಣಸು ತುಂಬಿದರು ತಾಯಿ ಸಬ್ಬಮ್ಮಾ ತಾನೀಗಾ॥

ಗಂಧಧೂಪದ ಹೊಗೆಯನ್ನೇ ಕೊಡುಸ್ಯಾರು
ಮೇಲುಪ್ಪರಿಗೆಗೆ ಏರುಸ್ಯಾರು-ತಾಯಿ ಸಬ್ಬಮ್ಮಾ ತಾನೀಗಾ॥

ತಂದಾನ-ತಾನಿ-ತಾನಿ ತಂದಾನ ತಂದಾನ ತಾನನ ತಾನೀಗಾ..
॥ಜಯ ಮಂಗಳಂ॥ ನಿತ್ಯಾ ಶುಭ ಮಂಗಳಂ.

"ಹಸೆಮಣೆ" ಕೃತಿ ವಿಮರ್ಶೆ

1) "ಹಸೆಮಣೆ" ಎಷ್ಟು ಮುದ್ದಾದ ಹೆಸರು. ಕೇಳುವವರ, ನೋಡುವವರ ಮನಸ್ಸನ್ನು ಕ್ಷಣದಲ್ಲಿ ಸೆರೆ ಹಿಡಿಯುವ ಸಾಮರ್ಥ್ಯವಿರುವ ಅರ್ಥಪೂರ್ಣ ಶಿರೋನಾಮೆ ಮತ್ತು ಮುಖಪುಟದ ಚಿತ್ರಗಳು.

ಪುಸ್ತಕವನ್ನು ಕೈಗೆತ್ತಿಕೊಂಡಾಗ ಕಳೆದುಹೋದ ನಮ್ಮ ಮನೆಯ ಸದಸ್ಯರೊಬ್ಬರು ಮತ್ತೆ ಸಿಕ್ಕಿದಷ್ಟು ಸಂತೋಷವಾಯಿತು. ಪುಸ್ತಕದ ಮೊದಲ ಪುಟ ತೆರೆದಾಗ ಅಂತರಂಗದ ಕದ ತೆರೆದಂತಾಯಿತು. ಗೌಡರ ಕುಲದೇವ" ಶ್ರೀ ವೆಂಕಟರಮಣ ಸ್ವಾಮಿಯ ಚಿತ್ರ ಕಣ್ಮನ ತುಂಬಿತು. "ಸಣ್ಣ ಸಣ್ಣ ನಾಮಸಣ್ಣ ನೀಲಿಯ ನಾಮ ಎಷ್ಟೊಂದು ಹರಿನಾಮ" ಈ ಒಂದೇ ವಾಕ್ಯದಲ್ಲಿ ಇಡೀ ವಿಷ್ಣು ಪುರಾಣವೇ ಅಡಕವಾಗಿದೆ ಎಂಬುದು ಬಲ್ಲಿರಾ?

ಎರಡನೆಯ ಪುಟ ತಿರುವುತ್ತಿದ್ದಂತೆಯೆ, ಮೈ ರೋಮಾಂಚನವಾಯಿತು. ನನ್ನಾರಾಧ್ಯ ದೇವತೆ ಶಾರದೆಯ ಮುದ್ದಾದ ಚಿತ್ರ. ಅಲ್ಲದೆ ಶೃಂಗೇರಿ ಪೀಠದ ಈಗಿನ ಗುರುಗಳ ಭಾವಚಿತ್ರವು ಅರ್ಥಗರ್ಭಿತವಾಗಿದೆ.

ಒಂದೊಂದು ಪುಟಗಳನ್ನು ತೆರೆಯುತ್ತಾ ಹೋದಂತೆ ಗೌಡ ಜನಾಂಗದ ಜೀವನ ಚರಿತ್ರೆಯು ತೆರೆದಿಟ್ಟಂತೆ ಕಂಡಿತು. "ಜರಿಯ ಮುಂಡಾಸವ ತಲೆಯ ಮೇಲಿಟ್ಟು। ನೂಲಿನ ಜನಿವಾರ ಹೆಗಲಾ ಮೇಲಿಟ್ಟು । ನೀಟಾದ ನಾಮದ ಧರುಸ್ವಾರು। ಕಲ್ಯಾಣವೇ ॥ "ಕಾವೇರಿ ಹೊಳೆ ಹತ್ತಿ ಬರುತಾನೆ ಮದುವಣ್ಣಾ । ಚಿನ್ನಾದ ಜನಿವಾರ ಇಟ್ಟುಕೊಂಡು" ಈ ಸಾಲುಗಳನ್ನು ಓದಿದಾಗ, ಹಿಂದೆ ಗೌಡರು ಜನಿವಾರ ಧರಿಸುತ್ತಿದ್ದರು. ಅಲ್ಲದೆ ಬಾಸಿಂಗ ಕೂಡ ಕಟ್ಟುತ್ತಿದ್ದರು ಎಂಬುದು ಸ್ಪಷ್ಟವಾಗುತ್ತದೆ. ಈಗಲೂ ಸಹ ಕೆಲವೊಂದು ಕುಟುಂಬದವರಿಗೆ ಪಟ್ಟೆ ಬಾಸಿಂಗವಿದೆ. ಇವೆಲ್ಲಾ ಇಂದು ಮರೆಯಾಗಿದೆ. ಇದಕ್ಕೆಲ್ಲಾ ಕಾರಣ ಕಾಲ ಮತ್ತು ಪರಿಸರ.

ಬಣ್ಣ ಬಂಗಾರದ ಹಾಡಿನಲ್ಲಿ ಬರುವ " ಆ ಊರು ಮಳೆ ಬಂದು ಈ ಊರು ಕೆರೆ ತುಂಬಿ, ಗೋವೇ ಸಾಗರದ ಹೊಸ ಮಳೆ" ಗೌಡರು ಗೋವಾ, ಸಾಗರ ಕಡೆಯಿಂದ ಸಾಗಿ ಬಂದಿರುವುದು ತಿಳಿಯುತ್ತದೆ. "ಮುತ್ತಿನ ಚೆಂಡು ಮುವತ್ತು ನವಿಲಕ್ಕಿ (ನವಿಲು + ಹಕ್ಕಿ) ಕಂಚಿಗೂ ಪುರದಿಂದೊದಿಸುವ ರೂಪಾಗಳಿಗಾ " ಕಂಚಿಪುರ (ಕಂಚಿಪಟ್ಟಣ = ಕಾಂಚೀವರಂ) ದಿಂದ ತಂದಂತ ಸೀರೆಗೆ ಒಡಲೆಲ್ಲಾ ಮುತ್ತಿನ ಅಥವಾ ಚಿನ್ನದ ಚೆಂಡು ಇದೆ. ಮುವತ್ತು ನವಿಲು ಹಕ್ಕಿಗಳು ಅಂಚು ಮತ್ತು ಸೆರಗಿನಲ್ಲಿ ಇವೆ ಎಂದು ಸೀರೆಯಲ್ಲಿ ನಾನಾರೀತಿಯಲ್ಲಿ ವರ್ಣನೆ ಮಾಡಿ ಅವನ್ನು ಮದುಮಗಳಿಗೆ ಓದಿಸುತ್ತಾರೆ (ಓದಿಸು =ಕಾಣಿಕೆ ನೀಡು) "ಒಲೆ ಚಿನ್ನ ವೈನಾಡು" ಇಂದಿಗೂ ವೈನಾಡಿನ ಚಿನ್ನ ಬಹಳ ಹೆಸರುವಾಸಿಯಾದದ್ದು. ಕಂಚಿಪಟ್ಟಣದ (ಕಾಂಜೀವರಂ) ಸೀರೆ ವೈನಾಡಿನ ಚಿನ್ನವನ್ನು ತರುತ್ತಿದ್ದ ಗೌಡರು ಸಾಮಾನ್ಯರೇ? ಅಂತಹ ಸೀರೆ ಉಡಿಸುವಾಗ ಚಿನ್ನ ತೊಡಿಸುವಾಗ ಅದನ್ನು ವರ್ಣಿಸುವ ಬಗೆ ಎಷ್ಟೊಂದು ವೈವಿಧ್ಯಮಯವಾಗಿದೆ. ಒಂದೊಂದು ಸಾಲು ಗೌಡರ ಆಚಾರ ವಿಚಾರಗಳನ್ನು ಪ್ರತಿಬಿಂಬಿಸುತ್ತಿದೆ. ಕೆಲವೊಂದು ಪದಗಳು, ಸಾಲುಗಳು, ಅಥವಾ ಇಡೀ ಪದ್ಯವೇ ಕೊಡಗಿಗೆ ಪಸರಿದ ನಂತರವೇ ಹೆಣೆದಿರಬಹುದು ಅಥವಾ ಮಾರ್ಪಾಟು ಆಗಿರಬಹುದು ಎಂಬ ಶಂಕೆಯು ಉಂಟಾಗುತ್ತದೆ.

ಸಬ್ಬಮ್ಮ ಶಾರದೆ ದೇವಿಗೆ ಹರಿಕೆ ಹಣ ಕಟ್ಟುವಾಗ ಹೇಳುವ ಹಾಡುಗಳು ಕೊಡಗಿನ ಗೌಡರಿಗೂ ಮಲೆನಾಡು ಗೌಡರಿಗೂ ಇರುವ ಸಂಬಂಧವನ್ನು ಸಾರಿ ಹೇಳುತ್ತದೆ. ಕೊಡಗು ಮಲೆಯ ಅಣ್ಣಂದಿರ

ಮದುವೆಗೆ ಬರುವಾ ಸಬ್ಬಮ್ಮ ದೇವಿ ಹಿಡಿದ ಪಸ್ಕಕೊಡೆ, ಗೆಜ್ಜೆಕತ್ತಿ ಏನೋ ರಹಸ್ಯವನ್ನು ಹೇಳುವಂತಿದೆ.

ಇನ್ನೊಂದು ವಿಷಯವೆಂದರೆ ಗೌಡತಿಯರ ತಾಳಿಸರ. ಅದು ಸಣ್ಣ ಸಣ್ಣ ಗುಂಡುಪೋಣಿಸಿ ಮಾಡಿದ ಸರವಾಗಿತ್ತು. ಬರಬರುತ್ತಾ, ಅಡ್ಡಿಗೆ ಚೈನ್, ರೋಪ್ ಚೈನ್, ಕರಿಮಣಿಸರ ಹೀಗೆ ಬದಲಾಯಿತು. ಮಲೆನಾಡ ಗೌಡತಿಯರು ಇಂದಿಗೂ ಗುಂಡುಗಳನ್ನೇ ಬಳಸುತ್ತಾರೆ. ಅದು ಅವರಿಗೆ ಪ್ರತಿಷ್ಠೆಯ ಸಂಕೇತವೂ ಹೌದಂತೆ.

ಒಟ್ಟಿನಲ್ಲಿ ಗೌಡರ ಬಗ್ಗೆ ಸಂಶೋಧನೆ ಮಾಡಲು ಉಳಿದಿರುವ ಒಂದೇ ಒಂದು ಆಶಾಕಿರಣ ಈ ಸೋಬಾನೆ ಹಾಡುಗಳು. ಇವನ್ನು ಉಳಿಸಿ ಬೆಳೆಸಬೇಕಾದುದು ಪ್ರತಿಯೊಬ್ಬ ಗೌಡನ ಆದ್ಯ ಕರ್ತವ್ಯವೂ ಹೌದು. ಗೌಡರ ಖಜಾನೆಗೆ ಇಂತಹ ಒಂದು ಅನರ್ಘ್ಯ ರತ್ನವನ್ನು ಒದಗಿಸಿ ಕೊಟ್ಟ ಬೈತಡ್ಕ ಜಾನಕಿಯವರನ್ನು ಹಾಗೂ ಸೋಬಾನೆಗಳನ್ನು ಒದಗಿಸಿ ಕೊಟ್ಟ ಹಿರಿಯ ಬಂಧು ಭಗಿನಿಯರನ್ನೂ ಎಷ್ಟು ಶ್ಲಾಘಿಸಿದರೂ ಕಡಿಮೆಯೇ? ನಮ್ಮ ಹಿರಿಯರು ಹಾಡುವಾಗ ಅಲ್ಲಲ್ಲಿ ಆಗುತ್ತಿದ್ದ ಉಚ್ಚಾರ ದೋಷಗಳನ್ನು ಆದಷ್ಟು ಮಟ್ಟಿಗೆ ಶುದ್ಧವಾಗಿಸಿದ್ದಾರೆ. ಅಲ್ಲದರ ಜೊತೆ, ಹೊನ್ನಮ್ಮನ ಕೆರೆಯ ಕತೆ, ಗಂಗೆ ಗೌರಿಕತೆ ಎಲ್ಲವೂ ಹಸೆಮಣೆಗೆ ಮೆರುಗು ನೀಡಿವೆ. ಸಾಕಷ್ಟು ಸೋಬಾನೆಗಳು ಬಿಟ್ಟು ಹೋಗಿದ್ದರೂ ಸಹ ಇದೊಂದು ಅದ್ಭುತ ಸಾಧನೆಯೇ ಸರಿ. ಮದುರಂಗಿ ಶಾಸ್ತ್ರದ ಹಾಡಂತು ಎಲೆ ತರಲು, ಬಣ್ಣರಿಂದ ವಿಮರ್ಶೆಮಾಡಿ, ಒಡ್ಡೋಲಗ ಸಮೇತ ಹೋಗಿ ಎಲೆ ತಂದು ಚಂದನದ ಮಣೆಯಲ್ಲಿ ಅರೆದು ಶೋಕ ಸಂಜೀವಿನಿ ಕಡ್ಡಿಯಿಂದ ಮದುರಂಗಿ ತಿದ್ದುತಿದ್ದರೆಂಬುದು ಆಶ್ಚರ್ಯಕರವಾಗಿದೆ.

ಸೋಬಾನೆಯ ಸಾಲುಗಳಿಗೆ ಅರ್ಥ ಬರೆಯುತ್ತಾ ಹೋದರೆ ಮುಗಿಯುವುದೇ ಇಲ್ಲ. ಇಂತಹ ಉತ್ಕೃಷ್ಟ ಸೋಬಾನೆ ಉಳಿಯಬೇಕಾದರೆ ಮದುವೆಗಳು ಮೊದಲಿನಂತೆ ಮನೆಗಳಲ್ಲೇ ನಡೆಯಬೇಕು. ಹಿರಿಯರು ಅನುಭವಿಗಳೂ ಆದ ಶ್ರೀಮಾನ್ ಪ್ರೊ. ಪೂಜಾರಿ ದೊಣ್ಣಪ್ಪನವರ ಮುನ್ನುಡಿ ಹಸೆಮಣೆಗೆ ಮತ್ತಷ್ಟು ಮೆರುಗನ್ನು ನೀಡಿದೆ. ಗೌಡ ಜನಾಂಗ ಬಾಳಿ ಬದುಕಿ ನಡೆದು ಬಂದ ಹಾದಿಯ ಮೇಲೆ ಬೆಳಕು ಚೆಲ್ಲುವ ಬೈತಡ್ಕ ಜಾನಕಿಯವರ ಸಾಹಸವನ್ನು ಹೊಗಳಲು ಶಬ್ದವೇ ಸಿಗುತ್ತಿಲ್ಲ. ಇವರಿಗೂ ಇವರ ಕುಟುಂಬಕ್ಕೂ ಕುಲದೇವರು ಶ್ರೀ ವೆಂಕಟರಮಣ ಮತ್ತು ಶೃಂಗೇರಿ ಶಾರದಾ ಮಾತೆಯ ಕರುಣೆಯ ನೆರಳು ಸದಾ ಇರಲಿ ಎಂದು ಮನದುಂಬಿ ಹಾರೈಸುತ್ತೇನೆ.

- ಬಿಟ್ಟೀರ ಚೋಂದಮ್ಮ ಶಂಬು, ಬೆಂಗಳೂರು.

******

2) **ಚದುರಿಬಿದ್ದ ಮುತ್ತುಗಳನ್ನು ಹೆಕ್ಕಿ ಮಾಲೆ ಹೆಣೆದಂತೆ ಎಂದಿದ್ದಾರೆ ಕುಲ್ಲಚನ ಕಾರ್ಯಪ್ಪನವರು**

******

3) ಹತ್ತು ಕುಟುಂಬ ಹದಿನೆಂಟು ಗೋತ್ರದ ಗೌಡ ಬಾಂದವರಿಗೆ ಹಸೆಮಣೆ ಎಂಬುದು ಒಂದು ಪವಿತ್ರವಾದ ಮೆಟ್ಟಿಲು ಎಂದು ಹೇಳಬಹುದು. ಮಾನವ ಹುಟ್ಟಿನಿಂದ ಸಾಯುವವರೆಗೆ ಬ್ರಹ್ಮಚರ್ಯ ಗೃಹಸ್ತ, ವಾನಪ್ರಸ್ಥ, ಸನ್ಯಾಸ ಎಂಬ ನಾಲ್ಕು ಹಂತಗಳಿವೆ. ಹುಟ್ಟಿದ ಮಗು ಬೆಳೆದು ಪ್ರೌಢಾವಸ್ಥೆಗೆ ಬಂದು ಮದುವೆ ಎಂಬ ಮೆಟ್ಟಿಲು ಏರುವವರೆಗೆ ಬ್ರಹ್ಮಚರ್ಯ. ಮದುವೆ ಆದಮೇಲೆ ಗೃಹಸ್ಥ ಎಂಬ ಸ್ಥಾನವನ್ನು ಸ್ವೀಕರಿಸುತ್ತಾನೆ. ಒಬ್ಬ ವ್ಯಕ್ತಿ ಹಸೆಮಣೆ ಏರುವುದು ಎಂದರೆ ಮದುವೆಯಾಗುವನು ಎಂದು ಅರ್ಥ. ಮದುವೆ ಎಂಬ ಪವಿತ್ರ ಬಂಧನದಲ್ಲಿ ಹಸೆ ಎಂಬುವುದು ಮುಖ್ಯವಾದ ಶಾಸ್ತ್ರ.

ಮದುವೆ ಅಥವಾ ವಿವಾಹ ಎಂಬ ಬಂಧನದಲ್ಲಿ ಗಂಡು ಹೆಣ್ಣು ಕೆಲವು ಶಾಸ್ತ್ರ ಸಂಪ್ರದಾಯಗಳ

ಮೂಲಕ ಸತಿಪತಿಗಳಾಗುತ್ತಾರೆ. ಮದುವೆಯಲ್ಲಿ ಮಾಡುವ ಸಂಪ್ರದಾಯಗಳನ್ನು ಹಾಡಿನ ಮೂಲಕ ವ್ಯಕ್ತ ಪಡಿಸುತ್ತಾರೆ. ಇಂತಹ ಹಾಡಿನ ಪುಸ್ತಕವೇ ಹಸೆಮಣೆ.

ಶ್ರೀಮತಿ ಜಾನಕಿ ಬೆಳ್ಯಪ್ಪನವರು ಹೊರತಂದಿರುವ ಪುಸ್ತಕಕ್ಕೆ ಹಸೆಮಣೆ ಎಂದು ಹೆಸರಿಟ್ಟು, ಬೆಳಗಿಸಿರುವುದು ನಿಜವಾಗಿಯೂ ಗೌಡ ಬಾಂಧವರಿಗೊಂದು ಹೆಮ್ಮೆಯ ವಿಷಯ.

ಎಲ್ಲಕ್ಕಿಂತ ಹೆಚ್ಚಾಗಿ ಆಕರ್ಷಕವಾಗಿ ತೋರುವ ಪುಸ್ತಕದ ಹೆಸರು ಜೊತೆಗೆ ಕುಲದೇವರ ಚಿತ್ರ ಹಾಗೂ ಸ್ತುತಿ. ಶೃಂಗೇರಿ ಶಾರದಾಂಬೆಯ ಹಾಗೂ ಶೃಂಗೇರಿ ಗುರುಗಳ ಚಿತ್ರ ಕೊಟ್ಟಿರುವುದು ಗೌಡರಿಗೆ ಇರುವಂತಹ ಹಿಂದಿನ ಸಂಪ್ರದಾಯವನ್ನು ಎತ್ತಿ ತೋರಿಸುತ್ತದೆ.

ಇಂದಿನ ಆಧುನಿಕ ಯುಗದಲ್ಲಿ ಗೌಡ ಬಾಂದವರಿಗೊಂದು ಮದುವೆ ಎಂದರೆ ಒಂದು ಮಾರುಕಟ್ಟೆಯಾಗಿರುವಂತೆ ತೋರುತ್ತದೆ. ಏಕೆಂದರೆ ಜನ್ಮ ಕೊಟ್ಟ ತಂದೆ ತಾಯಂದಿರು ಮಕ್ಕಳ ಭವಿಷ್ಯವನ್ನು ಆಲೋಚಿಸದೇ ಬೀದಿ ಪಾಲು ಮಾಡುವವರಿದ್ದರೆ ಮತ್ತು ಮಕ್ಕಳು, ಪೋಷಕರ ಅರಿವಿಗೆ ಬಾರದೆ ಆಗುವ ಮದುವೆ ಇಂತಹವುಗಳು ದೂರವಾಗಿ ಇನ್ನು ಮುಂದೆಯಾದರು ಶಾಸ್ತ್ರ ಸಂಪ್ರದಾಯಕಗಳ ಮೂಲಕವೇ ಸತಿ ಪತಿಗಳಾಗಿ ಒಂದು ಗೂಡಿಸುವುದು ಮಾತಾಪಿತೃರ ಕರ್ತವ್ಯವೆಂದೇ ಹೇಳಬೇಕು.

ಶ್ರೀಮತಿ ಜಾನಕಿ ಬೆಳ್ಯಪ್ಪನವರ ಇಂಥ ಭಗೀರಥ ಯತ್ನ ಗೌಡ ಬಾಂದವರಿಗೆ ಒಂದು ಹೆಮ್ಮೆಯ ಕೊಡುಗೆಯಾಗಿದೆ.

ಮನುಷ್ಯನಿಗೆ ಸಕಲ ಸಂಪತ್ತಿದ್ದರೆ, ಅದನ್ನು ಪೀಳಿಗೆಗೆ ಕ್ರೋಢಿಕರಿಸದೇ ಜನರ ಇಂತಹ ಸಾಹಸ ಕಾರ್ಯಗಳಿಗೆ ಸಹಕಾರವಿತ್ತು ಅವರಲ್ಲಿ ಅಡಗಿರುವ ಪ್ರತಿಭೆಯನ್ನು ಬೆಳಕಿಗೆ ತಂದಂತಾಗುತ್ತದೆ. ಗೌಡ ಬಾಂದವರು ಇಂತಹ ಒಬ್ಬ ಆದರ್ಶ ಲೇಖಕಿ/ಲೇಖಕರಿಗೆ ಸಹಕರಿಸಿದರೆ ನಮ್ಮಲ್ಲಿ ಎಲೆ ಮರೆಯ ಕಾಯಿಯಂತೆ ಇರುವ ಅದೆಷ್ಟೋ ಪ್ರತಿಭೆಗಳನ್ನು ಬೆಳಕಿಗೆ ತಂದಂತಾಗುತ್ತದೆ.

ಇನ್ನು ಶ್ರೀಮತಿ ಜಾನಕಿಯವರು ಹೊರತಂದಿರುವ ಪುಸ್ತಕದಲ್ಲಿ ಗೌಡರ ಸಂಪ್ರದಾಯ ಸೋಬಾನೆಗಳು ಕುಲದೇವರ ಹರಿಸೇವೆ ಹಾಡು ಮಂಗಳಾರತಿ, ಸತ್ಯನಾರಾಯಣ ಸ್ವಾಮಿಯ ಹಾಡು ಉತ್ತಮ ರೀತಿಯಿಂದ ಸಂಗ್ರಹ ಮಾಡಿದ್ದಾರೆ.

ಹೆಣ್ಣೊಪ್ಪಿಸಿ ಕೊಡುವಾಗ ಹೇಳುವ ಹಾಡಿನ ಶೈಲಿ, ತಾಯಿ ಮಗಳ ಅಗಲಿಕೆ, ಆಗುವ ಸಂಕಷ್ಟ ಒಂದೊಂದಂತೆ ಅತ್ಯುತ್ತಮ ರೀತಿಯಲ್ಲಿ ಮೂಡಿ ಬಂದಿದೆ.

"ಪ್ರೀತಿಯೊಂದೊಡಗೂಡಿ ಸಂತಸದಿ ಬಾಳು... ಹೆತ್ತವರ ಮನೆಗಿಂದು ಹೊರಗಾದೆ ಮುಂದೆ ಮಗಳು ಪತಿಯ ಮನೆಯಲ್ಲಿ ಹೇಗೆ ಬಾಳುವಳು ಎಂಬ ಶೈಲಿಯಲ್ಲಿ ತೋರಿಸುತ್ತದೆ. ಹಿಂದಿನ ಕಾಲದಲ್ಲಿ ಗೌಡರಿಗೆ ಇದ್ದ ಸ್ಥಾನ ಮತ್ತು ಕರ್ತವ್ಯವನ್ನು ತೋರಿಸುತ್ತದೆ. ಇದೆ ರೀತಿ ಇನ್ನು ಮುಂದೆ ಗೌಡರ ಆಚಾರ, ವಿಚಾರ, ಸಂಪ್ರದಾಯಗಳು ಹತ್ತು ಕುಟುಂಬ ಹದಿನೆಂಟು ಗೋತ್ರದ ಗೌಡ ಬಾಂದವರ ಮುಂದಿಡಲು ಪ್ರಯತ್ನಿಸುತ್ತಿದ್ದಾರೆ. ಇನ್ನು ಮುಂದೆಯು ಜನಾಂಗ ಬಾಂದವರು ಇಂತಹ ಓರ್ವ ಲೇಖಕರಿಗೆ ಸರ್ವ ರೀತಿಯಲ್ಲಿ ಸಹಕಾರವಿತ್ತು. ಸಹಕರಿಸುವುದು ನಮ್ಮ ನಿಮ್ಮೆಲ್ಲರ ಕರ್ತವ್ಯವು ಆಗಿದೆ.

ಶ್ರೀಮತಿ ಜಾನಕಿ ಮತ್ತು ಸಂಸಾರಕ್ಕೆ ಕುಲದೇವರ ಶೃಂಗೇರಿಯ ಗ್ರಾಮ ದೇವತೆಯು, ಇಷ್ಟದೇವತೆ, ಕುಟುಂಬದ ದೈವಗಳು ಇನ್ನು ಮುಂದೆಯು ಇಂತಹ ಒಂದು ಒಳ್ಳೆಯ ಕಾರ್ಯ ಮಾಡುವಂತೆಯು ಅನುಗ್ರಹಿಸಿ ಸದಾ ಸುಖ ಶಾಂತಿ ನೆಮ್ಮದಿ ದೀರ್ಘಾಯುಷ್ಯ ಕೊಟ್ಟು, ಉತ್ತಮ ಅಭಿವೃದ್ಧಿ ಪಡಿಸಲೆಂದು ಆತ್ಮ ಪೂರ್ವಕ ಗೌಡ ಭಾಂದವರ ಪರವಾಗಿ ಬೇಡಿಕೆ.

- ಗುತ್ತಿಮುಂಡನ ಗಿರೀಶ್ ಕುಮಾರ್, ಕೊಯನಾಡು.

ಗೌಡ ಜನಾಂಗದವರ ಮದುವೆ ಸಂಸ್ಕೃತಿಯ ಪರಿಚಯ

ಅಕ್ಕಿ ಶಾಸ್ತ್ರ ಮತ್ತು ಎಣ್ಣೆ ಅರಶಿಣ ಶಾಸ್ತ್ರ ಪದ್ಧತಿಗಳು ಹಿಂದೂ ಮತದ ಇತರ ಜನಾಂಗದ (ಜಾತಿ) ಸಂಸ್ಕೃತಿಯಷ್ಟೇ ಹಳೆಯದು. ಅರೆಗನ್ನಡ ಗೌಡರ ಸಂಸ್ಕೃತಿಯು ಆರ್ಯರು ಭಾರತಕ್ಕೆ ಬರುವುದಕ್ಕೆ ಮೊದಲು ದಕ್ಷಿಣ ಭಾರತದಲ್ಲಿದ್ದ ಆರ್ಯೇತರ ಜನಾಂಗದ ಸಂಸ್ಕೃತಿಯ ಉಳಿವಿಗಾಗಿ ವೇದಗಳು ಹೇಳಿದ ಧಾರ್ಮಿಕ ವಿಧಿಗಳು ಹಾಗೂ ಧರ್ಮಶಾಸ್ತ್ರ ಆಧಾರದ ಮೇಲೆ ನಿರ್ಮಿಸಿದ ಜಾತಿ ಕಟ್ಟಳೆಗಳನ್ನು ಪರಿಪಾಲಿಸುವುದಕ್ಕೆ ಕಟ್ಟೆಮನೆಗಳನ್ನು ಸ್ಥಾಪಿಸಿ ಆ ಕಟ್ಟೆಮನೆಗಳ ಮುಖಾಂತರ ಜಾತಿ ಪದ್ಧತಿಗಳನ್ನು ಕಾಪಾಡಿಕೊಂಡು ಬರುವಂತೆ ನಿರ್ಣಯಿಸಿದ್ದಾಗಿದೆ.

ಗೌಡರ ಮದುವೆಯಲ್ಲಿ ನಡೆಯುವ ಅಕ್ಕಿಶಾಸ್ತ್ರ ಋಗ್ವೇದ ಸಂಹಿತೆಯ ಪ್ರಕಾರ ಮದುವೆಯಲ್ಲಿ ಮದು ಮಕ್ಕಳ ತಲೆಯ ಮೇಲೆ ಹಾಕುವ ಅಕ್ಕಿಯು ಮಾನವ ಜೀವನ ಧಾತುವಾಗಿರುವುದಲ್ಲದೆ ಅನಂತ ಶಕ್ತಿಯನ್ನು ಕೊಡುವ ಲಕ್ಷ್ಮಿಯಾಗಿದ್ದಾಳೆ. ವಿವಾಹದ ಪವಿತ್ರ ಬಂಧನದಲ್ಲಿ ಹಂತ ಹಂತವಾಗಿ ಪೂಜಿಸುವುದೇ ಅಕ್ಷತೆ. ಮದುವೆ ಎಂಬ ಸಮಾರಂಭ ಹಿಂದೂಗಳಲ್ಲಿ ಬಹಳ ಮಹತ್ವವನ್ನು ಹೊಂದಿರುವ ಒಂದು ವಿಧಿ. ನಮ್ಮ ಹಿರಿಯರು ಹೆಣ್ಣನ್ನು ಕೊಡುವುದಕ್ಕೆ ಕನ್ಯಾದಾನವೆಂದು ಕರೆದಿದ್ದಾರೆ. ವಿವಾಹವನ್ನು ಒಂದು ಹೆಣ್ಣು ಮತ್ತು ಗಂಡನ್ನು ಒಟ್ಟುಗೂಡಿಸುವ ಒಂದು ವಿಧಿ ಎಂದು ಭಾವಿಸದೆ ಆ ವಿಧಿಗೆ, ಹೆಜ್ಜೆ ಹೆಜ್ಜೆಗೂ ಹತ್ತು ಕುಟುಂಬ ಹದಿನೆಂಟು ಗೋತ್ರದ ಸಮಸ್ತ ಬಂಧು-ಭಾಂದವರ ಆಶೀರ್ವಾದ. ತಮ್ಮ ಕುಲದೇವರ ಕೃಪೆ -ಗುರು ಕೃಪೆ (ಕಾರೋಣರು, ಕಾಲಕಂಡ ಹಿರಿಯರು) ಸೋದರ ಸಂಬಂಧದ ಅನುಮತಿಯಿಂದ ಮುಂದೆ ಬದುಕಿ ಬಾಳುವ ವಧುವರರ ಜೀವನ ಸುಗಮವಾಗಿ ದಂಪತಿಗಳ ಸರ್ವತೋಮುಖವಾದ ಅಭಿವೃದ್ಧಿಯನ್ನು ಬಯಸಿ ಅಕ್ಕಿಹಾಕಿ ಹಾರೈಸುತ್ತಾರೆ.

ಅಕ್ಷತೆ ಋಗ್ವೇದ ಕಾಲದಷ್ಟು ಹಳೆಯದು. ಮದುವೆಯಾಗುವ ಮದು ಮಕ್ಕಳು ತಮ್ಮ ಜೀವನವನ್ನು ಸುಗಮವಾಗಿ ಕಳೆಯಲು ಅವರಿಗೆ ಶುದ್ಧವಾದ ಮನಸ್ಸು ಹಾಗೂ ಆರೋಗ್ಯಕರವಾದ ದೈಹಿಕ ಸಂಪತ್ತು ಇರಬೇಕೆಂಬುವುದಕ್ಕೆ ಎಣ್ಣೆ ಅರಶಿಣ ಹಚ್ಚುತ್ತಾರೆ. ಈ ಶಾಸ್ತ್ರದ ನಂತರ ಮುಖದ ಸೌಂದರ್ಯ ವೃದ್ಧಿಸುತ್ತದೆ. ಗಂಡು ಹೆಣ್ಣಿನ ಸಂಪರ್ಕಕ್ಕೆ ಆರೋಗ್ಯ ಮುಖ್ಯ. ದೇವತೆಗಳಿಗೆ ಪ್ರಿಯವಾದ ಗರಿಕೆ ಹುಲ್ಲಿನಿಂದ ಮುತ್ತೈದೆಯರು ಎಣ್ಣೆ, ಅರಶಿಣವನ್ನು ಮದು ಮಕ್ಕಳ ಕಾಲಿನಿಂದ ತಲೆಯವರೆಗೂ ಗಂಟುಗಳಿಗೆ ಔಷದೋಪಚಾರ ರೀತಿಯಲ್ಲಿ ಹಚ್ಚಿ ಕೈ ಮುಗಿಯುತ್ತಾರೆ. ಅರಶಿಣವಲ್ಲಿ ಚರ್ಮರೋಗ ನಿವಾರಣೆ, ರೋಗ ನಿರೋಧಕ ಶಕ್ತಿ ಇದ್ದು ಮಂಗಳ (ಶುಭ)ವೆಂಬ ಭಾವನೆ ಪುರಾತನ ಕಾಲದಿಂದಲೂ ಬಂದಿರುವ ನಂಬಿಕೆಯಿದೆ. ಮಂಗಳ ದ್ರವ್ಯದಲ್ಲಿ ಅರಶಿಣಕ್ಕೆ ಪ್ರಥಮ ಸ್ಥಾನವಿದ್ದು, ಹಿಂದೂ ಧರ್ಮದಲ್ಲಿ ವೈಜ್ಞಾನಿಕ ಉಪಯೋಗವನ್ನು ಉಪಯೋಗಿಸುವಂತೆ ಮಾಡುವುದು ನಮ್ಮ ಪೂರ್ವಿಕರ ಬೌದ್ಧಿಕ ಸಾಮರ್ಥ್ಯವನ್ನು ಕಾಣಬಹುದಾಗಿದೆ.

ಎರಡನೆಯ ಮಹತ್ವದ ವಿಚಾರವೆಂದರೆ ಹಸೆ. ಅಕ್ಕಿಯಿಂದ ಬರೆದ ರಂಗೋಲಿಯನ್ನು ಹಸೆ ಎನ್ನುತ್ತಾರೆ. ಮುತ್ತೈದೆಯರು ಎರಡು ಕೈಗಳನ್ನು ಜೋಡಿಸಿ ಬೊಗಸೆ ತುಂಬಾ ಅಕ್ಕಿ ಹಿಡಿದು ರಂಗೋಲೆ ಬರೆದು ಶೃಂಗರಿಸಿದ ನಂತರ ಮದು ಮಕ್ಕಳನ್ನು ಅಲ್ಲಿ ಕೂರಿಸಿ ಶಾಸ್ತ್ರವಿಧಿಗಳನ್ನು ಮಾಡುತ್ತಾರೆ. ಹಸೆಯನ್ನು ನೆಲ್ಲಕ್ಕಿ ಕೆಳಗೆ ನೆಲ್ಲಕ್ಕಿ ಗೋಡೆಯಲ್ಲಿ ಮತ್ತು ಅಂಗಳದಲ್ಲಿ ಧಾರೆ ಮಂಟಪದ ಕೆಳಗಡೆ ಬರೆಯುತ್ತಾರೆ. ಇದರಲ್ಲಿ ಗೋಡೆಯಲ್ಲಿ ಬರೆಯುವ ಹಸೆಯು ಮುಖ್ಯವಾದದ್ದು. ನೆಲ್ಲಕ್ಕಿ ಗೋಡೆಯಲ್ಲಿ 4'X4' ಅಳತೆಯಲ್ಲಿ ಸೆಗಣಿಯಿಂದ ಸಾರಿಸಿ ಸುಣ್ಣದ ಕಡ್ಡಿಯಿಂದ ಒಂದು ನಿರ್ದಿಷ್ಟ ಅಳತೆಗೆ 2

ಚಿತ್ರಗಳನ್ನು ಬಿಡಿಸುತ್ತಾರೆ. ಒಂದು ಚಿತ್ರದಲ್ಲಿ ಗಂಡಿನ ದಿಬ್ಬಣದ ಚಿತ್ರವಿದ್ದು, ಸೂರ್ಯನ ಗುರುತು ಇರುತ್ತದೆ. ಇನ್ನೊಂದರಲ್ಲಿ ಹೆಣ್ಣಿನ ಚಿತ್ರವಿದ್ದು ಚಂದ್ರನ ಗುರುತು ಇರುವುದಲ್ಲದೆ ವಾದ್ಯ, ಗಿಳಿ, ಬಾಳೆಗಿಡ ಇತ್ಯಾದಿ ಇರುತ್ತದೆ. ಇದು ಹೆಣ್ಣು ಇಳಿದು ಹೋದ ನಂತರ ತನ್ನ ತಾಯಿ ತಂದೆಯರು ಆ ಹಸೆಯನ್ನು ನೋಡಿ ತಮ್ಮ ದುಃಖ ಮರೆಯಲು ಬರೆಯುವುದಾಗಿದೆ. ಹಾಗೂ ವಧು ವರರನ್ನು ಆ ನಿರ್ದಿಷ್ಟ ಸ್ಥಳದಲ್ಲಿಯೇ ಕೂರಿಸುವುದು ವಿಶೇಷವಾಗಿದೆ. ಗೌಡರ ಮದುವೆ ಸಂಸ್ಕೃತಿಯಲ್ಲಿ ವೀಳ್ಯ ಶಾಸ್ತ್ರ, ಎಣ್ಣೆ ಅರಶಿಣ ಶಾಸ್ತ್ರ, ಮಡಿಲಕ್ಕಿ ತುಂಬಿಸುವುದು ಮುಂತಾದ ಶಾಸ್ತ್ರ ವಿಧಿಗಳನ್ನು ನೆಲ್ಲಕ್ಕಿ ದೀವಿಗೆ ಎದುರು ಮಾಡುವುದು ಕಡ್ಡಾಯವಾಗಿರುತ್ತದೆ.

ಮಾತ್‌ಕತೆ :

ಪ್ರ : ಗೌಡ ಸಂಸ್ಕೃತಿಲಿ ಮದುವೆಲಿ ಸಾಮಾನ್ಯಾಗಿ ಹೆಣ್ಣ್ ಮಕ್ಕಳ ಪಾತ್ರ ಮುಖ್ಯ ಆಗಿದ್ದದೆ. ಇಲ್ಲಿ ಪ್ರತಿಯೊಂದು ಶಾಸ್ತ್ರಕ್ಕೂ ಸೋಬಾನೆ ಹಾಡ್‌ಗ ಇದ್ದವೆ. ಅದರ್ಲಿ ಆ ಜನಾಂಗದ ಸಂಸ್ಕೃತಿನ ಹಾಡ್‌ನ ರೂಪಲಿ ಹೆಣ್ಮಕ್ಕ ಹೇಳುವೆ. ಹಿಂಗಾಗಿ ಮದುವೆಲಿ ಪ್ರತಿಯೊಂದಕ್ಕೂ ಸೋಬಾನೆ ಹಾಡ್‌ಗ ಮಹತ್ತರ ಪಾತ್ರವಹಿಸೊಳೊ. ಅಕ್ಕಾ, ಇಂದ್ ನೀವು ನಮಿಗೆ ಮದುವೆ ಚಪ್ಪರ ದಿನ ಏನೇನ್ ಶಾಸ್ತ್ರಗಳ್ನ ಮಾಡುವೆತ ತಿಳ್ಸಿಕೊಡಕು.

ಉ : ಒಳ್ಳೆ ಪ್ರಶ್ನೆ ಕೇಳ್ದರಿ ಅಕ್ಕ - ನೋಡಿ-ಮದುವೆ ಶಾಸ್ತ್ರಗಳ ಬಗ್ಗೆ ಹೇಳಿಕೆ ಮುಂದೆ ಗೌಡ ಸಂಸ್ಕೃತಿ ತೇಳ್ಳೋರ ಬಗ್ಗೆ ಎರಡು ಮಾತ್‌ಗಳ್ನ ಹೇಳ್ನೆ. ಗೌಡ ಸಂಸ್ಕೃತಿತೇಳ್ರೆ ಅದ್ ಹಿಂದೂ ಧರ್ಮದ ಇತರ ಜನಾಂಗಗಳ ಸಂಸ್ಕೃತಿಯಷ್ಟೇ ಹಳೆದ್. ಧರ್ಮಶಾಸ್ತ್ರ ಧಾರ್ಮಿಕ ವಿಧಿ ಇವುಗಳ ಮ್ಯಾಲೆ ಮಾಡ್ದಂತ ಜಾತಿ ಕಟ್ಟಳೆಗಳ್ನ ಉಳ್ಸಿಕಾಗಿ ಕಟ್ಟೆಮನೆ ತೇಳಿ ಮಾಡ್ದೊ. ಕಟ್ಟೆಮನೆ ತೇಳ್ರೆ ಒಂದು ಗುಂಪುನ ಜನಾಂಗದ ಹಿರಿಯವಂಗೆ ಇರುವ ಅಧಿಕಾರತ ತಿಳ್ಕಣಕ್. ಆ ಕಟ್ಟೆ ಮನೆಗಳ ಊರು ಗೌಡನ ಮೂಲಕ ಅವರ ಜನಾಂಗದ ಪದ್ಧತಿಗಳ್ನ ಕಾಪಾಡಿಕಂಡ್ ಬಾದು. ಕೊಡ್‌ಗ್‌ಲಿ ಸನ ಕಟ್ಟೆ ಮನೆವು ಅಲ್ಲದೆ ಇತರ ಮನೆವು ಸ ವಳೊತ ಹಿರಿಯವು ಹೇಳ್ದ ಮಾತ್.

ಪ್ರ : ಹೌದೂ? ಗೌಡ ಸಂಸ್ಕೃತಿಲಿ ಇರ್ದು ಕನ್ನಡ ಸಂಸ್ಕೃತಿ. ಆದರೆ ಅವು ಅರೆ ಬಾಸೆ ಅಥವಾ ಅರೆ ಗನ್ನಡತ ಯಾಕೆ ಮಾತಾಡುವೆ?

ಉ : ನೋಡಿ ಅಕ್ಕಾ! ಇವರ ಬಾಸೆ ಕನ್ನಡನೆ. ಆದರೆ ಇದ್ ಕನ್ನಡ ನಾಡ್‌ನ ಹಳೆ ಕನ್ನಡ, ನಡುಕನ್ನಡ, ಹೊಸ ಕನ್ನಡತ, ಕಾಲ ಬದಲಾವಣೆ ಆದಂಗೆ ಬಾಸೆನೂ ಬದಲಾವಣೆ ಆತ್. ವ್ಯವಸಾಯ ಮುಖ್ಯ ಕಸುಬು ಆಗಿದ್ದ ಇವು ಮನೆಲಿ ಮಾತಾಡ್ ಕಾಕನ ಕನ್ನಡ ಬಾಸೆಲಿ ಪರಿವರ್ತನೆ ಆತ್, ಅದ್ಕೆ ಅರೆ ಬಾಸೆ ತ ಹೆಸ್‌ರಾತ್ ಹಂಗೆ ಈಗ ಅರೆ ಗನ್ನಡತ ಕರ್ದವೆ. ಈಗನ ಕನ್ನಡಕ್ಕೆ ಹೋಲ್ಸಿರೆ ನಾವು ಮಾತಾಡುದು ನಿಜವಾಗಿ ಅರೆ ಕನ್ನಡ. ಮತ್ತೆ ಇದ್ ಎಲ್ಲವ್ರಕು ಸುಲ್ಭಾಗಿ ಅರ್ಥ ಆದೆ. ಆದರೆ ಕೆಲವು ಜನ ಅರೆ ಗೌಡ ಕರ್ದವೆ. ಅದ್ ತಪ್ಪು, ಅರೆ ಗನ್ನಡ ಭಾಷೆ ತ ಸರಿಯಾದ ಅರ್ಥ

ಪ್ರ : ಅದ್ ಸರಿ ಈಗ ಗೌಡ ಸಂಸ್ಕೃತಿಲಿ ಮುಖ್ಯವಾಗಿ ಏನೇನ್ ಶಾಸ್ತ್ರವಳೊತ ಹೇಳಿ ನೋಡ್ನೊ?

ಉ : ನೋಡಿ ಅಕ್ಕಾ ಮುಖ್ಯವಾಗಿ ಬಾದು ತೇಳ್ರೆ-ವೀಳ್ಯಶಾಸ್ತ್ರ, ಅಕ್ಕಿ ಶಾಸ್ತ್ರ, ಎಣ್ಣೆಶಾಸ್ತ್ರ, ಹಸೆ ಬರೆಯೊದು, ಮದ್‌ರಂಗಿ ಶಾಸ್ತ್ರ, ಮತ್ತು ಮಡಿಲಕ್ಕಿ ಶಾಸ್ತ್ರತ ಇನ್ನ್ ಬೇಕಸ್ಟ್ ಶಾಸ್ತ್ರಗವಳೊ.

ಆದರೆ ಇಂದ್ ನಾವು ಅಕ್ಕಿ ಶಾಸ್ತ್ರ ಮತ್ತೆ ಎಣ್ಣೆ ಶಾಸ್ತ್ರದ ವಿಸಯಕ್ಕೆ ಬರೊನ. ಈ ಎಲ್ಲಾ ಶಾಸ್ತ್ರಗ ಬಹಳ ಹಿಂದೆಂದ ಹಿಂದೂ ಧರ್ಮ ಶಾಸ್ತ್ರಂದ ಬಂದ ಪದ್ಧತಿಗ ಮದುವೆಲಿ ಮದ್ ಮಕ್ಕಳ ತಲೆಮ್ಯಾಲೆ ಹಾಕುವ ಅಕ್ಕಿ ಉಟ್ಟಲ್ಲಾ? ಅವ್ ಮಾನವನ ಜೀವನ ದಾತು ಆಗುಟ್ಟು. ಅಲ್ಲದೆ ಅನಂತ ಶಕ್ತಿನ ಕೊಡುವ ಲಕ್ಷ್ಮಿ ಸಹ ಹೌದು. ಮದುವೆ ತೇಳುವ ಈ ಶುಭ ಸಮಾರಂಭ ಹಿಂದೂಗಳ್ಲಿ ಅತ್ಯಂತ ಮಹತ್ವ ಹೊಂದಿರುವಂತ ಒಂದು ವಿಧಿ. ನಮ್ಮ ಹಿರಿಯವು ಹೆಣ್ಣ್‌ನ ಕೊಡ್ದೊಕ್ಕೆ ಕನ್ಯಾದಾನತ ಕರ್‍ದೊಳೊ. ಮದುವೆನ ಒಂದು ಹೆಣ್ಣ್ ಮತ್ತೆ ಗಂಡ್‌ನ ಒಟ್ಟು ಗೂಡ್ಸುವ ಒಂದು ವಿಧಿ ತೇಳಿ ಭಾವಿಸದೆ ಆ ವಿಧಿಗೆ ನಮ್ಮವು ಹೆಜ್ಜೆ ಹೆಜ್ಜೆಗೂ ಅಲ್ಲಿ ಕೂಡ್ಡವರ ಅನುಮತಿ ಕೇಳಿ ಮುಂದುವರ್‍ಸುವೆ. ಅಂದರೆ ಪ್ರತಿ ಶಾಸ್ತ್ರಗಳ ಮಾಡಿಕೆ ಮುಂದೆ ಹತ್ತ್ ಕುಟುಂಬ ಹದ್ನೆಂಟ್ ಗೋತ್ರದ ಸಮಸ್ತ ಬಂಧು, ಭಾಂದವರ ಆಶೀರ್ವಾದ, ತಮ್ಮ ಕುಲದೇವರ ಕೃಪೆ, ಗುರುಕೃಪೆ, ಸೋದರ ಸಂಬಂಧವ ಅನುಮತಿ ಕೇಳ್ವೆ.

ಪ್ರ : ಕೂಡ್ದವುತೇಳ್ರೆ ಯಾರ್‍ಯಾರ್?

ಒಂದು ಗುಂಪುಲಿ ಅಥವಾ ಒಂದು ಊರ್‌ಲಿ ಬದ್‌ಕಿ ಬಾಳಿಕೆ ಕಷ್ಟ, ಸುಖಲಿ ಒಬ್ಬರಿಗೊಬ್ಬ ಸಹಕರಿಸಿಕೆ ಎಲ್ಲಾ ತರದ ಜನರ ಸಹಕಾರ ಬೇಕು. ಅದ್ಕೆ ಹತ್ತ್ ಕುಟುಂಬತ ಹೇಳುವೆ. ಆ 10 ಕುಟುಂಬಲಿ 18 ಗೋತ್ರದವು ಸೇರಿದ್ದವೆ. ಒಂದು ಊರ್‌ಲಿ ಇರುವ ಹತ್ತ್ ಕುಟುಂಬಗಳೊಟ್ಟಿಗೆ 18 ಗೋತ್ರದವು ಗೌಡುಗ ಆಗಿದ್ದವೆ. ಇದರ್‍ನ ತಿಳ್ಕಣಕು. ಅವೆಲ್ಲವು ಸನ ಅತ್ತಿತ್ತ ಕೂಡಿ ಕೆಲ್ಸ ಮಾಡುವೆ. ಹಂಗಾಗಿ ಗೌಡ ಜನ ಆ ಗುಂಪುಗೆ ಸೇರ್‍ದರ್‌ಂದ ಅದೇ ನುಡಿಕಟ್ಟ್‌ನ ಅನುಸರ್‍ಸಿ ಕೆಲ್ಸ ಮಾಡುವೆ.

ಅಷ್ಟೇ ಅಲ್ಲ, ಇವರ ಮದುವೆಲಿ ವಾದ್ಯದವು, ಮಡಿವಾಳ, ಕ್ಷೌರಿಕ, ಕುಂಬಾರ, ಬ್ರಾಹ್ಮಣ, ಬಳೆಗಾರ, ಮೇದ, ಬಡಗಿ ಸಹ ಮುಖ್ಯ ಪಾತ್ರ ವಹಿಸುವೆ. ಇನ್ನ್ ಚಪ್ಪರ ದಿನದ ಶಾಸ್ತ್ರಗಳ್ನ ನೀವು ಹೇಳಿ ಅಕ್ಕಾ

ಸಮಾರಂಭಲಿ ಅಡಿಗೆ ಮಾಡಿಕೆ ಒಲೆ ಪೂಜೆ ಮಾಡ್ದು :- ಒಲೆ ಪೂಜೆಗೆ ಗೊತ್ತು ಪಡ್ಸಿದ ಜಾಗಲಿ 5 ಒಲೆ ಹಾಕಿ ಸೆಗಣಿ ಸಾರ್‍ಸಿ ಐದ್ ಜನ ಮುತ್ತೈದೆ ಹೆಣ್ಮಕ್ಕ ಸೇರಿ ರಂಗೋಲೆ ಬರ್‍ದ್ ಗಣಪತಿಗೆ ಮಡ್ಗಿಕೆ ಮಣ್ಣ್‌ನ ದೀಪ ಹೊತ್ಸಿದ ಮ್ಯಾಲೆ ಕಾಯಿ ಒಡ್ದ್ ಹೂಮಡ್ಗಿ ಕೈ ಮುಗ್ದ್ ಒಲೆಗೆ ಸೌದೆ ಮಡ್ದೊಕು. ಐದ್ ಒಲೆಗಳ ಮುಂದೆ 5 ಕೊಡಿ ಬಾಳೆಲೆ ಮಡ್ಗಿ ಅದ್ಕೆ ಅಕ್ಕಿ ಹೊದುರಿ ಹಾಕಿ ಎಲೆ ಕೊಡಿಗೆ ಎಣ್ಣೆಗೆ ಮುಳ್ಗ್‌ಸಿದ ಬತ್ತಿನ ಮಡ್ಗಿ ದೀಪ ಉರ್‍ಸೊಕು. ದೀಪಕ್ಕೆ ಕರ್ಪೂರ ಇಲ್ಲರೆ ನೆಣೆ ಬತ್ತಿಗಳ ಹಿಡ್ದ್ ಹೊತ್ತಿಸಿ ಅದರ್‌ಂದ ಒಲೆಗೆ ಬೆಂಕಿ ಮಾಡೊಕು. ಮತ್ತೆ ಪಾತ್ರಲಿ ಹಾಲ್ ಕಾಸೊಕು. ಎಲ್ಲಕ್ಕಿಂತ ದೊಡ್ಡ ಒಲೆಗೆ ದೊಡ್ಡ ಕಡ್ಡಾಯನ ಐದ್ ಜನ ಎತ್ತಿ ಮಡ್ಗಿ ನೀರ್ ಹೊಯ್ದ್ ಅದರೊಳಗೆ ದೊಡ್ಡ ಮರದ ಸಟ್ಟ್‌ಗನ ಎಲ್ಲವೂ ಸೇರಿ ಹಿಡ್ದ್ ದೇವ್ರುನ ನೆಸ್ಸಿಕಂಡ್ 3ಸುತ್ತು ತಿರ್‍ಗ್‌ಸೊಕು. ಇವ್ ಜಂಬರಲಿ ಎಲ್ಲವುಕು ಯಾವ ತೊಂದರೆ ಇಲ್ಲದೆ ಎತ್ತೊಕುತ ಮಾಡ್ದಂತ ಕ್ರಮ ಇಂದಿಗೂ ಉಟ್ಟು. ಇಷ್ಟ್ ಆದ ಮ್ಯಾಲೆ ಅಡಿಗೆಯವು ಅವರ ಕೆಲಸ ಸುರು ಮಾಡುವೆ.

ಇನ್ನ್ ಊರು ಪತ್ತಿ ಕೊಡುವ ಕ್ರಮ:- ಇಷ್ಟೆಲ್ಲಾ ಆಕಾತನ ಮುಸ್ಸಂಜೆ ಹೊತ್ತಾಗ್ತ ಇದ್ದದೆ. ಮದುವೆ ಮನೆಗೆ ನೆಂಟ್ರ್ ಊರವು ಬಾಕೆ ಸುರಾದೆ. ಬಂದ ನೆಂಟ್ರಿಗೆ ಅಂಗಳದ ಮೂಲೆಲಿ ಹಂಡೆಲಿ ತುಂಬಿಸಿಟ್ಟ ನೀರ್‌ನ ಪಳ ಪಳ ಬೆಳ್ಗಿದ ಹಿತ್ತಾಳೆ ಚೊಂಬುಲಿ ಕೊಡುವ ಕ್ರಮ. ಎಲ್ಲವು ಬಂದ್ ಸೇರ್‍ದ ಮ್ಯಾಲೆ

ಕುಟುಂಬದ ಯೆಜ್‌ಮಾನ ಒಂದು ಕೈಲಿ ನೀರ್ ಮತ್ತೆ ಇನ್ನೊಂದು ಕೈಲಿ ಪಟ್ಟೆಲಿ ಹುರಿಯಕ್ಕಿ ಬಾಳೆಣ್ಣ್, ತೆಂಗಿನಕಾಯಿ, ಎಲೆ ಅಡ್ಕೆ ಮಡ್ಗಿ ಊರುನ ಮುಖ್ಯಸ್ಥರ್‌ಗೆ ಹೇಳುವೆ. ಇಂದ್ ನೀವೆಲ್ಲವು ಇಲ್ಲಿ ಸೇರಿ ನಮ್ಮ ಕಾರ್‌ಬಾರ್‌ನ ಯಾವ ತಪ್ಪೂ ಬಾರದಂಗೆ ನಡ್ಸಿ ಕೊಡುವ ಭಾರ ನಿಮ್ಮ ಮ್ಯಾಲೆ ಉಟ್ಟು-ತೇಳಿ, ನಮಸ್ಕಾರ ಮಾಡುವೆ. ಇದ್ ಯಾಕೆ ತೇಳ್ರೆ ಒಂದು ಮದುವೆ ತೇಳ್ತು ಒಬ್ಬನ ಸೊತ್ತಲ್ಲ. ಅದ್ ಇಡೀ ಊರಿಗೆ ಸಮ್ಮಂಧ ಪಟ್ಟದ್ದ್ ತೇಳ್ವೊರ ಒಗ್ಗಟ್ಟ್‌ನ ತೋರ್ಸುವಂತಹ ಮರ್ಯಾದೆ ಆಗುಟ್ಟು. ಊರು ಮುಖ್ಯಸ್ಥ ಅದರ್ನ ತಕಂಡ್ ಮಡಿವಾಳಂಗೆ, ವಾದ್ಯದವುಕೆ ಗಂಡ್‌ನ ಮದುವೆ ಆದ್ರೆ ಕ್ಷೌರಿಕಂಗೆ ವೀಳ್ಯಕೊಟ್ಟುವೆ. ತಕ್ಷಣ ಮಡಿವಾಳ ಅವನ ಮರ್ಯಾದಿ ತಕ್ಕಂಡ್ ಮೇಲ್ಕಟ್ಟ್ ತೇಳುವ ಬೆಳಿ ಬಟ್ಟೆನ ಸೀತಾವಳಿ ಚಪ್ಪರಕ್ಕೆ ಕಟ್ಟುವೆ. ಹಾಲೆ ಮರದ ಕಂಬದ ಬುಡಲಿ ಗಣಪತಿಗೆ ಮಡ್ಗುವೆ. ವಾದ್ಯದವು ವಾದ್ಯ ಮಾಡಿಕೆ ಸುರು ಮಾಡುವೆ. ಈಗ ಮದುವೆ ಮನೆಗೆ ಕಳೆಬಾತ್.

ಇನ್ನ್ ಸ್ವಾದರ ಮಾವ ಕಾಸ್ತಾಳಿ ಕಟ್ಟುದು ಮತ್ತೆ ಎಣ್ಣೆ ಶಾಸ್ತ್ರಮಾಡುವ ಕ್ರಮ:-

ಈಗ ಮನೆ ಯೆಜ್‌ಮಾನ ಸ್ವಾದರ ಮಾವಂಗೆ ಕಾಸ್ತಾಳಿ ಕಟ್ಟಿಕೆ ನೀರ್ ಕೊಟ್ಟುವೆ. ಎಲ್ಲವು ನೆಲ್ಲಕ್ಕಿ ಬಾಡೆಲಿ ಬಂದ್ ನಿತ್ತಮ್ಯಾಲೆ ಮದ್ ಮಕ್ಕ ವರ ಆದರೆ ಬೆಳಿಪಂಚೆ ತಲೆಗೆ ಬೆಳಿ ಕೈವಸ್ತ್ರ ಹಾಕಿರೊಕು. ವಧು ಆದರೆ ಬೆಳಿ ಕಂಜಿಸೀರೆ ಉಟ್ಟ್ ತಲೆಗೆ ಚೆಕ್‌ನ ಮುಸುಕು ವಸ್ತ್ರ ಹಾಕಿರೊಕು. ನೆಲ್ಲಕ್ಕಿ ಅಡಿಲಿ ಮಣೆ ಮಡ್ಗಿದ್ದವೆ. ಒಂದು ಮುಕ್ಕಾಲ್ ಮೇಲೆ ಕಂಚ್‌ನ ಬಟ್ಟ್‌ಲಿ 5 ಎಲೆ ಒಂದು ಹಣ್ಣ್‌ಡಿಕೆ, ಮಣ್ಣ್‌ನ ದೀಪ, ಎಣ್ಣೆ ಚರ್‌ಕ್‌ಲಿ ತೆಂಗಿನೆಣ್ಣೆ ಅರಶಿಣ ಹೊಡಿ, 9 ಕೊಡಿನ 2 ಗರಿಕೆ ಹುಲ್ಲ್‌ನ ಕಟ್ಟ್‌ಗಳ್ನ ಮತ್ತೆ ಅಕ್ಕಿನ ಜೇರೆ ತಟ್ಟೆಲಿ ಮಡ್‌ಗಿದ್ದವೆ.

ಚೊಂಬುಲಿದ್ದ ನೀರ್‌ನ ಮುಟ್ಟಿದ ಸ್ವಾದರ ಮಾಂವ-ಎಲ್ಲವುಕೆ ಕೇಳುವ ಹಂಗೆ ಈಗ ಕಾಸ್ತಾಳಿ ಕಟ್ಟುವೆ, ಎಲ್ಲವರ ಅನುಮತಿ ಉಟ್ಟಾತ ಕೇಳ್ದೆ ಕಾಸ್ತಾಳಿತೇಳ್ರೆ ಮದುವೆಲಿ 3 ದಿನ ಕುತ್ತಿಗೆಗೆ ಕಟ್ಟುವ ಗುರುತ್‌ನ ಹವಳದ ಮಣಿತ ಅರ್ಥ. ಅದರ್ಲಿ ಸೂರ್ಯ ಚಂದ್ರನ ಗುರ್ತು ಇದ್ದದೆ.

ಮತ್ತೆ ಹತ್ತ್ ಕುಟುಂಬ ಹದ್ನೆಂಟ್ ಗೋತ್ರ ದೇವ ಸಭೆ ಕೂಡ್ದ ಸಂಸಾರ ಸಮಸ್ತರ ಕೇಳಿ ಮದು ಮಕ್ಕಳಿಗೆ ಸ್ವಾದರ ಮಾವ ಕಾಸ್ತಾಳಿ ಕಟ್ಟುವಂತೆಯೇ... ತೇಳ್‌ಕಾಕನ ಅಲ್ಲಿದ್ದವೆಲ್ಲಾ ಒಳ್ಳೆ ಕಾರ್ಯವಂತೆವೇ ತೇಳ್ದ ಮ್ಯಾಲೆ ಹಸೆಮಣೆ ಮ್ಯಾಲೆ ಎಣ್ಣೆ ಶಾಸ್ತ್ರಕ್ಕೆ ಸೋದರ ಮಾವ ಕೈ ಹಿಡ್ದ್ ಕೂರ್ಸುವೆ. ಇನ್ನು ಮುಂದೆ ಮುಕ್ಕಾಲ್ ಭಾಗ ಹೆಣ್ಮಕ್ಕಳ ಕೆಲಸನೆ ಮುಖ್ಯ ಆಗಿದ್ದದೆ.

ಮೊದ್ಲು ಹೆತ್ತ ಅವ್ವ ಬಂದ್ ದೇವ್ರಿಗೆ ಅಕ್ಕಿಹಾಕಿ, ವೀಳ್ಯ ದೆಲೆ ಅಡಿಕೆನ ಕೈಗೆ ಕೊಟ್ಟ್ ತಲೆಗೆ ಅಕ್ಕಿ ಶಾಸ್ತ್ರ ಮಾಡ್ದೆ. 2 ಕೈಲಿ ಅಕ್ಕಿ ಹಿಡಿ ತಕಂಡ್ ಪಾದ ಮೊಣಕಾಲ್ ಹೆಗ್‌ಲ್ ತಲೆಗೆ ಅಕ್ಕಿ ಹಾಕಿವೆ. 2ನೇ ಸಲ ಗರಿಕೆ ಕೊಡಿನ ಎಣ್ಣೆಗೆ ಮುಟ್ಟ್‌ಸಿ 2ಕೈಲಿ ಅದೇ ತರಹ ಮಾಡುವೆ. 3ನೇ ಸಲಕ್ಕೆ ಎಣ್ಣೆನ ಅರಶಿಣನ ಕಲ್ಸಿ 2 ಕೈಗೆ ತಕಂಡ್ ಮುಂದೆ ಮೊಕಕ್ಕೆ, ಕಾಲಿಗೆ, ಕೈಗೆ ಮತ್ತೆ ಶರೀರಕ್ಕೆ ಉಜ್ಜುವೆ. ಇದೆಲ್ಲಾ ಆದ ಮೇಲೆ ಪಿಳ್ಯನ ವಾಪಾಸ್ ತೆಗ್ದ್ ಬಟ್ಟ್‌ಲಿ ಮಡ್ಗುವೆ. ಇದೇ ರೀತಿ 5-7 ಹೆಣ್ಮಕ್ಕ ಶಾಸ್ತ್ರ ಮಾಡುವೆ. ನಮ್ಮ ಹತ್ತ್ ಕುಟುಂಬ ಹದ್ನೆಂಟ್ ಗೋತ್ರದವು ಎಲ್ಲವು ಹೆಂಣ್ ಮಕ್ಕ ಸನ ಕಲಿಯಲಿ ತೇಳುವ ಅಭಿಪ್ರಾಯಲಿ ಎಲ್ಲವುಕು ಗೂಡೆಗಳಿಗೆ ಅವಕಾಶ ಕಲ್ಪಿಸೊಳೊ.

ಈ ಶಾಸ್ತ್ರನ ಪ್ರತಿಯೊಬ್ಬ ಗೌಡನಾಗಿ ಹುಟ್ಟಿದಂವ ಅವರ ಪದ್ಧತಿ ಪ್ರಕಾರ ಮಾಡ್ಸಿಕೊಳಕು. ತನ್ನ ಅಪ್ಪಂದ್‌ರ್ ಮಕ್ಕಳ್ನ ಸಾಕಿ ದೊಡ್ಡದಾಗಿ ಮಾಡ್‌ದಕ್ಕೆ ಸಾರ್ಥಕತೆ ತಿಳ್ಕಂಡ್‌ವೆ. ಅದ್‌ರ್‌ಂದಾಗಿ ಎಲ್ಲಾ ಗೂಡಗ ಹೈದಂಗ ಸಹ ಈ ಪವಿತ್ರ ಕೆಲ್ಸನ ಉಪಯೋಗಿಸಿ ಕೊಳಕುತ ನಾವು ಕೇಳಿಕೊಂಡವೆ.

ಪ್ರ : ಈ ಶಾಸ್ತ್ರಗಳ್ನ ಯಾಕೆ ಮಾಡುವೆ ಮತ್ತೆ ಪ್ರಯೋಜನ ಏನಾರ್ ಗೊತ್ತುಟಾ ನಿಮಿಗೆ?

ಉ : ಅಕ್ಕಿಶಾಸ್ತ್ರ ತೇಳ್ರೆ-ವಧುವರರ ದಾಂಪತ್ಯ ಜೀವನ ಸುಗಮ ಆಕುತ ಅಕ್ಕಿ ಹಾಕಿ ಹಾರೈಸುದು. ಅವರ ದಾಂಪತ್ಯ ಜೀವನಕ್ಕೆ ಶುದ್ಧವಾದ ಮನ್ಸ್ ಆರೋಗ್ಯಕರ ದೈಹಿಕ ಸಂಪತ್ತ್ ಇರ್‌ಲಿತ ಎಣ್ಣೆ ಅರ್‌ಶ್‌ಣ ಶಾಸ್ತ್ರ ಮಾಡುವೆ. ಈ ಶಾಸ್ತ್ರ ಆದ ಮ್ಯಾಲೆ ಅವರ ಮೊಖದ ಕಾಂತಿ ಜ್ಯಾಸ್ತಿ ಆದೆ. ಎಣ್ಣೆ, ಅರಶಿಣ, ಗರಿಕೆ ಹುಲ್ಲು ಇದರ್‌ಲಿ ರೋಗ ನಿರೋಧಕ ಶಕ್ತಿ ಉಟ್ಟುತ ಬಹಳ ಹಿಂದೆಂದೆ ನಂಬಿಕೆ ಬಂದುಟು. ಅಂತಹ ಒಂದು ಉತ್ತಮ ಹಿಂದೂ ಸಂಸ್ಕೃತಿನ ಗೌಡ ಸಂಸ್ಕೃತಿಲಿ ಇನ್ನೂ ಉಳ್ಸಿಕಂಡ್ ಬಂದೊಳೊ. ಹಿಂಗಾಗಿ ಎಲ್ಲಕ್ಕಿಂತ ಮುಂದೆ ಹೆತ್ತವ್ವ ಅಕ್ಕಿ ಹಾಕಿ ಮತ್ತೆ ಎಲ್ಲವೂ ಸನ ಹಾರೈಸುವೆ. ಈಗ ಗಂಡ್‌ನ ಮದುವೆ ಆದರೆ ಕ್ಷೌರಿಕ ಸಹ ಮೊಕ ಚವರ ಮಾಡಿಕೆ ಮುಂದೆ ಎಣ್ಣೆ ಶಾಸ್ತ್ರ ಮಾಡ್ವೆ. ಯಾಕೆತೇಳ್ರೆ ಲಗ್ನ ಕಟ್ಟಿವ ಮ್ಯಾಲೆ ಅಂವ ಮೊಕ ಚವರ ಮಾಡಿರುದುಲೆ ಅದ್ಕಾಗಿ ಅಂದ್ ಕ್ಷೌರಿಕನ ಕರ್ಸುವೆ.

ಈಗ ಕೇಳಿ ಕ್ಷೌರಿಕನ ಪಾತ್ರದ ಮಹತ್ವ: ಇದರ್ನ ಸೋಬಾನೆ ರೂಪಲಿ ಕೇಳೋನೋ

ವಧುವಿಗೆ ಎಣ್ಣೆ ಅರಶಿಣ ಶಾಸ್ತ್ರದ ಸೋಬಾನೆ

ಶಿವ... ಶಿ...ವಾ... ಜಯ.. ಜಯಾ ಶ್ರೀ ಗೌರೀ... ಮನೋಹರಾ॥
ಕಾರುಣ್ಯ ಸಾಗರ...ಕರುಣ ವರ ಸತಿಯೇ ॥
ಮದುವೆಯಾ... ಮಂಟಪಕೆ... ಕದಳಿಯಾ ಕಂಬ ವಿರಿಸಿ ।
ನೆಲ್ಲಕ್ಕಿ ನಡುಬಾಣೆ... ದೀವಿಗೆ ಎದುರಲ್ಲಿ ॥
ಅಕ್ಕಿ...ಯಾ ಹಸೆ ಬರೆದು.. ಬಣ್ಣದ ಚಾಪೆ ಹಾಸಿ ।
ನಿಸ್ತ್ರೆಯರು ಮದುಮಗಳಾ ಸೋಬನಕೆ ॥ ಶ್ರೀ ಗೌರೀ... ಮನೋಹರಾ॥
ಹಸೆ ಮೇಲೆ ವೀಳ್ಯವಿಟ್ಟು ಗಂಧದಾ ಮಣೆ ಮೇಲೆ ।
ವೀಳ್ಯ -ವಾ ಹಿಡಿದು ।ಕುಳಿತಿರುವ ಮದುಮಗಳೇ ನೀನೀಗಾ ॥
ಪಾರ್ವತಿ ಮದುವೆಗೆ । ಊರೆಲ್ಲಾ ಸಿಂಗಾರ ।
ಬಾಳೆ -ಯಾ ತೋರಣ । ಬಾಗಿಲಿಗೆ ಸಿಂಗಾರ । ಶ್ರೀ ಗೌರೀ.. ಮನೋಹರಾ॥
ಪರಶಿವನು ಬರುತ್ತಾನೆ । ತಾಳಿಯ ಕಟ್ಟುತ್ತಾನೆ
ಶ್ರೀ ದೇವಿ- ಜಲದೇವಿ । ಕಾವೇರಿ-ಮಾತಾಯೇ ॥
ತಾವರೆ-ಮೇಲಿರುವ । ಲಕ್ಷ್ಮಿಯು ನೀನೀಗಾ ।
ಸೋಬನಕೆ ಕುಳಿತಿರುವ । ಮದುಮಗಳು ನೀನೀಗಾ ॥
ವೀಣೆಯ ಹಿಡಿದಿರುವ । ಶಾರದೆ ದೇವಿಗೆ
ಪಾರಿಜಾತ ಮುಡಿದಿರುವ ಪಾರ್ವತಿ ದೇವಿಗೆ ॥ ಶ್ರೀ ಗೌರಿ -ಮನೋಹರಾ॥
ಬೆಳ್ಳಿಯ -ಮುಕ್ಕಾಲು । ಚಿನ್ನಾದ ಎಣ್ಣೆಚರುಕು ।
ಬಣ್ಣಕ್ಕೆ ಅರಶಿಣ । ಛಾಯೆಗೆ ಎಣ್ಣೆಯಾ ಕಲಸಿ ॥
ಒತ್ತಿದರು ನಾರಿಯರು । ವೀಳ್ಯವಾ ಹಿಡಿದಿರುವಾ ।
ಮದುಮಗಳಾ ರಜ ಮುಖಕೆ ತೀಡಿದರು ನಾರಿಯರು ॥
ಶಿವ - ಶಿವಾ-ಜಯ ಜಯಾ। ಶ್ರೀ ಗೌರೀ ಮನೋಹರಾ
ಕಾರುಣ್ಯ ಸಾಗರಾ... ಕರುಣ ವರ -ಸತಿಯೇ....

ಗೂಡೆನ ನೋಡಿಕೆ ಹೋದು - ಮಾತ್‌ಕತೆ

ಗಂಗೂ, ನಾಳೆ ನೀನ್ ಮರ್‍ಗ್ನೇಡು ಬಸ್ಸಿಗೆ ಹೊರ್ಡ್. ವಿಸಯ ಮತ್ತೆ ಹೇಳ್ವೆ. ಮಕ್ಕಳಿಗೆ ಹೆಂಗೂ ರಜವುಟ್ಟು.

ಏನ್ ವಿಶೇಸ ಅತ್ತೆ? ಈ ಮಳೆಲಿ ಹೊರ್ಟದ್ ನೋಡ್ರೆ ಏನೊ ಇರೊಕು ಹೇಳ್ವಂಗೆ ರಮೇಶ ಬಂದುಟ್ಟಾ?

ಅಂವ ಬಂದ್ ನಾಕ್‌ದಿನ ಆತ್ ನೋಡು. ಹದ್ನೈದ್ ದಿನ ರಜಗಡ. ಅಂದ್ ನೋಡ್ವ ಗೂಡೆನ ಮಾತ್ ಕಂಡಿತ ಮಾಡೊಕುತ ಈ ಸಲ ಬಂದುಟ್ಟು. ಈ ಮಿಲ್ಟ್ರಿಯವರ ಕತೆನೆ ಹಂಗೆ. ರಜಲಿ ಬಾಕನ ಬಾಕನ ಹೆಣ್ಣ್ ಹುಡ್ಕುದು ಸೆರಿ ಆದುಲೆ ತೇಳಿ ವಾಪಾಸ್ ಹೋದು-ಹೋವ ಮ್ಯಾಲೆ ಅಲ್ಲಿಂದ ಕಾಗದ ಬರಿಯೊದು ಗೂಡೆನ ನೋಡಿಡಿ ಬರೊ ರಜಲಿ ಬಾಕನ ಮದುವೆ ಮಾಡಿಕಂಡ್ ಹೋನೆತ ಹೇಳ್ದ್.

ಅಲ್ಲತ್ತೆ, ಈ ಗೂಡೆನ ಕಡೆವು ಹಳೆ ನೆಂಟ್ರಲ್ಲಾ? ಎಲ್ಲವುಕು ಬೇಕಾದವ್ರ ಗೂಡೆನೂ ಓದಿಟು. ಕಟ್ಟಿಂಗ್ ಕ್ಲಾಸ್‌ಗೆ ಹೋಗಿ ಲಾಯ್ಕ ಬಟ್ಟೆ ಹೊಲಿಕೆ ಕಲ್ತುಟ್ಟು. ಸರ್ಕಾರಿ ಕೆಲ್ಸಂತೂ ಸಿಕ್ಕುದುಲೆ. ಹೆಂಗೂ ರಮೇಶ ಮದುವೆ ಆಗಿ ಮಿಲ್ಟ್ರಿಗೆ ಕರ್‌ಕಂಡ್ ಹೋದೆ. ಹೋಗದರೂ ಪರ್ವಾಗಿಲ್ಲೆ. ಮನೆ ತ್ವಾಟ ನೋಡಿಕಂಡ್ ಮನೆ ಕೆಲ್ಸನೂ ಮಾಡಿಕಂಡ್ ಸುಧಾರ್ಸ್ಕಂಡ್ ಹೋದುತ ಕಂಡದೆ!

ನಾಳೆ ಹೊತಾರೆ ಹೊರ್ಡಿಕೆ ಮುಂದೆ ಫೋನ್ ಮಾಡ್ವೆ. ಹೆಂಗೂ ದಾರಿ ಕರೆ ಮನೆ ಅಲ್ಲಾ ಬಸ್ಸ್‌ಗ ಬೇಕಸ್ಟ್ ವಳೊ ಹೊತಾರೆ ಹೋದರೆ ನಾಕ್ ಗಂಟೆಗೆ ಬರೊನ. ನಿನ್ನ ಮಕ್ಕ ಮನೆಲಿ ಓದಿಕಂಡ್ ಇರ್‍ಲಿ. ನೀನ್ ಬಂದರೆ ನಂಗೆ ಸಹಾಯ ಆದೆ. ಗೂಡೆನ ಅಮ್ಮನೊಟ್ಟಿಗೆ ಮದುವೆ ವಿಸಯ ಮಾತಾಡಿ ಬರೊನ. ಅದ್ಕೆ ನೀನಿದ್ದರೆ ನಂಗೆ ವಳ್ಳದಾದೆ. ಮಕ್ಕಳಿಗೆ ಅಡಿಗೆ ಮಾಡಿಬುಡು. ಮಕ್ಕಳಿಗೆ ಗ್ಯಾಸ್ ಆನ್ ಆಫ್ ಮಾಡಿಕೆ ಸರಿ ಗೊತ್ತುಟಲಾ?

ಅತ್ತೆನೂ ಗಂಗುನು ಬಸ್ಸ್‌ಲಿ ಹೋಗಿ ಗೂಡೆನ ಮನೆಗೆ ತಲ್ಪಿದೊ ಗೂಡೆನ ಅಮ್ಮ ಎರ್ಡ್ ಚೊಂಬು ನೀರ್ ತಂದದೆ. ಒಳಗಡೆ ಆಚೀಚೆ ಓಡಾಡುವ ಪಿಸಿ ಪಿಸಿ ಮಾತ್ ಕೇಳ್ತಾವುಟ್ಟು. ಅವ್ವ ಹೇಳ್ಲೆ ಅಲ್ಲನೆ ಯಾರೊ ನೆಂಟ್ರ್ ಬಂದೊ ಕಂಡದೆ. ಹೋಗಿ ಮಕ್ಕಳೆ ರಾಧಾ ಒಳಗೆ ಮೇಜ್ ಮ್ಯಾಲೆ ಸಾಮಾನ್ ಹರ್‌ಂಡಿ ಬಿದ್ದುಟ್ಟು. ಅದರ್‍ನೆಲ್ಲಾ ಸೆರಿ ಮಾಡಿ ಮೊನ್ನೆ ಸಂತೆಂದ ತಂದ ಡಿಸೈನ್ ಕುಪ್ಪಿಲಿ ನೀರ್ ಹಾಕಿ ಹೂನ ತ್ವಾಟಂದ ವಳ್ಳಹೂಕೊಯ್ದ್ ಮಡ್ಗ ಮತ್ತೆ ನೀನ್ ಹೊಲ್ದ ಆ ಮೇಜದ ಕವರ್‌ನ ಮೇಜ್‌ಮ್ಯಾಲೆ ಬ್ಯಾಗ ಬ್ಯಾಗ ಹಾಸಿಬುಡು. ತೇಳ್ಕಂಡ್ ಅವ್ವ ಹೊರಗೆ ಬಂದದೆ.

- ಹೋ ಅತ್ತಿಗೆ ಮಿನಿ?

- ಬಂದರಿ ಅತ್ತಿಗೆ

- ಬಂದಂಗೆ ಆತ್ ಅತ್ತಿಗೆ

- ಸೌಖ್ಯ? ಮನೆಲೆಲ್ಲಾ ಉಸರೊಳಾ ಅತ್ತಿಗೆ? ನೆಂಟ್ರ್ ಅಕ್ಕನ ಗೊತ್ತಾತ್‌ಲೆ?

ಇವ್ಳು ನನ್ನ ಅಣ್ಣನ ಮಗುಳು. ಮಕ್ಕಳ ಮನೆಲಿ ಬುಟ್ಟ್ ನನ್ನೊಟ್ಟಿಗೆ ಬಾತ್. ಬ್ಯಾಗ ಬಂದ್

ಬುಡೋನತ ಇವ್ರ ಕರ್ಕಂಡ್ ಬಂದೆ. ಹಂಗೆ ನೆಂಟ್ರ ಮನೆ ನೋಡ್ದಂಗೆ ಆತ್. ಮನೆಲಿ ಯಾರೂ ಕಾಂಬೊದುಲೆ ಗೂಡೆಗ ಎಲ್ಲಿಗೆ ಹೋಗೊಳೊ ಅತ್ತಿಗೆ?

ರಾಧಾ, ನೆಂಟ್ರ ಬಂದೊಳೊ ನೋಡು. ನಮಸ್ತೆ ಹೇಳಿ ಕಾಲ್ ಹಿಡ್ಕ. ಹಲೋಗಿಲೊ ಹೇಳ್‌ಬಡ. ಬಗ್ಗಿ ಮೂರ್ ಸಲ ಲಾಯ್ಕ ಕಾಲ್ ಹಿಡಿಯೊಕು. ಹರಿವಾಣಲಿ ಎಲೆ ಅಡಿಕೆ ಉಟ್ಟು. ತಕಂಡ್ ಬಾ. ಕಾಪಿ ತಿಂಡಿ ಆ ಮ್ಯಾಲೆ ತಂದರೆ ಸಾಕ್.

ಆತಮ್ಮ.

ಏನ್ ರಾಧಾ? ಹೊಲಿಗೆ ಕೆಲ್ಸ ಬಾರಿ ಲಾಯ್ಕ ಮಾಡಿಯುತ ಅಮ್ಮ ಹೇಳ್ದೊ. ಬ್ಯಾರೆ ಕೆಲ್ಸ ಏನಾರ್ ಕಲ್ತೊಳಾ? ಅಲ್ಲ ನಾಡ್ ಕೆಲ್ಸ ಮನೆ ಕೆಲ್ಸ ಮಾತ್ರನಾ? ಅಲ್ಲಾ ರಮೇಶ ಮದುವೆ ಮಾಡ್ಕಂಡ್ ಮಿಲ್ಲಿಗೆ ಕರ್ಕಂಡ್ ಹೋದರೆ ಮಕ್ಕಳಿಗೆ ಟ್ಯೂಷನ್ ಕೊಡಿಕೆ ಗೊತ್ತಿದ್ದರೆ ಒಳ್ಳೆದ್.

ಅಲ್ಲ ಸೀತತ್ತಿಗೆ ಲಗ್ನ ಕಟ್ಟುದು ಯಾಗ ಇಡ್ತುತ ಹೇಳ್ದಾ?

ಕೈಲ್‌ಪೊದು ಕಳ್ದಂಗೆ ಒಳ್ಳೆ ದಿನ ನೋಡಿ ಲಗ್ನ ಕಟ್ಟಾಕಕನ ಎಲ್ಲ ಶಾಸ್ತ್ರನೂ ಮಾಡಿ ಮುಗ್ಸೊನ. ಕಾವೇರಿ ಸಂಕ್ರಮಣ ಕಳ್ದ್ ಹುತ್ತರಿ ಬಾಕೆ ಮುಂಚೆ ಇಲ್ಲರೆ ಹುತ್ತರಿ ಕಳ್ದ್ ಹದಿನೈದ್ ದಿನಕ್ಕೆ ಮದುವೆ ಇಸಿಕೊಂಬನೊ, ಅಗ ಕೆಲ್ಸನೂ ಕಮ್ಮಿ ಇದ್ದದೆ. ಜನ ಬರೊವುಕು ಹೋಗೊವುಕು ಕಷ್ಟ ಅದುಲೆ. ಮತ್ತೆ ಅದೆ ಬೆಳೆ ಹಣ್ಣಾದೆ. ಅಷ್ಟೊತ್ತಿಗೆ ಕಾಫಿ ಕೆಲ್ಸನೂ ಸುರಾದೆ. ಏಪ್ರಿಲ್ ಮುಟ್ಟ ಸಮಯನೂ ಇರ್ದುಲೆ. ಸಮಾಜಕೆ ಬುಕ್ ಮಾಡ್‌ಬಡಾ?

ಸಮಾಜ ಯಾಕತ್ತಿಗೆ? ಇಷ್ಟ್ ದೊಡ್ಡ ಮನೆ ಉಟ್ಟುಲೆ? ಹೊಸ ಮನೆ ಕಟ್ಟಿ ಸುರು ಮದುವೆ ಮಾಡ್ತುತ ನಾನ್ ಗ್ಯಾನ ಮಾಡ್ದೊಳೆ. ಮನೆಲಿ ಮಾಡ್ರೆ ಖರ್ಚನೂ ಕಮ್ಮಿ ಆದೆ. ಪದ್ದತಿ ಶಾಸ್ತ್ರಗಳ್‌ನ ಲಾಯ್ಕ ಮಾಡಕ್. ವಯಸ್ಸಾದ ಅಪ್ಪ ಅಜ್ಜನೂ ಕೂಸುನ ಮದುವೆ ಕಣ್ತುಂಬಾ ನೋಡುವೆ. ಆ ಸಮಾಜಕೆ ಹೋದು ಅಲ್ಲಿ ವಯಸಾದವುಕೆ ರಾತ್ರೆ ಎಲ್ಲಾ ಇರಿಕಾದ್ದಾ? ನಾವು ಮಾತ್ರ 500ಕಾಗ್ದ ಮಾಡ್ದು. ಕಾಗದ ಕೊಟ್ಟ್ ಹೋದೆ ಬಂದವರ್ನ ಸುದಾರ್ಸ್‌ದು ಬ್ಯಾಡ ಹೇಳಿ? ಊಟ ಸರಿ ಆತ್‌ಲೆತ ಹೇಳಿಕಂಡ್ ದೂರಿಕಂಡ್ ಹ್ಯಾದರೆ ನಾವು ಅಷ್ಟ್ ಖರ್ಚ್ ಮಾಡ್ದು ಏನ್ ಪ್ರಯೋಜನ ಹೇಳಿ?

ಹೌದತ್ತಿಗೆ, ನೀವು ಹೇಳ್ದು ಸರಿ ನಂಗೂ ಓದಾದವು ಯಾರೂ ಇಲ್ಲೆ. ನಮ್ಮ ಕಾಲದಂಗೆ ಕೈಗೆ ಕಾಲಿಗೆ ಯಾರ್ ಬಂದ್‌ಸಾಯ ಮಾಡುವೆ ಹೇಳಿ? ಯಾವುದಕ್ಕೂ ರಮೇಶನ ಕೇಳ್ಕೆ. ಅಂವ ತಾನೆ ಖರ್ಚ್ ಮಾಡೊಂವ . ಮನೆಲಿ ಆಗದರೆ ಸಮಾಜಲಿ ಮಾಡೊನ. ಖರ್ಚ್‌ವೆಚ್ಚ ಹೆಂಗೆ ಮಾಡೊನತ?

- ಖರ್ಚ್‌ತೇಳ್‌ಕನ ಎಲ್ಲಾ ಗೂಡೆನ ಕಡೆ ಹೊರ್ರಿ ಬುಡ್‌ಬಡಿ ಅತ್ತಿಗೆ
- ಇನ್ನ್ ಹೊರ್ಡೊನ ಅತ್ತಿಗೆ

ಅಲ್ಲ ರಾಧಾ ಒಳ್ಳರಾಗಲಿ ಪದ ಹೇಳ್ದ್‌ಗಡ ಒಂದು ಹಾಡ್‌ಬುಡ್ ರಾಧಾ ಸಂಗೀತ ಕಲ್ತೊಳಾ?

ಹಾಡ್.........

- ಲಾಯ್ಕ ಹಾಡ್ದ ಇನ್ನ್ ನಾವು ಹೋಗಿ ಬಂದವೆ ಅತ್ತಿಗೆ
- ನಾನ್ ತೋಡುಗೆ ಮುಟ್ಟ ಬನ್ನೆ. ಯಾಕತೇಳ್ರೆ ನೆಂಟ್ರನ ಸ್ವಲ್ಪ ದೂರ ಹೋಗಿ ಸೀರ್‌ದಾಟ್ರಿ ಕಳ್ಸೊಕುತ ಹಿರಿಯವು ಹೇಳುವೆ.

ಗೌಡರ ಮದುವೆ ವಿಳ್ಯಶಾಸ್ತ್ರ

ವಿಳ್ಯಶಾಸ್ತ್ರದ ದಿನ ಗಂಡ್‌ನ ಕಡೆಂದ ಏಳ್ (7) ಜನ ಹೊರ್ಡುವೆ. ಅವರ್‌ಲ್ಲಿ ಮೂರ್ಜ್‌ನ (3) ಬೆಳಿಕೋಟು, ಕಚ್ಚೆಪಂಚೆ, ರೇಷ್ಮೆ ಶಾಲ್, ಮತ್ತೆ ತಲೆಗೆ ಜರಿ ರುಮಾಲ್ ಕಟ್ಟಿ, ಸೆಲ್ಲಕ್ಕಿ ದೀಪದ ಹತ್ರ ಬಂದವೆ. ಆಗ ಮನೆ ಪಟ್ಟೆದಾರ್‌ರ್ ಕುಲದೇವ್ರುಗೆ ಪ್ರಾರ್ತನೆ ಮಾಡಿಕಂಡ್ ಮುಖ್ಯಸ್ಥರ ಕೈಲಿ ವಿಳ್ಯದೆಲೆ ಹಣ್ಣಡಿಕೆ ಹರಿವಾಣ ಪೆನ್ನ್ ಕಾಗದ ಎಲ್ಲಾ ತುಂಜ್ಸಿದ ಒಂದು ಚೀಲನ ಅವರ ಕೈಲಿ ಕೊಟ್ಟವೆ.

ಪ್ರ : "ಆ ಚೀಲನ ತಕಂಡ್ ಅವು ಏನ್ ಮಾಡುವೆ?"

ಉ : ಗೂಡೆನ ಮನೆಗೆ ಬಂದವೆ. ಬಂದ ನೆಂಟ್ರ್‌ಗೆ ಕಾಲ್ ತೊಳಿಯಕೆ ನೀರ್ ಕೊಟ್ಟವೆ. ಮತ್ತೆ ಮನೆವೆಲ್ಲಾ ಬಂದ್ ಮಾತಾಡ್ಸಿ ಕಾಲ್ ಮುಟ್ಟಿ ನಮಸ್ಕಾರ ಮಾಡಿ ಆದಮ್ಯಾಲೆ ಐಮರ ಮೇಲೆ ಹಾಸಿದ ಚಾಪೆ ಮ್ಯಾಲೆ ಸಂಪ್ರದಾಯ ಉಡ್ಪುಲಿರುವ ಮೂರು ಜನ ಅಲ್ಲಿ ಕುದ್ದವೆ. ಮತ್ತೆ ಮುಖ್ಯಸ್ತರ್ ಬಂದ ವಿಸಯನ ಹೇಳುವೆ. ಆದರೆ ಇವು ಆ ಎಲೆಡಿಕೆ ಚೀಲನ ಮಾತ್ರ ಯಾರ ಕೈಗೂ ಕೊಡದೆ ಜಾಗ ಇರುವಲ್ಲಿ ಮಡ್ಗದೆ ಜೋಪಾನಾಗಿ ಅವರ ಕೈಲೆ ಹಿಡ್ಕಂಡಿದ್ದವೆ.

ಪ್ರ : ಮತ್ತೆನ್ಮಾಡುವೆ ಸ್ವಲ್ಪ ಹೇಳ್‌ರ್‍ಯಾ?

ಉ : ಆ ಮ್ಯಾಲೆ ಸೆಲ್ಲಕ್ಕಿ ನಡುಬಾಡೆಲಿ ತೂಗುದೀಪದ ಕೆಳ್‌ಗೆ 2 ಚಾಪೆ ಹಾಕಿದ್ದವೆ ಅಲ್ಲಿ ಹೆಣ್ಣ್‌ನ ಕಡೆವು ಮೂರು ಜನ ಗಂಡ್‌ನ ಕಡೆವು ಮೂರು ಜನ ನಮ್ಮ ಸಂಪ್ರಾದಯದ ಉಡುಪುಲಿ ಎದ್‌ರ್ ಬದ್‌ರಾಗಿ ಕುದ್ದವೆ. ಅವೆಲ್ಲವು ತಲೆಗೆ ರುಮಾಲ್ ಕಟ್ಟಿಕೊಂಡ್ ಇದ್ದವೆ. ಆಗ ಗೊತ್ತಾದೆ ಇವೆ ಮುಖ್ಯಸ್ತರ್‌ತ. (ಹಿಂದೆ ಕೊಡಗ್‌ಲಿ ಕುಪ್ಪಸಪಟ್ಟಿಲಿ ಕೂರ್‌ತಾ ಇದ್ದೊತೇಳ್ರೋರ್ನ ಈಗ ನಾವು ನೆನ್ಸ್‌ಕಾದೆ)

ಪ್ರ : ಕುದ್ದ ಮುಖ್ಯಸ್ತರ್ ಏನ್ ಮಾಡುವೆ?

ಉ. : ಇವರ ಮಧ್ಯೆ ಒಂದು ಮುಕ್ಕಾಲ್ ಒಂದು ಮಣೆ ಇಟ್ಟಿದ್ದವೆ, ಮುಕ್ಕಾಲ್ ಮ್ಯಾಲೆ ಮಣ್ಣ್‌ನ ದೀಪ, ಮಣೆ ಮ್ಯಾಲೆ ಒಂದು ಕಂಚಿನ ಬಟ್ಟ್‌ಲಿ ಸ್ವೊಲ್ಪ ಅಕ್ಕಿ ಹಾಕಿ ಐದೆಲೆ ಒಂದಡಿಕೆ ಹಾಕಿದ್ದವೆ. ಮತ್ತೊಂದು ಹರಿವಾಣಲಿ ವಿಳ್ಯದೆಲೆ ಅಡಿಕೆ ತುಂಬ್ಸುದು ಪದ್ದತಿ. ಹಂಗೆ ಒಂದು ಚೊಂಬು ನೀರ್ ತಕಂಡ್ ಪಟ್ಟೆದಾರ್‌ರ್ ಎಲ್ಲವರನ್ನ ಕರ್ದವೆ, ಈ ಶುಭ ಕಾರ್ಯನ ಎಲ್ಲವು ಬಂದ್ ಲಾಯ್ಕಾಗಿ ನಡ್‌ಸಿಕೊಡಕುತ ಕೇಳಿಕೊಂಡವೆ.

ಪ್ರ : ಮತ್ತೆ?

ಉ. : ಆಗ ವರನ ಕಡೆಂದ ಬಂದ ನೆಂಟ್ರ್ ಎದ್ದ್ ನಿತ್ತ್ ಎಲ್ಲವುಕೆ ನಮಸ್ಕಾರ ಹೇಳಿ ಅವರ ಪರಿಚಯನ ಹೇಳುವೆ. ನಾವು ಇಂತ ಜಿಲ್ಲೆಂದ ಬಂದವು ಇಂತ ತಾಲೋಕು ಗ್ರಾಮ ಮನೆ ಹೆಸರ್ ಹೇಳುವೆ. ಆಮ್ಯಾಲೆ ಪಟ್ಟೆದಾರ್‌ರ್ ಅನುಮತಿ ಮೇರೆ ವಧುನ ಪರಿಚಯನ ಸಹ ಹಿಂಗೆ ಮಾಡಿಕಂಡ್ ವಧುನ ಮನೆಗೆ ವಿಳ್ಯಶಾಸ್ತ್ರಕ್ಕೆ ಬಂದೊಳತ ಹೇಳುವೆ. ಅವು ಹೇಳ್ದ್ ಸರಿತಾದರೆ ಅವರ್ನ ಕೂರಿಕೆ ಹೇಳುವೆ. ಕುದ್ದಮ್ಯಾಲೆ ಅವರ ಚೀಲಂದ ಹರಿವಾಣ ತೆಗ್ದ್

ವಿಳ್ಯದೆಲೆ ಅಡಿಕೆ ತುಂಬ್ಸಿ ನಾವು ಬಂದ ಕಾರ್ಯನ ಲಾಯ್ಕಾಗಿ ನಡ್ಸಿ ಕೊಡಕುತ ಚೊಂಬುಲಿದ್ದ ನೀರ್ ಮುಟ್ಟಿ ಮುಖ್ಯಸ್ಥರ ಕೈಲಿ ಕೊಟ್ಟವೆ.

ಪ್ರ : ಓಹೋ ಮತ್ತೆ ಏನ್ ಮಾಡುವೆ?

ಉ : ಮುಖ್ಯಸ್ಥರ್ ವಿಳ್ಯತಕಂಡ್ ಅಲ್ಲಿ ಕೂಡ್ದ ಊರವು ನೆಂಟ್ರ್ ಮತ್ತೆ ಮುಖ್ಯ ಪಟ್ಟಿವರ್ನ ಸೋದರ ಮಾವಂಗೆ ಎಲ್ಲವಕೂ ಹೇಳುವೆ. ನಾವು ವಿಳ್ಯಶಾಸ್ತ್ರಕ್ಕೆ ಕುದ್ದೊಳೊ ಈಗ ವಿಳ್ಯ ಕಟ್ಟಿಕೆ ಎಲ್ಲವರ ಅನುಮತಿ ಉಟ್ಟಾತ ಕೇಳುವೆ. ಹಂಗೆ ಒಪ್ಪಿಗೆ ಪಡ್ದ್ ನೀರ್ ಮುಟ್ಟಿ ಐದೆಲೆ ಒಂದಡಿಕೆನ ಕಂಚಿನ ಬಟ್ಟಿಗೂ ಮತ್ತೆ ಹರಿವಾಣಕ್ಕೂ ಬಳ್ಸಿ ಎದ್ದ್‌ನಿತ್ತ್ ಹತ್ತ್ ಕುಟುಂಬ ಹದ್ನೆಂಟ್ ಗೋತ್ರ ದೇವಸಭೆ ಕೂಡ್ದ ಕುಲಸ್ತರ ಸಮಸ್ತರ ಸಂಗಡಕೇಳಿ ನೆಲ್ಲಕ್ಕಿ ದೀಪಿಗೆ ಅಡಿಲಿ ಇಂತಹ ಗೋತ್ರದ ಗಂಡಿಗೂ ಇಂತಹ ಗೋತ್ರದ ಹೆಣ್ಣಿಗೂ ಸಾಲಾವಳಿ ವಿಳ್ಯ ಕಟ್ಟುವೆತ ಮೂರು ಸಲ ಹೇಳುವೆ. ಆಗ ಸಭೆಲಿದ್ದವೆಲ್ಲಾ ಒಳ್ಳೆ ಕಾರ್ಯವಂತೆ ತ-ಜೋರಾಗಿ ಹೇಳುವೆ.

ಪ್ರ : ಹೌದಾ? ಒಟ್ಟಿಗೆ ಎಷ್ಟ್ ವಿಳ್ಯ ಬಳ್ಸುವೆ?

ಉ : ನಮ್ಮ ಕೊಡಗ್‌ಲಿ 9 ವಿಳ್ಯ ಬಳ್ಸುವೆ ಅದ್ 1 ಸಾಲಾವಳಿ ವಿಳ್ಯ, 2 ಹೆಣ್ಣ್ ಮಾತ್‌ನ ವಿಳ್ಯ, 3 ಲಗ್ನಕರಾರ್ ವಿಳ್ಯ, 4 ವಿಳ್ಯ ಶಾಸ್ತ್ರದ ವಿಳ್ಯ, 5 ಬಣ್ಣ ಬಂಗಾರದ ವಿಳ್ಯ, 6 ಗುರು ವಿಳ್ಯ, 7 ತಾಯಿ ವಿಳ್ಯ, 8 ತಂದೆ ವಿಳ್ಯ ಮತ್ತೆ ಮಹಾನಾಡ್ ವಿಳ್ಯತ. ಪ್ರತೀ ವಿಳ್ಯನ ಎತ್ತಿ ಕೊಡ್‌ಕಾಕನ 10 ಕುಟುಂಬ 18 ಗೋತ್ರತೇಳುವ ನುಡಿಕಟ್ಟ್‌ನ ಅಲ್ಲಿ ಮೂರು ಸಲ ಹೇಳೇ ಹೇಳೊಕು.

ವಿಳ್ಯ ಶಾಸ್ತ್ರಲಿ ಹೈದಂಗೆ ಮತ್ತೆ ಗೂಡೆಗೆ 5 ಎಲೆ 1 ಅಡಿಕೆ ಕೊಟ್ಟವೆ. ಅದರ್ನ ಹಿರಿಯ ಮುತ್ತೈದೆ ತಕಂಡ್ ಹೋಗಿ ನೆಲ್ಲಕ್ಕಿ ಅಡಿಲಿ ನಿತ್ತ ಮದುವೆ ಗೂಡೆನ ಸೆರಗ್‌ಲಿ ಕಟ್ಟುವೆ. ಈ ಶಾಸ್ತ್ರ ಮುಗ್‌ದ ಮ್ಯಾಲೆ ಇಬ್ಬರು ಧಾರೆ ಆಗುವವರೆಗೆ ಮೊಕ ಮೊಕ ನೋಡಿಕೆ ಆಗದ್. ವಿಳ್ಯ ಶಾಸ್ತ್ರ ಆದ ಗಂಡ್ ಮದುವೆ ಎಣ್ಣೆ ಅರಶ್‌ಣ ಶಾಸ್ತ್ರ ಆಗುವವರೆಗೆ ಕೈಮುಟ್ಟಿ ಮೊಕ ಚವರ ಮಾಡಿಕಾಗದ್, ಬ್ಯಾರೆಯವರ ಧಾರೆ ಮಂಟಪಕೆ ಹೋಕೆ ಆಗದ್.

ಪ್ರ : ಮತ್ತೆ?

ಉ : ಬ್ಯಾರೆಯವರ ಮನೆಲಿ ವಳಿಯಕಾಗದ್ ಇದ್ಕೆ ವಿಳ್ಯ ಶಾಸ್ತ್ರತ ಹೇಳ್ತ್.

ಪ್ರ : ಮತ್ತೆನಾರ್ ಉಟ್ಟಾ?

ಉ : ಮತ್ತೆ ಲಗ್ನ ಪತ್ರಿಕೆ ಬರ್‌ದವೆ. ಮುಖ್ಯಸ್ಥರ್ ವಾಪಾಸ್ ಬಂದ್ ಪಟ್ಟೆದಾರ್‌ಗೆ ಲಗ್ನ ಪತ್ರಿಕೆನ ಮುಟ್ಟುಸುವೆ.

ಪ್ರ : ಅಲ್ಲಾ ಈಗನವು ಇದರ್ನ ಪಾಲ್‌ಸತವಳೊತಾ?

ಉ : ಇದರ್ನ ಬುಡಿಕೆ ಆಗದ್. ಹಳೆ ಸಂಪ್ರದಾಯನ ಉಳ್ಸಿ ಬೆಳ್ಸಕುತ ನಾವು ಜನಾಂಗದ ಪರ ಕೇಳಿಕಂಡವೆ. ಮತ್ತೆ ತಿಳುವಳಿಕೆನು ಕೊಡಕುತ ಹೇಳ್ತೊ.

ಮದುವೆಗೆ ಕರೆವ ಕ್ರಮ ಮತ್ತೆ ಚಪ್ಪರ ಕಂಬ ನೆಡ್‌ದು

ಹಿಂದೆನ ಕಾಲಲಿ ಎಲೆ ಅಡ್ಕೆನ ಒಂದು ಹರಿವಾಣ ತುಂಬಾ ತುಂಬ್‌ಸಿ, ಮನೆ ಮನೆಗೆ ಹೋಗಿ ವಿಳ್ಯಕೊಟ್ಟ್ ಬಾಕೆ ಹೇಳುವ ಕ್ರಮ. ಕಾಲ ಮುಂದುವರ್ದಂಗೆ ಆಮಂತ್ರಣ ಪತ್ರಿಕೆ ಮಾಡ್ಸಿ ಸುರುಗೆ ಪಟ್ಟೆದಾರರಿಗೆ ಕುಟುಂಬದವ್ರುಕೆ, ಸ್ವಾದರದವ್ರುಕೆ, ಊರ ಹಿರಿಯವ್ರುಕೆ, ಮುಖ್ಯಸ್ಥರ್‌ಗೆ ಕೊಟ್ಟ್ ಮದ್ವೆಗೆ ಬಂದ್ ಲಾಯ್ಕಾಗಿ ನಡ್ಸಿಕೊಡಕುತ ಕೇಳಿಕಂಡ್ ಅವರ ಪಾದ ಮುಟ್ಟಿ -ನಮಸ್ಕಾರ ಮಾಡುವ ಈ ಪದ್ಧತಿ ಇಂದಿಗೂ ನಡಿತಾ ಉಟ್ಟು.

ಇನ್ನ್ 3 ವಿಳ್ಯ ಕೊಟ್ಟವೆ. 1. ವಾದ್ಯದವ್ರುಕೆ, 2. ಮಡಿ ಬಟ್ಟೆ ಹಾಸಿಕೆ ಚಪ್ಪರ ಮೇಲ್ಕಟ್ಟ್ ಕಟ್ಟಿಕೆ ಮಡಿವಾಳಂಗೆ 3. ಗಂಡ್‌ನ ಮದುವೆ ಆದರೆ ಮೊಕ ಚವರ ಮಾಡಿಕೆ ಹಜಮಂಗೆ ಸಹ ಆಮಂತ್ರಣ ಪತ್ರಿಕೆ ಸಮೇತ ಐದೆಲೆ ಐದಡಿಕೆ ಸೇರ್ಸಿ ಕೊಟ್ಟ್ ಅವರ ಖರ್ಚ್ ವೆಚ್ಚಗಳ ಬಗ್ಗೆ ಮಾತಾಡೊಕು. ಈ ಮೂವರ್‌ಗೆ ಕೊಡುವ ವಿಳ್ಯಕ್ಕೆ "**ಸಂಚಿಕಾರ ವಿಳ್ಯ**"ತ ಹೇಳುವೆ.

ಇನ್ನ್ ಚಪ್ಪರ ಕಂಬ ನೆಡುವ ಕೆಲ್ಸ. ಚಪ್ಪರಕ್ಕಿರುವ ಕಂಬಗಳ ಕಡಿಯಕೆ ಊರವು ಚಪ್ಪರದಿನ ಹೊತಾರೆ ಬಂದ್ ಕಂಬಗಳ್ನ ಕಡ್ದ್ ತಂದವೆ. ಹಿಂಗೆ ಕಂಬಗಳ ಕಡ್ದ್ ತಂದ ಊರವು ಮನೆಯವರ್ನ ಕಂಬಗಳ್‌ನ ಎಲ್ಲಿ ಮಡ್‌ಗೊಕುತ ಕೇಳುವೆ.

ಕಂಬಗಳ ಮಹತ್ವ : ಸಾಮಾನ್ಯಾಗಿ ಎಲ್ಲವು ಮದುವೆಲಿ ಚಪ್ಪರ ಹಾಕುವೆ. ಆದರೆ ನಮ್ಮ ಹತ್ತ್ ಕುಟುಂಬ ಕುಟುಂಬ ಹದ್ನೆಂಟ್ ಗೋತ್ರದ ಗೌಡ ಜನಾಂಗದವು ಮನೆ ಮುಂದೆ ತಪ್ಪದೆ 12 ಕಂಬಗಳ ಹಾಕುವೆ (ನೆಟ್ಟವೆ) ಆ ಕಂಬಗಳ ಬುಡನ ಸೆಗ್‌ಣೆ ಹಾಕಿ ಸಾರ್ಸಿ ರಂಗೋಲಿ ಬರ್ದ್ ಅಲ್ಲಿ 12 ಮಣ್ಣ್‌ನ ಗುಂಬಗಳ್ನ ಮಡ್ಗುವೆ. ಗುಂಭಗಳಿಗೆ ಸುಣ್ಣದ ತುಂಡುಂದ ಚಿತ್ತಾರಗಳ್ನ ಬರ್ದವೆ. ವಿಳ್ಯದೆಲೆ ಅಡ್ಕೆನೂ ಮಡ್ಗುವೆ.

ಚಪ್ಪರದ ಮಧ್ಯಭಾಗಲಿ ಇರುವ 4 ಕಂಬಗಳಿಗೆ ವಿಸೇಸ ಸ್ಥಾನ ಉಟ್ಟು. ಇದರ್‌ಲಿ ಬಲಭಾಗಲಿ ಒಂದು ಹಾಲ್ ಬರುವ ಮರದ ಕಂಬನ ನೆಟ್ಟವೆ. ಇದ್ಕೆ ಹಾಲೆ ಮರದ ಕಂಬ ತೇಳುವೆ ಇದ್ ಗಣಪತಿ ಸಂಕೇತ. ಉಳ್ದ 3 ಕಂಬಗಳಿಗೆ ಬ್ರಹ್ಮ-ವಿಷ್ಣು-ಮಹೇಶ್ವರತ ತ್ರಿಮೂರ್ತಿಗಳ ಸ್ಥಾನ ಕೊಟ್ಟೊಳೊ. ಇನ್ನಿರುವ 8 ಕಂಬಗಳಿಗೆ ಅಷ್ಟದಿಕ್ಪಾಲಕರ ಹೆಸ್‌ರ್ ಕೊಟ್ಟೊಳೊ. ಮಧ್ಯ ಭಾಗಲಿ ಬರುವ ಹಾಲೆ ಮರ ಕಂಬದ 2 ಕಂಬಗಳಿಗೆ ಗೊನೆಯಿರುವ ಬಾಳೆ ಕಂಬಗಳ್ನ ನೆಟ್ಟ್ ಮಾವ್‌ನೆಲೆ ತ್ವಾರಣ ಕಟ್ಟುವೆ. ಮತ್ತೆ ತೂಗುದೀಪ ತೂಗುವೆ. ಕೆಳಗೆ ಗಣಪತಿಗೆ ಹಣ್ಣ್‌ಕಾಯಿ ಮಡ್ಗಿ ಮ್ಯಾಲೆ ಮೇಲ್ಕಟ್ಟ್ ಅಲಂಕಾರಕ್ಕೆ ಸೌತೆ ಕಾಯಿಗಳ್ನ ತೂಗುವೆ. 4 ಕಂಬಗಳ ಎದ್‌ರ್‌ಗೆ ದಿಬ್ಬಣ ಬಂದ್ ನಿಲ್ಲುದು -ಮಂಟಪದೊಳಗೆ ಧಾರೆ ಆದೆ. ಧಾರೆ ಆಗುವ ಚಪ್ಪರ ಮ್ಯಾಲೆ ಮಡಿವಾಳ ಮೇಲ್ಕಟ್ ತೇಳುವ ಬೆಳಿ ಬಟ್ಟೆನ ಕಟ್ಟಿದೆ. 5 ಎಲೆ 1 ಹಣ್ಣ್ ಅಡ್ಕೆನೂ ತೂಗುವೆ. ಈ ಎಲೆ ಅಡ್ಕೆಗೆ ಪಂಚಪಾಂಡವರ ಮತ್ತೆ ದ್ರೌಪದಿನ ಹೋಲ್‌ಸಿ ಮಡ್ಗುದುತ ಹಿರಿಯವು ಹೇಳ್ದ ಮಾತ್! ಚಪ್ಪರದ ಮ್ಯಾಲೆ ಹಲಸ್‌ನ ಮರದ ಸೊಪ್ಪ್‌ನ ಹೋಸುವೆ. 12 ಕಂಬಗಳಿಗೆ ಬೆಳಿ ಬಟ್ಟೆಗೆ ಅರಶ್‌ಣ ಹಾಕಿ ಸುತ್ತಿಕಟ್ಟುವೆ. ಮಾವ್‌ನ ಮರದ ಸೊಪ್ಪ್‌ನ ಕಟ್ಟುವೆ. ಈಗ ಇದ್ ದೇವಸ್ಥಾನದಷ್ಟೆ ಪವಿತ್ರ ಆತ್. ಈ 12 ಕಂಬದ ಚಪ್ಪರಕ್ಕೆ "ಸೀತಾವಳಿ ಚಪ್ಪರ"ತ ಹೇಳುವೆ. ಮಧ್ಯ ಭಾಗನ ದೇವ ಸಹಿತ ಕರ್ದವೆ ಅದರ್‌ಂದಾಗಿ ಸಮಾಜಲೇ ಆಗಲಿ, ಚಪ್ಪರದ ಅಡಿಲೇ ಆಗಲಿ ಅದಸ್ಟ್ ಪವಿತ್ರತೆನ ಕಾಪಾಡಿಕಂಡ್ ನಮ್ಮ ಕುಲದೇವ್ರು ವೆಂಕಟರಮಣ ಸ್ವಾಮಿ ನಮತ್ತೆ ಶೃಂಗೇರಿ ಶಾರದಾಂಬೆನ ಕೃಪೆಗೆ ಪಾತ್ರರಾಕುತ ನಾವು ಕೇಳ್‌ಕಂಡವೆ.

ಸೋಬಾನೆ ಹಾಡುಗಳು

ಮದುವೆ ಹಾಡುಗಳನ್ನು ಸೋಬಾನೆ ಪದಗಳು ಎನ್ನುತ್ತಾರೆ. ಅಂದರೆ ಸೋಬಾನೆ ಹಾಡುಗಳು ಎಂದು ಕರೆಯುವುದು ವಾಡಿಕೆ. ಶುಭವೆನ್ನಿ ಎಂಬ ಶಬ್ದ ಸೋಬಾನೆಯಾಗಿದೆ. ಈ ಪದಗಳನ್ನು ಸಾಮಾನ್ಯವಾಗಿ ಹೆಂಗಸರೇ ಹಾಡುತ್ತಾರೆ. ಮತ್ತು ಅವು ಹೆಂಗಸರ ಹಾಡುಗಳೆಂದು ಪ್ರಸಿದ್ಧವಾಗಿವೆ. ಸೋಬಾನೆ ಹಾಡುಗಳು ಜಾನಪದ ಸಾಹಿತ್ಯ ರಂಗದ ಒಂದು ಅಂಗವಾಗಿದೆ. ಮದುವೆಯ ವಿವಿಧ ಆಚರಣೆಗಳಿಗೆ ಸಂಬಂಧಿಸಿದಂತೆ ಹಾಡುಗಳಲ್ಲಿ ದಾಂಪತ್ಯ ಜೀವನದ ಹಾಡುಗಳೂ ಸೇರಿಕೊಂಡಿವೆ. ಪುರೋಹಿತರ ನೆರವಿಲ್ಲದೆಯೆ ಕ್ರಮ ತಪ್ಪದಂತೆ ಶಾಸ್ತ್ರ ಕ್ರಿಯೆಗಳನ್ನು ನಡೆಸುವುದರಿಂದ ಮಂತ್ರದಷ್ಟೇ ಪವಿತ್ರ ಈ ಸೋಬಾನೆ ಹಾಡುಗಳು. ಶಾಸ್ತ್ರಗಳನ್ನು ಪರಿಚಯ ಮಾಡಿಕೊಡುವುದರ ಜೊತೆಗೆ ಪರಂಪರಾನುಗತವಾಗಿ ನಡೆಮುಕೊಂಡು ಬಂದ ಮದುವೆ ವೈಶಿಷ್ಟವನ್ನು ಪರಿಚಯಿಸುತ್ತದೆ. ಸಂಸ್ಕೃತಿಯ ದೃಷ್ಟಿಯಿಂದ ಇವುಗಳ ಪರಿಶೀಲನೆ ಎಷ್ಟು ಮುಖ್ಯವೋ ಸಾಹಿತ್ಯದ ದೃಷ್ಟಿಯಿಂದಲೂ ಸಾಮಾಜಿಕ ನಂಬಿಕೆಗಳ ಉತ್ಕೃಷ್ಟ ಸಾಹಿತ್ಯ ಗುಣವೂ ಇದರಲ್ಲಿ ಅಡಗಿದೆ.

ಸೋಬಾನೆ ಎಂದರೆ ಅದನ್ನು ಯಾವ ಸಂದರ್ಭದಲ್ಲಿ ಹಾಡುತ್ತಾರೆಂದು ತಿಳಿದುಕೊಳ್ಳುವುದು ಮುಖ್ಯ:- ಸಹಜವಾಗಿ ಎಲ್ಲಾ ಮದುವೆ, ಶುಭ ಸಂದರ್ಭಗಳಲ್ಲಿ ಇವುಗಳನ್ನು ಹಾಡುತ್ತಾರೆ. ಆದರೆ ಬೆಳಕಿಗೆ ಬಾರದಂತ ಕೆಲವು ಹಾಡುಗಳು ಕೂಡಾ ಪ್ರಾರಂಭದಿಂದಲೇಯಿದೆ. ಅದೆಂದರೆ ಮದುವೆಗೆ ಚಪ್ಪರ ಹಾಕುವ ಶಾಸ್ತ್ರ, ಚಪ್ಪರ ಇಲ್ಲದಿದ್ದರೆ ಮದುವೆಯಿಲ್ಲ ಹಾಗಾಗಿ ಚಪ್ಪರಕ್ಕೆ ಅಷ್ಟು ಮಹತ್ವ. ಚಪ್ಪರ ಕಂಬ ನೆಡಲು ಮರಗಳನ್ನು ಕಡಿದು ತರಬೇಕು-ಹೀಗಾಗಿ ಮರಗಳನ್ನು ಕಡಿಯುವಾಗ ಮೊದಲಿಗೆ ಸೋಬಾನೆ ಪ್ರಾರಂಭವಾಗುತ್ತದೆ. ಕಂಬಗಳನ್ನು ಕಡಿಯಲು ನೆರೆಮನೆಯವರು ಊರಿನವರು ಸೇರಿ ಅರಣ್ಯಕ್ಕೆ (ಕಾಡಿಗೆ) ಹೋಗಿ ಹಾಲು ಬರುವ 12 ಕಂಬಗಳನ್ನು ಕಡಿಯುತ್ತಾರೆ. ಆಗ ಹಾಡುವ ಒಂದು ಸಂಗ್ರಹ ಹೀಗಿದೆ:-

ಅರಣ್ಯದಾ ಕಂಬಗಳಾ -ಕಡಿದಾರೋ।
ಅರಣ್ಯದಾ ಕಂಬಗಳಾ ಏನಂತ ಕಡಿದಾರೋ । ಏನಂತ ಕಡಿದಾರೋ?
ಕಂಬಾದ ಮ್ಯಾಲೆ ಲಿಂಗ ಬರಲೆಂದು ।

ಋಷಿಗಳು ಚೆಂಬಲ್ಲಿ ಜಲಧಾರೆ ಎರೆದಾರೊ ॥ ಎಂದರೆ ಋಷಿಗಳು ಚೆಂಬಿನಲ್ಲಿ ನೀರನ್ನು ಮರದ ಬುಡಕ್ಕೆ ಹೊಯ್ದು ನಂತರ ಕಡಿಯುವುದಾಗಿದೆ. ಇನ್ನು ಕಡಿದು ತಂದ ಮರಗಳನ್ನು ಎಲ್ಲಿಡಬೇಕೆಂದು ಮನೆಯವರನ್ನು ಕೇಳುವುದಂತೂ ತುಂಬಾ ಅರ್ಥಗರ್ಭಿತವಾಗಿದೆ.

ಚಪ್ಪರಕಂಬ ನೆಡುವ ಸೋಬಾನೆ : ಮೂಡಂದ ಬಂದಾವು ಮುತ್ತಿನಾ ಹಸೆಕಂಬಾ
ಯಾವ ಮೂಲೆಲಿ ನಿಲ್ಲಬೇಕು॥ ಈ ಕಂಬಾ
ಈಶಾನ್ಯದ ಮೂಲೆಲಿ ನಿಲಬೇಕು.
ಪಡುವಂದ ಬಂದಾವು ನೀಲಾ...ದ ಹಸೆಕಂಬಾ
ಯಾವ ಮೂಲೆಲಿ ನಿಲಬೇಕು ॥ಈ ಕಂಬಾ
ಆಗ್ನೇಯದ ಮೂಲೆಲಿ ನಿಲಬೇಕು.

ಬಡಗಂದ ಬಂದಾವು । ಬೆಡಗಿನ ಹಸೆ ಕಂಬಾ।
ಯಾವ ಮೂಲೆಲಿ ನಿಲಬೇಕು।। ಈ ಕಂಬಾ
ನೈರುತ್ಯದ ಮೂಲೆಲಿ ನಿಲಬೇಕು
ಒಂದು ಕಂಬಕೆ ಚಿನ್ನಾ। ಒಂದು ಕಂಬಕೆ ರನ್ನಾ।
ಮುಂದಿನ ಕಂಬಕೆ ಮುಡುವಾಳ।। ಪಚ್ಚೆತೆನೆ
ದೇವರ ಮೂಲೆಲಿ ನಿಲಬೇಕು.
ಆ ಮೂಲೆ ಈ ಮೂಲೆ ನಾವೇನು ಬಲ್ಲೇವೊ
ನಾಲ್ಕು ರಾಜ್ಯಕ್ಕೆ ಹೆಸರಾದ ।। ಈ ಕಂಬಾ
ಈಶಾನ್ಯದ ಮೂಲೆಲಿ ನಿಲಬೇಕು.

ಇನ್ನು ಕಂಬಗಳ ಶಾಸ್ತ್ರ ಆದನಂತರವೇ ಎಣ್ಣೆ ಶಾಸ್ತ್ರ -ಅಕ್ಕಿ ಶಾಸ್ತ್ರ-ಪ್ರಾರಂಭವಾದಂತೆ ಪ್ರತಿ ಶಾಸ್ತ್ರದಲ್ಲೂ ದೇವರ ಹೆಸರು, ಅಂದರೆ ಶಿವ ಪಾರ್ವತಿ -ರಾಮ ಸೀತೆ-ಕೃಷ್ಣ ರುಕ್ಮಿಣಿ -ವೆಂಕಟರಮಣ ಪದ್ಮಾವತಿ ಹೀಗೆ ಮದು ಮಕ್ಕಳನ್ನು ದೇವರಿಗೆ ಹೋಲಿಸಿ ಹಾಡುತ್ತಾ ಅವರಂತೆ ದೀರ್ಘಾಯುಷಿಗಳಾಗಿ ಗುಣವಂತರಾಗಿ ಬಾಳಲು ಹಾರೈಸುವ ಹಾಡುಗಳು ಮದುವೆಯ ಉದ್ದಕ್ಕೂ ಬೇಕಾದಷ್ಟು ಹಾಡುಗಳಿಂದ ವ್ಯಕ್ತವಾಗುತ್ತದೆ. ಮದುವೆ ಸೋಬಾನೆ ಹಾಡುಗಳಲ್ಲಿ ಒಂದು ದೇಶದ ಒಂದು ಜನಾಂಗದ ಸಂಸ್ಕೃತಿಯನ್ನು ಪರಿಚಯಿಸುವ ಮೂಲ ಸಂಸ್ಕೃತಿ ಕೂಡಯಿದೆ. ಹೀಗೆ ಕರ್ನಾಟಕ ಜನಪದ ಸಾಹಿತ್ಯದಲ್ಲಿ ಸೋಬಾನೆ ಹಾಡುಗಳು ನಶಿಸದೆ ಇನ್ನೂ ಬೆಳಕಿಗೆ ಬರುವಲ್ಲಿ ಅನೇಕರು ಶ್ರಮಿಸಿದ್ದಾರೆ. ಇದು ಕನ್ನಡನಾಡಿನ ಜಾನಪದ ಸಾಹಿತ್ಯದ ಅಮೂಲ್ಯ ಸೊತ್ತಾಗಿದೆ. ಕರ್ನಾಟಕ ಸಂಸ್ಕೃತಿ ಪರಂಪರೆಯಲ್ಲಿ ಗೌಡರು ಮದುವೆ ಶಾಸ್ತ್ರಗಳಿಗೆ ಬಹಳ ಮಹತ್ವವನ್ನು ಕೊಡುವುದರೊಂದಿಗೆ ಪ್ರತಿ ಶಾಸ್ತ್ರಗಳಿಗೆ ತಕ್ಕ ಸೋಬಾನೆ ಹಾಡುಗಳನ್ನು ಹಾಡಿ ಮದುವೆ ಮನೆಗೆ ಕಳೆ ತುಂಬುತ್ತಾರೆ.

ದಿಬ್ಬಣದವ್ರ್ನ ಜರಿವ ಪದ

ಎಂತ ನೆಂಟ್ರ್‌ಗಪ್ಪಾ ಇವು ಎಂತ ನೆಂಟ್ರ್‌ಗಾ ?
ಒಂದೇ ಅಡ್ಕೆ ಒಡ್ಡೊ। ಹದ್ನೆಂಟ್ ಹೋಳು ಮಾಡ್ಡೊ
ಇವು ಮದ್ವೆನ ಮುಗ್ಸಿದೊ -ಇವು ಮದ್ವೆನ ಮುಗ್ಸಿದೊ ।।
ಗಡಿಬಿಡಿಲಿ ಅವು ಸರ್ಕಂಡೊ। ವಾಲ್‌ಗದವರ್‍ನ ಕರ್ಕಂಡೊ
ಧಾರೆ ಮುಗ್ಸಿ ಬ್ಯಾಗ ಬ್ಯಾಗ ಜಾರಿಕಂಡೊ। ಇವು ಎಂತ ನೆಂಟ್ರ್‌ಗಾ ?
ಬಾಯಿ ಮಾತ್‌ಲಿ ಕರ್ತ್‌ಲೆ। ವೀಳ್ಯನಂತೂ ಕೊಡ್ತ್‌ಲೆ ।। ಎಂತ ।।
ಶಾಸ್ತ್ರಕೆ ತೇಳಿ ವೀಳ್ಯದೆಲೆ । ಊಟಕೆ ತೇಳಿ ಬಾಳೆಲೆ
ತುಪ್ಪತೇಳಿ ಹೊಯ್ದ್ರೊ ನೋಡಿ। ಎಣ್ಣೆತೇಳಿ ಬ್ಯಾಡ ತೇಳ್ರೊ ।। ಎಂತ।।
ಊಟ ಏನೋ ಲಾಯ್ಕಾ ಗಿತ್ತ್ । ಹೊಟ್ಟೆ ಅಂತೂ ತುಂಬೆ ಇತ್ತ್‌ಲೆ
ಕೈ ತೊಳೆಕೆ ಜಾಗ ತೋರ್ಸಿದೊ । ಹೋಗಿ ನೋಡ್ರೆ ನೀರೆಯಿಲ್ಲೆ
ಎಂತ ನೆಂಟ್ರ್‌ಗಪ್ಪ ಇವು । ಎಂತ ನೆಂಟ್ರ್‌ಗಾ ?

ಅಕ್ಕಿ ಆರತಿಗಳು

1. ತಾಯಿ ಅಕ್ಕಿ ಆರತಿ 2. ಗೌಡ ಆರತಿ 3. ಕಟ್ಟೆ ಮನೆ ಆರತಿ 4. ಗ್ರಾಮ ಗೌಡನ ಆರತಿ 5. ಗ್ರಾಮದ ಅಕ್ಕಿ ಆರತಿ 6. ಕುರ್ದಿ ನೀರಿನ ಆರತಿ 7. ವೃಷ್ಟಿ ಆರತಿ.

ಮದುವೆಯಲ್ಲಿ ಅಕ್ಕಿ ಆರತಿಗಳನ್ನು ವಧು-ವರರಿಗೆ ಬೆಳಗುತ್ತಾರೆ. ಇದು ವಧು-ವರರಿಗೆ ಆದರೂ ಈ ರೀತಿ ಇಡೀ ಸಮಾರಂಭಕ್ಕೆ ಬಂದ ಎಲ್ಲವರನ್ನು ಗೌರವಿಸುವ ಸಂಕೇತವಾಗಿರುತ್ತದೆ. ಹೀಗೆ ಅಕ್ಕಿ ಆರತಿಗಳು ಇಡೀ ಊರಿನ ಬಳಗವನ್ನು ಒಳಗೊಂಡಿರುತ್ತದೆ.

ಧಾರೆ ಮಂಟಪ :-

ಧಾರೆ ಮಂಟಪವು ಮನೆಯ ಮುಂದಿನ ಅಂಗಳವಾಗಿರುತ್ತದೆ. ದಂಪತಿಗಳ ಭವಿಷ್ಯ ಒಳ್ಳೆಯದಾಗಲಿ ಎಂಬ ಮಂಗಳ ಕಲ್ಪನೆ. ದಾಂಪತ್ಯದಲ್ಲಿ ಸದಾಶಯ, ಹೊಸತನದ ಜೀವನಕ್ರಮಕ್ಕೆ ಸಂಬಂಧಿಸಿದಂತೆ ಧಾರೆ ಹೊಯ್ಯುವ ಘಟನೆಯಿಂದ ಗಂಡ ಹೆಂಡಿರಾಗಿ ಮಾರ್ಪಾಡು ಹೊಂದುವುದರಿಂದ ವಂಶಾಭಿವೃದ್ಧಿಗೆ ಅನುಮತಿ ದೊರೆತಂತಾಗುತ್ತದೆ. ಆಗ ಆಸ್ತಿಗೆ ಉತ್ತರಾಧಿಕಾರಿಯಾಗಿ ನೇಮಕವಾದಂತೆ ಆಗುತ್ತದೆ. ಒಕ್ಕಲುತನ ಮಾಡುವ ಗೌಡ ರೈತರ ಮೂಲ ವೃತ್ತಿ ಅಕ್ಕಿಗೆ ಸಂಬಂಧಿಸಿದಂತೆ ಆದ್ದರಿಂದ ಮದುವೆಗೆ ಸಾಕ್ಷಿಯಾಗಿ ನೆರೆಕರೆಯವರೆಲ್ಲಾ ಮುಹೂರ್ತಕ್ಕೆ ಇರುವ ಪ್ರಾಮುಖ್ಯತೆ. ಇದು ಆರ್ಥಿಕ ಸಾಮಾಜಿಕ ಆಯಾಮವಾಗಿದೆ.

ಮದುವೆಗೂ ಅಕ್ಕಿಗೂ ಗಾಢವಾದ ಸಂಬಂಧ ವಾರ್ಷಿಕ ಆವರ್ತನದಲ್ಲಿ ಅಕ್ಕಿಗೆ ಮಹತ್ವದ ಸ್ಥಾನ. ಗಂಡು ಹೆಣ್ಣಿನ ಸಂಬಂಧವನ್ನು ಕಾನೂನು ಬದ್ಧಗೊಳಿಸಿ ವಂಶ ಬೆಳೆಯುವುದಕ್ಕೆ ಅನುವು ಮಾಡಿಕೊಡುವ ಪ್ರಕ್ರಿಯೆ ಮದುವೆ ಮೂಲಕ ನಡೆಯುತ್ತದೆ.

ಗೌಡರ ಮದುವೆ ಕ್ರಮವು ಆ ಜನಾಂಗದ ಸಾಂಸ್ಕೃತಿಕ ದೃಷ್ಟಿಕೋನವನ್ನು ಸಾಂಕೇತಿಕವಾಗಿ ಸಮರ್ಥವಾಗಿ ಅಭಿವ್ಯಕ್ತಿಸುತ್ತದೆ. ಮದುವೆ ಸಂಬಂಧಗಳ ಗೌಡರ ಇತಿಹಾಸದಲ್ಲಿ ಪ್ರಾಮುಖ್ಯ ಅಂಶವನ್ನು ನಿರ್ಧರಿಸಿದೆ.

ಮದುವೆ ಆದ ನಂತರ ದಂಪತಿಗಳಿಗೆ ಇಡೀ ಶರೀರದ ಗಂಟುಗಳಿಗೆ ಅಕ್ಕಿಯನ್ನು ಮುಟ್ಟಿಸಿ ತಲೆ ಮೇಲೆ ಹಾಕುತ್ತಾರೆ. ಅಕ್ಕಿಯು ಹಸಿವನ್ನು ಇಂಗಿಸುವ ಜೀವಧಾತುವಾದ್ದರಿಂದ ಅನಂತ ಶಕ್ತಿಯನ್ನು ಹೊಂದಿರುವ ಸಂಕೇತವಿದೆ. ಮದುವೆಯಲ್ಲಿ ಧಾರೆಯಾದ ನಂತರ ಮನೆತನದ ಹಿರಿಯರಿಗೆ ಗೌರವ ಕೊಡುವ ಪದ್ಧತಿಗೆ ಮರ್ಯಾದೆ ಕ್ರಿಯೆ ಎನ್ನಲಾಗಿದೆ. ತಂದೆತಾಯಿಯರ ಗೋತ್ರಗಳೆ ಆದರ್ಶವಾಗಿರುವ ಹಿನ್ನೆಲೆಯಲ್ಲಿ ಗೋತ್ರವೇ ಗೌಡರ ಪ್ರಧಾನ ಮಾನದಂಡ ತೊಂಬಾರ ಮತ್ತು ಜಗಲಿ ಗೌಡರ ವಾಸ್ತುವಿನ ಮುಖ್ಯ ಘಟಕಗಳು ನೆಲ್ಲಕ್ಕಿ ದೀಪವು ಮನೆಯಲ್ಲಿ ಬಹು ಪ್ರಮುಖವಾದ ಸ್ಥಳವಾಗಿರುತ್ತದೆ.

ಸ್ನಾನ ಮಾಡಿಸುವ ಹಾಡು

ಎಣ್ಣೆಶಾಸ್ತ್ರ ಮುಗಿಸಿದ ಮದುಮಕ್ಕಳು ಸ್ನಾನ ಮಾಡಬೇಕು-ಸ್ನಾನಕ್ಕೆ ನೀರು ಕಾಯಿಸಲು ಒಲೆ ಸಾರಿಸಿ ಯಾವ ಮರದ ಸೌದೆಯಿಂದ ನೀರು ಕಾಯಿಸಬೇಕು-ಸ್ನಾನ ಮಾಡಿದ ನೀರು ಹರಿವ ದಾರಿಯಲ್ಲಿ ಯಾವ್ಯಾವ ಗಿಡಗಳು ಬೆಳೆದು ಬರುತ್ತದೆಂಬುವುದನ್ನು ತಿಳಿಯೋಣ

ಮೂಡಕ್ಕೆ ಮುಖಮಾಡಿ। ಆಯದಲಿ ಒಲೆ ಕೊರೆದು
ಮಾವುನ ಸೌದೆ ದಳವೊಡ್ಡಿ॥ ಕಾಸಿದ ನೀರು
ಊರು ಮಾಲಿಂಗನಾ ಮಗ ಮೀದ ನೀರು
ತೆಂಕಾದ ಗುಡ್ಡಂದಾ ಹರಿದೋಯ್ತು॥
ತೆಂಕಾದ ಗುಡ್ಡಂದಾ ಹರಿದಾ ನೀರಲ್ಲಿ ಬಾಳೆವಾಲಾಡಿ ಬೆಳೆದಾವೊ॥

ಅಂದದಲಿ ಒಲೆಮಾಡಿ। ಚಂದದಲಿ ಒಲೆಕೊರೆದು
ಶ್ರೀ ಗಂಧದಾ ಸೌದೆ ದಳವೊಡಿ॥ ಕಾಸಿದ ನೀರು
ಊರುಗೌಡರ ಮಗ ಮೀದ - ನೀರು
ನೀಲಾದ ಬಚ್ಚಲಿಂದಾ ಹರಿದೋಯ್ದು॥
ನೀಲಾದ ಬಚ್ಚಲಿಂದಾ ಹರಿದಾ ನೀರಲ್ಲಿ ಸಿಂಬೆ ವಾಲಾಡಿ ಬೆಳೆದಾವೊ॥

ಆಯದಲಿ ಒಲೆ ಮಾಡಿ ಜಾಯದಲಿ ಒಲೆಕೊರೆದು
ನಂದಿ-ಯ ಸೌದೆ ದಳವೊಡ್ಡಿ॥ ಕಾದಾ ನೀರು
ಊರು ಗರತಿಯ ಮಗ ಮೀದ ನೀರು।
ನೀಲಾದ ಬಚ್ಚಲಿಂದಾ ಹರಿದೋಯ್ತು॥
ನೀಲಾದ ಬಚ್ಚಲಿಂದ ಹರಿದಾ ನೀರಲ್ಲಿ ಕಿತ್ತಳೆ ವಾಲಾಡಿ ಬೆಳೆದಾವೊ ॥

ಕಡ್ಡಾಯದ ನೀರು। ದಳದಳನೆ ಕಾದಾವೊ ॥
ಮುಡುವಾಳ ಪಚ್ಚೆತೆನೆ । ಗಮನಾಕೆ ಕಾದಾನೀರು।
ಎರೆಯಿರಿ ಮಾಶಿವನಾ ಮಗ ನಿ..ಗೆ ॥

ಹಂಡೆ-ಯಾ ನೀರು ಗುಳಗುಳನೆ ಕಾದಾವೊ
ಮುಡುವಾಳ ಪಚ್ಚೆತೆನೆ.ಗಮನಾಕೆ ॥ ಕಾದಾನೀರು
ಎರೆಯಿರಿ ಗೌಡರ ಮಗನೀ..ಗೆ ॥

ಕಂಚಿಮಿ (ಕಳಸ ಕನ್ನಡಿ)

ಕಂಚಿಮಿ ಅಥವಾ ಕಳಸಕನ್ನಡಿ ಎಂದರೆ ಅದು ಲಕ್ಷ್ಮೀ ಸಂಕೇತ ಮತ್ತು ಶುಭಚಿಹ್ನೆ- ಅದರಲ್ಲಿರುವ ದೀಪದ ಹಾಗೆ ಮದುಮಕ್ಕಳ ಜೀವನ ಬೆಳಗಬೇಕೆಂದು ದೀಪ ಇಡುತ್ತಾರೆ.

ಕಂಚಿಮಿಯನ್ನು ಮೂರು ಭಾಗ ಮಾಡಲಾಗಿದೆ. ಕೆಳಭಾಗದಲ್ಲಿ ಕಂಚಿನ ಬಟ್ಟಲು- ಮಧ್ಯಭಾಗ ಬಾಯಿ ತೆರೆದ ಕೊಂಬಿನ ಗಿಂಡಿ-ಮೇಲ್ಭಾಗದಲ್ಲಿ ಜುಟ್ಟು ತೆಗೆಯದ ಒಂದು ತೆಂಗಿನಕಾಯಿ. ಕಾಯಿ ಒಳಗೆ ನೀರು-ಗಿಂಡಿ ಒಳಗೆ ಹಾಲು ಇರುತ್ತದೆ. ಬಟ್ಟಲಲ್ಲಿ ಅಕ್ಕಿ ಐದೆಲೆ ಒಂದು ಅಡಿಕೆ, ಕರಿಮಣಿ ಬಿಚ್ಚೋಲೆ ಕನ್ನಡಿ ಇಟ್ಟಿರುತ್ತಾರೆ. ಕರಿಮಣಿ ಗಿಂಡಿಯ ಕಂಠದಲ್ಲಿರುತ್ತದೆ. ತೆಂಗಿನಕಾಯಿ ಮತ್ತು ಗಿಂಡಿಯ ಮಧ್ಯೆ ಮಾವಿನೆಲೆ ಹಿಂಗಾರ ಹೂಇಟ್ಟಿರುತ್ತಾರೆ. ಇದೆಲ್ಲಾ ದೇವಿಗೆ ಪ್ರಿಯವಾದ ಮಂಗಳ ವಸ್ತುಗಳಾದ್ದರಿಂದ ಮದುಮಕ್ಕಳನ್ನು ದೇವರಿಗೆ ಹೋಲಿಸುತ್ತಾರೆ. ದೀಪ ನಂದಿ ಹೋದರೆ ಅಶುಭ ಎಂಬ ನಂಬಿಗೆಯಿದೆ.

ಒಟ್ಟಿಗೆ ಇದರ ಸೂಚನೆ ಎಂದರೆ ಒಂದಕ್ಕೊಂದು ಸಂಬಂಧ ಬೆಸೆಯುವುದು ಎಂಬರ್ಥ ಕೊಡುತ್ತದೆ. ಈ ಕಂಚಿಮಿಯನ್ನು ಖಾಸಾ ಅಕ್ಕತಂಗಿಯರೇ ಹಿಡಿಯತಕ್ಕದ್ದು ಸಂಪ್ರದಾಯ. ಹಾದಿಯ ಮೆರುಗು ಕಾಯುವುದು ಅಕ್ಕಂದಿರು ಮಾತ್ರ ಎನ್ನುವ ನಂಬಿಕೆಯಿದೆ. ಜಾನಪದದಲ್ಲಿ ಕಳಸಕನ್ನಡಿ ಅಥವಾ ಕಂಚಿಮಿಯನ್ನು ಹೆಂಗಸು ಪ್ರತಿನಿಧಿಸುವುದು ಸಾಮಾನ್ಯವಾಗಿದೆ. ಇದು ಆಯಾ ಸಮಾಜದ ಕುಟುಂಬದಲ್ಲಿ ಗಂಡಸರು ಮತ್ತು ಹೆಂಗಸರ ಸ್ಥಾನಮಾನಗಳನ್ನು ಸಾಂಕೇತಿಸುತ್ತದೆ.

ಅಕ್ಕನ ಕರೆಯುವ ಸೋಬಾನೆ:

ನಮ್ಮವರ ಅರಮನೆಲಿ ಸಣ್ಣವಂಗೆ ಸೋಬಾನ
ಅಕ್ಕನ ಕರೆಯಲಿಕೆ ಹೋಗೋದಾರು॥ ಏಳಾಳಿಗಿಂತ
ಹಿರಿಯಣ್ಣ ಹೋಗಬೇಕು-ಅಕ್ಕನ ಕರೆಯಲಿಕೆ ಹೋಗಾ-ಬೇಕು॥
ಸೂಡಿ ಸೂಡಿ ವೀಳ್ಯಾವ ತೆಗೆದಾನು ಅಣ್ಣಯ್ಯಾ....
ಕೀಲು ಕೀಲೆ ಅಡಿಕೆ ತೆಗೆದಾನು ಅಣ್ಣಯ್ಯಾ...
ಅಕ್ಕನ ಕರೆಯಲಿಕೆ ಹೊರಟಾನು-ವೀಳ್ಯವ ತಕ್ಕೊಂಡು ಹೊರಟಾ..ನು॥
ಸಣ್ಣಕ್ಕಿ ಬಯಲಲ್ಲಿ ನಡೆದಾನು ಅಣ್ಣಯ್ಯ
ಅಕ್ಕನರ ಮನೆಗೆ ನಡೆದಾನು। ಎದುರಿಗೆ
ಹಾಲು ನೀರು ತಂದಾಳು ಹಿರಿಯಕ್ಕಾ....
ನೀರನ್ನೇ ತೆಗೆದು ಕೈಕಾಲು ಮುಖತೊಳೆದು
ಹಾಲನ್ನೇ ಕುಡಿದು ಬಾಯಾರಿಕೆ ಕಳೆದು
ತೂಗುವ ಮಂಚದಲಿ ಕೂತಾನಿಗಾ...॥
ವೀಳ್ಯವಾ ಕೊಟ್ಟಾಳು ಅಕ್ಕಯ್ಯಾ। ವೀಳ್ಯವ ಮೆದ್ದಾನು ಅಣ್ಣಯ್ಯ।
ಬೆಳ್ಳಿಯ ಹರಿವಾಣ ತೆಗೆದು। ವೀಳ್ಯವ ಸಿರಿಸಿ -ನುಡಿದಾನು, ।ಅಣ್ಣಯ್ಯಾ।
ನಮ್ಮರಮನೆಲಿ ಸಣ್ಣವಂಗೆ ಸೋಬಾನ- ಕಳಸಕನ್ನಡಿ ಹಿಡಿಯಲಿಕೆ
ಬರಬೇಕು ಅಕ್ಕಯ್ಯ- ಅರಾ.. ಮನೆಗೆ.. ಸೋಬಾನವೊ॥

ಮದುರಂಗಿ ಮಹತ್ವ

ಮದುರಂಗಿ ಕೆಂಪು ಬಣ್ಣ ಬಿಡುವ ಒಂದು ಸಸ್ಯ. ಇದಕ್ಕೆ ಗೋರಂಟಿ ಎಂಬ ಹೆಸರಿದೆ. ಚರ್ಮದ ಮೇಲಿನ ಚಿತ್ರಕಲೆಯೆನಿಸಿದ್ದು-ಹೆಚ್ಚು ಜನಪ್ರಿಯವಾಗಿ ತನ್ನ ಸೀಮಿತವಲಯವನ್ನು ಮೀರಿ ಶುಭ ಸಮಾರಂಭದಲ್ಲಿ ಒಂದು ಅನಿವಾರ್ಯ ಅಂಗವಾಗಿ ರೂಢಿಯಲ್ಲಿ ಉಳಿದಿದೆ. ಮದುರಂಗಿಗೆ ದೇಶ-ಜಾತಿ-ಭಾಷೆಯ ಭೇದವಿಲ್ಲ. ಹರಪ್ಪ ಸಂಸ್ಕೃತಿಯ ಅವಶೇಷಗಳಲ್ಲಿ 3ನೇ ಶತಮಾನದ ಸುಶ್ರುತ ಸಂಹಿತಾ ಸಂಸ್ಕೃತ ಗ್ರಂಥಗಳಲ್ಲಿ ಅಂಗರಾಗ ಎಂದಿದೆ. ಅಂದರೆ ಶರೀರದ ಅವಯವಗಳಿಗೆ ಬಳಸಿಕೊಳ್ಳುವ ಆಯುರ್ವೇದ ಚಿತ್ರಾಲಂಕಾರ ಮಾಡಿಕೊಳ್ಳುವ ರೂಢಿ ಭಾರತೀಯರಲ್ಲಿ ತೀರಾ ಪ್ರಾಚೀನ ಕಾಲದಿಂದಲೆ ಇರುವುದಾಗಿ ತಿಳಿದು ಬರುತ್ತದೆ. ಮದುರಂಗಿ ಹೊರ ಕಣ್ಣಿಗೆ ಸೌಂದರ್ಯ ಸಾಧನವಾದರೂ ಪರೋಕ್ಷವಾಗಿ ದೈಹಿಕ ಸಮತೋಲನ ಕಾಪಾಡುವ ರೋಗ ನಿರೋಧಕ ಶಕ್ತಿ ಹೆಚ್ಚಿಸುವ ಕೆಲಸ ಮಾಡುತ್ತದೆ ಎಂಬ ನಂಬಿಕೆಯಿಂದ ಅದರ ಬಳಕೆ ಅನಿವಾರ್ಯ ಎಂದು ನಂಬಲಾಗಿದೆ.

ಭಾರತದ ಇತಿಹಾಸದಲ್ಲಿ 12ನೇ ಶತಮಾನದಲ್ಲಿ ಮೊಗಲರೊಂದಿಗೆ ಮದುರಂಗಿ ಭಾರತಕ್ಕೆ ಪ್ರವೇಶ ಮಾಡಿದೆಯೆಂದಾದರೂ ಇದು ತೀರಾ ಪ್ರಾಚೀನವೆಂದು ನಂಬಲಾಗಿದೆ. ಹಿಂದಿಯಲ್ಲಿ ಮದುರಂಗಿಗೆ ಮೆಹಂದಿ ಎನ್ನುತ್ತಾರೆ. ಕೂದಲಿಗೆ ಕೈಕಾಲುಗಳಿಗೆ ಕೆಂಪು ಬಣ್ಣ ಮಾಡುವ ಶಕ್ತಿಯಿದೆ. ತಲೆ ಕೂದಲನ್ನು ಕೆಂಪು ಮಾಡುವ ಇದಕ್ಕೆ ಕೇಶರಂಜಕ ಎನ್ನುತ್ತಾರೆ. ಇಂದು ಭಾರತದಲ್ಲಿ ಸ್ತ್ರೀಯರು ಉಪಯೋಗಿಸುವಷ್ಟು ಮದುರಂಗಿಯನ್ನು ಇನ್ನ್ಯಾರೂ ಉಪಯೋಗಿಸುವುದಿಲ್ಲ. ಇದರ ಎಲೆ, ಬೇರು, ಸಿಪ್ಪೆ ಸಹ ಬೇರೆ ಬೇರೆ ತರದ ಉಪಯೋಗಕ್ಕೆ ಬರುತ್ತದೆ.

ಮದುರಂಗಿ ಕಲೆ ತನ್ನ ಜನಪ್ರಿಯತೆಯನ್ನು ಹೆಚ್ಚಿಸಿಕೊಳ್ಳುತ್ತಿದ್ದು, ತರಬೇತಿ ಕೇಂದ್ರಗಳಲ್ಲಿ ನಿತ್ಯ ನೂತನವಾಗಿ ಬ್ಯೂಟಿ ಪಾರ್ಲರ್‌ಗಳಲ್ಲೂ ಮಹತ್ವ ಪಡೆದಿದೆ. ಕೇಳಿದಷ್ಟು ಹಣಕೊಟ್ಟು ಅಪರೂಪದ ಕಲಾತ್ಮಕ ಚಿತ್ರ ಬಿಡಿಸಿಕೊಳ್ಳುವುದು ಆಧುನಿಕ ಫ್ಯಾಶನ್ ಆಗಿದೆ. ಹೀಗಾಗಿ ಇದು ವಿದೇಶಿ ಮಹಿಳೆಯರನ್ನೂ ಕೂಡಾ ಆಕರ್ಷಿಸಿದೆ. ಹಳ್ಳಿಗಳಲ್ಲಿ ಇದೊಂದು ಪವಿತ್ರ ಕಾರ್ಯವೆಂದು ಫಲಾಪೇಕ್ಷೆಯಿಲ್ಲದೆ ಮದುರಂಗಿ ಹಚ್ಚುವವರೂ ಇದ್ದಾರೆ. ಹೀಗೆ ಮದುರಂಗಿ ತನ್ನ ಮೂಲರೂಪವನ್ನು ಕಳೆದು ಕೊಳ್ಳದೆ ಸರ್ವಜನ ಪ್ರಿಯವಾಗಿದೆ. ಇದು ಭಾರತದ ಅತ್ಯಂತ ಪ್ರಾಚೀನಕಾಲದ ಚಿತ್ರಕಲೆ.

ಇನ್ನು ಮದುರಂಗಿಯ ಬಗ್ಗೆ ಕೆಲವು ನಂಬಿಕೆಗಳು ಕೂಡಾಯಿವೆ.

1. ಮದುರಂಗಿ ಹಚ್ಚುತ್ತೇನೆ ಎಂದರೆ ಮದುವೆಯಾಗುತ್ತೇನೆ ಎಂದರ್ಥ.
2. ಮದುವೆಯಲ್ಲಿ ಮದುರಂಗಿ ಇಲ್ಲದಿದ್ದರೆ ಅಶುಭ ಎನ್ನುವ ನಂಬಿಕೆ
3. ಮದುರಂಗಿ ಹೆಚ್ಚು ಕೆಂಪಾದರೆ ದಾಂಪತ್ಯಜೀವನ ಅನ್ಯೋನ್ಯವಾಗಿರುತ್ತದೆ.
4. ಮಲಗಿಕೊಂಡು ಮದುರಂಗಿ ಹಚ್ಚಿದರೆ ಅನಿಷ್ಟ.
5. ಮದುರಂಗಿ ಮುತ್ತೈದೆ ತನದ ಸಂಕೇತ.

6. ಹಣೆಗೆ ಹಚ್ಚಿದ ಮದುರಂಗಿ ಕೆಂಪಾದರೆ ಭಾಗ್ಯಶಾಲಿಯಾಗುತ್ತಾರೆ.
7. ಮದುವೆಯ ರಂಗು ಮಾಸುವ ಮೊದಲಿಗೆ ಸತ್ತರೆ ಸ್ವರ್ಗಪ್ರಾಪ್ತಿ.

ಔಷಧ ಗುಣ :-

ಇದರ ಎಲೆ ಹೂ ಬೀಜ ತೊಗಟೆಗಳಲ್ಲಿ ರೋಗ ನಿರೋಧಕ ಶಕ್ತಿಯಿದೆ.

ಮದುರಂಗಿ ಶರೀರದ ಉಷ್ಣತೆ ಕಾಪಾಡುತ್ತದೆ.

ಮದುರಂಗಿ ಎಲೆ ರಸಕ್ಕೆ ಸ್ವಲ್ಪ ಅರಶಿನ ಹುಡಿ ಸೇರಿಸಿ. ನಿಂಬೆರಸದಲ್ಲಿ ಮಿಶ್ರ ಮಾಡಿ ಶರೀರದಲ್ಲಾಗುವ ಚಿಬ್ಬು-ಕಲೆಗೆ ಹಚ್ಚಬೇಕು.

ಗಡ್ಡೆ ಗಂಟು ಇದ್ದರೆ ಎಲೆಯನ್ನು ಚೆನ್ನಾಗಿ ಕುಟ್ಟಿ ಓಡಲ್ಲಿ ಬಿಸಿ ಮಾಡಿ ಐದಾರು ಸಲ ಹಚ್ಚಿದರೆ ಗಂಟು ಕರಗುತ್ತದೆ.

ಹಲ್ಲು ನೋವು ದವಡೆ ನೋವಿಗೆ ಎಲೆಗಳನ್ನು ನೀರಿನಲ್ಲಿ ಹಾಕಿ ಕುದಿಸಿ ತಣ್ಣಗಾದ ಮೇಲೆ ತಲೆ ಸ್ನಾನ ಮಾಡಿದರೆ ನೋವು ಕಮ್ಮಿಯಾಗುವುದು.

ಮದುರಂಗಿ ಹಚ್ಚುವುದರಿಂದ ಕೂದಲು ಉದುರುವುದಿಲ್ಲ.

ಹಿಂದೂಗಳಲ್ಲಿ ಅರಶಿನ ಕುಂಕುಮಕ್ಕಿರುವ ಮಹತ್ವ ಗಂಧ ಮದುರಂಗಿಗಿದೆ.

ಗೌಡರ ಮದುವೆಯಲ್ಲಿ ಮದುರಂಗಿಗೆ ವಿಶೇಷ ಸ್ಥಾನವಿದೆ. 5 ಜನ ಹೆಂಗಸರು ಮದುರಂಗಿ ಸೊಪ್ಪನ್ನು ಕೊಯ್ದು ತರಲು ಗಿಡದ ಹತ್ತಿರ ಹೋಗುತ್ತಾರೆ. ಗಿಡದ ಬುಡಕ್ಕೆ ನೀರನ್ನು ಹೊಯ್ದು ಎಲೆ ಅಡಿಕೆ ಇಟ್ಟು ಕೊಯ್ಯಲು ಪ್ರಾರಂಭಿಸಿ ಬಾಳೆಲೆಗೆ ಹಾಕುತ್ತಾರೆ. ಅದನ್ನು ಕಲ್ಲಿನಿಂದ ಅರೆದು ನಿಂಬೆ ಹುಳಿ ಸೇರಿಸಿ ಸ್ವಲ್ಪ ಹೊತ್ತು ಇಟ್ಟು, ನೆಲ್ಲಕ್ಕಿಯಲ್ಲಿ ಕುಳಿತ ವಧುವಿನ ಕೈಗೆ ಹಚ್ಚುತ್ತಾರೆ. ಗೌಡರಲ್ಲಿ ಬಲದ ಕೈಗೆ ಸೂರ್ಯ ಹಾಗೂ ಎಡದ ಕೈಗೆ ಚಂದ್ರನ ಗುರುತನ್ನು ಸುಣ್ಣದ ಕಡ್ಡಿಯಿಂದ ಬರೆದು ಹಚ್ಚುತ್ತಾರೆ. 10 ನಿಮಿಷ ಬಿಟ್ಟು ತೊಳೆದರೆ ಮದುರಂಗಿಯ ಚಿತ್ರಕಲೆ ಬರುತ್ತದೆ.

ಇದು ಪುರಾತನ ಸಂಸ್ಕೃತಿಯಾದ್ದರಿಂದ ಕೃಷ್ಣ ದ್ರೌಪದಿಗೆ ಹೇಳುವ ಮಾತಿನ ಧಾಟಿ:- ನಿನ್ನ ಮುಸುಕು ವಸ್ತ್ರದಲ್ಲಿ ಕಟ್ಟಿದ ಜೋಡ್ಹಣವನ್ನು ಕೊಟ್ಟು ಮದುರಂಗಿ ತರಿಸಿಕೋ ಎಂಬ ಧಾಟಿಯನ್ನು ಸೋಬಾನೆಯ ಮೂಲಕ ಕೇಳಿದರೇನೆ ಸೊಗಸು.

ಸೋಬಾನೆ :

ಬಾಗ್ಯದ ಮದುರಂಗಿ ಮುಟ್ಟಿ ಶರಣವ ಮಾಡಿದರು
ಎಸಳು ಎಸಳು - ಸೊಪ್ಪು ತೆಗೆದಾರು - ಚಿನ್ನದ ಹರಿವಾಣದೊಳಗೆ
ತುಂಬಿರಿಸಿ - ಪಟ್ಟೆವಸ್ತ್ರಗಳನು ಮುಚ್ಚಿ- ಅಂದವುಳ್ಳ ಅರಮನೆ
ಮುಂದಾಗಿ ಭಾಗ್ಯದ ಬಯಲೊಳಗೆ ನಡೆದಾರು

ಮಡಿಲಕ್ಕಿ

ಪ್ರ : **ಮಡಿಲಕ್ಕಿ ಎಂದರೇನು? ಗೌಡರಲ್ಲಿ ಇದನ್ನು ಯಾವ ಸಂದರ್ಭದಲ್ಲಿ ಉಪಯೋಗಿಸುತ್ತಾರೆ?**

ಉ : ಹೆಣ್ಣಿಗೆ ಧಾರೆಯ ಸಂದರ್ಭ ಗಂಡಿನ ಕಡೆಯಿಂದ ತರುವ ವಸ್ತುಗಳ ಪೈಕಿ ಇದು ಮುಖ್ಯವಾಗಿರುತ್ತದೆ. ಗಂಡು ಹೆಣ್ಣಿಗೆ ತರುವ ಓಲೆ, ಮೂಗುತಿ, ಕಾಲುಂಗುರ, ತಾಳಿ ಕರಿಮಣಿ ಬಿಚ್ಚೋಲೆ ಅರಶಿನ ಕುಂಕುಮ ಸೀರೆ ರವಿಕೆಯೊಡನೆ ಮಡಿಲಕ್ಕಿ ಬಹಳ ಮಹತ್ವದ ವಸ್ತು ಆಗಿರುತ್ತದೆ. ಧಾರೆಯ ಉಡುಪನ್ನು ಧರಿಸಿದ ನಂತರ ಹೆಣ್ಣಿನ ಸೊಂಟಕ್ಕೆ ಕಟ್ಟುತ್ತಾರೆ.

ಪ್ರ : ಮಡಿಲಕ್ಕಿ ಎಂದರೆ ಅದರಲ್ಲಿ ಏನೇನು ಇರುತ್ತದೆ?

ಉ : ಒಂದು ಚೆಕ್ ವಸ್ತ್ರದಲ್ಲಿ ಒಂದು ಸೇರು ಅಕ್ಕಿ, ತೆಂಗಿನಕಾಯಿ, 5 ಬಾಳೆಹಣ್ಣು (ಅಥವಾ ಒಂದು ಚಿಪ್ಪು) ವಿಳ್ಯದೆಲೆ ಅಡಿಕೆ, ಕರಿಮಣಿ, ಬಿಚ್ಚೋಲೆ ಇರುತ್ತದೆ. ಇದನ್ನು ಧಾರೆ ಸಮಯದಲ್ಲೂ ಗಂಡಿನ ಮನೆ ಹತ್ತುವಾಗಲೂ ಕಟ್ಟಿ ನಂತರ ನಲ್ಲಕ್ಕಿ ದೀಪದ ಹತ್ತಿರ ಇಡುತ್ತಾರೆ. ಅಂದಿನ ನೀರು ಮದುವೆ ಸಮಯದಲ್ಲಿ ಪಾಯಸ ಮಾಡಿ ಮುಖ್ಯವಾಗಿ ಗಂಡಿಗೂ ಮನೆಯವರೆಲ್ಲರಿಗೂ ಬಡಿಸುತ್ತಾಳೆ. ಪಾಯಸ ಮತ್ತು ಹಪ್ಪಳ ಭಾರತೀಯ ಸಂಪ್ರದಾಯ ಊಟವಾಗಿರುತ್ತದೆ.

ಪ್ರ : ಇದೆಲ್ಲ ಯಾಕೆ ಮತ್ತು ಇದರ ಅರ್ಥ?

ಉ : ಮಡಿಲಕ್ಕಿ ಹೆಣ್ಣಿನ ಮುತ್ತೈದೆ ತನವನ್ನೂ ಸೂಚಿಸುವ ವಸ್ತುವಾಗಿದೆ. ಯಾಕೆಂದರೆ ಅಂದಿನಿಂದ ಆಕೆಯ ಹಕ್ಕನ್ನು ತಿಳಿಸುವ ಪೂರ್ವ ಸಂಸ್ಕೃತಿಯಾಗಿದೆ. ಮುತ್ತೈದೆತನದ ಚಿಹ್ನೆಗಳೆಲ್ಲಾದ ಎಲ್ಲಾ ದ್ರವ್ಯಗಳನ್ನು ವಧುವಿನ ಮಡಿಲಿಗೆ ತುಂಬಿ ಅವಳ ಹೊಸ ದಾಂಪತ್ಯದ ಹೊಸ ಬದುಕಿಗೆ ಶುಭ ಕೋರುವ ಮತ್ತು ಫಲಶಕ್ತಿಯ ಸಂಕೇತದ ಪ್ರತೀಕವಿದು. ಧಾರೆ ಮುಗಿದ ಮದು ಮಕ್ಕಳನ್ನು ಒಳಕರೆದು ನೆಲ್ಲಕ್ಕಿ ಹಸೆ ಮೇಲೆ ಕೂರಿಸಿ, ವೀಳ್ಯ ಹಣ್ಣು ಹಾಲು ಕೊಟ್ಟು ದೃಷ್ಟಿಗಾರತಿಯನ್ನು ಮಾಡಿ ಕೂಡಿ ಬಾಳಬೇಕು ಎಂದು ಹರಸುವುದೇ ಮಡಿಲಕ್ಕಿಯ ಅರ್ಥ. ಇದರ ಬಗ್ಗೆ ಕೂಡಾ ಒಂದು ಸೋಬಾನೆ ಇರಬೇಕಲ್ಲ?

ನಾವು ತಂದಿದೇವೆ ಮಡಿಲಕ್ಕಿ ಸೋಬಾನವೆ ||
ನಿನ್ನ ಅತ್ತೆಮ್ಮ ಕಳುಹಿದ ಮಡಿಲಕ್ಕಿ ಮುತ್ತಿನ ಬಟ್ಟು ಸೋಬಾನವೇ
ನಿನ್ನ ಅತ್ತೆಮ್ಮ ಕಳುಹಿದ ಒಂದು ಸೇರು ಸಣ್ಣಕ್ಕಿ ಸೋಬಾನವೇ
ಭಾಗ್ಯದ ಸೊಸೆ ಮುದ್ದು ಮಡಲೊಡ್ಡು ಸೋಬಾನವೇ ... ಎಂದು ಹಾಡುತ್ತಾ ಅವಳ ಬದುಕಿಗೆ ಶುಭ ಕೋರುವ ಮತ್ತು ಹೆಣ್ಣು ಫಲವತಿಯಾಗಲೆಂಬ ಆಶಯ - ಕೂಡಿ ಬಾಳಬೇಕು ಎಂಬುದೆ ಇದರ ಉದ್ದೇಶವಾಗಿರುತ್ತದೆ. ಇದನ್ನು ಸಂಪ್ರದಾಯ ಶಾಸ್ತ್ರ ಪ್ರಕಾರ ಮುತ್ತೈದೆಯರು ಮಾಡುತ್ತಾರೆ. ಮನೆಗೆ ಹತ್ತಿದ ನಂತರ ಆಕೆಯೆ ಪಾಯಸ ಮಾಡಿ ಎಲ್ಲರಿಗೂ ಬಡಿಸಿದ ನಂತರ ಆಕೆ ತಾನು ಬಡಿಸಿದ್ದಕ್ಕೆ ಗಂಡಿನೊಡನೆ ಸಟುಗದ ಹಣ ಕೇಳುತ್ತಾಳೆ.

ಮಡಿಲಕ್ಕಿ ತುಂಬಿಸುವ ಸೋಬಾನೆ

ಸಿದ್ಧಿ ವಿನಾಯಕ ಚಿನ್ಮಯ ರೂಪ । ರುದ್ರಕುಮಾರ ಶ್ರೀ ಜಗದ್ಘೋರಾಜಿತ
ಜನರಿಗೆ ಮುದವೀವ ವಿದ್ಯಾಗಜಮುಖನೆ॥

ಬಲಗೊಂಬೆ ಹೇಮವದು ಜಗುಲಿಯ ಮೇಲೆ
ರುಕ್ಮಿಣಿ ವಿನಯ ಮುತ್ತು ಫಲ ಬಲದೊಳಪ್ಪಿರಲು ।
ಕಡಿದ ಮುತ್ತಿನ ಹರಿವಾಣದಿ ತೆಂಗಿನಕಾಯ ಫಲ ತಂದು ಯಿರುಸ್ಯಾರು ॥

ಜಗುಲಿಯ ಮೇಲೆ ರುಕ್ಮಿಣಿ ದೇವಿ ಪ್ರಾಣ ವಲ್ಲಭನ ಬಲದೊಳಪ್ಪಿರಲು
ಕಡಿದ ಮುತ್ತಿಸ ಹರಿವಾಣದಿ ತೆಂಗಿನಕಾಯಿ ಫಲ ತಂದುಯಿರುಸ್ಯಾರು ॥

ಸುರನಾರಿಯರು ಎಲ್ಲರೊಂದಾಗಿ ದೊರೆರಾಯನಿಗೆ
ಎದುರಾಗಿ ನಿಂದು । ಮಡದಿ ಮಹಾಲಕ್ಷ್ಮಿಗೆ
ಉಡಿಯ ತುಂಬಿರೆಂದು ನುಡಿದಾರು ॥

ಶ್ರೀ ಹರಿಯಾಡಿದ ಮಾತನೆ ಮೆಚ್ಚಿ ಕಾಂತೆ
ರುಕ್ಮಿಣಿ ದೇವಿ ಕಡು ಹರುಷದಿ ನಗುತ
ಪೀತಾಂಬರದ ಮಡಿಲ ಹಿಡಿದಾಳು ॥

ಕೊಂಬೆಯಿಂದ ಕೊಯ್ದಾಳೆ ಫಲ। ಇಂಬಾಗಿ ಬೆಳೆದ
ಜಂಬೂ ನೇರಳೆ । ಹೂ ಹಣ್ಣು ಫಲ ಎಂದು ತುಂಬಿದಾನೆ ಉಡೀಯಾಗ॥
ಜಂಬೂ ನೇರಳೆ ಹಣ್ಣು। ಒಂಬತ್ತು ಬಾಲರ ಪಡೆಯೆಂದು ತಾನೆ ತುಂಬಿದಾನು ಉಡಿಲಾಗ

ಕನ್ನಡ ನಾಡಿನ ಮದುವೆ ದಿಬ್ಬಣದ ಒಂದು ವರ್ಣನೆ

ಮೂವತ್ತು ಗಾವುದ್ದ ದವರೆಗೆ ಮುತ್ತಿನ ಚಪ್ಪರ ಆ ಚಪ್ಪರದ 2 ಬದಿಗಳಲ್ಲಿ ಚಿನ್ನದಂತೆ ಹೊಳೆಯುವ ಸಾಲುದ್ದಕ್ಕೂ ಬಾಳೆಯ ಮರಗಳಲ್ಲಿ ಹೂ ತುಂಬಿದ ಬಾಳೆಗೊನೆಗಳು. ಅದರಲ್ಲಿ ಅಡಿಕೆ ಮರದ ಹಿಂಗಾರ ಹೂವುಗಳ ಚಿಗುರುಗಳ ಸಾಲುಗಳಲ್ಲಿ ನಡೆದು ಬರುವ ಮುತ್ತೈದೆಯರ ಸಾಲು. ವಿಸ್ತಾರವಾದ ಬಂಧುಗಳು -ಚಪ್ಪರದೊಳಗೆ ಮೂರು ಜೋಡಿನ ವಾದ್ಯಗಳು ಆರು ಜೋಡಿನ ಕೊಳಲು ಮೈಲುದ್ದ ಚಿನ್ನದ ಬಣ್ಣದ ಅಡಿಕೆ ಹಿಂಗಾರದ ಹೂಗಳು ಚಪ್ಪರದ ಮುಂದುಗಡೆ ಹಾರಾಡುವ ಗುಬ್ಬಿ ಹಕ್ಕಿಗಳು -ಧಾರೆಗೆಂದು ಬಂದು ನಿಂತ ಮದುಮಗಳ ಕೈಯಲ್ಲಿ ತುಳಸಿದಳಗಳು ನೂಲಿನ ಜನಿವಾರವನ್ನು ಹೆಗಲಲ್ಲಿರಿಸಿದ ಹಾರುವರು ಕಾವೇರಿ ಹೊಳೆಯಲ್ಲಿ ಮಿಂದು ಮಡಿಯುಟ್ಟು ಬೆಳ್ಳಿಯ ಚೆಂಬಿನಲ್ಲಿ ಪಾತಾಳದಲ್ಲಿದ್ದ ಪನ್ನೀರನ್ನು (ನೆಲದೊಳಗಿನಿಂದ ಬರುವ ಜಲ) ತುಂಬಿಸಿಕೊಂಡು ಬರುವ ಹಾರುವರು ಕೈಯಲ್ಲಿ 2 ವನದಲ್ಲಿದ ಪುಷ್ಪಗಳ ಮಾಲೆಗಳನ್ನು ಹಿಡಿದು ಗಂಧದ ಭರಣಿಯಲ್ಲಿ ಗಂಧವನ್ನು ತುಂಬಿಸಿಕೊಂಡು ತಿಂಗಳ ಬೆಳಕಿನಲ್ಲಿ ನಡೆದು ಬರುವ ಹಾರುವರು ಇದು ನಮ್ಮ ಸಂಸ್ಕೃತಿ ಸಂಪ್ರದಾಯದ ಮದುವೆ ಧಾರಾಪದ್ಧತಿ.

ಚಪ್ಪರದ ವರ್ಣನೆ:-

12 ಕಂಬಗಳ ಬುಡದಲ್ಲಿ 12 ಮಣ್ಣಿನ ಗುಂಭಗಳು, ಗುಂಭದ ಬದಿಯಲ್ಲಿ 12 ವೀಳ್ಯವಿಟ್ಟು ಕಂಬಗಳ ಅಂದಕೆ ಪಟ್ಟೆ ರೇಸಿಮೆ ಸುತ್ತಿ ಕಂಬಗಳ ಸೆರಗಿಗೆ ಮಾವುನ ತೋರಣ ಅದರ ಮೇಲಿನ ಹೊದಿಕೆ ಹಲಸಿನ ಎಲೆ ಇದು ನಮ್ಮ ಗೌಡ ಸಾಂಪ್ರದಾಯಿಕ ಮದುವೆಯ ಸೀತಾವಳಿ ಚಪ್ಪರ.

ಹಬ್ಬ

ಸಾಮಾಜಿಕ ಹೊಂದಾಣಿಕೆಗಾಗಿ ವಿಶೇಷ ದಿನಗಳಲ್ಲಿ ನಡೆಸುವ ಸಂಪ್ರದಾಯಗಳೇ ಹಬ್ಬಗಳು. ಹಬ್ಬವು ಸಾಮಾನ್ಯವಾಗಿ ಸಾಮೂಹಿಕ ಸ್ವರೂಪದ ಆಚರಣೆಯಾಗಿರುತ್ತದೆ. ತನ್ನ ಬದುಕಿನ ಆಗು ಹೋಗುಗಳಿಗೆ ದೈವವೇ ಕಾರಣವೆಂದು ನಂಬಿದ ಮಾನವ ನಿಸರ್ಗವನ್ನು ನಿಯಂತ್ರಿಸುವ ಮತ್ತು ದೇವರನ್ನೊಲಿಸಿಕೊಳ್ಳುವ ಸತತ ಪ್ರಯತ್ನ ನಡೆಸಿದುದರ ಫಲವಾಗಿ ಹಬ್ಬಗಳು ಹುಟ್ಟಿಕೊಂಡುವು. ಗದ್ದೆ ತೋಟ ಮನೆ ಮಾರುಗಳ ಕ್ಷೇಮ ಸಾಧನೆಗೆ ಅಡ್ಡಿ ಆಂತಕಗಳನ್ನೊಡ್ಡುವ ದುಷ್ಟ ಶಕ್ತಿಗಳಿಂದ ಪಾರುಮಾಡಿ ತನ್ನನ್ನು ರಕ್ಷಿಸುವ ದೈವವನ್ನು ಸಂಪ್ರೀತಗೊಳಿಸುವ ಮತ್ತು ಪ್ರಾರ್ಥನೆ ಸಂಪ್ರದಾಯಗಳಿಂದ ಭೂಮಿಯ ಫಲವತ್ತತೆಯನ್ನು ಹೆಚ್ಚಿಸಿಕೊಳ್ಳುವ ಉದ್ದೇಶವೇ ಹಬ್ಬಗಳಿಗೆ ಮೂಲ. ಹಬ್ಬ ಹುಣ್ಣಿಮೆಗಳಲ್ಲಿ ಆಚರಿಸುವ ಉಪವಾಸವು ಫಲಶಕ್ತಿ ವಿಧಿ ಬೆಳೆ ಹುಲುಸಾಗಲೆಂದು ಆಚರಿಸುವ ಆಚರಣೆ ಸಮೃದ್ಧ ಬೆಳೆ ಹೊಂದುವ ತಮ್ಮ ಆಸೆ ನಿಜವಾದಾಗ ಆ ಸಂತೋಷದಲ್ಲಿ ಪಾಲ್ಗೊಳ್ಳಲು ಬೇರೆಯವರನ್ನು ಆಹ್ವಾನಿಸುವುದು ಮಾಂತ್ರಿಕ ಪ್ರಕ್ರಿಯೆ. ಕೃಷಿಯನ್ನೇ ಪ್ರಧಾನ ವೃತ್ತಿಯಾಗಿ ಮಾಡಿಕೊಂಡಿರುವ ಜನರಿಗೆ ಬಿಡುವು ಬಹಳ ಕಡಿಮೆ. ಇಂತಹ ಬದುಕಿನಲ್ಲೂ ತಮ್ಮ ಪರಿಸರದಲ್ಲಿ ಸಂತೋಷದಿಂದಿರಲು ಕೆಲವು ದಿನಗಳನ್ನು ಗುರುತಿಸಿಕೊಂಡು ಆಚರಿಸುವ ದಿನಗಳೇ ಹಬ್ಬಗಳು ಇವು ವಿಧಿವತ್ತವಾದ ಕ್ರಿಯೆಗಳನ್ನೊಳಗೊಂಡಿದೆ. ಸಮಾಜ ನಿಯಮಿಸಿದ ಕೆಲವು ಕಟ್ಟಳೆಗಳನ್ನು ಆಧರಿಸಿ ತಮ್ಮ ಮೂಲರೂಪದಲ್ಲಿ ಆಚರಣೆಗೊಳ್ಳುತ್ತದೆ.

ಹಚ್ಚೆ

ಹಚ್ಚೆ ಮಲೆನಾಡಿನ ಸಂಪ್ರದಾಯ. ಇದಕ್ಕೆ ಹಸುರು ಹೊಯ್ಯುವುದು ಎನ್ನುತ್ತಾರೆ. ಹಚ್ಚೆ ಹಾಕಿದ ನಂತರ ಅದನ್ನು ಯಾವ ಕಾಲಕ್ಕೂ ಅಳಿಸಲಾಗುವುದಿಲ್ಲ. ಹಚ್ಚೆ ಹಾಕುವ ಹೆಂಗಸರು ಅವರದೇ ಆದ ರೀತಿಯಲ್ಲಿ ಹಾಡುಗಳನ್ನು ಹಾಡುತ್ತಾ ನೋವನ್ನು ಮರೆಸುವ ಈ ದೃಶ್ಯ ವಿಶೇಷ ರೀತಿಯದು. ಜಗತ್ತಿನಾದ್ಯಂತ ವಿವಿಧ ಜನಾಂಗಗಳಲ್ಲಿ ಪ್ರಾಚೀನ ಕಾಲದಿಂದ ಬೆಳೆದು ಬಂದ ಜನಪ್ರಿಯ ಸಂಪ್ರದಾಯ ಹಚ್ಚೆ. ಇದಕ್ಕೆ ಸುಮಂಗಲಿ ಎನ್ನುವ ಅರ್ಥವಿದೆ. ಹಚ್ಚೆ ಬದುಕಿರುವಾಗಲೂ ಸತ್ತ ನಂತರವೂ ತಮ್ಮೊಡನೆ ಬರುವುದೆಂಬ ನಂಬಿಕೆ ಹಚ್ಚೆ ಹಾಕಿಸಿಕೊಂಡವರ ಕೈಯೊಳಗಿನ ಅಡುಗೆ ಹಳಸುವುದಿಲ್ಲವೆಂಬ ನಂಬಿಕೆ ಗ್ರಾಮೀಣ ಜನರಲ್ಲಿ ನೆಲೆಯೂರಿದೆ. ಇದಕ್ಕೆ ಗಾದೆಯೊಂದು ಹೀಗಿದೆ. ಅತ್ತೆ ಬೈದರೆ ಒಪ್ಪ -ಮಾವ ಬೈದರೆ ಒಪ್ಪು ಹಚ್ಚೆಯ ಬೊಟ್ಟು ಗೆಣೆಸೊಪ್ಪು. ಒಂದು ಸೌಂದರ್ಯ ವರ್ಧಕ ಸಾಧನೆ ಹಾಗೂ ಮಹಿಳೆಯ ಅಭಿಜಾತ ಕಲೆಯ ಧ್ಯೋತಕವೂ ಆಗಿದೆ. ಕೊರವಂಜಿಗಳು, ದೊಂಬರು ಬೆಸ್ತರ ಜನಾಂಗಗಳ ಹೆಣ್ಣು ಮಕ್ಕಳು ಸೂಜಿಗಳನ್ನು ಜೋಡಿಸಿ ಕಟ್ಟಿದ ಉಪಕರಣ ಹಾಗೂ ಗಿಡ ಮೂಲಿಕೆಗಳಿಂದ ತಯಾರಿಸಿದ

ದ್ರವ್ಯಗಳನ್ನು ಬಳಸಿ ಹಣೆ ಕಪೋಲ ಕೈಕಾಲು ದೇಹದ ವಿವಿಧ ಭಾಗಗಳ ಮೇಲೆ ಬಿಡಿಸುವ ಸರಳ ಸೂಕ್ಷ್ಮ ಚಿತ್ರಗಳು ನೋವಿನ ಅರಿವಾಗದಂತೆ ಅವರ ಹಾಡುಗಳು ಮಹಿಳೆಯ ಕಲಾಭಿರುಚಿಗೆ ಸಾಹಿತ್ಯವೂ ಸೃಷ್ಟಿಯಾಗುತ್ತಾ ಬಂತು. ಹೀಗೆ ಪ್ರತಿ ಹಂತದಲ್ಲೂ ಪ್ರತಿ ಜನಾಂಗದಲ್ಲೂ ಒಂದಲ್ಲ ಒಂದು ವಿಧದಿಂದ ಸಾಹಿತ್ಯ ರಚನೆಯಾಗುತ್ತಲೆ ಬಂತು. ಸಂಪ್ರದಾಯವನ್ನು ಕುರಿತ ಒಗಟುಗಳು ಆ ಸಂಪ್ರದಾಯದ ಮೇಲೆ ಬೆಳಕು ಚೆಲ್ಲುತ್ತವೆ. ಅಕ್ಕನ ಕೈಗೆ ಪಚ್ಚೆ ಕಡಗ ಹಾಕೋರುಂಟು ತೆಗಿಯೋರಿಲ್ಲ ಇದು ಹಚ್ಚೆಯ ಮೇಲಿನ ಒಗಟು ಸಂಪ್ರದಾಯವಾಗಿ ಬಂದಿರುತ್ತದೆ.

ಹೀಗೆ ಬುದ್ಧಿಯ ಕಸರತ್ತು ಚಮತ್ಕಾರಗಳ ಮೂಲಕ ಆನಂದವನ್ನು ಒದಗಿಸುವ ಉದ್ದೇಶವಿರುವ ಒಗಟುಗಳು ಸಾಮಾನ್ಯವಾಗಿ ಸಾಂಸ್ಕೃತಿಕ ಅಂಶಗಳನ್ನು ಪ್ರತಿನಿಧಿಸುವುದು ಎಂದು ನಂಬಲಾಗಿದೆ. ಕುಂಕುಮದ ಬಗ್ಗೆ ಹೇಳುವುದಾದರೆ ಕುಂಕುಮ ಧರಿಸುವುದು ಸ್ತ್ರೀ ಪುರುಷರಿಗೆ ಕಡ್ಡಾಯ -ಕುಂಕುಮ ಮಹತ್ವದ ವಸ್ತು ಕುಂಕುಮ ದೈನಂದಿನ ಆಚರಣೆಯಲ್ಲಿ ಒಂದು ಭಾಗ -ಮಾತ್ರ ಹೆಣ್ಣಿಗೆ ಕುಂಕುಮವೇ ಜೀವನದ ಅಂಗ ಎಂದಾದರೆ ತೂತಿಲ್ಲದ ಒಡವೆ ದೇವ್ರಿಗೂ ಬೇಕು ದಿಂಡ್ರಿಗೂ ಬೇಕು ಒಗಟು ಅರ್ಥಪೂರ್ಣವಾದುದ್ದು.

ಘಮ ಘಮ ಗರತಿ ಎಲ್ಲೆಲ್ಲಿರ್ತಿ ಪ್ಯಾಟೆ ಸೀರೆಯಲ್ಲಿರ್ತಿ ಕರ್ಪೂರ ಉಂಡೆಯನ್ನು ಕುರಿತಾದರೆ ಉದ್ದುದ್ದವನೆ ಉರಿಮೊಗದವನೆ ಎದ್ದು ಬಾರೊ ಮುದ್ದು ಕುಮಾರ ಎಂದು ಹಸಿ ಮೆಣಸಿನ ಕಾಯಿಗೆ ಬಂದಿರುವ ಒಗಟಿನ ಸಂಪ್ರದಾಯ ಬಲು ಸೊಗಸು ಕರ್ನಾಟಕ ಸಂಸ್ಕೃತಿಯಲ್ಲಿ ಮಲೆನಾಡಿನ ಗ್ರಾಮೀಣ ಜನರ ಸಂಪ್ರದಾಯ ಭರಿತ ಸಾಹಿತ್ಯ ರಚನೆ ಕನ್ನಡದ ಸಾಹಿತ್ಯರಂಗದಲ್ಲಿ ಅತ್ಯಮೂಲ್ಯ ಕಂಪಾಗಿದೆ.

ನೆರ್‌ದ ಮೊದುವೆ (ಋತು ಶಾಂತಿ)

'ಹತ್ತ್ ಕುಟುಂಬ ಹದ್‌ನೆಂಟ್ ಗೋತ್ರ'ದ ಒಂದು ಗೌಡ ಕುಟುಂಬಲಿ ಪ್ರಥಮವಾಗಿ ಗೂಡೆ ಮೈನೆರ್‌ವರೆ (ಪ್ರಾಯಕ್ಕೆ ಬಂದರೆ) ಆ ಕುಟುಂಬಕ್ಕೆ 16 ದಿನ ಸೂತಕ ಇದ್ದದೆ. ಯಾವ ಶುಭ ಕಾರ್ಯ ಮಾಡಿಕಾಗದ್. ಐನ್ ಮನೆಲಿ ದೀಪ ಮಡ್ಗಿಕಾಗದ್. ದೇವಸ್ಥಾನಕ್ಕೆ ಹೋಕಾಗದ್.

ಪ್ರಥಮವಾಗಿ ಮೈನೆರ್‌ದ ಗೂಡೆನ ಕೈಲಿ ಒಂದು ಚಾಕ್ ಅಥವಾ ಕುಂಞಿಕತ್ತಿ ಕೊಟ್ಟ್, ಕರ್‌ಕಂಡ್ ಹೋಗಿ ಫಲಬರುವ ಮರದ ಬುಡಲಿ ಕೂರ್ಸೋಕು. ಮುತ್ತೈದೆಗಳ್‌ನ ಬಾಕೆ ಹೇಳೋಕು. ಮತ್ತೆ ಅವಳ್ನ ಅಂಗಳಕೆ ಕರ್‌ಕಂಡ್ ಬಂದ್ ಒಂದು ಮಣೆ ಮೇಲೆ ಮೂಡ ದಿಕ್ಕ್‌ಗೆ ಮೊಕಮಾಡಿ ಕೂರ್ಸಿ, ಎಣ್ಣೆ ಚರ್‌ಕ್‌ಲಿ ತೆಂಗಿನೆಣ್ಣೆ ಹೊಯ್ದ್ ಗರ್‌ಕೆ ಹುಲ್ಲ್‌ಂದ ಐದ್ ಜನ ಮುತ್ತೈದೆಗ ತಲೆಗೂ ಕಾಲಿಗೂ ಎಣ್ಣೆ ಹಾಕಿ ಶಾಸ್ತ್ರ ಮಾಡೋಕು. ತಣ್ಣೀರ್ ಮತ್ತೆ ಐದ್ ಚೊಂಬು, ಒಂದ್ ತಾಮ್ರ ಬಿಂದಿಗೆಲಿ ಮಾವುನೆ ಸೊಪ್ಪ್‌ಲಿ ಗೂಡೆನ ತಲೆ ಮೇಲೆ ಚಿಮ್‌ಕಿಸಿ, ತಲೆಗೆ ಹೊಯ್ಯೊಕು. ಮತ್ತೆ ಮೀದ್ ಮಡಿ ಬಟ್ಟೆ ಉಟ್ಟ್ 5 ದಿನ ಮನೆಂದ ಹೊರಗೆ ಕೊಟ್ಟೆಗೆಲಿ ಮಲ್ಗೋಕು. ಈ ದಿನ ಅಕ್ಕಿ ಹೊರ್ದ್ ಬೀಸಿ 'ತೋಳ್ಸಿನ ಹಿಟ್ಟ್' ಮಾಡಿ ಗೂಡೆಗೆ ಕೊಟ್ಟವೆ. ಮತ್ತೆ' ಮುದ್ದೆ ಹಿಟ್ಟ್' ಮಾಡಿ

ಕೊಟ್ಟವೆ. 7 ದಿನ ಗೂಡೆ ಯಾವ ಕೆಲ್ಸ ಮಾಡಿಕಾಗದ್. ಮುಕ್ಕಾಲ್ ಮ್ಯಾಲೆ, ಕುರ್ಚಿ ಮ್ಯಾಲೆ ಕೂರಿಕಾಗದ್ ಅಪ್‌ಗೆ ಮಾಡಿಕಾಗದ್. ಕತ್ತಿಲಿ ಕೆಲ್ಸ ಮಾಡಿಕಾಗದ್. ಮಡ್‌ಕೆ ಸೆಡೆ, ಮೊರ, ವನಲೆ, ವನ್‌ಕೆ, ಕತ್ತಿ, ಚೀಪೆ ಇದನ್ನೆಲ್ಲಾ ಮುಟ್ಟಿಕಾಗದ್.

7ನೇ ದಿನ ಸಗ್‌ಣಿ ನೀರ್ ಮತ್ತೆ ಪುಣ್ಯ ನೀರ್ ತಂದ್ ಮನೆ ಶುದ್ಧ ಮಾಡೋಕು. ಗೂಡೆ ಮೀದ್ ಬಂದ್ ನೆಲ್ಲಕ್ಕಿ ಅಡಿಲಿ ಮುಕ್ಕಾಲ್ ಮೇಲೆ ದೀಪ ಮಡ್ಗಿ ಬಂದ್ ಮೊಣ್ಣ್‌ನ ಮಡ್‌ಕೆ ಅದರೊಳಗೆ ಚಿಪ್ಪಿಸೆಡೆ, ಮೊರ, ವನಲೆ, ವನ್‌ಕೆ, ಕತ್ತಿ, ಚೀಪೆ, ಮುಕ್ಕಾಲ್ ಇದೆಲ್ಲಾ ಜೋಡ್ಸಿ ಮಡ್ಗಿ, ದೀಪಕ್ಕೆ, ಅಕ್ಕಿ ಹಾಕಿ, ಈ ಎಲ್ಲಾ ವಸ್ತುಗಳ್‌ನ ಮುಟ್ಟಿ ನಮಸ್ಕಾರ ಮಾಡಿಕಂಡ್ ಹಿರಿಯವರ ಕಾಲ್ ಹಿಡ್‌ಕನೋಕು. ಈ ಶಾಸ್ತ್ರಕ್ಕೆ"ಮಡ್‌ಕೆ ಹಿಡ್ಸುದು"ತೇಳ್ವೆ. ಮತ್ತೆ 16ನೇ ದಿನ ಮಡಿವಾಳ್ತಿನ ಬಾಕೆ ಹೇಳಿ ಮಾಡುವ ಕಾರ್ಯಕ್ರಮ - ಆ ದಿನ ಊರವು ಮತ್ತೆ ನೆಂಟ್ರ್‌ಗಳ್‌ನ ಬಾಕೆ ಹೇಳಿ ಗೂಡೆನ ನೆರ್‌ದ ಮೊದುವೆ ಮಾಡುವೆ. ಈ ದಿನ ಸಪುಣ್ಯ ನೀರ್ ತಂದ್ ಮನೆ ಮತ್ತೆ ಅಂಗಳನ ಸಗ್‌ಣಿ ಹಾಕಿ ಸಾರ್ಸಿ, ಪುಣ್ಯ ನೀರ್ ಹಾಕಿ ಶುದ್ಧಮಾಡೊಕು. ಮಡಿವಾಳ ಕಾರನೀರ್ ಹಾಕಿ ಶುದ್ಧ ಮಾಡ್ಸ ಮ್ಯಾಲೆ, ಮಡಿವಾಳ ಅಂಗಳಲಿ ಒಂದು ವಣ್‌ಕೆ ಇಟ್ಟ್ ಅದರ ಸುತ್ತ ಮಂಡಲ ಬರ್ದವೆ. ಮತ್ತೆ ಅದರ ಮ್ಯಾಲೆ ಒಂದ್ ಕೊಡಿ ಬಾಳೆಲೆ ಮಡ್ಗಿ, ಗೂಡೆ ಮಡಿವಾಳ್ತಿ ಕೊಟ್ಟ ಬೆಳಿಸೀರೆ ಉಟ್ಟ್, ಐವ್ ಎಲೆ ಒಂದ್ ಅಡಿಕೆ ತಿನ್ನೋಕು ಮತ್ತೆ ಗೂಡೆನ ಮಂಡಲದ ಮೇಲೆ ಇಟ್ಟ ಬಾಳೆಲೆ ಮ್ಯಾಲೆ ಬಾಳೆಲೆ ಮದ್ಯ ನರ್‌ಂಬು ಮೆಟ್ಟದೆ ನಿಲ್ಲೋಕು. ಮತ್ತೆ ಮಡಿವಾಳ್ತಿ ಬೆಳಿನೂಲ್‌ನ ಜೆಳ್ಳಿ ಉಂಗುರಲಿ ಗೂಡೆನ ಕುತ್ತಿಗೆಂದ ಕಾಲ್‌ಗಂಟ 3 ಸುತ್ತು ಸುತ್ತಿ, ಬಾಯಿಲಿರುವ ಎಲೆಡಿಕೆ ಎಂಜ್‌ಲ್‌ನೆಲ್ಲಾ ಬಾಳೆಲೆಗೆ ಉಗಿಯಕು. ಮತ್ತೆ ಸುತ್ತಿದ ನೂಲ್‌ನ ತುಂಡ್ ಮಾಡಿ ಉಗ್ದ ಬಾಳೆಲೆಗೆ ಹಾಕೋಕು. ಮುಂದೆ ಒಂದ್ ಬಾಳೆಲೆ ಮಡ್ಗಿ ಅದ್‌ಕೆ ನರ ಮೆಟ್ಟದಂಗೆ ದಾಟೋಕು. ಹಿಂಗೆ 3 ಸರ್ತಿ ಹಿಂದೆ ಮುಂದೆ ದಾಟೋಕು. ಮತ್ತೆ ಉಗ್ದ ಎಂಜಿಲ್‌ನ ತಕ್ಕೊಂಡೋಗಿ ಮಡಿವಾಳ್ತಿ ಫಲ ಬರುವ ಮರದ ಬುಡಕ್ಕೆ ಹಾಕೋಕು. ಈ ಶಾಸ್ತ್ರಕ್ಕೆ "ಹೊಲೆ ತೊಲ್‌ಗ್ ಸುದುತೇಳ್ವೆ" ಮತ್ತೆ ಗೂಡೆ ಮೀದ್, ಹೊಸ ಸೀರೆ, ಆಭರಣ ತೊಡ್ಸಿ ಹೂಮುಡ್ಸಿ, ಕಾಲಿಗೆ ಕಾಲ್‌ಂಗುರ ತೊಡ್ಸಿ, ಗಂಗೆ ಪೂಜೆ ಮಾಡಿ ಒಂದು ಮಣ್ಣ್‌ನ ಮಡ್‌ಕೆಲಿ ಸೆಡೆಹಾಕಿ ನೀರ್ ತರೋಕು. ತಂದ ನೀರ್‌ನ ನೆಲ್ಲಕ್ಕಿ ಅಡಿಲಿ ಚಾಪೆ ಹಾಕಿ ಮುಕ್ಕಾಲ್ ಮ್ಯಾಲೆ ಮಡ್ಗೊಕು. ಮತ್ತೆ ದೇವರ ದೀಪಕ್ಕೆ ಅಕ್ಕಿ ಹಾಕಿ, ಅಟ್ಟಕ್ಕೆ ಅಕ್ಕಿ ಹಾಕಿ, ಹಿರಿಯವರ ಕಾಲ್ ಮುಟ್ಟಿ ನಮಸ್ಕಾರ ಮಾಡೊಕು. ತಂದ ನೀರ್‌ಲಿ ಪಾಯ್‌ಸ ಮಾಡುವೆ.

ಮತ್ತೆ ನೆಲ್ಲಕ್ಕಿ ಅಡಿಲಿ ಚಾಪೆ ಮ್ಯಾಲೆ ಗೂಡೆನ ಕೂರ್ಸಿ ಬಂದ ನೆಂಟರಿಸ್ಟರ್ ಹಣ ಕಟ್ಟಿ, ಉಡುಗೊರೆಗಳ್‌ನ ಕೊಟ್ಟವೆ. ಆ ದಿನ ಗದ್ದಳ ಅಡಿಗೆ ಮಾಡಿ ಊಟ ಮಾಡುವೆ.

ಒಂದು ಗೌಡ ಕುಟುಂಬಲಿ ಗೂಡೆ ಮೈನೆರ್‌ದರೆ ಅವಳ ನೆರ್‌ದ ಮೊದುವೆ ಮಾಡದೆ ಹರಿಸೇವೆಗೆ ಗೊನೆ ಕಡಿಯಕಾಗದ್. ಮತ್ತೆ ಅವಳ ಮೊದುವೆಗೆ ಚಪ್ಪರ ಕಂಬ ನೆಡಿಕಾಗದ್. ಐನ್ ಮನೆಗೆ ಹತ್ತಿಕಾಗದ್. ಗೂಡೆನ ಮೂಗು ಕುತ್ತದೆ ಅವಳ ದಾರೆ ಮಾಡಿಕಾಗದ್. ಮೊದುವೆ ಆಗುವವರೆಗೆ ಗೂಡೆಗ ಹೈದಂಗ ಮರದ ಕುರ್ಚಿ ಮ್ಯಾಲೆ ಕೂರಿಕಾಗದ್. ಗೂಡೆ ಮೈನೆರ್‌ವ ಸಮಯನ ಜ್ಯೋತಿಷ್ಯರಲ್ಲಿ ನೋಡ್ಸೊಕು ಇದ್ ತುಂಬಾ ಮುಖ್ಯ.

ಹೆರಿಗೆ ಮತ್ತೆ ಕೂಸುನ ತೊಟ್ಲ್‌ಗೆ ಹಾಕುವ ಕ್ರಮ

ಮಾತ್‌ಕತೆ : ಒಂದು ಹೆಣ್ಣ್‌ಗೆ ಚೊಚ್ಚಲ್ ಬಾಣಂತನ ತೇಳ್ರೆ- ಮೊದಲನೆ ಹೆರಿಗೆ ತವ್ರುರು ಮನೆಲಿ ಆಕುತ-ಆ ಬಾಣಂತನಕ್ಕೆ ಏನೆಲ್ಲಾ ಖರ್ಚಾದೆ ಅದೆಲ್ಲಾ ತವ್ರುರು ಮನೆವೆ ಮಾಡೊಕುತ ನಮ್ಮ ಹಿರಿಯರ್ ರೂಪುಸಿಕಂಡ್ ಬಂದುಳೊ. ಅದೇ ಪ್ರಕಾರ ಅವರವರ ಅನ್‌ಕೂಲಕ್ಕೆ ತಕ್ಕಂಗೆ ಏಳ್ ತಿಂಗಳಿಗೆ ಇಲ್ಲರೆ ಒಂಭತ್ತ್ ತಿಂಗಳ್ಲೊ ತವ್ರುರು ಮನೆಂದ 5 ಜನ ಹೋಗಿ ಬಸ್‌ರಿಹೆಂಗ್ಸ್‌ನ ಕರ್‌ಕಂಡ್ ಬರುವ ಪದ್ಧತಿ ಇಂದಿಗೂ ನಡಿತಾವುಟ್ಟು.

ಪ್ರ : ಮತ್ತೆ?

ಉ : ನೋಡಿ, ಒಂದು ಕುಟುಂಬಲಿ ಒಬ್ಬ ಹೆಂಗ್ಸ್ ಹೆತ್ತರೆ 16 ದಿನ ಸೂತ್‌ಕ ಆಚರ್ಸುವೆ. ಅವು ಊರು ದೇವ್‌ಸ್ಥಾನಕ್ಕೆ ಹೋದುಲೆ ಮನೆಗಳ್ಲಿ ಪೂಜೆ ಪುರಸ್ಕಾರ ಮಾಡ್ತುಲೆ.

ಪ್ರ : ಈ ಸೂತ್‌ಕ ಕಳಿಯೊದು ಹೆಂಗೆ?

ಉ : ಹೆರಿಗೆ ಆಗಿ ಐದನೆ ದಿನಕ್ಕೆ ಮಡಿವಾಳ್ತಿನ ಕರ್ಸಿ ದೇವ್‌ಸ್ಥಾನಂದ ಪ್ರೋಕ್ಷಣೆ ತಂದವೆ. ಮಡಿವಾಳ್ತಿ ಬಂದ್ ಕೂಸುನ ಬಾಣಂತಿನ ಮೀಸಿ ಅಮೆ ತೇಳುವ ಸುದ್ದನ ಮಾಡ್‌ದೆ.

ಪ್ರ : ಅದ್ ಹೆಂಗಕ್ಕಾ?

ಉ : ಅಂದ್ ದೇಸ್ಥಾನಂದ ತಂದ ಪ್ರೋಕ್ಷಣೆನ ಮಾವ್‌ನ ಸೊಪ್ಪ್ ತಕಂಡ್ ಮನೆಗೆಲ್ಲಾ ಚುಮ್‌ಕಿಸಿ ಮುಡ್ಸ್‌ಗೆ ಸ ಹಾಕಿ ಮತ್ತೆ ಮನೆವ್ರುಕೆಲ್ಲ ಹಾಕಿ ಸುದ್ದ ಮಾಡ್‌ದೆ. ಮತ್ತೆ ಮಡಿವಾಳ್ತಿಗೆ ಅಕ್ಕಿ ಬಾಳೆಣ್ಣ್ ತೆಂಗ್‌ನಕಾಯಿ 5¼ರೂಪಾಯಿ ಕೊಡುವ ಪದ್ಧತಿವುಟ್ಟು. ಇದ್ ಆದಮ್ಯಾಲೆ ಮನೆ ಸುದ್ದ ಆತ್‌ತ ಲೆಕ್ಕ. ಇಲ್ಲಿಗೆ ಮುಟ್ಟಿ ಬಾಣ್‌ಂತಿ ಇರುವ ಮನೆಲಿ ಊರ್ ತಕ್ಕರ್ ದೇವ್ರು ಬರವು ಒಂದು ಗ್ಲಾಸ್ ನೀರ್‌ನ ಮುಟ್ಟುದುಲೆ.

ಪ್ರ : ಇದರ್ನೆಲ್ಲಾ ಪ್ಯಾಟೆಲಿ ಮಾಡುವ್ರಾ?

ಉ : ಮತ್ತೆ ಸೂತ್‌ಕ ತೇಳ್ದು ಎಲ್ಲವ್ರುಕು ಇರುವಂತದ್. ತುಂಬಾ ಮಾಡದಿದ್ರೂ ಸ್ವಲ್ಪ ಮಟ್ಟಿಗಾದ್ರೂ ಮಾಡಿಕಾವೆ. ದೇಸ್ಥಾನಂದ ಪ್ರೋಕ್ಷಣೆ ತರ್‌ಸಿ ನಾವೇ ಸುದ್ದ ಮಾಡಿಕಂಡೊದು.

ಪ್ರ : ಅಂತೂ.. ಪದ್ಧತಿ ಆಚರ್ಸುವೆ ತಾತ್?

ಉ : ಹೌದು. ನಮ್ಮ ಪದ್ಧತಿ ಏನುಟ್ಟು ಹಿರಿಯುವ್ರು ಅದನ್ನ ನಮ್‌ಗೆ ಕಲ್‌ಸೊಳೊ. ಅದೇ ಪ್ರಕಾರ ನಮ್ಮ ಮಕ್ಕಳಿಗೆ ನಾವ್ ಹೇಳಿ ಕೊಡುದು ನಮ್ಮ ಕರ್ತವ್ಯ. ಹಿಂಗೆ ಮುಂದುವರ್ಸಿಕಂಡ್ ಹೋದರೆ ಪದ್ಧತಿ ಉಳ್‌ದದೆತ ನನ್ನ ಅಭಿಪ್ರಾಯ.

ಪ್ರ : ಅಕ್ಕಾ ಸೂತ್‌ಕದ ಬಗ್ಗೆ ಆತ್-ಇನ್ನ್ ಕೂಸುನ ತೊಟ್ಲ್‌ಗೆ ಹಾಕುದು ಹೇಳಿ

ಉ : ಕೂಸು ಹುಟ್ಟಿ 15 ದಿನ ಮುಟ್ಟಿ ತೊಟ್ಲ್‌ಲಿ ಮಲ್‌ಗುಸುವ ಕ್ರಮುಯಿಲ್ಲೆ. 16ನೇ ದಿನಕ್ಕೆ ತೊಟ್ಲ್‌ಸಾಸ್ತ್ರ ಮಾಡುವೆ.. ಆ ದಿನ ಊರ್ ಬ್ರಾಹ್ಮಣನ ಹತ್ರ ಹೋಗಿ ಕೂಸುನ ದೆಸೆವಲ ತೊಟ್ಲ್‌ಸಾಸ್ತ್ರ ಮಾಡುವೆ.. ಆ ದಿನ ಊರ್ ಬ್ರಾಹ್ಮಣನ ಹತ್ರ ಹೋಗಿ ಕೂಸುನ ದೆಸೆವಲ

ಹೆಸ್ರ್ ತಿಳ್ಕಂಡ್ 16ನೇ ದಿನ ಒಳ್ಳೆದ್ ತೇಳಿ ಅಂದ್ ಕೂಸಿಗೆ ಅನ್ನಕೊಟ್ಟ್ ತೊಟ್ಲ್ ಶಾಸ್ತ್ರನ ಮುಗ್ಸುವೆ. ಅಂದ್ ಕೂಸು ಬಾಣ್‌ಂತಿ ಮೀದ್ ಬಂದ ಮ್ಯಾಲೆ ಆಮನೆ ಹಿರಿ ಅಜ್ಜಿ ನೆಲ್ಲಕ್ಕಿ ಅಡಿಲಿ ತೇಳ್ರೆ ದೇವ್ರು ದೀಪ ಕೆಳಗೆ ಚಾಪೆಹಾಕಿ ಒಂದು ಮಣೆಮಡ್ಗಿ ಕುದ್ದ್ ಕೂಸುನ ಹಿಡ್ಕಂಡ್

ಎಲ್ಲವೂ ಬಸ್ನಿ. ಕೂಸಿಗೆ ಅನ್ನ ಕೊಟ್ಟ್, ಹೆಸ್ರ್ ಹಾಕುವೆತ ಎಲ್ಲವರ್ನ ಕರ್ದವೆ. ಎಲ್ಲವೂ ಬಂದಮ್ಯಾಲೆ ಕೂಸಿಗೆ ಎಣ್ಣೆಹಾಕಿ ಹೊಸಬಟ್ಟೆಹಾಕಿ ಕೂಸುನ ನಾಮನಕ್ಷತ್ರ ಪ್ರಕಾರ ಬಂದ ಹೆಸ್ರ್‌ನ ಕೂಸುನ ಕೆಮಿಲಿ "ಓಂ" ತೇಳಿ 3 ಸಲ ಹೆಸ್ರ್‌ನ ಹೇಳುವೆ. ಅದ್ಕೆ ಮುಂದೆ ತೊಟ್ಲಿಗೆ ಗುಂಡಣ್ಣನ ಶಾಸ್ತ್ರ ಮಾಡುವೆ.

ಪ್ರ : ಅದೆಂತದಕ್ಕಾ ಗುಂಡಣ್ಣನ ಶಾಸ್ತ್ರ?

ಉ : ಅದ್ ಒಂದು ಗುಂಡುಕಲ್ಲ್‌ನ ತಕಂಡ್ ಅದರ್ನ ತೊಳ್ದ್ ಅದ್ಕೆ ಎಣ್ಣೆ ಗಂಧ ಧೂಪ ಹೊಗೆಕೊಟ್ಟ್-ಬೆಳಿ ಹೊಸಬಟ್ಟೆಲಿ ಸುತ್ತಿ ತೊಟ್ಲ್‌ಗೆ 3 ಸಲ ಆಚೀಚೆ ಮಡ್ಗಿ ತೆಗ್‌ದ ಸಾಸ್ತ ಮಾಡಿ ಕೂಸುನ

ಒಚ್ಚುವಂಗೆ ಪದಹೇಳುವೆ ಹಾಡ್ :

ತಂದೆ ನೋಡಿದರೆ ನವಿಲಕ್ಕಿ| ತಾಯಿ ನೋಡಿದರೆ ಗಜಸಿಂಬೆ|
ಮಗನಾ ನೋಡಿದರೆ ಕರಿಗುಂಡರಾಯಾ| ಜೋಜೋ..
ಚಿನ್ನಾದ ಹರುನೇಕೆ ಬಿಟ್ಟಾಳು ಸೀತೆ.. ಜೋ..
ಕನಕ ನಿರ್ಮಿತವಾದ ತೊಟ್ಟಿಲ ತೂಗಿ
ಪದ್ಮವ ಪಟ್ಟೆಗಳ ವದರಿಹಾಸಿ ಜೋ..ಜೋ..

ಪ್ರ : ಅದ್ ಯಾಕೆ ಅಕ್ಕಾ ಹಂಗೆ ಮಾಡುದು?

ಉ : ಯಾಕತೇಳ್ರೆ- 1 ಕಲ್ಲ್‌ನ ಸಂಕೇತ ಶಿವಲಿಂಗ 2. ದೃಷ್ಟಿಗೆ 3 ಕಲ್ಲ್‌ನಸ್ಟ್ ಗಟ್ಟಿಮನ್‌ಸನಾಗಿ ದೀರ್ಘಾಯುಸಿಯಾಗಿ ಬಾಳೊಕುತ ಹಂಗೆ ಮಾಡುವೆ

ಪ್ರ : ಮತ್ತೆ?

ಉ : ಮತ್ತೆ ಅನ್ನಕೊಡುವ ಕ್ರಮ:

ಒಂದು ಮಣ್ಣ್‌ನ ಚಟ್ಟೆಲಿ ಅನ್ನನ ಹಾಕಿ ಅದ್ಕೆ ಹಾಲ್‌ಹಾಕಿ ಚಿಪ್ಪಿಸೆಡೆಲಿ ನೊಣ್ಣಂಗೆ ಅರ್ದ್ ಅದ್ಕೆ ತುಪ್ಪಹಾಕಿ ಅಜ್ಜಿ - ಈಗ ಕೂಸುಗೆ ಅನ್ನ ಕೊಟ್ಟವೆ. ಚಿನ್ನದ ಉಂಗುರನ ಅನ್ನಕ್ಕೆ ಮುಟ್ಸ್‌ಸಿ ಕೂಸುನ ಬಾಯಿಗೆ ಹಾಕುವೆ. ಹಂಗೆ ಒಂದು ಆಶೀರ್ವಾದದ ಒಂದು ವಾಕ್ಯನ ಹೇಳ್ದೆ-ಅನ್ನಉಂಡ್ -ಅನ್ನದ ಬೇರುಂಡ್, ಜೇನ್‌ನಂಗೆ ಮಾತಾಡಿ, ಚಿನ್ನದಂಗೆ ಹೊಳ್‌ಪಾಗಿ ಕಲ್ಲ್‌ನಂಗೆ ನೂರು ವರ್ಸ ಆಯುಷ್ಯವಂತನಾಗಿ ಬಾಳ್‌ತ ಹೇಳ್ದಮ್ಯಾಲೆ ಎಲ್ಲವೂ ಅನ್ನಕೊಟ್ಟವೆ. ಮತ್ತೆ ತೊಟ್ಲ್‌ಲಿ ಕೂಸುನ ಮಲ್‌ಗಿಸಿ 5 ಜನ ಪದ ಹೇಳ್ಕಂಡ್ ಒಚ್ಚುವೆ (ತೂಗುವೆ) ಅವರವರ ಶಕ್ತ್ಯಾನುಸಾರ ಕೂಸುಗೆ ಕೈಗೆ ಕೊಟ್ಟವೆ. ಇದಾದ ಮ್ಯಾಲೆ 40ನೆ ದಿನದಂದ್ ಕೂಸು ಬಾಣ್ಂತಿನ ಮೀಸಿ ಊರುದೇವ್‌ಸ್ಥಾನಕ್ಕೆ ಪೂಜೆಗೆ ಕರ್‌ಕಂಡ್ ಹೋವ ಪದ್ಧತಿವುಟ್ಟು. ಅದೇ ದಿನ ನೀರ್‌ಹತ್ರ ಗಂಗೆ ಪೂಜೆ ಮಾಡಿ ಬಾಕನ ತಲೆಮ್ಯಾಲೆ ಬಿಂದಿಗೆಲಿ ನೀರ್‌ತಂದ್ ಕುಲದೇವ್ರುನ ಧ್ಯಾನ ಮಾಡಿ ನೆಲ್ಲಕಿಅಡಿಲಿ ಮಡ್ಗುವೆ. ಮತ್ತೆ ದೀಪಕ್ಕೆ ಅಕ್ಕಿ ಹಾಕಿ ಕೈಮುಗ್‌ದ್ ಎಲ್ಲವರ ಕಾಲ್ ಮುಟ್ಟಿ ನಮಸ್ಕಾರ ಮಾಡಿ ಆಶೀರ್ವಾದ ಪಡ್ಕ್ಯೋಂಬದು. ಮತ್ತೆ ಗಂಡ್‌ನ ಮನೆವ್ರು 5 ಜನ ಬಂದ್ ತೊಟ್ಲ್ ಸಮೇತ ಕರ್ಕಂಡ್ ಬಂದವೆ. ಮನೆಹತ್ತಿಕೆ ಮುಂದೆ ಕುರ್ದಿನೀರ್‌ಲಿ ದೃಷ್ಟಿ ತೆಗ್‌ದ್ ಮೆಟ್ಲ್‌ಹತ್ತುವಲ್ಲಿ ಹೊಯ್‌ದವೆ. ಕೂಸುನ ನೆಲ್ಲಕ್ಕಿಗೆ ತಂದ್ ಪುನಃ ಅವ್ನು ಎಲ್ಲವರ ಕಾಲ್‌ಮುಟ್ಟಿ ನಮಸ್ಕಾರ ಮಾಡ್ದೆ. ತೌರು ಮನೆವ್ರು ಬಾಣ್ಂತನ ಮುಗ್‌ಸಿ ಹೋಕಾಕನ ಉಡುಗೊರೆ ಕೊಡುವ ಪದ್ಧತಿವುಟ್ಟು.

ವ್ಯವಸಾಯ ಮತ್ತೆ ಮಳೆಗಾಲ

ಕಾರ್ತಿಂಗ ದೆವ್ವಕ್ಕೆ ಕೊಡ್ದು

ಹಿಂದೆನ ಕಾಲಲಿ ಕೊಡ್ಗ್‌ಲಿ ವರ್ಷಕ್ಕೆ 10 ತಿಂಗ ಪೂರ್ತಿ ಮಳೆ ಬಾತಿತ್‌ತ ನಮ್ಮ ಹಿರಿಯವು ಹೇಳ್ತಿದ್ದೊ. ವರ್ಷದ ಇತರ 2 ತಿಂಗಳ್ಲಿ ಪ್ರತಿ ಗ್ರಾಮಗಳ್ಲಿ ಹಬ್ಬ -ಮದುವೆ - ಜಾತ್ರೆ ಭೂತಕೋಲ ಇತ್ಯಾದಿಗಳ್ನ ನಡ್‌ಸ್ತಿದ್ದೊ. ಹಂಗೆ ಆ ಕ್ರಮಗ ಇಂದಿಗೂ ನಡೀತಾ ಉಟ್ಟು. ಇದ್ ವ್ಯವಸಾಯ ಕೆಲ್ಸಗಳ್ನ ಬುಟ್ಟ್ ಉಳ್ದ ಸಮಯಲಿ ಒಂದಲ್ಲ ಒಂದು ಆಗ್ತಾ ಇದ್ದದೆ. ಈ ಹಬ್ಬ ಜಾತ್ರೆ ಮುಗ್ದ ಮ್ಯಾಲೆ ಭೂತಕ್ಕೆ ಕೋಲ ಕಟ್ಟುದು ಅಥವಾ ಪೂಜೆನ ವ್ಯವಸಾಯ ಕೆಲ್ಸಕ್ಕೆ ಮುಂದೆ ಮಡ್ಕೊಂಬದು ರೂಢಿಲಿ ಬಂದುಟು. ಇದ್ನೆ ನಾವು ಅರೆ ಗನ್ನದ ಭಾಷೆಲಿ ದೆವ್ವಕ್ಕೆ ಕೊಡುದು ಗುಳಿಗಂಗೆ ಕೊಡುತ ಹೇಳುವೆ. ಇದರ್ನ ಸಾಮಾನ್ಯಾಗಿ ವರ್ಷದ ಜೂನ್ ತಿಂಗತೇಳ್ಕೆ ಕಾರ್ತಿಂಗ ಮತ್ತೆ ಸೋಣ ತಿಂಗಳ್ಲಿ ಮಾಡುವೆ. ಆಟಿತಿಂಗ ಜಾಠಿ ಮಳೆ ಆಗ ಏಂತ ಕೆಲ್ಸನೂ ಮಾಡ್ತಿರೆ. ಈ ಕಾರ್ಯ ಹಿರಿಯವು ಗೊತ್ತ್ ಪಡ್ಸಿದ ಕಾರ್ತಿಂಗ ದೆವ್ವಕ್ಕೆ ಕೊಡ್ದೊರ್ನ ಅಂದ್‌ಂದ ಇಂದ್‌ಗೆ ಮುಟ್ಟ ಯಾವ ವ್ಯತ್ಯಾಸ ಇಲ್ಲದೆ ನಡ್ಸಿ ಕಂಡ್ ಬಂದೊಳೊ ಬರ್ತಾದಳೊ.

ಇನ್ನ್ ಮಳೆಗಾಲ ಸುರಾದ ಜೂನ್‌ತೇಳ್ಕೆ ಕಾರ್ತಿಂಗಳ್ಲಿ ಮನೆಗಳ ಹಿತ್ಲ್‌ಲಿ ಮನೆ ಒಳಗೆ ದೆವ್ವಗಳಿಗೆ ಎಡೆಕೊಟ್ಟ್ ಪೂಜಿಸುವ ಕ್ರಮ ಇದ್ದ್. ಒಟ್ಟೆ ಮೂರ್ತಿ 3-5 ಅದ್ಕಿಂತ ಹೆಚ್ಚಿಗೆ ಕೂಟ ಮೂರ್ತಿಗಳ್ನ ಒಂದೇ ಸಲ ಪೂಜಿಸುವೆ. ಉದಾರಣೆಗೆ ನಾಗಂಗೆ ಬ್ರಾಹ್ಮಣರ್‌ಂದ ಪೂಜೆ ಚೌಂಡಿ ಮೂರ್ತಿಗೆ ಮಲೆಯರ್ ಪೂಜೆ ಮಾಡುವೆ. ಇದ್ ಕೆಲು ಕುಟುಂಬಗಳ್ಲಿ ಮಾತ್ರ.

ಪ್ರತಿ ಕುಟುಂಬಗಳ ಐನ್ ಮನೆಲಿ ಹಿರಿಯವು ಅಥವಾ ಕುಟುಂಬದವು ನಿರ್ಣಯ ಮಾಡ್ದ ಕುಟುಂಬದ ವ್ಯಕ್ತಿ ಎಡೆ ಹಾಕುವ ಪದ್ಧತಿ ಉಟ್ಟು. ಇವಂಗೆ ಪೂಜಾರಿತ ಹೇಳುವೆ. ಇದರ್ನ ಯಾವ ರೀತಿ ಮಾಡುವೆ ತೇಳ್ಕೆ 1 ವಾರಕ್ಕೆ ಮುಂಚೆ ಮನೆ ಗಂಡ್ ಜನ ಎಲ್ಲಾ ಸೇರ್‌ವೆ. ಮೀದ್ ಬಂದ ಪೂಜಾರಿ ಹೂ ಸಮೇತ ಬಾಳೆ ಗೊನೆ ಕಡ್ದ್ ಗೊನೆನ ಅಟ್ಟಲಿ ತೂಗು ಹಾಕುವೆ.

ದೆವ್ವಕ್ಕೆ ಕೊಡುವ ದಿನ ಊರ್ ದೇಸ್ಥಾನಂದ ಪುಣ್ಯಾರ್ಚನೆ ಗಂಧ ತಂದ್ ಮನೆ ಎಲ್ಲಾ ಚಿಮ್ಮಿಸಿ ಸುದ್ಧ ಮಾಡುವೆ. ಅಕ್ಕಿ -ಭತ್ತ-ಹೊದುರಿ ಉದು ಬತ್ತಿ ಕೊಲುತ್ರಿ ನೆನೆ ಬತ್ತಿ ತೆಂಗ್‌ನಕಾಯಿ ಕುರ್ದಿ ನೀರ್ ತಂದವೆ. ಸುಣ್ಣ+ಅರ್‌ಶಿಣ ನೀರ್ ದೃಷ್ಟಿ ಆಕವೆ ಇಲ್ಲಿತ

ಕೋಲುತ್ರಿ ಮತ್ತೆ ಕುರ್ದಿ ನೀರ್ ತೇಳ್ಕೆ ಏಂತದ್?

ಒಣ್‌ಗಿದ ಬೆದ್‌ರ್ ಕಡ್ಡಿಗಳಿಗೆ ಬೆಳಿ ಬಟ್ಟೆಗೆ ಎಣ್ಣೆ ಹಾಕಿ ಸುತ್ತುದಕ್ಕೆ ಕೋಲ್ ತ್ರಿತ ಹೇಳುವೆ. ಕುರ್ದಿತ್ತೇಳ್ಕೆ ಒಂದು ಬಟ್ಟ್‌ಲಿ ನೀರ್ ಹಾಕಿ ಅದ್ಕೆ ಅರ್‌ಶಿಣ ಸುಣ್ಣ ಹಾಕ್‌ದನ ಕೆಂಪು ರಂಗ್ ಬಂದವೆ. ಮುಂದೆ ಗಣಪತಿಗೆ ಮಡ್ಗುವೆ. ಮತ್ತೆ ಎಡೆ ಹಾಕುವೆ ಎಡೆತೇಳ್ಕೆ ಕೋಳಿ ಮಾಂಸ ಮತ್ತೆ ರೊಟ್ಟಿ ಸ್ವಲ್ಪ ಕಳ್ಳ್. ಇದರ್ನ ಪೂಜಾರಿನೆ ಮಡ್ಗುದು ಅದ್ಗೆ ಸಹ ಅವನೆ ಮಾಡೊಕು. ಈ ಎಡೆನ ಮಡ್ಗಿ ಒಂದು ಪ್ರಾರ್ಥನೆ ಮಾಡ್ಕೊಂಡವೆ. ಆ ಮಡಿಕಟ್ಟ್ ಹಿಂಗುಟ್ಟು:- 'ನೀನ್ ನಮಗೆ ಬೇಲಿ ಆಗಿ ಬಂದ್ ಕಾಪಾಡ್‌ತ ಹೇಳಿ ಎಲ್ಲವು ಸನ ತಿರ್ಗಿ ನಿತ್ತವೆ. ಅಲ್ಲಿಗೆ ದೆವ್ವಗ ತಕಂಡೊತ ಅತ್.

ಗೌಡ ಕುಟುಂಬದವು ಹೆಚ್ಚಾಗಿ ಪಾಷಾಣ ಮೂರ್ತಿಗೆ ಎಡೆ ಹಾಕುವೆ. ಇನ್ನ್ ಕೊರ್ತಿ-ಮಂದಣ

ಮೂರ್ತಿ, ಅಜ್ಜಪ್ಪ, ಕಾಡಯ್ಯ, ಗುಳಿಗ, ತಮ್ಮಚ್ಚ ತೇಳುವ ಮೂರ್ತಿಗಳಿಗೆ ಸಹ ಎಡೆ ಕೊಟ್ಟವೆ.

ಉದ್ದೇಶ:- ವ್ಯವಸಾಯ ಮಾಡುವ ರೈತ ತನ್ನ ಶ್ರಮದ ಫಲಕ್ಕೆ ಸರಿಯಾಗಿ ಫಲ ಸಿಕ್ಕಲಿ ತೇಳಿ ಗುಳಿಗಂಗೆ ಎಡೆ ಹಾಕುವೆ. ಇದ್ನ ಭೂಮಿ ಗುಳಿಗ ತೇಳುವೆ. ಮತ್ತೆ ಭೂಮಿ ಚೌಂಡಿತ ಹೇಳುವೆ. ಈ ಎಲ್ಲಾ ತರದ ಮೂರ್ತಿಗಳಿಗೂ ಕೋಳಿ ಮಾಂಸ ಮತ್ತೆ ರೊಟ್ಟಿ ಎಡೆ ಹಾಕುವೆ. ಇನ್ನ್ ತ್ವಾಟಗಳಲ್ಲಿ ಅಥವಾ ಹತ್ರದ ಅರಣ್ಯ ಕಾಡ್‌ಲಿ ಹಿಂಗೆ ಮಾಡುವೆ. ಅದ್ಕೆ ಕಾಡಯ್ಯ ಮತ್ತೆ ಪಿಲಿ ತಮ್ಮಚ್ಚ ತೇಳಿ ಹೇಳುವೆ. ಕಾಡ್‌ಲಿಯಾಕೆ ಮಾಡುವೆ ತೇಳ್ರೆ ಹಿಂದೆ ದನ ಕರ್‌ಗ ಬೇಕಾದಸ್ಟ್ ಇದ್ದ ಕಾಲಲಿ ಅರಣ್ಯ ಕಡೆ ತೇಳ್ರೆ ಪಿಲಿ ಕಾಪ್‌ಗೆ ಜನ ಬ್ಯಾಟೆಗೆ ಹೋಗ್‌ತಿದ್ದೊ. ದನಗ ಮೇಯಕೆ ಹೋಗ್ತಿದ್ದೊ. ಆಗ ಹುಲಿಗಳ ಕಾಟನೂ ಬಾರಿ ಇತ್ತ್. ಹಿಂಗೆ ಕಾಡ್‌ಗೆ ಹೋದ ಮನ್‌ಸನೆ ಆಗಲಿ ದನವೇ ಆಗ್‌ಲಿ ಕ್ಷೇಮವಾಗಿ ಹಿಂದಕೆ ಬರೋಕುತ ದೊಡ್ಡ ಮರದ ಬುಡಲಿ ಇಲ್ಲರೆ ದೊಡ್ಡ ಪಾರೆ ಕಲ್ಲ್‌ಗಳ ಪಕ್ಕಲಿ ಹಿಂಗೆ ಗುರ್ತಮಾಡಿ ಪೂಜಿಸಿ ಎಡೆ ಕೊಟ್ಟವೆ. ಇದರ್ನ ಪ್ರತಿ ವರ್ಸನೂ ಮಾಡ್ತಾ ಬರ್ತಾವೆ.

ಹಿಂಗೆ ಭೂಮಿ ರಕ್ಷಣೆಗ್ಗವಂಗೆ ಗುಳಿಗರಾಜ ಮತ್ತೆ ಭೂಮಿ ಚೌಂಡಿತ, ದನಗಳ ರಕ್ಷಣೆ ಮಾಡೊವಂಗೆ ಅಂಗರತ ಮತ್ತೆ ಹೆಣ್ಣ್ ಮಕ್ಕಳ್ನ ರಕ್ಷಣೆ ಮಾಡೊದಕ್ಕೆ ಪಾಷಾಣ ಮೂರ್ತಿಂತ ಹೆಸ್‌ರ್ ಮಡ್ಕೊಂಡೊಳೊ. ಈ ತರ ಐನ್‌ಮನೆಗಳ್ಲಿ ಮಾಡುವ ಪೂಜೆಲಿ ಎಲ್ಲವ್ರ ಸೇರಿ ಊಟ ಮಾಡವ್. ಕಾಡ್‌ಲಿ ತ್ವಾಟಗಳ್ಲಿ ಹೆಣ್ಣ್ ಜನ ಹೋಮಲೆ. ಕೊಟ್ಟ ಹೆಣ್ಣ್‌ಮಕ್ಕಳಿಗೆ ಸೌಖ್ಯ ಇಲ್ಲದಿದ್ದ ಸಮಯಲಿ ಮಾತ್ರ ಅವ್ರ ಬಂದ್ ಇಲ್ಲಿ ಭಾಗವಹಿಸಕ್ - ಅಲ್ಲದೆ ಕೊಟ್ಟ ಹೆಣ್ಣ್‌ಗ ಊಟ ಮಾಡ್‌ಕಾಗದ್‌ತ್ತೇಳುವ ನಿಯಮನೂ ಉಟ್ಟು.

ಸುಡಿಕಟ್ಟ್

ಸಾಮಾನ್ಯವಾಗಿ ನಾವು ಯಾವುದೇ ಹಬ್ಬ, ಹೊಸ್ತ ಮದುವೆ ಏಂತಹಾದ್ರೂ ಸರಿ ದೇವ್ರನ ಮತ್ತೆ ಗುರು ಕಾರೋಣರ್‌ನ ನೆನ್ಸುವ ಕ್ರಮವುಟ್ಟು. ಅದರ ಪ್ರಕಾರ ಕಾರ್ತಿಂಗ ದೆಪ್ಪಕ್ಕೆ ಎಡೆ ಇಡ್‌ಕಾಕನ ಹಿಂಗೆ ಹೇಳ್ವ ಸಂಪ್ರದಾಯ ಗೌಡ ಜನಾಂಗಲಿವುಟ್ಟು.

ನೆಲ್ಲಕ್ಕಿ ಬಾಡೆಲಿ ನೆಲ್ಲಕ್ಕಿ ದೀಪನ ಮಡ್ಗುದು ಸಾಮಾನ್ಯ. ಆದರೆ ಈ ದೆಪ್ಪಕ್ಕೆ ಎಡೆ ಮತ್ತೆ ಕಾರಣವ್ರಕೆ ಮಡ್ಗುವ ಎಡೆಗೆ ಐನ್‌ಮನೆಲಿ ಒಂದು ಬ್ಯಾರೆ ಕ್ವಾಂಬರೆ ಗುರ್ತು ಮಾಡ್ಕಂಡೊಳೊ. ಎಡೆಗಳಿಗೆ ಮಾಸಾಹಾರ ಮಡ್ಗುವ ಕ್ರಮ. ಗೌಡ ಜನಾಂಗದವರ ಐನ್‌ಮನೆ ಅಟ್ಟಲಿ ತೇಳ್ರೆ ನೆಲ್ಲಕ್ಕಿ ಬಾಡೆ ದೀಪದ ಸರಿಯಾಗಿ ಕೊಡಿಲಿ ಯಾಗೊಳು ದೇವರ ಮುಡಿಪು ಮಡ್ಗಿದ್ದವೆ. ನೆಲ್ಲಕ್ಕಿ ದೀಪದ ಬುಡಕಟ್ಟ್ ಹೊಗೆ ಸೀದಾ (ಗಂಧಧೂಪ) ಅಟ್ಟಕೆ ಹೋದೆ ಆಗ ಬಿನಾ ಮಡ್ಗಿಗೆ ಪೂಜೆ ಮಾಡ್ಲಾಗದೆ

ಈಗ ದೆಪ್ಪಕ್ಕೆ ಕೊಡ್‌ಕಾಕನ ಹೇಳ್ವ ಸುಡಿಕಟ್ಟ್‌ನ ಕೇಳ್ವೊ (ಕುಟುಂಬದವೆಲ್ಲವ್ರೂ ಸೇರಿದ್ದವೆ)

ಈಗ ಪನ್‌ತೇಳ್ರೆ ನಾವ್ರ ಕುಟುಂಬಸ್ತರ್ ಸೇರಿ ನಿಂಗೆ ಎಡೆ ಇಡ್ತೊಳೊ. ಮೀದ ನೀರ್ಲಾಗಲೀ ಮಾಡ್ದ ಅಪ್ಗಲೇ ಆಗಲಿ ಇಕ್ಕದ ಎಡೆಲಿ ಆಗಲಿ ದೋಸಗ ಇದ್ದವ್ರೊ ಆ ತಪ್ಪುನ ಒಪ್ಪ ಮಾಡಿ ಕಂಡ್ ಇನ್ನ್ ಮುಂದಕ್ಕೆ ಬಿತ್ತಿದ ಬೆಳೆಗಾಗಲಿ ದನಕರ್‌ಗಳಿಗಾಗಲಿ, ಮಕ್ಕಮರಿಗಳಿಗಾಗಲಿ ಹೋದಲ್ಲಿ ಬಂದಲ್ಲಿ ಸುಕ ಶಾಂತಿ ಕೊಡ್ಬೇಕ ನಿಂದ್ ತೇಳಿ ಎಡೆಗೆ ಅಕ್ಕಿ ಹಾಕುವೆ.

ದೆಪ್ಪಕ್ಕೆ ಕೊಡುವ ಸಂಪ್ರದಾಯದ ಸುಡಿಕಟ್ಟ್‌ನ ತಿಳ್ಸದ ನಿಮಗೆ ಧನ್ಯವಾದಗ.

ಗಣ್‌ಪತಿ ಮತ್ತೆ ರೈತ

ರೈತ ಜೆನ ಗಣಪತಿ ದೇವ್ರುನ ಹೆಂಗೆ ಪೂಜಿಸುವೆ ಮತ್ತೆ ಅದರ್ಲ್ಲಿ ವ್ಯವಸಾಯ ಸಮೆಲಿ ಹೆಂಗೆ ನೆನ್ಸುವೆ ನೋಡೊನಲ್ಲಾ?

ಈಗ ಗಣ್‌ಪತಿ ಹಬ್ಬುನ ನಮ್ಮ ಕೊಡ್ಗ್‌ಲಿ ಹೆಂಗೆ ಆಚರ್ಸುವೆತ ತಿಳ್‌ಕೊಮ್ಮುನ ಪ್ಯಾಟೆ ಪಟ್ಟಣಗಳ್‌ಲಿ ಅಲ್ಲಲ್ಲಿ ಗಣ್‌ಪತಿ ವಿಗ್ರಹಗಳ್ನ ಮಾಡಿ ಕೂರ್ಸಿ 5-7 ದಿನ ಪೂಜೆ ಮಾಡಿ ಕೊನೆಗೊಂದು ದಿನ ಮೆರವಣಿಗೆಲಿ ಎಲ್ಲವು ಹೋಗಿ ನೀರ್‌ಲಿ ಬುಟ್ಟ್ ನಾವ್ ಏನ್ ತಪ್ಪುಗಳ್‌ನ ಮಾಡಿದ್ದರೂ ಸನ ನಮ್ಮುನ್ನ ಕಾಪಾಡಕುತ ಬೇಡಿಕೊಂಡವೆ. ಇಂದ್ ಪ್ಯಾಟೆಗಳ ಬೀದಿ ಬೀದಿಲಿ ಮಾತ್ರ ಅಲ್ಲ ಹಳ್ಳಿಲಿ ಸನ ವಿಗ್ರಹ ಕೂರ್ಸಿಕೆ ಸುರು ಮಾಡ್ತೊಳೊ. ಅದರೆ ವ್ಯವಸಾಯ ಮಾಡುವ ಗೌಡ ಜೆನ ವಳೊಲ್ಲಾ? ಇವು ಹೆಂಗೆ ಪೂಜಿಸುವೆತ ತಿಳ್ಸಿರ್ಲಾ?

ಉ : ಹೌದು ಎಲ್ಲವು ಕಾಂಬಂಗೆ ಗಣ್‌ಪತಿ ದೇವ್ರುನ ಪೂಜಿಸಿರೆ ಈ ರೈತ ಜೆನ ಬರೀ ವ್ಯವಸಾಯ ಮಾಡೊವು ಅವ್ರುಕೆ ಇದ್ಕೆಲ್ಲಾ ಪುರ್ಸೊತ್ತು ಇತ್ತ್‌ಲೆ. ಇವ್ರುಕೆ ವ್ಯವಸಾಯ ಪ್ರಧಾನ ಕೆಲ್ಸ. ಅದರ್‌ಂದ ಕೃಸಿ ಕೆಲ್ಸ ಸುರು ಮಾಡಿಕೆ ಮುಂದೆ ಅವನ ಯಾವ ರೀತಿ ಗ್ಯಾನ ಮಾಡ್ಕಂಡವೆತೇಳ್ರೆ.

ಬಿಸು ಯುಗಾದಿಗೆ ಗದ್ದೆಗೆ ಎತ್ತ್ ಕಟ್ಟಿಕೆ ಮುಂದೆ ಹೊತಾರೆ ಎದ್ದ್ ಮನೆ ಯೆಜ್‌ಮಾನ ಮೀದ್ ತೊಳ್ದ್ ಮಡ್ಗಿದ ನೇಗ್‌ಲ್ ನೊಗಕ್ಕೆ ಹಟ್ಟಿಲಿ ಗಣ್‌ಪತಿಗೆ ಹಣ್ಕಾಯಿ ಬೇಕಿದ್ದ ಸಾಮಾನ್ ತೇಳ್ರೆ ಬಾಳೆ ಹಣ್ಣ್ ಗಂಧ ಧೂಪ ಮಡ್ಗಿ ಅಕ್ಕಿ ಹೊಡಿಲಿ ಬೆಲ್ಲ ಕಲ್ಸಿ ಯಣ್ಣೆಲಿ ಹೊರ್ದ ಉಂಡೆಗಳ ಮಾಡಿ ಮಡ್ಗಿ ಗದ್ದೆಗೆ ಹೂಡಿಕೆ ಹೊರ್ಡಿಕೆ ತಯಾರಾದರೆ ಭತ್ತ ಬಿತ್ತಿಕೆ ಮುಂದೆ ವಳ್ಳೆ ನಕ್ಷತ್ರ -ಕರಣ-ಗಳಿಗೆ ಪಂಚಾಂಗ ನೋಡ್ತೊರ ಮೂಲಕ ತಿಳ್ಕಂಡ್ ಗದ್ದೆಗೆ ಬೀಜ ಹಾಕುವೆ. ಹಾರ್‌ಕಾಕನ ಕ್ರಿಮಿಕೀಟ ಮೃಗ ಪಕ್ಷಿಗಳ್‌ಂದ ರಕ್ಷಣೆ ಮಾಡೊಕುತ ಪಲಿಪಲಿ (ಬಲಿ ಬಲಿ) ತೇಳ್ಕಂಡ್ ಬೀಜ ಹಾಕುವೆ. ಮತ್ತೆ ಭತ್ತ ಹುಟ್ಟಿ ಅಗೆ ಬಂದ್ ತೆಗಿಯಕೆ ಮುಂದೆ ಮನೆ ಯೆಜ್‌ಮಾನ್ರು ಹೊತಾರೆ ಎದ್ದ್ ದೇವ್ರುನ ಪೂಜೆ ಮಾಡಿ ಹಾಲ್ ಬೆಲ್ಲ ಅಕ್ಕಿ ಪಾಲಕ್ಕಿ ತಕಂಡ್ ದೋರೆಸೊಪ್ಪು ತಂದ್ ಯಾಕಲ್ ಪರಿಮ್ಯಾಲೆ ಮೂಡ ದಿಕ್ಕಿಗೆ ಐದ್ ಸೊಪ್ಪುಗಳ್‌ನ ಮಡ್ಗಿ ಅದ್ಕೆ ಎಣ್ಣೆ ಬತ್ತಿ ಮಡ್ಗಿ ದೀಪ ಹೊತ್ಸಿದೆ ಮತ್ತೆ ಅಗೆ ಬುಡಕ್ಕೆ ಹಾಲ್ ಹೊಯ್ದ್ ಗಣ್‌ಪತಿನ ನೆನ್ಸಿ ಫಲಿ ಫಲಿಯ ತೇಳಿ ಅಗೆತೆಗಿಯಕೆ ಸುರು ಮಾಡುವೆ. ಅಗೆ ತೆಗ್ದ ಕೊನೆ ದಿನ ಎಲ್ಲಾ ಹೆಂಗ್ಸರ್ ಸೇರಿ ಯಾಕ್ಲ ಪರಿ ಸಾರ್ಸಿ, ಸುರುಳಿ ಎಲೆಲಿ ಅಕ್ಕಿ ಹಣ್ಣ್ ಹೂ ವೀಳ್ಯದೆಲೆ ಮಡ್ಗಿ ಕೊನೆ ಅಗೆ ಕಂತೆ ಕೊಡಿನ ಕೈಯಿಂದ ತಿರ್ಸಿ ಕೈ ತುಂಬಾ ತಕಂಡ್ ಅವರ್ನ ಎರ್ಡ್ ಕೈಗಳ ಅಂಗೈಲಿ ಉಜ್ಜಿ ಉಜ್ಜಿ ರಸ ಹಿಂಡಿ ಅದ್ಕೆ ಸೊಲ್ಪ ಸುಣ್ಣ ಸೇರ್ಸಿ ಎಲ್ಲವು ಸನ ಬೊಟ್ಟು ಹಾಕ್ಕಂಡವೆ. ಇದ್ಕೆ ಅಗೆ ಪೂಜೆತ ಹೇಳುವೆ. ಈ ತರ ಇಲ್ಲಿ ಸನ ಗಣ್‌ಪತಿನ ನೆನ್ಸುವೆ.

ಇನ್ನ್ ನಾಟಿ ನೆಡಿಕೆ ಮುಂದೆ ಯೆಜ್‌ಮಾನ ಗದ್ದೆ ಮೂಲೆಲಿ ತಟ್ಟ್ ಮಾಡಿ ಊದುಬತ್ತಿ -ಹೂ ಧೂಪ ಹೊತ್ತ್‌ಸಿ ಹರಳ್ ಸೊಪ್ಪುಲಿ ಹಾಲ್ ಅಕ್ಕಿ ಬೆಲ್ಲ ಇದರ್ನೆಲ್ಲಾ ನೈವೇದ್ಯ ಮಡ್ಗಿ ಗಂಭೀರ ಸ್ವರಲಿ ಕಳಿ ಕಳಿಯಾಗಿ ಬಾ ತೇಳ್ಕಂಡ್ ಎಲ್ಲವು ನಾಟಿ ನೆಡಿಕೆ ಸುರು ಮಾಡುವೆ. ಹಂಗೆ ಅಗೆ ನಾಟಿ ಕೆಲ್ಸ ಎಲ್ಲಾ ಒಬ್ಬೊಬ್ಬರ್‌ಂದ ಆಗುವ ಕೆಲ್ಸ ಅಲ್ಲ ಅದ್ಕೆ ಪನ್ ಮಾಡ್ಕೆ ತೇಳ್ರೆ. ಹಿಂದೆನ ಕಾಲಲಿ ಅವ್ರುಕೆ ಬ್ಯಾರೆ ಸಂತೋಷ ಕೂಟ ಇರದ್ದರ್‌ಂದ ಒಬ್ಬೊಬ್ಬರ ಮನೆಲಿ ಸಮೂಹ ಊಟ ತೇಳಿ ಮಾಡ್ತಿದ್ದೊ.

ಮತ್ತ್ ಊರ್‌ಲಿ ದೊಡ್ಡ ಗದ್ದೆಯಿರುವವರ ಗದ್ದೆಲಿ ಕಂಬಳ ನಾಟಿ ತೇಳಿ ಗದ್ದಳವುಂಡ್ ಗದ್ದೆಲಿ ಓಡುವ ಸ್ಪರ್ಧೆನ ಇಟ್ಟಿದ್ದೊ. ಇದ್ ಜನ್ರಿಗೆ ಒಂದು ಮನರಂಜನೆನೂ ಆತ್. ಮತ್ತ್ ನಾಟಿ ನೆಡ್ದೊರ್ರಿ ಹಿಂದೆ ಜಿದ್ದ ಪರ್‍ನ ಜರಿಯೊದು -ತಮಾಸಿ ಮಾಡ್ತು ಕತೆ ಗಾಥೆ ಹೊಟ್ಟುವ ಕತೆ ಹೇಳ್ತು. ಹಿಂಗೆ ಕೆಲ್ಸ ಮುಗಿಯೊದು ಗೊತ್ತಾದುಲೆ. ಓಟು ಗದ್ದೆ ನಾಟಿ ಕೂಡ್‌ಕಾಕನ ಎಲ್ಲವು ಕುಸಿಲಿ ಪದ ಹೇಳಿಕೆ ಸುರು ಮಾಡುವೆ.

"ಓ ಹೊಯ್ಯಾ... ಓಹೋ ಹೋಯ್ಯಾ...."

ಓಹೊ... ಹೊಯ್ಯಾ... ಓಹೋ ಹೊಯ್ಯಾ ॥ ತ ಪದ ಹೇಳ್ಕಂಡ್ ನಾಟಿ ಕೂಡ್ತುವೆ. ನಾಟಿ ಮುಗ್ದ್ ಓಡಿ ಆದ ಮ್ಯಾಲೆ ಗಣದಿ ತೇಳುವ ಪೂಜೆ ಮಾಡುವೆ. ಆಗ ಮನೆ ಯಜ್‌ಮಾನ ಗದ್ದೆ ಏರಿ ಮೂಲೆಲಿ ಗಣ್‌ಪತಿಗೆ ಹೊರ್‍ದ ಕೊಸ್ಲಕ್ಕಿ ಹೊರ್‍ದ ಒಣ್‌ಗಿಲ್ ಹಲ್‌ಸ್‌ನ ಬೀಜ ಹೊದುರಿ ಬಾಳೆಣ್ಣ್ ಮಡ್ಗಿ ನೆಟ್ಟನಾಟಿ ಕಳಿ ಕಳಿ ನಾಟಿ ಶ್ರೀ ಕಾವೇರಮ್ಮನ ಮನ್ಸ್‌ನಂಗೆ ಇಗ್ಗುತ್ತಪ್ಪನ ಬೆಟ್ಟದಂಗೆ ನಂಗೂ ದೇವ್ರಿಗೂ ಸಮ ಭಾಗ ಆಗುವಂಗೆ ಏರಿಗೂ ಬಾರಿಗೂ ಮುಟ್ಟಿ ಬೆಳಿಯಲಿತ ಹಾರೈಸಿ ಗಣ್‌ಪತಿಗೆ ಮಡ್ಗಿದ ಪ್ರಕಾರ ಎಲ್ಲವು ಹಂಚಿ ಪ್ರಸಾದ ತಿಂದವೆ. ಕೆಲ್ಸ ಎಲ್ಲಾ ಮುಗ್ದ ಮ್ಯಾಲೆ ನೇಗ್‌ಲ್, ನೊಗ, ಕೊಟ್ಟು (ಗುದ್ದಲಿ) ಕತ್ತಿ ಎಲ್ಲಾ ಬೇಸಾಯಕ್ಕೆ ಉಪಯೋಗ್ಸಿದ ಸಾಮಾನ್‌ಗಳ್‌ನ್ನೆಲ್ಲಾ ತೊಳ್ದ್ ಸಮಕ್ಕೆ ಮಡ್ಗಿ ಗಣ್‌ಪತಿಗೆ ಮಡ್ಗಿ ಬೆಳಿ ಲಾಯ್ಕಾಗಿ ಬಂದ್ ಸಮೃದ್ಧಿ ಕಾಣ್‌ಲಿತ ನೆನ್ಸುವೆ. ಆದಿನ ಎತ್ತ್‌ಗ ಸೋತ್ ಹೋಗೊಳತ ಎತ್ತ್‌ಗಳಿಗೆ ತೊಳಸಿದ ಹಿಟ್ಟ್ ತೇಕ್ರಿ ಅಕ್ಕಿ ತರಿ ಮತ್ತ್ ಬೆಲ್ಲನ ಪಾಯ್ಸತರ ಮಾಡಿ ಎತ್ತ್‌ಗಳಿಗೆ ತಿಂಬಕೆ ಕೊಟ್ಟುವೆ. ಈ ಇತರ ರೈತ ಜೆನ ಗಣ್‌ಪತಿ ದೇವ್ರನ ನೆನ್ಸುವೆ.

ನಾಟಿ ಕೂಡ್ಸ್‌ಕಾಕನ ಹೇಳ್‌ವ ಹೊಯ್ಯ ಪದ

ಓ-ಹೊಯ್ಯಾ ಓ.... ಹೋ ಹೊಯ್ಯಾ ॥
ಕಡ್ಕೆ-ಲಿ ಮಡ್ಗಿ -ಕಟ್ಟಿದಾ ಭತ್ತಾ
ಕೆಂಜೆತ್ತ್ ಓಲಾಡಿ - ಬೆಳ್ದಾ ಭತ್ತಾ- ಓ... ಹೊಯ್ಯಾ ಓ.. ಹೋ..ಹೊಯ್ಯಾ॥
ಚಿನ್ನಾದ ಕತ್ತಿಲಿ -ಕೊಯ್ದಂತಾ ಬೆಳೆನಾ
ರನ್ನಾದ ಹಗ್ಗಲಿ -ಹೊರೆಕಟ್ಟಿ ತಂದ್ ॥
ನಾರಾಯಣ ಶಿವ ತೇಳುವ ಎರಡೆತ್ತ್‌ಲಿ
ಹೂಡ್ದಂತ ಗದ್ದೆಲಿ ಬೆಳ್ದಾ ಆಗೆನಾ ಓ... ಹೊಯ್ಯಾ ಓ... ಹೊ... ಹೊಯ್ಯಾ
ಕಳಿ ಕಳಿ ನಾಟಿ ಕಾವೇರಮ್ಮಂಗೆ। ಕಳಿ ಕಳಿ ನಾಟಿ ಇಗ್ಗುತ್ತಪ್ಪಂಗೆ।
ಕಾವೇರಮ್ಮನ ಮನ್ಸ್‌ನಂಗೆ। ಇಗ್ಗುತ್ತಪ್ಪನ ಬೆಟ್ಟದ ಹಂಗೆ।
ಏರಿಗೂ ಬಾರಿಗೂ ಮುಟ್ಟಿಕಂಡ್ ಬೆಳೆಯಲಿ।
ಬೆಳ್ದಂತ ಭತ್ತಾ -ಸಮಾಪಾಲ್ ಓ... ಹೊಯ್ಯಾ... ಓ... ಹೊ....ಹೊಯ್ಯಾ ॥
ನಂಗೂ ದೇವ್ರಿಗೂ ಸಮಾಪಾಲ್
ನಂಗೂ ದೇವ್ರಿಗೂ ಸಮಾಪಾಲ್ ಓ... ಹೊಯ್ಯಾ...ಓ...ಹೊ... ಹೊಯ್ಯಾ ॥
ಈ ಪದ ಕೇಳ್‌ಕಾಕನ ಗದ್ದೆಲಿ ನಾಟಿ ಕೂಡ್ತ್‌ತ ನೆರೆಕರೆಯುವುಕೆ ಗೊತ್ತಾದೆ.

ವ್ಯವಸಾಯದ ಬಗ್ಗನೆ ಕೆಲವು ಗಾದೆಗ

ವ್ಯವಸಾಯದ ಬಗ್ಗನೆ ಕೆಲವು ಗಾದೆಗ ಎಳೊ ಈಗ ಅದರ್ನ ಕೇಳ್ನೊ - ಗಾದೆಗಳಿಗೆ ಆಧಾರ ಜನಾಂಗಲಿ ರೂಪುಗೊಂಡ ಅವರ ಜೀವನ ಕ್ರಮ ಯಾವುದೇ ಭಾಷೆ ಯಾಲ್ಲಾದ್ರು ಸೆರಿ ಅದರ ಶ್ರದ್ಧೆ - ತಿಳ್‌ವಳಿಕೆ-ಆಚರಣೆ-ಅಶೋತ್ತರಗ ತೇಳ್ರೆ. ಅವರ ಸಮಗ್ರ ಸಂಸ್ಕೃತಿ ಜನಾಂಗದ ಅನುಭವ ಪರಂಪರೆಂದ ಬೆಳ್ದ್ ಬಂದ್ ಒಂದು ಜೀವನ ಕ್ರಮ ರೂಪುಗೊಂಡುಟು. ಅನೇಕ ಜನರ ಅನುಭವ ಒಬ್ಬನ ಮಾತ್‌ಲಿ ಮೂಡಿ ಅದ್ ಅಷ್ಟಕ್ಕೆ ಸೀಮಿತ ಆಗದೆ ಮತ್ತೆ ಸಮಾಜನ ಸೇರ್ದೆ. ಅದ್ ಹಲವರ ಮಾತಾದೆ. ಹಿಂಗೆ ಸಮಾಜಲಿ ಸೇರಿ ಹೋದ ಮಾತ್‌ಗಳ್‌ನ ಗಾದೆ ತೇಳಿ ಕರ್ದೊಳೊ. ಗಾದೆಗಳ್‌ನ ಕನ್ನಡಲಿ ನಾಣ್ಣುಡಿ ತೇಳುವೆ.

ವ್ಯವಸಾಯದ ಕುರ್ತ್ಂಗೆ ಗಾದೆಗ

ಅನ್ನ ಹಾಕದ ಮನೆ ಗೊಬ್ಬರ ಹಾಕದ ಗದ್ದೆ ಕೆಡ್ತ್ಲೆ.
ಸೋರಿವ ಮಳೆ ಅರೆಗಳಿಗೆ-ಸೋನೆ ಮಳೆ ದಿನಯಿಡೀ.
ಮಾಡ್‌ದಂವ ಉಂಡತ್-ಮಲ್ಗಿದಂವ ಕೆಟ್ಟಿತ್.
ಬ್ಯಾಸಾಯ ಮಾಡ್ದಂವ ಬ್ಯಾಗ ಸಾಯಕಿಲೆ.
ಹೊಲ ಬಿತ್ತಿನೋಡು ನೆಲ ಸಾರ್ಸಿ ನೋಡು.
ಹದನೋಡಿ ಹರ್ಗೊಕು-ಬಜೆನೋಡಿ ಬಿತ್ತೊಕು.
ಭರಣಿ ಮಳೆ ಬಿದ್ದರೆ ಧರಣಿ ತುಂಬಿದೆ.
ತನ್ನ ಬಲವೇ ಬಲ- ರಾಗಿದ್ ಫಲನೇ ಫಲ.
ಕಾಲ ಮುಗಿಯಕೆ ಮುಂದೆ ಬಿತ್ತನೆ ಆಕು.
ಸಾಲಾಗಿ ಬಿತ್ತಿದ್-ಅಗಲಾಗಿ ಬಂದದೆ
ಆದು ಹೋದು ದೇವರಿಚ್ಚೆ- ಹೂಡ್ದು ಬಿತ್ತುದು ತನ್ನಿಚ್ಚೆ.
ರಟ್ಟೆ ಮುರಿ ಜೊಕು-ರೊಟ್ಟಿ ತಿನ್ನೊಕು-ತೇಳ್ರೆ ರಟ್ಟೆನ ಮುರಿಯೊದಲ್ಲ-ಮಡ್ಗರೆ
ಅಂಗ್ಯೆ ಹಂಗೆ ಗದ್ದೆ ಮಾಡ್ರೆ ಕಡಿಕೆ ತುಂಬ ಫಲ
ಆಡಿ ಕೆಟ್ಟ ಜನಯಿಲ್ಲೆ-ಹೂಡಿಕೆಟ್ಟ ಗದ್ದೆಯಿಲ್ಲೆ.
ಆಷಾಡದ ಗಾಳಿ ಜೀಸಿ ಜೀಸಿ ಬಡಿಯುಕಾಕನ ಅಯ್ಯೊ ನಾನ್ ಹೆಣ್ಣಾಕಾಗದಿತ್ತಾ ತೇಳ್ದಂಗೆ
ಕಂಡವರ ಹೊಲ ಮಾಡ್ತೊಕ್ಕಿಂತ ತುಂಡು ಹೊಲ ಮಾಡ್ದ್‌ಲೇಸ್.
ಮಳೆಯಿಲ್ಲದ ಪೈರೂ ಅವ್ವಯಿಲ್ಲದ ಕೂಸು ಒಂದೇ
ಹಿಂಗೆ ಬೇಕಸ್ಟ್ ಗಾದೆಗ ಸನ ಸಿತ್ಯದ ಮಾತ್‌ಲಿ ರೂಢಿಲುಟ್ಟು.

ಆಟಿಸೊಪ್ಪು



ಆಟಿಸೊಪ್ಪಿನಿಂದ ಆಟಿ 18 ಅಂದರೆ ಆಗಸ್ಟ್ ತಿಂಗಳು 3ರಂದು ಪಾಯಸ ಮಾಡಿ ಉಣ್ಣುವುದು ಹಿಂದಿನಿಂದ ಬಂದ ರೂಢಿಯಾಗಿದೆ. ಕೊಡಗಿನಲ್ಲಿ ಮಳೆ ಬಿದ್ದ ನಂತರ ಜೂನ್ ತಿಂಗಳಿನಿಂದ ಸಿಗುವ ಮತ್ತು ಉಪಯೋಗಿಸುವ ಕಣಲೆ ಮರಕೆಸು ಅಣಬೆಗಳೊಂದಿಗೆ ಆಟಿಸೊಪ್ಪು ಕೂಡಾ ವಿಶೇಷತೆಯನ್ನು ಹೊಂದಿರುವ ವಸ್ತುವಾಗಿದೆ. ಆಟಿ 18 ರಂದು ಆ ಸೊಪ್ಪಿನ ಗಂಟುಗಳಲ್ಲಿ 18 ಬಗೆಯ ಆಯುರ್ವೇದ ಮದ್ದುಗಳು ತುಂಬಿರುವುದರಿಂದ ಆ ಸೊಪ್ಪಿನ ರಸದಿಂದ ಪಾಯಸ ಮಾಡಿ ಉಣಬೇಕೆಂದು ಹಿರಿಯರು ರೂಢಿಸಿಕೊಂಡು ಬಂದಿದ್ದಾರೆ. ಅದರಿಂದಾಗಿ ಕೊಡಗಿನಲ್ಲಿ ಆಟಿ 18 ರಂದು ಹೇಗಾದರೂ ಮಾಡಿ ಸೊಪ್ಪನ್ನು ಪಡೆಯುತ್ತಾರೆ. ಈಗ ಮಾರುಕಟ್ಟೆಗಳಲ್ಲಿ ಕಾಣ ಸಿಗುತ್ತವೆ. ಕೆಲವು ಕಡೆ ಕೈಗೆ ಎಟುಕದಿರುವುದರಿಂದ ಅದರ ವಿಶೇಷತೆಯನ್ನು ಮೆಲುಕು ಹಾಕಬಹುದಷ್ಟೆ.

ನೀಲಿ ಗೋರಂಟಿ ಗಿಡವನ್ನು ಹೋಲುವ ಮಳೆ ಬಿದ್ದ ನಂತರ ಸುಮಾರಾಗಿ ತೇವಾಂಶಯಿರುವ ಕಡೆ ಮತ್ತು ಕೊಲ್ಲಿ ತೋಡುಗಳ ಬದಿಯಲ್ಲಿ ಹುಲುಸಾಗಿ ಬೆಳೆಯುವ ಈ ಗಿಡದಲ್ಲಿ ಅರ್ಧ ಅಡಿಗೊಂದು ನೀಲಿಗಂಟುಗಳಿದ್ದು, ಆಟಿ 18ರಂದು ಪೂರ್ತಿ ನೀಲಿ ನೇರಳೆ ಬಣ್ಣದಿಂದ ತುಂಬಿ ಆ ಸೊಪ್ಪಿನ ಪರಿಮಳದಿಂದ ಗಿಡವನ್ನು ಕಂಡು ಹಿಡಿಯ ಬಹುದು. ಸೊಪ್ಪನ್ನು ಆರಿಸಿ ತಂದು ಚೆನ್ನಾಗಿ ಎರಡು ಮೂರು ಬಾರಿ ತೊಳೆದು ದೊಡ್ಡ ಪಾತ್ರೆಗೆ ಸೊಪ್ಪು ಮುಚ್ಚುವ ತನಕ ನೀರು ಹಾಕಿ 10 ನಿಮಿಷ ಬೇಯಿಸಿದರೆ ನೀಲಿ ಬಣ್ಣದ ನೀರು ಘಮ, ಘಮ ಎಂದು ತಯಾರಾಗುತ್ತದೆ. ಅಥವಾ ನೀರಿನಲ್ಲಿ ಐದಾರು ಗಂಟೆ ಅದ್ದಿ ಇಟ್ಟರೂ ಬಣ್ಣ ಬಿಡುವುದು.

ಈಗ ಅಕ್ಕಿ ಪಾಯಸ ಮಾಡುವಂತೆ ಅದೇ ನೀರಿನಲ್ಲಿ ತೊಳೆದು ಬೇಯಿಸಬೇಕು. ಮಂದವಾಗುತ್ತಿದ್ದಂತೆ ಉಳಿದ ನೀರನ್ನು ಹಾಕಿ ತಳ ಹಿಡಿಯದಂತೆ ತಿರುವಬೇಕು. ಬೆಂದ ನಂತರ ಬೆಲ್ಲ ಮತ್ತು ತೆಂಗಿನ ತುರಿ ಹಾಕುವುದು. ನಂತರ ಒಂದು ಕಬ್ಬಿಣದ ವಸ್ತುವನ್ನು ಬಿಸಿ ಮಾಡಿ ಹಾಕಿದಾಗ ಅದರಲ್ಲಿ ವಿಷವೇನಾದರೂ ಇದ್ದರೆ ಹೋಗುತ್ತದೆಂಬ ನಂಬಿಗೆ ಹಿಂದಿನದು. ಈ ಪಾಯಸದೊಡನೆ ರಸಬಾಳೆ ಹಣ್ಣು ಹಸುವಿನ ತುಪ್ಪ ಜೇನು ಸೇರಿಸಿ ಮನೆಯವರೆಲ್ಲರೂ ಕೂಡಿ ಒಟ್ಟಿಗೆ ಕೂತು ರಾತ್ರಿ ಅಥವಾ ಬೆಳಿಗ್ಗೆ ಊಟ ಮಾಡುವುದೇ ಆಟಿ ಸೊಪ್ಪಿನ ಮಹತ್ವ. ಊಟ ಮಾಡಿ ಸ್ವಲ್ಪ ಹೊತ್ತು ಮಲಗಿದರೆ ಆಯುರ್ವೇದ ಔಷಧಿಯು ಮೈಗೆ ಚೆನ್ನಾಗೆ ಚೆನ್ನಾಗಿ ಹಿಡಿಯುತ್ತದೆ. ರೈತರು ಕೆಲಸ ಮಾಡಿ ತಮ್ಮ ಮೈ ಕೈ ನೋವಿನ ಶಮನವೂ ಪರಿಹಾರವಾಗುತ್ತದೆ. ಮಾರನೇ ದಿನ ಮೂತ್ರದ ಬಣ್ಣ ಕೆಂಪಗಿರುವುದರಿಂದ ಆಟಿ ಸೊಪ್ಪು ತನ್ನದೇ ಆದ ಮಹತ್ವವನ್ನು ಉಳಿಸಿಕೊಂಡು ಬಂದಿದೆ.

ವ್ಯವಸಾಯ

ಬೆಳ್ಳಂಗೆ ಒಂದೆತ್ತ್ - ಕೆಂಪುನ ಒಂದೆತ್ತ್ ।
ಮೋರನ ಚೋಮುಣಿನ ನೋಗಕ್ಕೆ ಕಟ್ಟಿ
ಎಡ್‌ದಾ ಕೈಲಿ ನೇಗ್‌ಲ್ ಬಲ್‌ದಾಕೈಲಿನೆಕ್ಕಿ ಕೋಲ್
ನಮ್ಮ ರಾಂಪಣ್ಣ ಹೂಡ್ದು ನೋಡಿಕೆ
ಬಾರಿ ಲಾಯ್ಕ್ ಬಾರಿಲಾಯ್ಕ್
ದಾರ್‌ಲಿ ಹೋಗೊವು ಬರೊವು ಒಂದ್
ಗಳಿಗೆ ನಿತ್ತ್ ನೋಡ್ವೆ ರಾಂಪಣ್ಣ
ಹೂಡ್ಲು ನಿತ್ತ್ ನೋಡುವೆ -ರಾಂಪಣ್ಣ
ಕಿರಿಯ ಹೂಡ್ದು ಕಂಡ್ -ದಾರ್‌ಲಿ
ಹೋಗೊವು ಬರೊವು ಕುಸಿ ಪಟ್ಟವೆ
ಬಂಗಾರದಂತ ಭತ್ತನಾ - ಬಿತ್ತಿಕಂಡ್
ಹೋದು ಅಂವ ಸಾಲ್‌ಹಿಡ್ದ್ ॥
ಅಲ್ಲಿ ಕಂಡದೆ ಅದೇ ನೋಡು ಅಂವನ ಗದ್ದೆ
ಈ ಊರ್‌ಲೆ ಇಲ್ಲೆ ಇಸ್ಟ್ ದೊಡ್ಡ ಗದ್ದೆ
ಗದ್ದೆಲಿ ಇಳ್ದ್ ದುಡ್‌ತನ ಮಾಡ್ರೆ
ಕೊಟ್ಟದೆ ಕಾವೇರಿ ಪೈರ್ ತುಂಬಾ ॥
ಅಲ್ಲ್ಯಟ್ಟು ನೋಡು ಅದೇ ಅಂವನ ತ್ವಾಟ
ಈ ಊರ್‌ಲೆ ಯಿಲ್ಲೆ ಇಂತಾ ತ್ವಾಟಾ
ತ್ವಾಟಲಿ ನಿತ್ತ್ ಕೆಲ್ಸನ ಮಾಡ್ರೆ
ಒಲ್‌ದದೆ ಭೂದೇವಿ ಕಾಫಿ ಫಲ ॥
ಹರ್‌ದದೆ ಅಲ್ಲಿನೋಡು ಕಾವೇರಿ
ಈ ದೇಶಲೆ ಯಿಲ್ಲೆ ಇಂತಾ ತಾಯಿ
ಮನ್ಸ್‌ಲಿ ನಿತ್ತ್ ಧ್ಯಾನನಾ ಮಾಡ್ರೆ
ಹರ್ಸಿದೆ ಕಾವೇರಿ ನಮ್ಮನೆಲ್ಲಾ ॥
ಕರಿಎತ್ತ್ ಕೆಂಪೆತ್ತ್ ಹೊಡ್‌ಕಂಡ್
ನೇಗ್‌ಲ್ ಕಟ್ಟಿ ಹೂಡಿಕಂಡ್
ಏರಿಲಿ ಬುತ್ತಿ ಮಡ್ಗಿ ಕಂಡ್
ನಾವ್ ಬೆಳಿಯೊನಾ ಭತ್ತ ದಾ ರಾಶಿ ಹಿಂಡ್ ॥

ಪ್ರಕೃತಿನ ಕೊಡುಗೆ

ಕೊಪ್ಗ್ಳಿ ಮಳೆಗಾಲ ಸುಮಾರ್ 6 ತಿಂಗ ಪ್ರಕೃತಿನ ಕೊಡುಗೆಂದ ಸಿಕ್ಕುವ ವಸ್ತುಗ ಮತ್ತೆ ಅದರ ಉಪಯೋಗ ಏನ್‌ತೇಳಿ ತಿಳ್ಕೊಮ್ಮ

ಅಕ್ಕಂದ್ರ ಒಂದು ಮಾತ್‌ಕತೆ :

ಪ್ರ : ನಾಟಿ ಕೆಲ್ಸ ಕಳ್ತ್ ಅಕ್ಕಾ ಗದ್ದೆಗೆ ನೀರ್ ಸಿಕ್ತಾ? ಅಗೆಗೆ ನಾಟಿಗೆ ಗದ್ದೆ ಎಂತದ್ ಮಾಡ್ದರಿತ?

ಉ : ಅಲ್ಲಾ ನೀವು ಹಿಂಗೆ ಒಂದೆ ಉಸುರಿಗೆ ಪ್ರಶ್ನೆಗಳ್ನ ಕೇಳ್ರೆ ನಾನ್ ನೀವುಗೆ ಉತ್ತರ ಹೆಂಗೆ ಹೇಳ್ಲಿ - ಅಯ್ಯೋ ಈ ನಾಟಿ ಕೆಲ್ಸನೂ ಸಾಕ್, ಈ ದನ ಸಾಂಕುದೂ ಸಾಕ್ ಹೊತಾರೆದ್ದ್ ಇವರೊಟ್ಟಿಗೆ ಎತ್ತ್‌ಗಳ್‌ನ ಆಚೆಕರೆ ಗದ್ದೆಗೆ ಹೊಡ್ಕೊಂಡೋಗಿ ಕೊಡೊಕು ಮನೆಗೆ ಬಂದ್ ಅಡ್ಗೆ ಮಾಡೊಕು. ಪುನಃ ಎತ್ತ್‌ಗಳಿಗೆ ಹುಲ್ಲು ತಕಂಡ್ ಹೋಕು ಕೆಲ್ಸ ಒಂದಾ ಎರಡಾ?

ಪ್ರ : ಏನ್ ಮಾಡ್ಲಿ ಹೇಳಿ ಈಗನ ಮಕ್ಕಳಿಗೆ ಭೂಮಿ ತ್ವಾಟ ಯಾಕೆ? ಒಂದು ಹತ್ತನೆ ಕ್ಲಾಸ್ ಪಾಸಾದರೆ ಸಾಕ್ ಹೊರ್ಟ್ರು ಬೆಂಗ್‌ಳೂರ್‌ಗೆ ಒಟ್ಟಿಗೆ 2 ಸಾವಿರ ರೂಪಾಯಿ ಸಂಬಳ ಸಿಕ್ಕರೆ ಸಾಕ್. ಈ ಗದ್ದೆ ಕೆಲ್ಸ ಯಾರಿಗೆ ಬೇಕು ತೇಳುವೆ. ಯಾರಿಗೂ ವಯಸ್ಸಾದವರ್‌ನ ಗ್ಯಾನನೆಯಿಲ್ಲೆ. ಇನ್ನ್ ಸ್ವಲ್ಪ ಜಾಸ್ತಿ ಓದಿದವ್ರಂತೂ ವಿದೇಶದ ಹೆಸ್ರೇ ಹೇಳುವೆ,. ಹೊರ ದೇಶಕೆ ಹೊರ್ಟವರ ಸಂಕೆ ದಿನಂದ ದಿನಕ್ಕೆ ಜಾಸ್ತಿ ಆಗುಟ್ಟು. ಒಟ್ಟ್‌ಲಿ ಈ ಗದ್ದೆ ತ್ವಾಟ ನಮ್ಮಂತ ವಯಸ್ಸಾದವ್ರುಕೆ! ಇರ್‌ಕನ ಮುಟ್ಟ ಮಾಡಕೊಲಾ? ಮಾರಿ ಬಿಡ್ಕೊತೇಳ್ರೆ ಅದ್ ಯಾರಿಗೂ ಬ್ಯಾಡದಾಗುಟ್ಟು. ಮಕ್ಕ ಹಿಂಗೆ ನಗರಗಳಿಗೆ ವಲಸೆ ಹೋದಂಗೆ ಹೋಗ್ತಾಯಿದ್ದರೆ ಇಲ್ಲಿನ ಕತೆ ಇನ್ನ್ ಸ್ವಲ್ಪ ವರ್ಸಲಿ ಏನಾದ್ಕೊ ಏನೊ ಪರಮಾತ್ಮಂಗೇ ಗೊತ್ತು!

ಉ : ಇರ್ಲಿ ಅಂತೂ ನಾಟಿಗೆ ಗದ್ದೆ ಎಂತದ್‌ತ ಹೇಳಿ. ನಾವಿರುವಸ್ಟ್ ದಿನ ಭೂಮಿತಾಯಿನ ಬಿಡಿಕಾದ್ಯ?

ಉ : ನಾಟಿಕೆಲ್ಸ ಕಳ್ತ್‌ಕ್ಕಾ. ಈ ವರ್ಸ ಸುರು ಸುರುಗೆ ನೀರಿಗೆ ಕಷ್ಟ ಆದರೂ ಮತ್ತೆ ಲಾಯ್ಕ ಮಳೆ ಬಾತಲ್ಲಾ. ಹಂಗಾಗಿ ಈ ವರ್ಸ ಹೂಪ್ಲ್ ಅಗೆ ನಾಟಿ ಕೆಲ್ಸ ಎಲ್ಲಾ ಕಳ್ದ್‌ದೇ ಗೊತ್ತಾತ್‌ಲಿ.

ಪ್ರ : ಅಲ್ಲಾ ಈಗ ಎತ್ತ್‌ಗಳ್‌ಂದ ನೇಗ್‌ಲ್‌ಲಿ ಹೊಡ್ಲು ಕಮ್ಮಿ ಆಗುಟ್ಟು. ಟ್ರ್ಯಾಕ್ಟರ್, ಟಿಲ್ಲರ್‌ಗಳ್ಲಿ ಹೂಡ್ಸುವೆ. ಹೂಡೊವ್ರುಕೆ ಸಂಬಂಳನೊ?

ಉ : ಇನ್ನ್ ಎಲ್ಲವ್ರುಕು ಟ್ರ್ಯಾಕ್ಟರ್, ಟಿಲ್ಲರ್ ಇವರ ಸೌಲಭ್ಯ ಇದ್ದದ್ಯಾ? ಇದ್ದರೂ ಅದರೊಟ್ಟಿಗೂ ಕಷ್ಟವುಟ್ಟು. ಮತ್ತೆ ಎಲ್ಲಾ ಕಡೆ ತಕೊಂಡೋಕು ಅದುಲೆ ಸಮ ತಟ್ಟ್ ಆವರೆ ಅದು. ಮಾಸಿಗದ್ದೆಗೆ ಎಲ್ಲಾ ಹತ್ರಿಕೆ ಆದ್ಯಾ? ಇನ್ನ್ ಗದ್ದೆ ಎಂತದ್‌ತ ಕೇಳ್ದರಿ ನಾವು ಈ ವರ್ಸ ಗದ್ದೆ ಮಾಡಿಕೇನ್ ಹೋತ್‌ಲೆ ನಾಟಿಗೆ ಒಂದಿನಕೆ ಮುಂದೆ ನಮ್ಮ ಚಿಮ್ಮಿಗೂಡೆ ಎತ್ತ್‌ಗಳ್‌ನ ಹೊಡ್ಕಂಡ್ ಬಾಕೆ ತೇಳಿ ಆಚೆ ಕರೆ ಬಾಣೆಗೆ ಹೋಗಿತ್ತ್. ಬಾಕನ ದಾರಿಲಿ ಆ ಒಣ್‌ಗಿಲ್ ಪೊಲ್ಲಣಿಕೆ ಮರ ಬುಡಲಿ ಎಂತೋ ಬೆಳ್ಳಂಗೆ ಕಂಡಂಗೆ ಆತ್‌ಗಡ ಹತ್ರ ಹೋಗಿ ನೋಡ್‌ಕನ ಹೆಗ್ಗ್‌ಲ್‌ಅಳ್‌ಂಬ್! ಗೂಡೆ ಬ್ಯಾಗ ಬ್ಯಾಗ ಬಾತ್ ಅಪ್ಪ ನಾ ಈಗ ಬನ್ನೆ ತೇಳಿ 2 ಕುಕ್ಕೆ ತಕ್ಕೊಂಡೋತು. ಬಾಕನ ಒಂದು ಕುಕ್ಕೆ

ತಲೆಲುಟ್ಟು ಇನ್ನೊಂದು ಸೊಂಟಲಿ! ನಂಗೂ ಅಳ್‌ಂಬು ನೋಡಿ ಬಾರಿ ಕುಸಿ ಆತ್. ಅಪ್ಪನ ಮೊಕ ಕಂಡಂಗ ಮಗಳ ಮೊಕ ಅರ್‌ಳಿತ್. ಅಪ್ಪ ನೀನ್ ಸಂತೆಗೆ ಹೋದು ತಪ್ಪಿತ್. ನಂಗೆ ನೋಡು ಎಷ್ಟ್ ಅಳ್‌ಂಬು ಸಿಕ್ಕಿಟುತಾ? ಹಂಗೆ ಮಧ್ಯಾಹ್ನ ಓಟು ಗದ್ದೆ ನಾಟಿಗೆ ಸಣ್ಣಕ್ಕಿ ಅನ್ನ, ನೀರಾಂಬರ, ಸ್ವಾಂತೆಕಾಯಿ ಪಲ್ಯ ಮತ್ತೆ ಅಳ್‌ಂಬು ಗಸಿ ಮಾಡ್ದೊ.

ಓ ಅದೇ ! ನಾಟಿಯುವುಕೆ ವಳ್ಳ ಗಮ್ಮತ್ತ್ ಊಟ. ಅಳ್‌ಂಬು ಗೈಪು ಸಣ್ಣಕ್ಕಿ ಅನ್ನವುಂಡ್ ವಳ್ಳ ಗಮ್ಮತ್ ಆತ್‌ತ ನಾಟಿಯುವು ಮಾತಾಡಿಕಂಡ್ ಹೋಗ್ತಾಯಿದ್ದೊತ ಸ್ಕೂಲುಂದ ಬಂದ ಮಕ್ಕ ಹೇಳ್ತಿದ್ದೊ.

ಈ ವರ್ಸಬಾರಿ ಅಳ್‌ಂಬೆ ಎದ್ದುಟ್ಟು. ಯಾರ ಬಾಯಲ್ಲಿ ಇದೇ ಮಾತ್. ಇನ್ನ್ ನಾಟಿ ಅಗೆ ಕೆಲ್ಸಲಿ ಎಲ್ಲಿಲ್ಲದ ಲೋಕ ಸುದ್ದಿ ವುಟ್ಟುಲೆ! ಹಂಗೆ ಈ ಅಳ್‌ಂಬು ಗೈಪುದು ಒಂದು ಸುದ್ದಿ ಆತ್. ಈ ವರ್ಸ ಬಾರಿ ಬಿಸ್‌ಲ್ ಕಾದ್ ಕುಡಿಯುಕೆ ನೀರಿಲ್ಲದ ಕಷ್ಟದ ದಿನಗಳ್‌ನ ಕಂಡೊ.

ಅದೇ ನಾನ್ ಮ್ಯಾಲೆ ಮನೆಗೆ ಹೋಕನ ಸಂತೆಗೆ ಹೋಗಿ ಬಂದ ಆ ರಾಂಪಣ್ಣ ಹೆಣ್ಣಗೆ ಬಯ್ಯಾತ ಇದ್ದೊ. ನೀವು ಒಳಗೇ ಬೆಚ್ಚಂಗೆ ಕುದ್ದ್‌ಕಣಿ. ಅಲ್ಲಾ ಅದಾರಿಲಿ ಹೋಗೊವು ನಮ್ಮ ತ್ವಾಟದ ಬೇಲಿ ಹತ್ತಿ ಮುರ್ದ್ ಹಾಕಿ, ಮಾಮೂಲ್ ವಳ್ಳಾಯಿದ್ದ ಆ ಕರಿಮರದ ಬುಡಂದ ಅಳ್‌ಂಬು ಕಿತ್ತ್‌ಕಂಡ್ ಹೋಗೊಳೊ. ಹ್‌ಂ, ನೀವು ಅಪ್ಪ ಮಕ್ಕ ಮನೆ ಬುಟ್ಟ್ ಹೊರ್ದ್ ಬಡಿತ. ಅಷ್ಟೊತ್ತಿಗೆ ಅಲ್ಲಿಗೆ ತಲ್ಪಿದ ನಾನ್ ಕೇಳ್ದೆ. ಎಂತ ರಾಂಪಣ್ಣ ಯಾಕೆ ಇಷ್ಟ್ ಜೋರು ಮಾತಡ್ತೆತ? ಆಗ ರಾಂಪಣ್ಣ ಹೇಳ್ದು ಕೇಳ್ರೊಕು ಅಲ್ಲಕ್ಕಾ ಈ ವರ್ಸ ಒಂದು ಅಳ್‌ಂಬು ಎದ್ದುಟ್ಟು ನೋಡಿ ಅದ್ ಅಳ್‌ಂಬಾ ಅಲ್ಲಾ ಸಣ್ಣ ಮಕ್ಕಳ ಕೊಡೆತ! ಒಂದು ಅಳ್‌ಂಬುಲಿ ಒಂದು ಹೊತ್ತು ಕಳಿಯುಕ್ ತ

ಪ್ರ : ಅದೇನ್ ಈ ವರ್ಸ ಅಷ್ಟ್ ದೊಡ್ಡ ಅಳ್‌ಂಬು ಎದ್ದುದ್, ಮತ್ತೆ ಇದ್ ಎಲ್ಲೆಲ್ಲಾ ಹುಟ್ಟಿದೆತ ಹೇಳ್ರ್ಯಾ?

ಉ : ಅದೇ ಆಗಲೆ ಹೇಳ್ದೆಲ್ಲಾ -ಕಾದ ನೆಲಕ್ಕೆ ಒಮ್ಮೆಗೆ ಮಳೆ ಬಂದದ್ದಕ್ಕೆ ಹಂಗೆ ಹುಟ್ಟಿದ್‌ತ ಒರಿಯುವು ತಿಳ್ದವು ಹೇಳ್ರ್ಯಳೊ. ಇದ್ ಇನ್ನ್ ಎಲ್ಲೆಲ್ಲಾ ಹುಟ್ಟಿದೆ ನೋಡ್ರೊ. ಮಳೆ ಸುರಾದಂಗೆ ಗದ್ದೆ ಏರಿಗಳ್ಲಿ ಬಾಣೆಗಳ್ಲಿ ಸಾಮಾನ್ಯ ಹುಲ್ಲು ಅಳ್‌ಂಬು ತೇಳ್ರಿ ಹರಳ್ ಅಳ್‌ಂಬುತ ಏಳಿಕೆ ಸುರಾದೆ. ಮಳೆ ಹೆಚ್ಚಾದಂಗೆ ಸುಳೆರಿ ನಾಯ್ ಮರಿ ಅಳ್‌ಂಬುತ ಹುಟ್ಟಿದೆ. ಇನ್ನ್ ಗುಡುಗು ಜಾಕನ ನೆಲ ಅದ್‌ರಿ ಹುತ್ತಗಳ್ಲಿ ಬಯ್ಲ್ ಪ್ರದೇಶಗಳ್ಲಿ ದೊಡ್ಡ ಮರಗಳ ಕೆಳ್‌ಗೆ ಹೆಗ್ಗ್ಲ್ ಅಳ್‌ಂಬು ತೇಳ್ದು ಕುಕ್ಕೆ ಕುಕ್ಕೆ ಏಳ್‌ಮುಟ್ಟು. ಇನ್ನ್ ಮಳೆ ಕಮ್ಮಿ ಆಗ್ತಾಯಿರುವಂಗೆ ತೇವಯಿರುವಲ್ಲಿ ಕಾಪ್‌ಗೊಬ್ಬರ ಜಾಸ್ತಿಯಿದ್ದಲ್ಲಿ ಬೇಲಿ ಬುಡಕ್ಕೆ ಏಳ್ದ್ ಹಾಕಿದ ಮಣ್ಣ್‌ಲಿ ಬೆಳಂಜಿರ್ ಅಳ್‌ಂಬ್ ತೇಳ್ದು ಎದ್ದದೆ. ಮತ್ತೆ ಕಾಡ್‌ಲಿ ಕಲ್ಲ್ ಅಳ್‌ಂಬು ತೇಳ್ದು ಕಲ್‌ನಂಗೆ ಎದ್ದದೆ. ಹಂಗೆ ಮರಗಳ್ಲಿ ಏಳುವ ಮರ ಅಳ್‌ಂಬು ಬಾರಿ ರುಚಿ. ಇದರ್ನ ಕೃತಕ ರೀತೀಲಿ ಸ ಬಾಳ ಕಡೆ ಬೆಳ್ದಿ ಮಾರಾಟನು ಮಾಡುವೆ. ಇದ್ ಸ್ವಲ್ಪ ದುಬಾರಿ ಆದೆ.

ಪ್ರ : ಈ ಅಳ್‌ಂಬು ಯಾವ್ಯಾವ ಮರಗಳ್ಲಿ ಹುಟ್ಟಿದೆ?

ಉ : ಸಾಮಾನ್ಯಾಗಿ ಕಾಚಿಗಿಡ, ಹರಳ್‌ಗಿಡ, ಪಾನುವಾಳ, ಕುಳಿರ್‌ಮಾಂವು, ಸಂಪಿಗೆ, ನಜೋಳಿ ಮರ, ಮಾವ್ರನ ಮರ, ಕರಿ ಮರ...... ಹಿಂಗೆ ಬ್ಯಾರೆ ಬ್ಯಾರೆ ಮರಗಳ್ಲಿ ಹುಟ್ಟಿದೆ. ಇನ್ನೊಂದು

ವಿಶೇಷ ತೇಳ್ರಿ ಇಡ್‌ಂಜಿ ಮರದ ಅಳ್‌ಂಬು ತಿಂಬಕೆ ಬಾರಿ ರುಚಿ.

ಪ್ರ : ಅಳ್‌ಂಬ್ ಕತೆ ಆತ್. ಈಗ ಮಳೆಗಾಲ ಉಪಯೋಗಿಸುವ ಯಾವ್ಯಾವ ವಸ್ತುಗ ಸಿಕ್ಕುವೆ ತಿಳ್ಸಿಕೊಡಿ ನೋಡ್ನೊ?

ಉ : ನೋಡಿ, ಮಳೆಗಾಲ ಆಟಿ ತಿಂಗ ಬಾಕನ ಆಟಿ ಸೊಪ್ಪು ತೇಳ್ತು ಇದ್ ವರ್ಸದ ಆಟಿ ತಿಂಗ 18 ನೆ ದಿನ ಮಾತ್ರ ಉಪಯೋಗ್ಸುವೆ. ಹಂಗೆ ಮರಕೆಸ ತುಂಬಾ ಬೆಳ್ದುದೆ. ಇದರ್ನ ಆಟಿ ಪಾಯ್ಸ ಕಳ್ದ ಮ್ಯಾಲೆ ತಿಂಬೊದುತವುಟ್ಟು. ಇದರ ಸೊಪ್ಪುಂದ ಪತ್ರೊಡೆ, ದಂಟ್, ಬೇರ್‌ನ ಇಲಾತ್‌ಕಾಳ್ ಹೊರ್ದ್ ಪಪ್ ಸಾರ ಸಾಂಬಾರ್ ಮಾಡುವೆ. ಇನ್ನ್ ಕಾಡ್ ಹಲ್ಸಿನ ಹಣ್ಣ್‌ಂದ ಕೂಗಲೆ ಬಿಟ್ಟ್ ಮಾಡುವೆ. ಬೀಜನ ಒಣ್ಗಿಸಿ ಮಡ್ಕಂಡ್ ಮಳೆಗಾಲ ಬೆಚ್ಚಂಗೆ ಒಲೆ ಹತ್ರ ಕುದ್ದ್‌ಕಂಡ್ ಹೊರ್ದ್ ತಿಂಬಕೆ ಲಾಯ್ಕಾದೆ. ಗಣಪಿಗದ್ದೆಲಿ ಪ್ರಸಾದಕ್ಕೂ ಉಪಯೋಗ್ಸುವೆ.

ಪ್ರ : ಹಿಂದೆ ಮಳೆಗಾಲ ನಮ್ಮ ರೈತರ್ ಏನೇನ್ ಸಂಗ್ರಹಿಸಿ ಇಡ್ತಾ ಇದ್ದೊ ಹೇಳಿ?

ಉ : ಸಾಮಾನ್ಯಾಗಿ ಬೇಸಿಗೆಲಿ ಬೆಳ್ಸುವ ಸ್ವಾಂತೆಕಾಯಿ, ಕೆಂಬಡೆಕಾಯಿ, ಬೂದುಗುಂಬಳ, ಸಿಹಿ ಗೆಣ್ಸು, ಇಲಾತ್‌ಕಾಳ್, ಹಲ್ಸಿನ ಬೀಜ, ಜ್ವಾಳ ಇದರ್ನೆಲ್ಲಾ ಈಗಲೂ ರೈತರ್ ಜೋಪಾನಾಗಿ ಸಂಗ್ರಹಿಸಿಟ್ಟುವೆ.

ಪ್ರ : ಇನ್ನ್ ಮಳೆಗಾಲ ತಿಂಬಕೆ ಹಣ್ಣ್‌ಗ ಏಂತವೆಲ್ಲಾ ಸಿಕ್ಕುವೆ ಗೊತ್ತುಟಾ ನೀವುಗೆ?

ಅದರ್ನೇನ್ ಕೇಳ್ರಿ? ಕರ್ಮಂಜಿ ಹಣ್ಣ್, ಮಜ್ಜಿಗೆ ಹಣ್ಣ್, ಮಡ್ಕೆ ಹಣ್ಣ್, ಪಾಟೆ ಹಣ್ಣ್, ಇಪ್ಪುಲಿ ಹಣ್ಣ್, ಕೂಮೆ ಹಣ್ಣ್, ಹಿಂಗೆ ಬೇಕಾದಸ್ಟ್ ಇದ್ದರೂ ಈಗ ಇದೆಲ್ಲ ಕಾಂಬಕೆ ಸಿಕ್ಕುದುಟ್ಟಾ?

ಪ್ರ : ಇನ್ನ್ ಸೊಪ್ಪುಗಳ ವಿಸಯ ಏನಾರ್ ಉಟ್ಟಾ?

ಉ : ಕೂಂದೆಸೊಪ್ಪು, ಗಿಣಿಕೆ ಸೊಪ್ಪು, ಚಗತೆಸೊಪ್ಪು, ತಿಮರೆ ಸೊಪ್ಪು ಇನ್ನ್ ಹೆಸ್ರ್ ಗೊತ್ತಿಲ್ಲದ ಎಷ್ಟೊ ಹುಟ್ಕಿರೆ ಉಪಯೋಗಕ್ಕೆ ಬೇಕಾದಸ್ಟ್ ಸಿಕ್ಕುವೆ. ಅದ್ಕೆ ನಮ್ಮ ಹಿರಿಯವು ಮಕ್ಕಳಿಗೆ ಹೇಳ್ತಾಯಿದ್ದವೆ. ನೋಡಿ ಮಕ್ಕಳೆ ಮಳೆ ಬಾಕನ ಸುಮ್ಮನೆ ಒಳಗೆ ಕೂರ್‌ಬೇಡಿ ಹೊರಗಡೆ ಹೋಗಿ ಸುತ್ತಾಡೊಕು. ಯಾಕೆ ತೇಳ್ರಿ ದೊಡ್ಡ ಮಳೆ ಬಾಕನ ಹೊಳೆ ನೀರ್ ಹತ್ತುದಾ ಏರಿಬಾರಿ ತುಂಬಾದ್ಯಾ, ಬರೆ ಜರ್ದ್ ಬಿದ್ದುದ್ಯಾ ಅಲ್ಲಾ ಇನ್ನ್ ಏನೇನ್ ಅನಾಹುತ ಆಗುಟ್ಟೋ ಏನೋತ ಅದರ ಬಗ್ಗೆ ಎಚ್ಚರಿಕೆ ಜೈಗಳು ಸಿಕ್ತಾ ಇದ್ದುದೆ ತಾಪ್ರೆ ಮಳೆಲಿ ಮೀನ್‌ಗ ಏಸಂಡ್‌ಗ ಬೇಕಾದಸ್ಟ್ ಸಿಕ್ಕುವೆ. ಅದ್ಕೆ ಕೈಲಿ ಕತ್ತಿ ತಲೆಲಿ ಗೊರ್‌ಗ ಹಾಕ್ಕಂಡ್ ಹೋದರೆ ರೈತಂಗೆ ಗೈಪಿಗೆ ಏಂತಾರ್ ಸಿಕ್ಕೇಸಿಕ್ಕುದೆ ಆಗ ಅಂವ ಏನಾರ್ ಸಂತೆಗೆ ಹೋಕಾ ಹೆಂಗೆ?

(ಹಾಸ್ಯ:- ನೀವು ಹೇಳ್‌ದೆನೊ ಸರಿ.... ಹೌದೂ! ಈ ಮಡ್‌ಚುವೆ ಕೊಡೆನ ಹಿಡ್ಕಂಡ್ ಮಳೆ ಗಾಳಿಗೆ ಹೋದರೆ ಕೊಡೆ ಕಾಲ್ ಕೈಲಿ ಕೊಡೆ ಹಾರಿ ಹೋಗದೆಯಿದ್ದುದ್ಯಾ?)

ಅಯ್ಯೊ ಅದ್ಕೆಯಿರ್ದು ಗೊರ್‌ಗ! ಗೊರ್‌ಗ ಹಾಕ್ರಂಡ್ರೆ ಮೈ ಬಿಸಿಯಿದ್ದುವೆ. ಹೆಚ್ಚಿಗೆ ಚಂಡಿ ಆದುಲೆ. ಹೊಳೆ ಕರೆಲಿ ಗದ್ದೆಗೆ ನೀರ್ ಮಗೆಕಾಕನ ಮೀನ್ ಏಸಂಡ್‌ಗ ದೊಡ್ಡ ದೊಡ್ಡದ್ ಕಾಂಬಕೆ ಸಿಕ್ಕುದುಟ್ಟು. ಇದ್ಕೆ ಉಬಾರಿ ಹತ್ತುದುತ ಹೇಳ್ವೆ. ಅದ್ಕೆ ಕೈಲಿ ಕತ್ತಿ ಇರೊಕು ತೇಳ್ತು. ನೋಡ್ದಂಗೆ ಕಡ್ದ್ ಹಾಕಿಕೆ! ಮತ್ತೆ ರಕ್ಷಣೆಗೂ ಆತ್. ಹಿಂದೆ ಮಳೆಗಾಲ ಬಾತ್‌ತೇಳ್‌ಕನ ಮನೆಲಿರುವ ಸದಸ್ಯರ್‌ಗೆಲ್ಲಾ ಅವರವರ ಅಳ್ತೆಗೆ ಗೊರ್‌ಗ ನೈಯ್ಯುತ್ತಿದ್ದೊ.

ಪ್ರ : ಗೊರ್‌ಗನ ಎಂತದರ್ಲಿ ನೈಯ್‌ದವೆ?

ಉ : ಮಲೆಕಾಡ್ ಅಲ್ಲರೆ ಹೊಳೆಕರೆಗಳ್ಲಿ ವಾಟೆ ತೇಳ್‌ದು ಬೆಳ್‌ದವೆ. ಇಂದೂ ಅದ್ಕೇನ್ ಕೊರ್ತೆಯಿಲ್ಲೆ. ಮತ್ತೆ ಕಾಡ್‌ಲಿ ಕೂಗಲೆ ತೇಳ್‌ವ ಸೊಪ್ಪುನ ಅಳ್ತೆ ಪ್ರಕಾರ ಮಡ್ಗಿ ವಾಟೆನ ಒಡ್ಡು ಅವರ್ನ 2 ಕಡೆಲಿ ನೈಯ್‌ದ್ ಮಧ್ಯ ಸೊಪ್ಪು ಮಡ್ಗಿ ಹೊಲಿಯೊದು. ಇದರ್ನ ಇಂದೂ ಸಹ ಕೆಲವು ಹಿರಿಯರ್ ನೈಯ್‌ದವೆ. ಎರಡರ್‌ನ ಬೆತ್ತದ ಹಗ್ಗಲಿ ಬುರ್ಕ್ಸುವೆ. ಇದ್ ಕುಕ್ಕೆ ಮಾಡುವಂಗೆ ಒಂದು ವಳ್ಳ ಗುಡಿ ಕೈಗಾರಿಕೆ ಕೆಲ್ಸನೂ ಹೌದು. ಈಗೆಲ್ಲಾ ಪ್ಲಾಸ್ಟಿಕ್ ಕಟ್ಟಿಕಂಡವೆ ಮೈಗೆ.

ಪ್ರ : ಅಲ್ಲಾ ಇನ್ನ್ ಎಂತೆಂತ ವಸ್ತುಗ ಸಿಕ್ಕುವ್ವಾ ಹೆಂಗೆ?

ಉ : ಇನ್ನ್ ಮಳೆಗಾಲನೆ ಹೆಚ್ಚ್ ಫಸ್‌ಲ್ ಬುಡುವ ನಿಂಬುಳೆ, ಹೊಟ್ಟುಳೆ, ಕಿತ್ತುಳೆ, ಪೇರ್ಲಕಾಯಿ, ಚೋಳಹಣ್ಣ್(ಫೈನಾಪಲ್) ಕಾಡ್‌ಮಾವುನ ಹಣ್ಣ್, ಕಾಡ್ ಹಲ್ಸ್, ಗಜ ನಿಂಬೆ, ಕಂಯ್ಯುಳೆ, ಕಣಲೆ ಒಂದಾ ಎರಡಾ? ಇವುಗಳ್‌ಂದ ಉಪ್ಪ್‌ನ್‌ಕಾಯಿ, ಜ್ಯಾಂ-ಜ್ಯೂಸ್ ಮಾಡಿ ಹಣ ಗಳ್ಸುವ ವಿಧಾನನ ಕೂಡಾ ಕಂಡ್ ಹಿಡ್ಕಂಡೊಳೊ. ಹಿಂಗಾಗಿ ಈ ತರ ವಸ್ತುಗಳ್‌ನ ಸಂಗ್ರಹ್‌ಸಿ ಆಯಾ ಸಂದರ್ಭಕ್ಕೆ ಸರಿಯಾಗಿ ಹೆಣ್ಣ್ ಮಕ್ಕ ಇವುಗಳ ಸಂಗ್ರಹಣೆ ಕಲ್ತ್ ಕಂಡ್ರೆ ಆರ್ಥಿಕ ಮಟ್ಟನ ಸ ಸುಧಾರಿಸಿ ಕಣಕ್. ಈ ತರ ಕಲೆ ಹೆಣ್ಣ್‌ಮಕ್ಕಳಿಗಿದ್ದರೆ ಬಾರಿ ಉತ್ತಮ ಇನ್ನೂ ಹೇಳಕುತಾದರೆ ವಿಸೇಸಾಗಿ ಕಾಡ್‌ಲೇ ತನ್ನಷ್ಟಕ್ಕೆ ಬೆಳೆವ ಪಣ್‌ಪುಳೆ ಹಣ್ಣ್ ಇದರ್‌ಂದ ಸ ಪ್ರಯೋಜನವುಟ್ಟು. ಇದರ್‌ಂದ ತಯಾರ್ಸುವ ಕಾಟುಳೆ ಕೊಡ್ಗ್‌ನ ಮಾಂಸದ ಅಡ್‌ಗೆಗೆ ಇಲ್ಲದರೆ ಯಾವ ರುಚಿನೂ ಇರ್ತುಲೆ. ಹಿಂದೆನವು ಈ ಹಣ್ಣ್‌ಂದ ಬರೆ ಹುಳಿನೀರ್ ಮಾತ್ರ ಅಲ್ಲ ತುಪ್ಪನ ಸ ತಯಾರಿಸ್‌ತ್ತಿದ್ದೊ. ಆದರೆ ಈಗ ತೊಪ್ಪೆಗೆ ಬಾರಿ ಬೇಡಿಕೆ ಇರೊದರ್‌ಂದ ಹಣ್ಣ್‌ನ ಕೊಯ್ದ್ ಬೀಜ ತೆಗ್ದ್ ಬಿಸಾಡಿ ತೊಪ್ಪೆನ ಒಣ್‌ಗಿಸಿ ಮಾರಿ ಹಣ ಸಂಪಾದನೆ ಮಾಡುವೆ.


ಇನ್ನ್ ಇವರೊಟ್ಟಿಗೆ ಕಾಡ್‌ಲಿ ವಿಸೇಸಾಗಿ ಮಡಗಲಕಾಯಿ ತೇಳ್ದು ಸಿಕ್ಕದೆ. ಇದ್ಕೆ ಕಾಡ್ ಹಗಲಕಾಯಿತೇಳ್ಳಿ. ಇದ್ ಸಿಕ್ಕುದು ಅಪ್ರೂಪ ಮಾತ್ರ ಅಲ್ಲಾ ದುಬಾರಿನ ಹೌದು. ಹಂಗೆ ಕಾಡ್‌ಗೆಣ್ಸ್‌ಗ ತರತರದ್ ಸಿಕ್ಕುವೆ ಇದ್ ಸ್ವಲ್ಪ ಮಳೆ ಹೋದಂಗೆ ಸಿಕ್ಕದೆ

ಇನ್ನ್ ಮಳೆಗಾಲ ಸುರಾದಂಗೆ ಸಿಕ್ಕುವಂತದ್ದ್ ಬೆದ್‌ರ್ ಮತ್ತೆ ವಾಟೆ ಕಣಲೆ. ಇದರ ರುಚಿಯಂತೂ ಮಳೆಗಾಲ ಅಕ್ಕಿ ರೊಟ್ಟಿ ಮತ್ತೆ ಪಲ್ಯ ಸಾಂಬಾರ್ ತಿಂಬೊದೇ ಒಂದು ಸವಿ. ಕಣಲೆ ಗೈಪು (ಸಾರು) ಅಕ್ಕಿ ರೊಟ್ಟಿ ತೇಳ್ರೆ ವಿಸೇಸ ಊಟ ಕೊಡ್ಗ್‌ನವುಕೆ.

ಇದೆಲ್ಲಾ ನಮಗೆ ಗೊತ್ತೆಯಿತ್ತ್‌ಲೆ, ಎಂತೆಂತ ವಸ್ತುಗ ಸಿಕ್ಕುವೆ! ಹಂಗೆ ಕೊಡ್ಗ್‌ನ ಹಳ್ಳಿಲಿರುವ ಎಲ್ಲಾ ಹೆಣ್ಣ್ ಮಕ್ಕಳೂ ಇದರ ಪ್ರಯೋಜನ ಪಡ್‌ಕಣಕುತ ಹೇಳ್ನೊಲಾ?

ಇಷ್ಟೆಲ್ಲಾ ತಿಳ್ಸಿದ ನಿಮಗೆ ವಂದನೆಗ.

ಪಣ್‌ಪುಳಿ ಹಣ್ಣಿನಿಂದ ಹುಳಿನೀರು



ಮಳೆಗಾಲ ಪ್ರಾರಂಭವಾಗುತ್ತಿದ್ದಂತೆ ಪಣ್‌ಪುಳಿ ಮರದಲ್ಲಿ ಹೂಬಿಟ್ಟು, ಚಿಕ್ಕ ಚಿಕ್ಕ ಕಾಯಿಗಳಾಗಿ ಹಣ್ಣುಗಳಾಗಿ ಕಾಣಸಿಗುತ್ತವೆ. ಈ ಹಣ್ಣು ಆಗಸ್ಟ್ ಸೆಪ್ಟಂಬರ್ ತಿಂಗಳಲ್ಲಿ ಹಣ್ಣಾಗಿ ಮರದಿಂದ ಕೆಳಗೆ ಬೀಳತೊಡಗುತ್ತವೆ. ಕಿತ್ತಳೆ ಹಣ್ಣಿನ ಗಾತ್ರದ ಅರಶಿನ ಬಣ್ಣದ ಹಣ್ಣುಗಳನ್ನು ಕಂಡಾಗ ತಿನ್ನಬೇಕೆಂದು ಬಾಯಲ್ಲಿ ನೀರೂರುವುದಂತೂ ಸಹಜ. ತುಂಬಾ ಹಣ್ಣಾದಾಗ ದಿನಕ್ಕೆ 50-100ಹಣ್ಣುಗಳು ಮರದ ಕೆಳಗಡೆ ಬೀಳುತ್ತವೆ. ಇದನ್ನು ಹೆಕ್ಕಿ ತಂದು ಎರಡು ಭಾಗ ಮಾಡಿ ಬೀಜ ತೆಗೆದು ಸೌದೆ ಒಲೆಯ ಮೇಲ್ಭಾಗದಲ್ಲಿ ಬಿದಿರು ಅಥವಾ ಪಾಟೆಯ ತಟ್ಟಿಗಳಲ್ಲಿ ಒಂದಕ್ಕೊಂದು ಜೋಡಿಸಿ ಒಣಗಲು ಬಿಡಬೇಕು. ಏಲಕ್ಕಿ ಗೂಡುಗಳಲ್ಲಿ ಸಹ ಬಹಳ ಬೇಗ ಒಣಗುತ್ತದೆ. ನಾಲ್ಕೈದು ದಿನಗಳಲ್ಲಿ ಸಿಪ್ಪೆ ಚೆನ್ನಾಗಿ ಒಣಗಿ ಕಪ್ಪು ಬಣ್ಣಕ್ಕೆ ತಿರುಗಿದ ನಂತರ ಪ್ಲಾಸ್ಟಿಕ್ ಚೀಲಗಳಲ್ಲಿ ತುಂಬಿಸಿಡಬೇಕು.

ತೆಗೆದ ಬೀಜಕ್ಕೆ ಸ್ವಲ್ಪ ನೀರು ಹಾಕಿ ಮಣ್ಣಿನ ದಪ್ಪ ಮಡಿಕೆ ಅಥವಾ ಚಟ್ಟಿಗಳಲ್ಲಿ ಕಾಯಲು ಇಡಬೇಕು. ನೀರು ಮಂದವಾಗುತ್ತಾ ಕಾಲು ಭಾಗ ಬರುವಾಗ ಕಪ್ಪಾದ ಮಂದವಾದ ಹುಳಿನೀರು ತಯಾರಾಗುತ್ತದೆ. ಇದನ್ನು ಕಾಯಿಸಲು ಗಟ್ಟಿಯಾದ ಸೌದೆ ಸಹ ಹೆಚ್ಚು ಬೇಕಾಗುವುದು. ಈಗ ಕೆಲವು ವರ್ಷಗಳಿಂದ ಸಿಪ್ಪೆಮಾಡಿ ಮಾರಿ ಹಣ ಸಂಪಾದಿಸುತ್ತಾರೆ. ಅಲ್ಲದೆ ಕೇರಳದ ಕಡೆ ಒಳ್ಳೆ ಬೆಲೆಗೆ ಹೋಗುತ್ತದೆ. ಹಾಗೂ ಸಿಪ್ಪೆಗೆ ಕೆಜಿಯೊಂದಕ್ಕೆ ನಲವತ್ತೈದು ಐವತ್ತು ರೂ. ಸಹ ಇದೆ. ಒಂದು ಕೆ. ಜಿ. ಹುಳಿ ನೀರಿಗೆ ಸುಮಾರು ನೂರೈವತ್ತು ಹಣ್ಣುಗಳ ತನಕ ಬೇಕಾಗುತ್ತದೆ.

ನಮ್ಮ ಹಿರಿಯರು ದಟ್ಟಕಾಡು ಬೆಳೆದಿದ್ದ ಅಂದಿನ ಕಾಲದಲ್ಲಿ ಒಂದು ಮರವಿದ್ದರೆ ಒಗ್ಗಟ್ಟಿನಿಂದ ಸೇರಿಕೊಂಡು ಹತ್ತಾರು ಜನ ಸೇರಿ ಮರ ಹತ್ತಿ ಉದ್ದಗಳೆ ಬಡಿಗೆಗಳಿಂದ ಬಡಿದು ಉದುರಿಸುತ್ತಿದ್ದರು. ನಂತರ ಎಲ್ಲರೂ ಹಂಚಿಕೊಂಡು ಬುಕ್ಕೆಗಳಲ್ಲಿ ಹೊತ್ತು ತಂದು, ಅಂಗಳ ಅಥವಾ ಭತ್ತ ಕುಟ್ಟುವ ಕೊಟ್ಟಿಗೆಯಲ್ಲಿ ನಾಲ್ಕು ಗೂಟ ಊರಿ ಅವುಗಳ ಮೇಲೆ ಸಾಲಾಗಿ ಬೈನೆ ಮರದ ಪಟ್ಟಿಗಳನ್ನಿಟ್ಟು, ಅದರ ಮೇಲೆ ಉಪಯೋಗಕ್ಕೆ ಬಾರದ ಭತ್ತ ಕಟ್ಟುವ ಕಡಿಕೆಯಲ್ಲಿ ತುಂಬಿಸುತ್ತಿದ್ದರು. ಬೈನೆ ಮರದ ಪಟ್ಟಿಯ ಕೆಳಗೆ ಬಾಳೆಯ ದಿಂಡಿನ ಹಾಳೆಗಳನ್ನು ಸಾಲಾಗಿರಿಸಿ, ಆ ಹಾಳೆಗಳ ತುದಿಗೆ ಇನ್ನೊಂದು ಹಾಳೆಯನ್ನು ಇರಿಸಿ ಕೆಳಗಡೆ ಒಂದು ದಪ್ಪಗಾದ ಮಣ್ಣಿನ ಮಡಿಕೆಯನ್ನು ಇಡುತ್ತಿದ್ದರು. ಆಗ ನೀರು ಸೀದಾ ಕೆಳಗೆ ಬಂದು ಪಾತ್ರೆಗೆ ಬೀಳುತ್ತಿತ್ತು. ನೀರು ಹೊಯ್ಯುವುದರಿಂದ ಹಣ್ಣು ಬೇಗ ಕರಗುವುದು ಮತ್ತು ಶುಚಿಯು ಆಗುತ್ತಿತ್ತು. ಎರಡನೇ ದಿನದಿಂದ ಹಣ್ಣು ಕರಗಿ ನೀರು ತೊಟ್ಟು, ತೊಟ್ಟುಗಳಾಗಿ ಹಾಳೆ ತಟ್ಟೆಗಳ ಮೂಲಕ ಪಾತ್ರೆಗೆ ಬೀಳುವುದನ್ನು ತೆಗೆದು ದೊಡ್ಡ ಮಣ್ಣಿನ ಪಾತ್ರೆಯಲ್ಲಿ ಹಾಕಿ ರಾತ್ರಿಯಿಡಿ ಕಾಯಿಸುತ್ತಾ ಕೂರುತ್ತಿದ್ದರು. ಯಾಕೆಂದರೆ ಮಣ್ಣಿನ ಪಾತ್ರೆಯನ್ನು ಜಾಗರೂಕತೆವಹಿಸಿ ನೋಡಬೇಕಾಗುತ್ತಿತ್ತು. ಸುಮಾರು ಆರು ಎಂಟು ಗಂಟೆ ಕಾಯಿಸಿದ ನಂತರ ಕಪ್ಪಾದ ಅತಿ ಮಂದ ಹುಳಿನೀರನ್ನು ತಯಾರಿಸುತ್ತಿದ್ದರು.

ಮೂರು ನಾಲ್ಕು ದಿನಗಳಲ್ಲಿ ಹಣ್ಣೆಲ್ಲ ಕರಗಿದ ನಂತರ ಉಳಿದ ಬೀಜವನ್ನು ಒಣಗಿಸಿ ಕುಟ್ಟಿ ಒಡೆದು ಅದರೊಳಗಿರುವ ಕಿತ್ತಳೆ ತೊಳೆಗಳ ಆಕಾರದ ಕೇಸರಿ ಬಣ್ಣದ ಬೀಜವನ್ನು ತೆಗೆದು ಮಣ್ಣಿನ ಓಡಿನಲ್ಲಿ ಹುರಿದು ಕೆಂಪಗಾದ ನಂತರ ಕಲ್ಲಿನ ಒರಳಿನಲ್ಲಿ ಹಾಕಿ ಒನಕೆಯಿಂದ ಕುಟ್ಟುತ್ತಿದ್ದರು. ಕುಟ್ಟುತ್ತಾ ಇದ್ದಂತೆ ಎಣ್ಣೆಯ ಅಂಟಿನಿಂದ ನಿಧಾನವಾಗುವುದು. ನಂತರ ಅದನ್ನೇ ಒರಳಿನಿಂದ ತೆಗೆದು ಪಾತ್ರೆಗೆ ಹಾಕಿ ಸ್ವಲ್ಪ ನೀರು ಹೊಯ್ದು ಕುದಿಯಲು ಒಲೆಯ ಮೇಲಿಟ್ಟು ಎಣ್ಣೆ ಅಂಶ ಮೇಲೆ ಬಂದ ಹಾಗೆ ಅದನ್ನು ತೆಗೆದು ಇನ್ನೊಂದು ಪಾತ್ರೆಗೆ ಹಾಕಿ, ಚೆನ್ನಾಗಿ ಕಾಯಿಸುತ್ತಿದ್ದರು. ಆಗ ಅದರಲ್ಲಿ ನೀರಿನ ಅಂಶ ಕಮ್ಮಿ ಆಗುತ್ತಿದ್ದಂತೆ ತುಪ್ಪದ ಪರಿಮಳ ಬರುತ್ತಿತ್ತು. ತಣಿದ ನಂತರ ಹಸುವಿನ ತುಪ್ಪದ ಪರಿಮಳವನ್ನು ಹೋಲುತ್ತಿದ್ದು ಸ್ವಲ್ಪ ತರಿತರಿ ಇದ್ದು, ರೊಟ್ಟಿಯೊಡನೆ ತಿನ್ನುವುದಕ್ಕೂ ಚಕ್ಕುಲಿ, ಕಜ್ಜಾಯ, ವಡೆ ಇತ್ಯಾದಿ ತಿಂಡಿಗಳನ್ನು ತಯಾರಿಸಲು ಉಪಯೋಗಿಸುತ್ತಿದ್ದ ಅಂದಿನ ಆಕಾಲ ನೆಂಟರಿಸ್ಟರಿಗೆಲ್ಲಾ ಹಂಚುತ್ತಿದ್ದರು. ಈಗ ಹಾಗಲ್ಲ ಒಂದು ದೊಡ್ಡ ಮರದಿಂದ ಸುಮಾರು ಎಂಟು ಹತ್ತು ಸಾವಿರ ಆದಾಯ ಬರುತ್ತದೆ. ಪಣ್ ಪುಳಿ ಮರ ಸುಮಾರು ಎಪ್ಪತ್ತು ಎಂಭತ್ತು ಅಡಿ ಎತ್ತರ ಬೆಳೆಯುತ್ತದೆ. ಮತ್ತು ನಲವತ್ತು ಅಡಿಗಳ ವಿಸ್ತಾರಕ್ಕೂ ಜಾಗವನ್ನು ಆಕ್ರಮಿಸುತ್ತದೆ.

ಅಕ್ಕಿ ಬೀಸುದು

ಹೊತ್ತಾರೆ ನಾವೆದ್ದು ಯಾರ್ಯಾರ್ನ ನೆನಿಯೋಕು।
ಭತ್ತ ರಾಗಿ ಬೆಳೆವಾ ಭೂತಾಯ್ನಾ। ಸಣ್ಣಕ್ಕಿ ಬಯ್ಲ್‌ನ
ಎದ್ದೊಂದುಗಳಿಗೆ ನೆನಿಯೋಕು ॥
ಬೆಳ್‌ಗಾಗಿ ನಾವೆದ್ದು ಯಾರ್ಯಾರ್ನ ನೆನಿಯೋಕು।
ನಮ್ಮಪ್ಪ ಹರದೇವ ಮಾಶಿವನಾ ॥ ಸಣ್ಣಕ್ಕಿ ಬಯ್ಲ್‌ನ
ಎದ್ದೊಂದುಗಳಿಗೆ ನೆನಿಯೋಕು ॥
ಭತ್ತಾ ಕೊಟ್ಟವಂಗೆ। ಎಲ್ಲಾ ಭಾಗ್ಯನು ಬರ್ಲಿ।
ಅಕ್ಕಿ ಮ್ಯಾಲೆ ಆಡಿಕೆ ಕೂಸು ಬರ್ಲಿ ॥ ಆ ಮನೆಗೆ
ಮಲ್ಲಿಗೆ ಮುಡಿಯಕೆ ಸೊಸೆ ಬರ್ಲಿ॥
ಬೀಸೊ ಕಲ್ಲವ್ವ ಮಾ ತಾಯಿ । ಮೆಲ್ಲಾಂಗೆ ಅಕ್ಕಿನ
ಜರ್-ಜರ್‌ತೇಳಿ ಉದುರ್ಸವ್ವ ಕಲ್ಲವ್ವ
ನಾನಿಂಗೆ ವಿಳ್ಯಾದ ಆರತಿನ ಬೆಳ್‌ಗೀನೆ ॥

ಅಕ್ಕಿ, ರಾಗಿ -ಬೀಸುವ ಹೆಣ್ಣು ಕೆಲಸ ಬೇಗನೆ ಸಾಗಲಿ-ಎಂದು ಬೀಸುತ್ತಾ ತನ್ನ ಸಂಸಾರಕ್ಕೆ ರೊಟ್ಟಿ ಒಟ್ಟುಕೊಡುವ ಬೀಸುವ ಕಲ್ಲನ್ನು ಮಾ-ತಾಯಿ ಎಂದು ಹಾಡುತ್ತಾ ಕೆಲಸದಲ್ಲಿ ಮೈಮರೆಯುತ್ತಾಳೆ.

ಪ್ರಕೃತಿಯ ಮಡಿಲಿನಿಂದ ಹೂವಾಗಿ ಅರಳುವ ಕಲೆ

ಪ್ರಕೃತಿಯೊಂದಿಗೆ ಮರೆತು ಇತಿಹಾಸವಾಗಲಿರುವ ಕಲೆಗಳು, ಪ್ರಕೃತಿಯಿಂದ ಮಾನವ ಬದುಕಿದರೆ ಹೊರತು ಮಾನವನಿಂದ ಪ್ರಕೃತಿಯಲ್ಲ.

ಪ್ರಕೃತಿಯಿಂದ ಪಡೆಯುವ ಈ ಉಪಯೋಗಗಳು:

ಮರದಿಂದ: ನೇಗಿಲು, ನೊಗ, ತಾಯಿಮರ, ದನದ ಕುತ್ತಿಗೆಗೆ ಮೆಂಟೆ, ಕುಂಟೆ, ಛತ್ರ ಕುಟ್ಟಲು, ಒನಕೆ, ರಾಟೆ, ಅವಲಕ್ಕಿ ಕುಟ್ಟಲು ಒರಳು, ಮನೆ ಕಟ್ಟಲು, ಬಾಗಿಲು, ಕಿಟಕಿ, ಉಳಿ, ಬಾಜು, ಮಚ್ಚಿ, ಕತ್ತಿ, ಗುದ್ದಲಿ, ಪಿಕಾಸಿಗಳಿಗೆ ಹಿಡಿ, ನೆರೆಕೊಕ್ಕೆ, ಗಂಧ ಇತ್ಯಾದಿಗಳು ಒಂದೆ ಎರಡೆ. ಮೇಜು ಕುರ್ಚಿ ಮಂಚ ಪೀಠೋಪಕರಣಗಳು, ಮಣೆ, ಮುಕ್ಕಾಲು ಹೀಗೆ ಬಗೆ ಬಗೆಯವು.

ಕಾಡಿನಿಂದ ಬೆತ - ಬೆತ್ತದಲ್ಲಿ ದಪ್ಪ ಬೆತ್ತ, ಹಾಲು ಬೆತ್ತ, ಕಿರು ಬೆತ್ತ, ನಾಗ ಬೆತ್ತ ಹಂದಿ ಬೆತ್ತಗಳು, ಬೆತ್ತದಿಂದ ಬತ್ತ ಕಟ್ಟುವ ಕಡಿಕೆ, ತೊಟ್ಟಿಲು, ಕುರ್ಚಿ, ಮೇಜು, ಸ್ಟೂಲು, ಕುಕ್ಕೆ, ಮೊರ, ಚೀಲ, ಪೆಟ್ಟಿಗೆ, ಕುತ್ತು ಪೆಟ್ಟಿಗೆ, ಯಾಲಕ್ಕಿ ಪಟ್ಟೆ, ಉಯ್ಯಾಲೆ ಹಗ್ಗ, ಬುಟ್ಟಿ ಕೂಂಟಗೆ, ಮಕ್ಕಳಿಗೆ ಪಾಠ ಕಲಿಸುವಾಗ ಉಪಯೋಗಿಸುವ ಬೆತ್ತ ಕೋಲು, ಅಜ್ಜಂದಿರಿಗೆ ದೊಣ್ಣೆ, ಮಗುವಿನ ತೊಟ್ಟಿಲು, ಆವೇಶ ಭರಿತವನಿಗೆ ಸೇವೆ ಕೋಲು, ಅನ್ನ ಬಸಿಯಲು ಚಿಬ್ಬಲು, ಪಟ್ಟೆ ಹೀಗೆ ಹಲವಾರು.

ವಾಟೆಯಲ್ಲಿ ಹಲವು ವಿಧಗಳು. ಕಲ್ಲುವಾಟೆ, ಮಲೆವಾಟೆ, ಹೊಳೆವಾಟೆ, ಸಣ್ಣವಾಟೆ, ತೂಂಬ್‌ವಾಟೆ, ವಾಟೆಯಿಂದ ಸೂಂತ್ರಿ, ಕೊಳಲು, ದೊಂದಿ, ಪಾತಿ, ಕಡಿಕೆ, ಮೊರ ಪಟ್ಟೆ, ಕುಕ್ಕೆ, ಮನೆ ಕಟ್ಟಲು, ಗೊರ್ಗು, ಕೂಂಟಗೆ, ವನಲೆ, ವಾಲೆಪಟ್ಟೆ, ಹುತ್ತರಿಪಟ್ಟೆ, ಮೀನು ಹಿಡಿಯಲು ಪೂಡ, (ಕೂಳಿ) ಗೋರಿ ಹಾಗೂ ಭತ್ತ ಗುಡಿಸಲು ನೆಟ್ಟಿಕಡ್ಡಿ ಇವು.

ಸೋಜ: ಗದ್ದೆ ಏರಿಗಳಲ್ಲಿ, ಗದ್ದೆ ಬದಿಯಲ್ಲಿ ಹುಲುಸಾಗಿ ಬೆಳೆಯುತ್ತದೆ. ಕಪ್ಪೆ ಹುಲ್ಲು ಸಹ ಅಷ್ಟೆ ಬೆಳೆಯೂ ತುದಿಯಲ್ಲಿದ್ದು ಗದ್ದೆ ಬದಿಗಳಲ್ಲಿ ಬೆಳೆಯುತ್ತದೆ.

ಮುಡಂಗಿಯಿಂದ ಚಾಪೆ, ಕಾಲು ಚಾಪೆ, ಸಿಂಬೆ, ತೂಗುವ ನೆಲು, ಹಗ್ಗ ಹುಲ್ಲಿನಿಂದ ಒಣಗಿದ ಬಾಳೆಯ ಎಲೆಗಳಿಂದ, ಹಸಿ ಎಲೆಗಳಿಂದ ಗೊಬ್ಬರ ಹೊರುವುದಕ್ಕೆ ಹುಲ್ಲಿನಿಂದಲೂ ಸೌದೆ ಹೊರುವುದಕ್ಕೆ ಒಣಗಿದ ಬಾಳೆಯ ದರ್ಗ್‌ನಿಂದಲೂ, ನೀರು ಹೊರುವುದಕ್ಕೆ ಕಪ್ಪೆ ಹುಲ್ಲಿನಿಂದಲೂ, ಬಾಳೆಯ ದಿಂಡಿನಿಂದ ಒಣಗಿದ ಕಪ್ಪು ಬಿಳುಪು ಹಾಳೆಗಳು ಪಟ್ಟೆ, ಪಟ್ಟೆಯಾಗಿ ಸುಂದರವಾಗಿ ನೆಯ್ಯುವುದು. ಮದುಮಗಳು ನೀರು ತರುವುದಕ್ಕೆ ಮಣೆಯಿಂದ ಸಿಂಬೆ ತಯಾರಿಸುವರು. ಜೋಗಿ (ಸಿದ್ಧವೇಷ) ಕಟ್ಟಲು ಸಹ ಬಾಳೆಯ ದರ್ಗ್ ಬೇಕು.

ನಾರುಗಳು! ನಾರುಗಳಲ್ಲಿ ಹಲವಾರು, ರಕ್ಕಸಿನಾರು, (ಬಿತಾಳೆ ನಾರು) ಇತ್ಯಾದಿ. ಇವುಗಳಿಂದ ಕೈ ಚೀಲ, ಹುರಿಹಗ್ಗ ಭತ್ತ ಬೆಳೆಯನ್ನು ಮನೆಗೆ ತರುವುದಕ್ಕೆ ಹೊರೆಕಟ್ಟಲು, ಗದ್ದೆ ಮೀಸೆಗಳ ಉಪಯೋಗಕ್ಕೆ ಬೇಕು. ಪಟ್ಟಿ ಮರದಿಂದ ಹುತ್ತರಿ ಹಬ್ಬದಲ್ಲಿ ನೆರೆಕಟ್ಟಲು ನೆರೆಹಗ್ಗ ಬೇಕು. ಬೀಣೆಯಾಗಿ ಸಹ ಉಪಯೋಗವಾಗುತ್ತದೆ. ಮನೆ ಕಟ್ಟಲು ಸೌದೆ ಹೊರೆಕಟ್ಟಲು ಮನೆ ಹಗ್ಗ ಬಹಳ ಉಪಕಾರಿ. ಇನ್ನು ಅಂಟುವಾಳ, ಸೀಗೆ ಹೀಗೆ ಹಲವು ಪ್ರಯೋಜನಕಾರಿ ವಸ್ತುಗಳಿವೆ.

ಕೈಲ್‌ಪೊಳ್ದು

ಕೈಲ್ ಪೊಳ್ದ್ ಹಬ್ಬನ ಕೊಡ್‌ಗ್‌ಲಿ ಮಾತ್ರ ಆಚರ್‌ಪ್ಪೆ. ಇದ್ ಸಾಮಾನ್ಯಾಗಿ ಆಗಸ್ಟ್ 28 ಮತ್ತ್ ಸೆಪ್ಟಂಬರ್ 3ರಂದ್ ನಡ್‌ದವೆ. ಇದೇ ಸೋಣ 12ರ ಕೈಲ್ ಪೊಳ್ದು. 12ಮತ್ತ್ 18ರ ಕೈಲ್ ಪೊಳ್ದು ತೇಳ್ ಹೇಳ್‌ತ್ತ್‌ಡ್ಯೊ. ಆ ದಿನ ಕೊಡ್‌ಗ್‌ಲಿರುವ ಎಲ್ಲಾ ರೈತ ಜೆನ ಗದ್ದೆಲಿ ಕೆಲ್ಸ ಅಗೆ ನಾಟಿ ಎಲ್ಲಾ ಮುಗ್ಗಿ, ವ್ಯವಸಾಯಕ್ಕ್ ಉಪಯೋಗ್ಗಿದ ಎಲ್ಲಾ ಉಪಕರಣಗಳ್‌ನ ತೊಳ್ಚ್ ಸಾಲಾಗಿ ಮಡ್ಗಿ ಅವು ಗಣಪತಿಗೆ ಮಡ್ಗಿ ಪೂಜಿಸುವೆ. ಕೈಲ್‌ಪೊಳ್ದು ಹಬ್ಬ ತೇಳ್‌ಕ್ರೆ ಕೃಷಿ ಉಪಕರಣಗಳ ಆಯುಧ ಪೂಜೆ ಮತ್ತ್ ವಿಶ್ರಾಂತಿ ದಿನ ತೇಳ್ ರೂಢಿಲುಟ್ಟು. ಅಂದ್ ಪ್ರತಿ ಮನೆವು ವಿಶೇಷ ಊಟೋಪಚಾರಲಿ ಮುಳ್ಗ್‌ದ್ದವೆ.

ಆ ದಿನ ಐನ್‌ಮನೆಲಿ ಎಲ್ಲವು ಸೇರಿದ್ ನೆಲ್ಲಕ್ಕಿ ಮುಂದೆ ಮಾಡ್ತ ಅಡಿಗೆನ ಮಡ್ಗಿ ಕೋವಿ-ಒಡಿಕತ್ತಿಗಳ್ನ ಸಾಲಾಗಿ ಮಡ್ಗಿ ಅದರ ಮುಂದೆ ದೇವ್‌ರ್‌ಗೆ ಹೇಳ್ಕ್ಯಂಡ್ ಕಾಯಿ ಒಡ್ಚ್ ಒಂದು ಪಡೆನ ದೂರದ ಒಂದು ಮರದ ಕೊಡಿಲಿ ಮಡ್ಪವೆ, ಗೌರಿ ಹೂ ಅಂದ್‌ನ ವಿಶೇಷ ಹೂವಾಗಿದ್ದದೆ. ಆ ಪಡೆಗೆ ಗುರಿ ನೋಡಿ ಕೋವಿಲಿ ಗುಂಡು ಹಾರ್‌ಪ್ಪದು-ಅಂದ್‌ನ ವಿಶೇಷ. ಇದರ್‌ಂದ ಗುರಿಕಾರರ ಶಕ್ತಿ ಸಾಮರ್ಥ್ಯದ ಮಟ್ಟನ ಪ್ರದರ್ಶನ ಮಾಡ್ಚ-ಅಲ್ಲದೆ ಗುರಿ ಕಲಿಯೊವು ಬೇಟೆ ಕಲಿಯಕೆ ವಿಶೇಷ ಆಸಕ್ತಿ ತೋರ್‌ಪ್ಪವೆ. ಮತ್ತ್ ಊರವು ಸೇರಿ ಊರು ಬಾಣೆಗಳ್‌-ಆಟೋಟಗಳ ಸ್ಪರ್ಧೆಗಳ್ನ ಇಟ್ಟವೆ. ಭಾರ ಗುಂಡು ಎಸೆತ-ತೆಂಗ್‌ನಕಾಯಿಗೆ ಗುಂಡು ಹಾರ್‌ಪ್ಪದು ಹಿಂಗೆ ಆ ದಿನ ರೈತರ ಶ್ರಮ ಪರಿಹಾರಕ್ಕಾಗಿ ವಿಶೇಷ ಮನರಂಜನೆ ಮತ್ತ್ ಊಟೋಪಚಾರ ತೇಳ್‌ಕ್ರೆ ಮುಖ್ಯವಾಗಿ ಮಾಂಸಾಹಾರದ ಭೋಜನ ಇದ್ದದೆ. ಇದ್ ಕೈಲ್ ಪೊಳ್ದು ಹಬ್ಬದ ವಿಶೇಷತೆ.

ಇದ್ ಬಹಳ ಹಿಂದೆಂದ ನಡ್ಚ್ ಬಂದುಟು. ಹಾಲೇರಿ ಅರಸರ್ ಮಡ್ಕೇರಿ ಕ್ಯಾಟೆನ ಆಳ್ತಾಯಿದ್ದ ಸಮಯಲಿ ಕೋಟೆಲಿ ಕೆಲ್ಸ ಮಾಡ್ತ ಎಲ್ಲವುಕು ಒಂದೇ ದಿನ ರಜಕೊಡ್‌ಕೆ ಆದುಲೆ ತೇಳ್ 2ದಿನ ಈ ಹಬ್ಬನ ಮಾಡ್ಯೊ. ಕೊಡ್‌ಗ್‌ನ ಕೆಲವು ಊರುಗಳ್ಲಿ ಸೋಣ 12ಕ್ಕ್ಯೊ ಮತ್ತ್ ಕೆಲವು ಊರುಗಳ್ಲಿ 18ಕ್ಕ್ಯೊ ಮಾಡ್ಯೊ. ಅಗ ನೆಂಟ್ರ್‌ಸ ಅತ್ತಿತ್ತ ಹೋಗಿ ಗೌಜಿಲಿ ಕಾಲ ಕಳೆಯಕ್ಕಾಗಿ 2 ದಿನ ಈ ಸಂದರ್ಭ ಹಬ್ಬ ಮಾಡುವಂಗಾತ್. ಮಳೆಗಾಲದ ಕೆಲ್ಸಂದ ಸೋತ್ ಬಳಲಿದ ಎತ್ತ್‌ಗಳಿಗೂ ಆ ದಿನ ತೊಳಸಿದ ಒಟ್ಟ್ ತೇಳುವ ಅಕ್ಕಿ ತರಿ ಪಾಯಸನ ಮಾಡಿ ಕೊಡಿ ಬಾಳ್ಲೆಲಿ ತಿನ್ಸುವ ಪದ್ಧತಿ ಬಹಳ ಹಿಂದೆಂದ ನಡ್ಕಂಡ್ ಬಂದದ್. ಹಂಗೆ ಆ ದಿನ ಕೃಸಿ ಉಪಕರಣಗಳಿಗೂ ರೈತರಿಗೂ ಮನರಂಜನೆ ಮತ್ತ್ ವಿಶ್ರಾಂತಿ ದಿನ ಆಗ್‌ಟ್ಟು. ಆದರೆ ಇಂದ್ ಪೇಟೆಲ್ಲಿದ ನಮ್ಮ ರೈತರ ಮಕ್ಕಸ ನಗರ ಪ್ರದೇಶಗಳ್ಲಿ ನಡ್ಪದು ದಿನ ಆಗ್‌ಟ್ಟು ಅಲ್ಲದೆ ನಗರಗಳ್ಲಿ ಅವರವರ ಜನಾಂಗ ಬಂಧುಗಳೊಟ್ಟಿಗೆ ಸಂತೋಷಲಿ ಕಳೆಯುವ ದಿನ ಆ ಗುಟ್ಟು ಇಂದ್.

ಕೈಲು ಮುಹೂರ್ತ ಹಬ್ಬದ ಹಿನ್ನೆಲೆ

ಕೈಲು ಮುಹೂರ್ತ ಹಬ್ಬವು (ಕೈಲ್ ಪೊಳ್ದು) ಕೊಡಗಿನ ರೈತರ ಸಾಂಪ್ರದಾಯಿಕ ಹಬ್ಬವಾಗಿರುತ್ತದೆ. ಕೊಡಗು ಸುಮಾರು 250 ವರ್ಷಗಳ ಹಿಂದೆ ದಟ್ಟ ಅರಣ್ಯ ಪ್ರದೇಶವಾಗಿದ್ದು, ಅಗ ಇಲ್ಲಿ ಧಾಳಿ ನಡೆಸಿದ ಹೈದರಾಲಿ, ಟಿಪ್ಪು ಇವರ ಸೈನಿಕರು ತಮಗಾದ ಭೀಕರ ಅನುಭವಗಳನ್ನು ಚರಿತ್ರೆ ಹೇಳುತ್ತದೆ.

ಆಗ ಕಾಡು ಪ್ರಾಣಿಗಳ ಹಾವಳಿ ಕೂಡಾ ಅಷ್ಟೇ ಇತ್ತು. ಅಲ್ಲಲ್ಲಿ ಹಂಚಿ ಹೋಗಿ ಒಂಟಿ ಮನೆಗಳನ್ನು ಹೊಂದಿದ ರೈತ ಜನರು ಒಗ್ಗಟ್ಟಿನಿಂದ ಗುಂಪಾಗಿ, ವರ್ಷವಿಡೀ ತಮ್ಮ ವ್ಯವಸಾಯ ಹಾಗೂ ಇನ್ನಿತರ ಕೆಲಸಗಳನ್ನು ಮಾಡುತ್ತಿದ್ದರು. ರೈತರು ಮಳೆಗಾಲದ ಆರಂಭದ ಕೆಲಸವನ್ನು ಸುಮಾರು 2 ತಿಂಗಳು ಪೂರ್ತಿ ಮಳೆಯಲ್ಲಿ ಕೊರೆಯುವ ಚಳಿಯಿಂದ ತಮ್ಮ ನೇಗಿಲು ನೊಗ ಮತ್ತು ಎತ್ತುಗಳೊಡನೆ ಕಳೆಯುತ್ತಿದ್ದರು. ಸೋಣತಿಂಗಳು ಅಂದರೆ ಸೆಪ್ಟೆಂಬರ್ 3ನೇ ದಿನದ ತನಕ ನಾಟಿಯನ್ನು ಮಾಡಬಹುದು. ನಂತರ ಅಗೆಯನ್ನು ನಿಂತಲ್ಲಿಯೇ ಬಿಟ್ಟು ಬರುವುದ ಪದ್ಧತಿ. ಹೀಗೆ ಒಬ್ಬರು ಇನ್ನೊಬ್ಬರಿಗೆ ಸಾಮೂಹಿಕವಾಗಿ ಕೆಲಸ ಕಾರ್ಯಗಳನ್ನು ನಡೆಸುತ್ತಿದ್ದರು. ಪ್ರೀತಿ, ವಿಶ್ವಾಸ, ಸಹಕಾರಗಳ ಕಾಲವಾಗಿತ್ತು ಅಂದಿನ ದಿನಗಳು. ಹಿಂದೆ ಮಳೆಗಾಲವು ವರ್ಷದ 8 ತಿಂಗಳೂ ಇರುತ್ತಿದ್ದುದರಿಂದ ಸೆಪ್ಟೆಂಬರ್ ತಿಂಗಳಷ್ಟರಲ್ಲಿ ಮುಂಗಾರಿನ ತೀವ್ರತ ಕಡಿಮೆ ಆದಂತೆ ನಾಟಿ ಕೆಲಸವನ್ನು ಮಾಡಿ ಮುಗಿಸಿ ದಣಿದ ರೈತರಿಗೆ ಒಂದು ದಿನ ಸಂತೋಷಕೂಟದ ಅವಶ್ಯಕತೆ ಇತ್ತು.

ಹಾಲೇರಿ ಅರಸರ ಆಳ್ವಿಕೆಯ ಹಿಂದೆಯೂ ಈ ರೀತಿ ರೈತರು ನಡೆಸುತ್ತಿದ್ದರೋ ಏನೋ. ಆದರೆ ಅರಸರು ಕೈಲ್ ಪೋದುವಿಗೆ ಪ್ರೋತ್ಸಾಹ ನೀಡಿದರು. ಕೊಡಗು ದೇಶದ ರೈತ ಸೈನಿಕರು ಸರದಿ ಪ್ರಕಾರ ರಾಜನ ಅರಮನೆಯಲ್ಲಿ 20 ದಿವಸ ಕೆಲಸ ಮಾಡಿ 10 ದಿನ ರಜೆಯಲ್ಲಿ ಹೋಗಿ ತಮ್ಮ ಭತ್ತದ ಗದ್ದೆ ಕೆಲಸದಲ್ಲಿ ತೊಡಗುತ್ತಿದ್ದರು. ಆಗ ಕೊಡಗಿನ ವಿವಿಧ ಭಾಗಗಳಿಗೆ ಕಾಲ್ನಡಿಗೆ ಅಥವಾ ಕುದುರೆಗಳ ಮೇಲೆ ಹೋಗುವುದಿತ್ತು. ಕೈಲುಪೋದುವನ್ನು ತನ್ನ ನೆಂಟರಿಷ್ಟರೊಡನೆ ಕಳೆಯಲು ರೈತ ಸೈನಿಕರು ತಮ್ಮ ಮನೆಗಳಿಗೆ ಒಟ್ಟಿಗೆ ತೆರಳಿದರೆ ಒಂದು ವೇಳೆ ವೈರಿಗಳು ಆಕ್ರಮಣ ಮಾಡಿದರೆ ಅವರನ್ನು ಎದುರಿಸಲು ಕಷ್ಟವೆಂಬ ಕಾರಣಕ್ಕೆ ರಾಜನು ಸೋಣ ತಿಂಗಳು 12 ಮತ್ತು 18ರ ದಿನಗಳಂದು (ಆಗಸ್ಟ್ 28 ಮತ್ತು ಸೆಪ್ಟೆಂಬರ್ 3) 2 ಬಾರಿ ಆಚರಿಸಲು ಅನುವು ಮಾಡಿದನು. ಉದಾಹರಣೆಗೆ - ಹೊರ ಮಲೆನಾಡು (ಗಾಳಿಬೀಡು) ಮತ್ತು ತಾವುನಾಡು(ಭಾಗಮಂಡಲ) ಈ ಕಡೆ 12ರಂದು ಉಳಿದ ನಾಡುಗಳಲ್ಲಿ 18ರಂದು ಆಚರಿಸಲು ವ್ಯವಸ್ಥೆ ಮಾಡಿದಾಗ, ಬೇರೆ ಬೇರೆ ಕಡೆಯಿಂದ ನೆಂಟರು ಆಚೀಚೆ ಹೋಗಿ ಬರುವುದಕ್ಕೆ ಅನುಕೂಲವಾಯಿತು. ಹೀಗೆ 12ರ ಕೈಲ್‌ಪೋದುಗೆ ಹೋದವರು ಅರಮನೆಗೆ ಬಂದ ನಂತರ 18ರಂದು ಆಚರಿಸಲು ವ್ಯವಸ್ಥೆ ಮಾಡಿದಾಗ, ಬೇರೆ ಬೇರೆ ಕಡೆಯಿಂದ ನೆಂಟರು ಆಚೀಚೆ ಹೋಗಿ ಬರುವುದಕ್ಕೆ ಅನುಕೂಲವಾಯಿತು. ಹೀಗೆ 12ರ ಕೈಲ್‌ಪೋದುಗೆ ಹೋದವರು ಅರಮನೆಗೆ ಬಂದ ನಂತರ 18ಕ್ಕೆ ಇನ್ನೊಂದು ಪಾಳಿಯ ಜನರು ಹೊರಡುತ್ತಿದ್ದರು. ಅದರಂತೆ ರೈತ ಸೈನಿಕರು ಕಾವಲುಗಾರರು 20 ದಿನ ಅರಮನೆಯಲ್ಲೂ 10 ದಿನ ತಮ್ಮ ಗದ್ದೆಯ ಕೆಲಸ ಮಾಡುವ ಅವಕಾಶವನ್ನು ಅರಸರು ಮಾಡಿಕೊಟ್ಟರು. ಹೀಗೆ ಮಡಿಕೇರಿ ಅರಮನೆಯಲ್ಲಿ ವರ್ಷದ 365 ದಿನವೂ ಕಾವಲುಗಾರರು ಇರುವ ಹಾಗಾಗುತ್ತಿತ್ತು. ಇಂತಹ ದಿನಗಳಲ್ಲಿ ತಮ್ಮ ನೆಂಟರಿಷ್ಟರ ಇತರ ನಾಡುಗಳಿಗೆ ಹೋಗಿ 4 ದಿನವಿದ್ದು ಹಾಯಾಗಿ ಸಂತೋಷದಿಂದ ಬರುತ್ತಿದ್ದರು.

ಕೈಲುಪೋದು ದಿನ ಬೆಳಗ್ಗೆ ರೈತ ಗಂಡಸರು ಎದ್ದು ಮನೆಯ ಹೊರಮನೆ (ಐನ್ ಮನೆ) ಶುಚಿ ಮಾಡಿ ತಾವು ಗದ್ದೆ ಕೆಲಸಕ್ಕೆ ಬಳಸಿದ ನೇಗಿಲು, ನೊಗ ಗುದ್ದಲಿ ಕತ್ತಿ ಕೋವಿ ಪಿಕ್ಕಾಸಿ ಈ ತರದ ಎಲ್ಲಾ ವಸ್ತುಗಳನ್ನು ಮತ್ತು ಎತ್ತುಗಳ ಮೈಯನ್ನು ಭತ್ತದ ಹುಲ್ಲಿನಿಂದ ನೀರು ಹಾಕಿ ಒರೆಸಿ ತೊಳೆದು ಕ್ರಮವಾಗಿ ಇಟ್ಟು, ದಪ್ಪ ಗಂಧದ ಕೊರಡನ್ನು ಕಲ್ಲಿನಲ್ಲಿ ತೇದು ಅರಸಿನ ಮಿಶ್ರಮಾಡಿ ಗಂಧವನ್ನು

ಹಚ್ಚಿ ಬಾಳೆಯ ತಟ್ಟೆಯಲ್ಲಿ ಬೆಂಕಿಯ ಕೆಂಡವನ್ನು ಹಾಕಿ ಗಂಧದ ಚೂರು ಮತ್ತು ಧೂಪದ ಹುಡಿಯನ್ನು ಹಿಡಿ ತುಂಬಾ ಹಾಕಿ ಹೊಗೆಯಿಂದ ನೇಗಿಲನ್ನು ಪೂಜಿಸಿ ಆರತಿ ಬೆಳಗುತ್ತಾರೆ. ಎತ್ತುಗಳ ಹಣೆಗೆ ಗಂಧ ಹಚ್ಚಿ ಕೊಂಬಿಗೆ ಹೂವಿನ ಅಲಂಕಾರ ಮಾಡುತ್ತಾರೆ. ಹೆಂಗಸರು ಹುರಿದ ಅಕ್ಕಿಯ ತರಿಯಿಂದ ತೊಳಸಿದ ಹಿಟ್ಟನ್ನು ಮಾಡಿ 2ಮೊರಗಳಲ್ಲಿ ತುದಿ ಬಾಳೆಲೆ ಇಟ್ಟು ಪಾಯಸದಂತೆ ಹರಡಿ ಪ್ರಸಾದವಾಗಿ ಎತ್ತುಗಳಿಗೆ ತಿನ್ನಲು ಕೊಡುತ್ತಾರೆ. ಎತ್ತುಗಳು ತಿನ್ನುವುದನ್ನು ಕಂಡು ರೈತ ಸಂತೃಪ್ತಿ ಪಡುತ್ತಾನೆ. ವರ್ಷದ ಅನ್ನಕ್ಕೆ ದುಡಿದ ಎತ್ತಿನ ಋಣವನ್ನು ತೀರಿಸುವುದು ಹೀಗೆಂದು ನೆನೆಯುತ್ತಾನೆ. ನೇಗಿಲು ಪೂಜೆ ಮುಗಿದಂತೆ ಸಾಯಂಕಾಲ ಅದನ್ನು ಅಟ್ಟದ ಮೇಲೆ ಸೇರಿಸಿದರೆ ಮತ್ತು ತೆಗೆಯುವುದು ಮುಂದಿನ ಯುಗಾದಿ ಸಮಯಕ್ಕೆ.

ಇದಿಷ್ಟು ಬೆಳಗಿನ ಕೆಲಸವಾದರೆ ಹಿಂದೆ ಬಂದ ನೆಂಟರಿಷ್ಟರು ಮಧ್ಯಾಹ್ನಕ್ಕೆ ಮಾಂಸದೂಟವನ್ನು ಜೈನೆ ಮರದ ಸೇಂದಿಯನ್ನು ಭತ್ತದಿಂದ ಮಾಡಿದ ಸಾರಾಯಿಯನ್ನೊ ಕುಡಿಯುತ್ತಿದ್ದರು. ನಂತರ ಊರಿನವರೆಲ್ಲಾ ಊರಿನ ಅಂಬಲದ ಮೈದಾನದಲ್ಲಿ ಸೇರಿ ತೆಂಗಿನ ಕಾಯಿಗೆ ಗುಂಡು ಹೊಡೆಯುವುದು, ಭಾರದ ಗುಂಡು ಎಸೆತಗಳನ್ನು ಆಡುತ್ತಿದ್ದರು. ಇದು ನಿಜವಾದ ಕೈಲ್ ಮುಹೂರ್ತ ಹಬ್ಬ.

ಇದು ಕೊಡಗಿನ ರೈತರ ಹಬ್ಬವಾದರೆ ಇಂದು ಉದ್ಯೋಗಾರ್ಥಿಗಳಾಗಿ ನಗರ ಪ್ರದೇಶಕ್ಕೆ ತೆರಳಿದ ಕುಟುಂಬದವರೊಂದಿಗೆ ಇತರರೂ ಸೇರಿ ಆಟೋಟ ಊಟ ಭಾರ ಗುಂಡು ಎಸೆತ ಹಗ್ಗ ಜಗ್ಗಾಟದಂತಹ ಪ್ರತಿಭೆಗಳಲ್ಲಿ ಬಲಾ ಬಲ ಪ್ರದರ್ಶಿಸಿ ಸಂತೋಷಪಡುತ್ತಾರೆ. ತೆಂಗಿನಕಾಯಿಗೆ ಕಲ್ಲು ಹೊಡೆಯುವುದು ಗುಂಡು ಹಾರಿಸುವುದು ಇವುಗಳ ಬಗ್ಗೆ ಮಹಿಳೆಯರಿಗೂ ಮಕ್ಕಳಿಗೂ ತರಬೇತಿ ನೀಡುತ್ತಾರೆ ಹಿರಿಯರು. ತಮ್ಮ ಗಂಡು ಮಕ್ಕಳಿಗೆ ಕೋವಿಯನ್ನು ಆ ದಿನ ಹಿಡಿಸುತ್ತಾರೆ. ಇಂದು ಸಾಂಪ್ರದಾಯದ ಹಬ್ಬದಿಂದ ಸಂಘಟನೆಯಾಗುತ್ತಿದೆ. ಯುವ ಪ್ರತಿಭೆ ಸಂಘಟನೆ ರಾಜಕೀಯ ಪ್ರೋತ್ಸಾಹ ಇಂತಹ ವಿಷಯಗಳನ್ನು ಚರ್ಚಿಸುವ ಒಂದು ವೇದಿಕೆಯಾಗಿದೆ. ಪ್ರತಿಭಾ ಪ್ರದರ್ಶನಕ್ಕೆ ಅವಕಾಶವಿದೆ. ಹೀಗೆ ಇಂದು ಒಂದು ರೈತರ ನಾಡ ಹಬ್ಬವಾಗಿ ಉಳಿದಿದೆ.

ಕಾವೇರಿ ಸಂಕ್ರಮಣ

ಕಾವೇರಿ ಸಂಕ್ರಮಣದ ದಿನ ತಲಕಾವೇರಿ ಕುಂಡಿಗೆಲಿ ತೀರ್ಥ ಬಂದವೆ. ಇದ್ಕೆ ಕಾವೇರಿ ಜಾತ್ರೆ ತೀಳುವೆ. ಪ್ರತೀ ವರ್ಷ ಅಕ್ಟೋಬರ್ 17ನೇ ದಿನ ತುಲಾ ಸಂಕ್ರಮಣಲಿ ಕಾವೇರಿ ತೀರ್ಥ ಬಂದವೆ. ಸೂರ್ಯ ತುಲಾ ರಾಶಿನ ಪ್ರವೇಶ ಮಾಡುವ ಪುಣ್ಯ ಕಾಲನೇ ತುಲಾ ಸಂಕ್ರಮಣ.

ಕೊಡ್‌ಗ್‌ಲಿರುವ ಕುಟುಂಬದ ಒಬ್ಬಾದ್ರೂ ಆ ದಿನ ಕಾವೇರಿಗೆ ಹೋಗಿ ತೀರ್ಥ ತಂದವೆ. ಹೊಸದಾಗಿ ಮದುವೆ ಆದವು ಸುರುಗೆ ಕಾವೇರಿಗೆ ಹೋಗಿ ಭಾಗಮಂಡ್ಲ ಸಂಗಮಲಿ ಕೈ ಕೈ ಹಿಡ್ಕಂಡ್ 3 ಸಲ ಮುಳ್ಗಿ ಎದ್ದರೆ ಪಾಪ ಕಳ್ದ್ ಒಳ್ಳೆ ಸಂತಾನ ಭಾಗ್ಯ ಆದೆ ತೀಳ್ದು ಎಲ್ಲವ್ರುಕು ಗೊತ್ತಿರುವ ವಿಸಯ. ಕಾವೇರಿ ಸಂಕ್ರಮಣದಂದ್ ತೀರ್ಥ ಬಾಕಿ ಬಂದವಕೆ ಮುಂದೆ ಗದ್ದೆ-ತ್ವಾಟಗಳಿಗೆ, ಮನೆಗೆ, ಭತ್ತದ ಕಣಕ್ಕೆಲ್ಲಾ ಬೆಚ್ಚಿ ಕುತ್ತಿ(ಬೆಚ್ಚ್ ಮರದ ಕೊಂಬೆದ್ ತೀನ) ಅದ್ಕೆ ಹೂಗಳ್‌ಂದ ಅಲಂಕಾರ ಮಾಡುವೆ. ತೀರ್ಥ ಬಂದಮ್ಯಾಲೆ ಹೊತಾರೆ ಕೋಳಿ ಕೂಗುವ ಹೊತ್ತಿಗೆ ಎದ್ದ್ ದೋಸೆ ಹಿಟ್ಟ್

ಮಾಡಿ, ಕೊಡಿ ಬಾಳೆಲೆಲಿ ತೆಂಗಿನಕಾಯಿ, ಬಾಳೆ ಹಣ್ಣ್, ತುಪ್ಪ ಸಕ್ಕರೆ ನೊಟ್ಟಿಗೆ ಹಿಟ್ಟ್‌ನ ಮಡ್ಗಿ ದೀಪ ಹೊತ್ತ್ಸಿ ತಕ್ಕೊಂಡೋಗಿ ಗದ್ದೆಲಿರುವ ಜೆಟ್ಟಿಲಿ ಮಡ್ಗಿ, ಊದು ಬತ್ತಿ ಹೊತ್ಸಿ ಮಡ್ಗಿ 3ಸರ್ತಿ ಜೋರಾಗಿ ಕರ್ದವೆ. ಇದ್ ಪಾಂಡವರ ಭೂಮಿ ಅದರ್‌ಂದ ಆಗ ವನವಾಸಲಿದ್ದ ಸಮಯಲಿ ಕಾವೇರಿ ತೀರ್ಥ ಬಂದವರ್‌ಂದ ಪಾಂಡವ್ರುಕೆ ಹಿಟ್ಟ್ ಮಡ್ಗಿ ಅವರ ಕರೆಯೊದು ತೇಳ್ವೆ. ಸಂಕ್ರಮಣದ ದಿನ ಗದ್ದೆಗೆ ಹಿಟ್ಟ್ ಮಡ್ಗ್‌ಕೆ ಜೆಟ್ಟಿನ ತ್ರಿಕೋಣಾಕಾರಲಿ ಕುತ್ತಿ ಅದ್ಕೆ ನೋಕಟೆ ಬಳ್ಳಿನ ಸುತ್ತಿ ಹಿಟ್ಟ್ ಮಡ್ಗ್‌ಕನ ಸರಿಯಾಗಿ ನಿಲ್ಲುವಂಗೆ ಕುತ್ತುವೆ. ಮತ್ತೆ ಹಿಟ್ಟ್ ಮಡ್ಗಿ ಕೂ, ಕೂ, ಕೂ, ತೇಳಿ ಪಾಂಡವರ ಕರ್ದ್ ಅವು ತಿಂದ್ ಹೋದವೆ ತೇಳುವ ನಂಬಿಕೆ ಇವರ್ದ್ ಈಗಲೂ ಕದ್‌ರ್ ತೆಗೆವ ಗದ್ದೆಲಿ ಮಡ್ಗುದು ಕ್ರಮ. ಮತ್ತೆ ಕಾವೇರಿಗೆ ಹೋದವು ಸತ್ತವರ ಹೆಸ್ರ್‌ಲಿ ಕಾವೇರಿ ಸಂಗಮಲಿ ಪಿಂಡ ಹಾಕುವೆ ಮತ್ತೆ ಕೂದ್ಲ್ ತೆಗ್ಗುವೆ. ಸಣ್ಣ ಮಕ್ಕಳ ಹುಟ್ಟ್ ಕೂದ್ಲ್ ಸಹ ಕಾವೇರಿಲಿ ತೆಗೆವ ಪದ್ಧತಿ ಉಟ್ಟು. ಕಾವೇರಿಗೆ ಹೋಕನ ದೀಪ ಮಡ್ಗಿ ಹಿರಿಯರ ಕಾಲ್ ಹಿಡ್ದ್ ಹೋದು ಕ್ರಮ. ಕಾವೇರಿಂದ ತೀರ್ಥ ತಂದ್ ಮನೆ ಹತ್ತ್‌ಕನ ಸಹ ದೀಪ ಮಡ್ಗಿ, ಕಾಲ್ ಹಿಡ್ದ್, ತೀರ್ಥ ಪ್ರಸಾದನ ಮನೆ ಮನೆಗೆ ಹಂಚುವೆ. ಹಂಗೆ ನಮ್ಮ ಎಲ್ಲಾ ಸಂಪ್ರದಾಯಲಿ ಸಹ ದೀಪ ಮಡ್ಗಿ ಕಾಲ್ ಹಿಡ್ಕಂಡ್ ಆಶೀರ್ವಾದ ತಕ್ಕೊಂಡ್ದು ಹಿಂದೆನ ಕಾಲಂದೇ ನಡ್ದ್ ಬಂದ ಪದ್ಧತಿ.

ಹುತ್ತರಿ ಹಬ್ಬ

ಗದ್ದೆಗೆ ಬೀಜ ಹಾಕಿ ನೆಟ್ಟ್ -ಕದ್‌ರ್ ತೆನೆ ಹೊರ್ಟ್ ಕೊಯ್ದ್ ಮನೆಗೆ ತಾದೇ ಹುತ್ತರಿ ಹಬ್ಬ. ಅಂದ್ ಕೊಡ್ಗ್‌ಲಿದ್ದ ಎಲ್ಲಾ ರೈತರ ಮನೆ ಅಂಗಳ ಕಳದಾರಿ ಎಲ್ಲಾ ಮನಾರ ಆಗಿ ಹೋದಲ್ಲೆಲ್ಲಾ ಚೆಂದ್ ಹೂಗ ಅರ್‌ಶ್‌ಣ ತುಂಬಿಕಂಡ್ ನೋಡಿಕೆ ಕುಷೀ ಅದೆ. ಹೆಣ್ಣ್ ಜೆನಕಂತೂ ಬಂದುಗಳಿಗೆ ಪುರ್ಸೊತ್ತು ಇರ್ದ್ಲೆ. ಅವು ಹುತ್ತರಿ ಬಾತ್-ಹೊಸ ಭತ್ತನು ಬಂದವತೇಳಿ ಅಟ್ಟ ಅಡಿ ಗುಡ್ಸಿ ಎತ್ತಿ ಸುಣ್ಣ ಬಣ್ಣ ಬಳ್ದ್-ಸುಸ್ತಾಗಿ ಹೋಗಿದ್ದವೆ.

ಗೂಡೆಗ ಮಕ್ಕಂತೂ ಮಾವ್‌ನೆಲೆ ತ್ವಾರಣ ಕಟ್ಟುದೇನ್! ಅಂಗಳಕ್ಕೆ ಸೆಗ್‌ಣಿ ಸಾರ್ಸಿ ರಂಗೋಲಿ ಬರಿಯೊದೇನ್! ಚೆಂದ್ ಹೂ ಮಾಲೆ ಕಟ್ಟಿ ಬಾಗ್‌ಲ್‌ಗೆ ಮಡ್ಗುದು ತೊಳಿಯೊದು ಬಳಿಯೊದು ಮಾಡ್ತಾಯಿದ್ದವೆ. ಇದೆಲ್ಲಾ ನಾವೂ ಮಾಡ್ತಾಯಿದ್ದ ಕಾಲ ಅಂದಾಗಿತ್ತ್. ಗ್ಯಾನಾದೆ ಅಲ್ಲಕ್ಕಾ?

ಕಂಡಿತ ಗ್ಯಾನಾದೆಕ್ಕ -ಅಂದ್ ಕತ್ಲೆ ಕತ್ಲಾಕನ ಕುಟುಂಬದವು ಎಲ್ಲವು ಐನ್‌ಮನೆ ಸೇರ್ದು ಮನೆ ಹೆಣ್ಮಕ್ಕ ಅವರವರ ಮನೆಂದ ಮಾಡ್ದಂತ ತಿಂಡಿಗಳ್ನ ತಾದು ಒಟ್ಟಿಗೆ ಹತ್ತಾರ್ ಬಗೆ ತಿಂಡಿ ತಂಬಿಟ್ಟ್, ಎಲ್ಲಾ ಬಾಡೆ ಹತ್ರ ಯಿರ್ವ ಕ್ಯಾಂಬರೆ ವಳಗೆ ಸೇರ್ದು ಇದೆಲ್ಲಾ ಗ್ಯಾನಾದೆ.

ಅದೆ- ಗಂಡ್ ಜೆನ ಎಲ್ಲ ನೆರೆಕಟ್ಟ್‌ಕೆ ಕುದ್ದವೆ, ನೆರೆತೇಳ್ರೆ ಐದ್ ಸೊಪ್ಪುಗಳ್‌ನ ಸೇರ್ಸಿ ಕಟ್ಟುದು. ಅದರ್ಲಿ ಕುಂಬಳ,ಆಲ, ಗೇರ್, ಮಾವು ಮತ್ತೆ ಹಲ್ಸ್‌ನ ಮರದ ಸೊಪ್ಪುಗ ಇದ್ದವೆ ಇವರ್ದ ಕ್ರಮ ಪ್ರಕಾರ ಸುತ್ತಿ ಅಚ್ಚೆನಾರ್‌ಲಿ ಕಟ್ಟುವೆ ಅದರೊಳಗೆ 5 ಕೊನೆ ಕದರ್ ಮಡ್ಗುವೆ.

ಅಚ್ಚೆನಾರ್ ತೇಳ್ರೆ ಎಂತದಕ್ಕಾ?

ಅಜ್ಜಿನಾರ್ ತೇಳ್ರೆ ಅದೊಂದು ಸಣ್ಣ ಜಾತಿ ಮರ ಅದರ್ರ ಬಿಳ್ಪ್ ತೊಪ್ಪೆ (ಸಿಪ್ಪೆ) ತೆಗ್ತ್ ತೊಪ್ಪೆನ ಸಣ್ಣ ಸಿಗಿಯೊಕು. ಮತ್ತ್ ಈ ಅಜ್ಜಿನಾರ್‌ಲಿ ನೆರೆನಕಟ್ಟುವದು ಸಂಪ್ರದಾಯ. ಇದರ್ರ ಬಿಸಾರ್‌ಲಿ ಮಟ್ಟಿಕಾಗದ್ ಬೇಕಾಕನ ಮಾಡ್ವಂಡ್ ಇತ್ತ್ ಮಡೆಯೊಕು. ಸಾಧಾರಣ ಗದ್ದೆ ಬರಿಲಿ ಬಾನೆಗಳ್ ಸಿಕ್ಕುವೆ. ಇಂತದರ್ರೆಲ್ಲಾ ಬೆಳ್ಪ ಮಡೆಯೊಕು. ಮತ್ತ್ ಎಲ್ಲವು ಫಲಹಾರ ತಿಂದವೆ

ಫಲಾರ ತೇಳ್ರೆ ಎಂತದ್? ತಿಂಡಿ ಯಾವ್ವಾವ ಬಗೆ ಇದ್ದವೆ?

ಅದೇ ಅಪ್ಪಲಕ್ಕಿ, ತಂಬಿಟ್ಟ್, ಅಪ್ಪೆಪುಟ್ಟ್, ಕರ್ಜಿಕಾಯಿ, ಕಜ್ಜಾಯ ಬಿಂಗೆಲ್ಲಾ ಇದ್ದವೆ. ಫಲಾರಮಾಡಿ ಗಂಡ್‌ಜನ ದೇವಸ್ಥಾನಕ್ಕೆ ಹೋಗಿ ಕದ್‌ರ್ ತಂದವೆ. ಅವು ಬಂದಂಗೆ ಐನ್‌ಮನೆಲಿ ಕದ್‌ರ್ ತೆಗೆಕೆ ಹೊರ್ಟವೆ. ಆಗ ಎಲ್ಲವು ನೆಲ್ಲಕ್ಕಿ ದೀಪದ ಎದ್‌ರ್ ಬಿತ್ತವೆ. ನೆಲ್ಲಕ್ಕಿ ಬಡಿಲಿ ಹೊಸ ಚಾಪೆ ಹಾಕಿ ಮನೆ ಮಟ್ಟಿದ್ದವೆ. ಹೊಸ ಹುತ್ತರಿ ಪಟ್ಟೆಲಿ ಬಾಳೆಲೆ ಮಟ್ಟಿ ಅದರ್ಲಿ ಅಕ್ಕಿ ತೆಂಗ್‌ನಕಾಯಿ ಎಲೆ ಅಡ್ಕೆ ಮಣ್ಣ್‌ನ ದೀಪನೂ ಹೊತ್ತಿದ್ದವೆ. ಕದರ್ ಗುತ್ತಿಗೆ ಹಾಲ್ ಹಾಕಿ ಹಲ್‌ಕತ್ತಿನು ಹಾಕಿ ಮಟ್ಟಿದ್ದವೆ. ಮತ್ತೆ ಒಂದು ಕೋವಿನೂ ಇದ್ದವೆ.

ಈಗ ಬಿರಿಯವು ತೇಳ್ರೆ ಪಟ್ಟೆದಾರ್ರ ಬಂದ್ ಸಂಪ್ರದಾಯ ಉಳ್ಳುಲಿರುವ ಮುಖ್ಯಸ್ತ್‌ಗೆ ಗುತ್ತಿನ ಹೊರ್ರಿಕೆ ಎಲ್ಲವ್ರುಕು ಕೇಳುವಂಗೆ ಎಲ್ಲವು ಬಸ್ಸ - ನಾವು ಇಂದ್ ನೆಟ್ಟಿ ಬೆಳೆನ ಕೊಯ್ಯಿಕೆ ಹೊರ್ಟವೆ. ಆ ಇಗ್ಗುತ್ತಪ್ಪ ಕಾವೇರಮ್ಮ ಇವ್ರ -ಆಯ್ಯಾಗಿ ಈ ಕಾರ್ಯನ ನಡ್ಡಿಕೊಡಕುತ ದೇವ್ರಿಗೆ ಪ್ರಾರ್ಥನೆ ಮಾಡಿ ಅಕ್ಕಿ ಹಾಕಿ ಕೈ ಮುಗ್ಗವೆ. ಗುತ್ತಿ ಹೊರಂದ ಕಂಚಿಯ ಎಲ್ಲವರ ಕಾಲ್‌ಮುಟ್ಟಿ ನಮಸ್ಕಾರ ಮಾಡ್ಡ ಮನ್ನಾಲೆ ಗುತ್ತಿನ ಎತ್ತಿಕೊಟ್ಟವೆ. ಕಂಚಿಯ ಮುಂದೆ ಗುತ್ತಿ ಬಿಂದೆ.

ಆಗ ಗುತ್ತಿ ಎತ್ತಿಕಂಡ್, ಇಗ್ಗುತ್ತಪ್ಪ ಕಾವೇರಮ್ಮ ಪೊಲಿ ಪೊಲಿಯೇ ಬಾ ಪೊಲಿಯೇ ಬಾ-ಪೊಲಿಯೇ ಬಾ ತೇಳ ಜೋರಾಗಿ ಹೇಳ್ವಂಡ್ ಹೆಗ್‌ರ್‌ಲಿ ಮಡ್ವಂಡ್ ವಾದ್ಯದೊಟ್ಟಿಗೆ ಎಲ್ಲವೂ ಪಟಾಕಿ ಹೊಡ್ಡಿಕಂಡ್ ಹೋಗಿ ಕದ್‌ರ್ ತೆಗೆವ ಗದ್ದೆಲಿ ಬಿತ್ತವೆ.

ಮತ್ತ್ ಕದ್ರ ಗುತ್ತಿನ ಇಳ್ಳಿ ಗುತ್ತಿಲಿದ್ದ ಹಾಲ್‌ನ ಪ್ರಾರ್ಥಕ್ಕೆ ಪೊಕಮಾಡಿ 5 ಸುಲಿಗಳ್‌ನ ಬಿದ್ದ್ ನೆರೆಕಟ್ಟಿ ಬುಡಕ್ಕೆ ಹಾಲ್ ಹೊಯ್ದ್ ಬಾಳೆಲಿಟ್ಟಿದ್ದ ಕಂಪಕ್ಕೆ ಗಂಧ ಧೂಪ ಹಾಕಿ ಹೊಗೆ ಕೊಟ್ಟ್ ಪೊಲಿ ಪೊಲಿಯೇ ಬಾ ತೇಳ್ವಂಡ್ 5 ಸುಲಿ ಕೊಯ್ಯವೆ. ಆಗ ಒಂದು ಗುಂಡುನ ಹಾರ್ಸವೆ. ಕೊಯ್ಯದರ್ರ ಗುತ್ತಿವಳಗೆ ತುಂಬುಸಿ ಮತ್ತ್ ಬೇಕಸ್ಟ್ ಸುಲಿ ಕೊಯ್ಯ್ ಎಲ್ಲವು ಕೈಗಳ್‌ಲಿ ಸ್ವಲ್ಪ ಸ್ವಲ್ಪ ಹಿಡ್ಕಂಡ್ ಬಂದವೆ. ಕಳದ ಬೇಟೆಗೆ 3 ಸುತ್ತ್ ಬಂದವೆ. ಆ ಕದ್‌ರ್ ಹೊತ್ತಂಡ್ ಬರುವ ದೃಶ್ಯ ಬಾರಿ ಪೊರ್ಲುಯಿದ್ದದೆ. ಅಂಗಳ ತುಂಬ ರಂಗೋಲಿ ಬರ್ದಿದ್ದವೆ.

ಮತ್ತ್ ಬಂದ್ ಮನೆ ಮೆಟ್ಟ್‌ಲಿ ಬಿತ್ತವೆ. ಒಳಗಂದ ಕಾಲ್‌ತೊಳಿಕೆ ನೀರ್ ತಂದ್ ಕಾಲ್ ತೊಳ್ಸಿ ತುಪ್ಪಹಾಕಿದ ಹಾಲ್‌ನ ಕುಡ್ಸವೆ. ಹಂಗೆ ಮನೆಗೆ ಹತ್ತಿ ನೆಲ್ಲಕ್ಕಿ ಹತ್ರ ಕದ್‌ರ್ ತಂದ್ ಮಡ್ಗವೆ. ಪುನಃ ದೇವ್ರ ದೀಪಕ್ಕೆ ಅಕ್ಕಿ ಹಾಕಿ ಬಿರಿಯವರ ಕಾಲ್‌ಮುಟ್ಟಿ ನಮಸ್ಕಾರ ಮಾಡುವೆ.

ಹುತ್ತರಿ ಆತಾ?

ಇಲ್ಲೆ, ಇನ್ನ್ ಕದ್‌ರ್‌ಂದ 7ಭತ್ತತೆಗ್ತ್ ಅದರ್‌ಂದ ಅಕ್ಕಿ ತೆಗ್ತ್ ಪಾಯ್ಸ ಪಾತ್ರಕ್ಕೆ ಹಾಕುವೆ. ಇದರ್‌ಂದ ಹೊಸ ಅಕ್ಕಿ ಬಾತ್‌ತ ಲೆಕ್ಕ. ಎಲ್ಲವು ಸ್ವಲ್ಪ ಹೊತ್ತು ಪಟಾಕಿ ಹೊಟ್ಟುವೆ. ಮತ್ತ್ ಚಾಪೆ ಅಥವಾ ಮನೆಲಿ ಕುದ್ದ್ ಊಟ ಮಾಡುವೆ. ಗಂಡ್‌ಜನ ಮುಂದೆ ಕುದ್ದವೆ. ಹೆಣ್ಣ್‌ಜನ ಇಕ್ಕಿಕೆ ಸುರು

ಮಾಡುವೆ. ಸುರುಗೆ ಪಾಯ್ಸ ಮತ್ತೆ ಹುತ್ತರಿ ಗೆಣ್ಸ್, ಕೆಸನ ಗೆಂಡೆ, ಕಾಪ್‌ಗೆಣ್ಸ್, ಶುಂಠಿ ಪಜ್ಜಿ, ಸ್ವಾಂತೆ ಪಚಡಿ ಹಂಗೆ ಇದ್ದದೆ. ಅಷ್ಟೊತ್ತಿಗೆ ಹೊಸ ಕೂಸುಗ ಇದ್ದರೆ ಎಲ್ಲವುಕೂ ಇಕ್ಕ ಆದ ಮ್ಯಾಲೆ ಹಿರಿಯವು ಎಲ್ಲವುಕು ಎತ್ತಿತ್ತಾ? ಕೇಳುವೆ.

ಆಗ ಇಲ್ಲೆ, ಇಲ್ಲೆ ಇಲ್ಲಿ ಹೊಸ ಕೂಸುಗ ಬಂದೊಳೊ ಅವುಕೆ ಮುಂದೆ ಬಾಯಿಗೆತ ಕೂಸುನ ಬಾಯಿಗೆ ಎಲ್ಲವು ಪಾಯ್ಸ ಮುಟ್ಸುವೆ. ಕಡೆಗೆ ಕೈ ತೊಳೆಕೆ ಮುಂದೆ ಕೈ ಬಾಯಿ ಒಪ್ಪಿತಾ ಕೈ ತೊಳೆಕೆ ಏಳೊನಾ? ತೇಳಿ ಎದ್ದವೆ. ಹಿಂಗೆ ಅಂದ್‌ನ ಹುತ್ತರಿ ಮುಗ್ದದೆ.

ಮಾರ್ನೆ ದಿನ ಹೊತ್ತಾರೆ ದನದ ಕೊಟ್ಟಿಗೆಗೆ ಹೋಗಿ ದನಗಳ ರಕ್ಷಣೆ ಮಾಡುವ ಅಂಗರಂಗೆ ಬಾಗ್‌ಲ್‌ಲಿ ಬಾಳೆಲೆಗೆ ಪಾಯ್ಸ ಹಾಕಿ ಮಡ್ಗುವೆ. ರಕ್ಷಣೆ ಮಾಡುವ ಅಂಗರಂಗೆ ಕೆಲ್ಸ ಮಾಡ್ವ ದನಗಳಿಗೆ ಭಾರಿ ಪ್ರಾಮುಖ್ಯತೆವುಟ್ಟು. ಹೇಳ್ದಂಗೆ ಕೊಟ್ಟ ಹೆಣ್ಮಕ್ಕ ಬಂದವು ಒಂದು ಆಲದ ಎಲೆಗೆ ಹಿಟ್ಟ್‌ನ ಹಾಕಿ ಅಡಿಗೆ ಮನೆ ಬಿಟ್ಟಕೆ ಹೊಡಿಯೊದುವುಟ್ಟು ಅಂದ್ ಕೆಲುಕಡೆ.

ಹುತ್ತರಿ ಮುಕ್ತಾ?

ಎಲ್ಲಿ ಮುಕ್ತ್? ಕೆಲುಕಡೆ ಕೋಲು ಹೊಡಿಯೊದು ಜೋಗಿ ಕಟ್ಟುದು. ಎಲ್ಲಾ ಸೇರ್‌ಕ್ನ ಒಂದುವಾರಾದ್ರೂ ಹುತ್ತರಿಗೆ ಬೇಕೆ ಬೇಕು. ಅಂದ್ ಹುತ್ತರಿಗೆ ಎಲ್ಲವುಕು ಹೊಸ ಬಟ್ಟೆ, ಮನೆ ತುಂಬಾ ನೆಂಟ್ರ ಮಕ್ಕಳ ಓಡಾಟ ಗೌಜಿಲಿ ಇರ್‌ತಿತ್ತ್. ಮನೆ ಹಾಡ್ಡು-ಜೋಗಿ ಕಟ್ಟುದೂ ಇರ್ತಿತ್ತ್. ಈಗ ಅದೆಲ್ಲಾ ಕೊಡ್ಗ್‌ಲಿ ಬಾರಿ ಕಡೆ ನಿತ್ತುಟ್ಟು.

ಅದ್ ಯಾಕಾಗಿ ನಿತ್ತೋತು ತಿಳ್ಸಿರ್ರಾ?

1962ನೇ ಇಸವಿಲಿ ಒಂದು ಯುದ್ಧ ಆತ್ ಚೀನಾ ಭಾರತದ ಮ್ಯಾಲೆ ಹಂಗೆ ದೇಶಕ್ಕೆ ಕಷ್ಟ ಬಾತ್‌ತ ಸರ್ಕಾರದ ಘೋಷಣೆಗೆ ಆ ವರ್ಷ ಹಬ್ಬಗಳ್ನ ವಿಜೃಂಭಣೆಯಿಂದ ನಡ್ಸಿಕಾಗದ್‌ತ ಆ ವರ್ಷ ಸುಮಾರ್ ಕಡೆ ಈ ಹಬ್ಬಗಳ್ನ ನಿಲ್ಸಿಬುಟ್ಟೊ. ಆಗ ನಿತ್ತದ್ ನಿತ್ತೇ ಹೋತು।

ಹೊರಗಿರುವ ನಮ್ಮಂತವುಕೆಲ್ಲಾ ಎಂತದೂಗೊತ್ತ್‌ಲೆ. ಹುತ್ತರಿ ಹಬ್ಬದ ವಿಷಯ ಎಷ್ಟ್ ಸಾಂಪ್ರದಾಯಕ ಆಗಿವುಟ್ಟು. ಜೊತೆಗೆ ಜೋಗಿ ಪದಪನಾರ್‌ಗೊತ್ತಿದ್ದರೆ ಹೇಳಿ ನೋಡ್ವೊ

ಹುತ್ತರಿ ಜೋಗಿ ಹಾಡ್

ಓ.... ತಾಲಿ.... ತಾಲಿಯೋ.... ಲಲ್ಲೇಲಾ.....
ನೀ ಎಲ್ಲಿಂದ ಬಂದ್ಯೋ.... ಮಾಯದ ಜೋಗಿ ?
ನಾ ಮಾಯಂದ ಬಂದೆ... ಮಾಯದ ಜೋಗಿ..ತಾಲಿ
ನೀ ಎಲ್ಲಿಂದ ಬಂದ್ಯೋ ಬೈರಪ್ಪ ಜೋಗಿ ?
ನಾ ಕಿಗ್ಗಟ್ಟ್‌ನಾಡ್‌ಂದ ಬಂದೆನೋ ತಾಯವ್ವಾ..ತಾಲಿ
ಯಾಕಾಗಿ ಜೋಗಪ್ಪ ಕೊಡ್ಗಿಗೆ ಬಂದ್ಯೊ
ಕೊಡ್ಗ್‌ನಾ ಹುತ್ತರಿ ನೋಡಿಕೇ ಬಂದೆ..ತಾಲಿ
ಹುತ್ತರಿ ಹಬ್ಬಕ್ಕೆ ಯಾಕಾಗಿ ಬಂದ್ಯೊ?

ತಂಬಿಟ್ಟ್ ತಿಂಬಕೆ ಹಬ್ಬಕ್ಕೆ ಬಂದೆ..ತಾಲಿ
ಯಾಕಾಗಿ ಜೋಗಪ್ಪ ನಮ್ಮನೆಗೆ ಬಂದ್ಯೊ?
ನೆಲ್ಲಕ್ಕಿ ದೀಪದ ಬೆಳ್ಕ್ ಕಂಡ್ ಬಂದವ್ವಾ..ತಾಲಿ
ಬೆಳ್ಕ್ ನೋಡಿ ಬಂದೆನೊ ತಾಯವ್ವಾ
ಜೋಗಿಗೆ ತಂಬಿಟ್ಟ್ ಬಾಳೆಣ್ಣ್ ಕೊಡವ್ವಾ..ತಾಲಿ
ಜೋಗಿನ ಹೊಡಿಬ್ಯಾಡಿ ಬೆಯ್‌ಬ್ಯಾಡಿ ಮಕ್ಕಳೇ.
ಜೋಗಿನ ಹೊಡ್‌ದರೆ ಸೊಂಟಾನೆ ಉಳುಕ್ಯೋದು
ಕಣ್ಣ್‌ನಾ ಬುಟ್ಟರೆ ಬೆಂಕೀನೆ ಕಾಂಬೋದು..ತಾಲಿ
ಕೇಳಿ ಕೇಳಿ ಮಕ್ಕಳೆ-ಕೇಳಿ ಕೇಳಿ ತಕ್ಕರೆ
ಆ ಬೆಂಕಿ ಬಿದ್ದಲ್ಲಿ -ಬೂದೀನೆ ಆಗ್ಯೋದು
ಕೇಳಿ ಕೇಳಿ ಮಕ್ಕಳೆ -ಕೇಳಿ ಕೇಳಿ ತಕ್ಕರೇ
ಜೋಗಿ ಪದನಾ ಹಾಡೋನ -ಜೋಗಿನೊಟ್ಟಿಗೆ ಕೋಂಯೋನಾ
ಚುರುಕಾಗಿ ಕುಣಿತ : ತಾಲಿ ತಾಲಿಯೋ ಲಲ್ಲೇಲಾ
ಎಲ್ಲಿಂದ ಬಂದ್ಯೋ ಬೈರಪ್ಪ ಜೋಗಿ ತಾಲಿ .....ತಾಲಿಯೋ ಲಲ್ಲೇಲಾ
ತಂಬಿಟ್ಟ್ ತಿಂಬಕೇ ಹಬ್ಬಕ್ಕೆ ಬಂದೆ...ತಾಲಿ....
ನಾ ಹೋನೆ ನಾಹೋನೆ ತಾಯವ್ವಾ......
ಬರೊರ್ಸ ಬನ್ನೆ ತಾಯವ್ವಾ....ತಾಲಿ....
ನೆಲ್ಲಕ್ಕಿ ದೀಪ ಬೆಳ್ಗಲಿ ತಾಯವ್ವಾ......
ನೆಲ್ಲಕ್ಕಿ ದೀಪ ಬೆಳ್ಗಲಿ ತಾಯವ್ವಾ
ತಾಲಿ....ತಾಲಿಯೋ ಲಲ್ಲೇಲಾ
ತಾಲಿ... ತಾಲಿಯೋ ಲಲ್ಲೇಲಾ
ತಾಲಿ... ತಾಲಿಯೋ... ಲಲ್ಲೇ....ಲಾ...

<u>ಒನ್ನೆಲಿ</u>: ಹಾಲೇರಿ ಅರ್‌ಸ್ ಮನೆತನದ ರಾಜ ದೊಡ್ಡ ವೀರರಾಜನ ಕಾಲಕ್ಕೂ ಹಿಂದೆ (1865ನೇ ಇಸವಿಗೂ ಹಿಂದೆ) ಆಗಲೇ ಹುತ್ತರಿ ಹಬ್ಬನ ಬಾರಿ ವಿಜೃಂಭಣೆಂದ ನಡ್‌ತಿದ್ದೊತ ತಿಳ್ದ್ ಬಂದದೆ. ಆಗನ ಕಾಲಲಿ ಪನ್ನ ಗದ್ದೆ ತೇಳ್ರೆ ರಾಜನ ಸ್ವಂತ ಆಸ್ತಿನಾಕ್ ನಾಡ್ ಅರಮನೆ ಗದ್ದೆ ಆಗಿತ್ತ್. ಅಲ್ಲಿ ಕದ್‌ರ್ ತೆಗೆತಿದ್ದೊ. ಹುತ್ತರಿ ದಿನ ಪನ್ನ ಗದ್ದೆಂದ ಕದ್‌ರ್ ತೆಗೆಕಾರನ ಫಿರಂಗಿ ಗುಂಡುನ ಹಾರ್‌ಸ್ತಿದ್ದೊ. ಒಂದು ಫಿರಂಗಿ ಗುಂಡುನ ಕದ್ರ್ ತೆಗೆಕನ 2ನೆ ಫಿರಂಗಿನ ದಾರಿಲಿ ಬಾಕನ ಮತ್ತೆ ಮೂರ್ನೆ ಫಿರಂಗಿನ ಅರಮನೆ ಮೆಟ್ಟ್ ಹತ್ತ್‌ಕಾಕನ ಹಾರ್‌ಸ್ತಿದ್ದೊ ಗಡ. ದಾರ್ಲಿ ಬಾಕನ ಕೇಪುನ ಕೋವಿಲಿ 16 ಗುಂಡುಗಳ್‌ನ ಹಾರ್ಸುವ ಪದ್ದತಿಯಿತ್ತ್.

ಅಂಗರಾಜನ ಕಾಲಕ್ಕೆ ಬಾಕನ ಅಂಪ ರೈತ ಆಗಿದ್ದ್‌ರ್‌ಂದೇನೊ ಖರ್ಚುಕಮ್ಮಿ ಮಾಡುವ

ಉದ್ದೇಶಂದ ಫಿರಂಗಿ ಗುಂಡುನ ಸಿಡ್ಸಿ ಒಂದು ಆಜ್ಞೆ ಹೊರ್ಡ್ಸಿತ್.

ಇನ್ನ್ ಮುಂದೆ ಹುತ್ತರಿ ಹಬ್ಬಲಿ ಕದ್ರ್ ತೆಗೆಪ ಮೂಹೂರ್ತಕ್ಕೆ ಕದ್ರ್‌ಕೊಯ್ಯುಕನ ಕೇಪ್ರನ ಕೋವಿಲಿ ಒಂದು ಈಡ್ ಗುಂಡ್-ಮಧ್ಯದಾರಿಲಿ 2ನೆ ಈಡ್ ಗುಂಡ್. ತಲ್ಲಿದಂಗೆ 3ನೇ ಈಡ್ ಗುಂಡ್ ಈ ಕಾಯಿದೆನ ಕಾಯಂ ಆಗಿ ನಡ್ಪಿಕಂಡ್ ಬರೊಕುತ ಬರ್ದ್ಪಿ ಮಡ್ಗಿತ್. ಅಂದ್‌ಂದ ಇಂದಿಗೂ ಈ ಕ್ರಮ ನಡಿತಾವುಟ್ಟು ತೇಳ್ದ ಕುಸಿನ ವಿಷಯ.

ಆಗನ ಕಾಲಲಿ ಜಾತಿ ಭೇದಯಿಲ್ಲದೆ ವಿಜೃಂಬಣೆಂಪ ಹುತ್ತರಿ ಹಬ್ಬನ ಅರಮನೆಲಿ ನಡ್ತ್ರಿತ್ತಿದ್ದೊ ಅಂಗಳಲಿ ಚಪ್ಪರ ಹಾಕ್ಸಿ ಎಲ್ಲಪ್ರಕು ಊಟ ಕೊಡ್ತಿದ್ದೊತ ಕೊಡ್ಗ್‌ನ ಹಿಂದೆನ ಚರಿತ್ರೆ ಹೇಳ್ದೆ ಅಲ್ಲದೆ ಹಿರಿಯರ ಬಾಯ್‌ಂದ ಸಹ ಕೇಳ್ಯೊಳೊ. ಮುಂದೆ ಅರಮನೆ ಪೋದು ನಾಡ್ ಪೋಯಿ ತೇಳಿಯುತ್ತ್. ರೋಹಿಣಿ ನಕ್ಷತ್ರಲಿ ಇಗ್ಗುತ್ತಪ್ಪನ ದೇವ್ಸ್ಥಾನಲಿ ಕದ್ರ್ ತೆಗ್‌ದ್ ಮತ್ತೆ ಮಾರ್‌ನೇ ದಿನ ಎಲ್ಲಪ್ರ ಕದ್ರ್ ತೆಗಿಯೋದು.

ಅಳಿದ ಕಲೆ : ಹಿಂದೂ ಸಂಸ್ಕೃತಿ ಪರಂಪರೆಯಲ್ಲಿ ಜಾನಪದ ಸಂಸ್ಕೃತಿಯು ಒಂದು ಅಂಗವಾಗಿರುತ್ತದೆ. ಕನ್ನಡ ಸಾಹಿತ್ಯಕ್ಕೆ ತನ್ನದೇ ಆದ ರೀತಿಯಲ್ಲಿ ಗ್ರಾಮ್ಯ ಭಾಷೆಗಳಲ್ಲಿ ಕಂಡು ಬರುವ ಜನಪದ ಸಂಸ್ಕೃತಿಯು ಮುಖ್ಯ ಪಾತ್ರವಹಿಸುತ್ತದೆ. ಕರ್ನಾಟಕದಲ್ಲಿ ಬೇರ ಬೇರೆ ವಿಧದಲ್ಲಿ ಕಂಡು ಬರುವ ವಿಶೇಷಗಳಲ್ಲಿ ಕೊಡಗಿನಲ್ಲಿ ಕಂಡು ಬರುವ ಹುತ್ತರಿಯ ಜೋಗಿ ಕುಣಿತ ಒಂದು.

ದೇಶಕ್ಕೆ ಯುದ್ಧದಂತಹ ಅಶಾಂತಿ-ಆಧುನಿಕತೆಯ ಸೋಂಕು ಇವುಗಳಿಂದ ಹಿಂದೇಟು ಹಾಕಿ ಅಳಿದು ಚರಿತ್ರೆ ಸೇರಿದ ಹಲವಾರು ಗ್ರಾಮೀಣ ಆಟಗಳಲ್ಲಿ ಜೋಗಿ ಆಟವು ಬಹು ಮುಖ್ಯವಾದುದು. ಕೊಡಗಿನಲ್ಲಿ ಹುತ್ತರಿ ಬಂತೆಂದರೆ ಸಡಗರವೋ ಸಡಗರ. ಚಿಕ್ಕ ಮಕ್ಕಳಿಗಂತೂ ಜೋಗಿಯನ್ನು ಕಂಡರೆ ಭಯ. ಹುತ್ತರಿ ಮಾರನೇ ದಿನದಿಂದ ಊರಿನ ಮನೆ ಮನೆಗಳಿಗೆ ತೆರಳಿ ಜೋಗಿಯು ತನ್ನದೇ ಆದ ಜಾನಪದ ಕೌಶಲ್ಯದ ಆಶೀರ್ವಚನ ಮಾಡಿ, ಅಲ್ಲಿ ಸಿಗುವ ತಂಬಿಟ್ಟು, ಬಾಳೆಹಣ್ಣಿನ ದಾನವನ್ನು ತೆಗೆದುಕೊಂಡು ಮುಂದಿನ ಮನೆಗೆ ಹೋಗುವುದು ರೂಢಿಯಲ್ಲಿತ್ತು.

ಮುಖಕ್ಕೆ ಕಪ್ಪು ಬಣ್ಣ- ಮೈ ತುಂಬಾ ಒಣಗಿದ ಬಾಳೆ ಎಲೆಗಳನ್ನು ಕಟ್ಟಿ-ಸೊಂಟಕ್ಕೆ ಗಂಟೆ ಕೈಯಲ್ಲಿ ದೊಣ್ಣೆಯನ್ನು ಊರುತ್ತಾ ಮುಳ್ಳಿನ ಅಂಗರೆ ಕೋಲನ್ನು ಹಿಡಿದು ತಲೆಯಲ್ಲಿ ಬಾಳೆಲೆ ಟೋಪಿ ಅದಕ್ಕೆ ಚೆಂಡು ಹೂವು ಮಾಲೆ ಸಿಕ್ಕಿಸಿ ಕುತ್ತಿಗೆಗೆ ಚೆಂಡು ಹೂವಿನ ಮಾಲೆ ಇದಿಷ್ಟು ಜೋಗಿಯ ಉಡುಪಿನ ಸೊಗಸು. ಹುತ್ತರಿಯ ಜೋಗಿ ಮನೆಗೆ ಬಂದನೆಂದರೆ ಘಣ ಘಣ ಘಂಟೆ ಶಬ್ದವು ಮುಂದಿನ ಹುತ್ತರಿ ಬರುವ ತನಕ ಹಸಿರಾಗಿ ಕಿವಿಯಲ್ಲಿರುತ್ತಿತ್ತು. ಆ ದಿನ ಮನೆಯಲ್ಲಿ ಮಕ್ಕಳದು ನೆಂಟರದೆ ಸಡಗರ. ಜೋಗಿಗಳಲ್ಲಿ ಹಲವು ವಿಧಗಳಿರಬಹುದು. ಉದಾಹರಣೆಗೆ ಕಾಪಾಲಿ ಸಿದ್ಧ ವೇಷದವರೂ ಇದಕ್ಕೆ ಹೊರತಲ್ಲ.

ಊರಿನಲ್ಲಿ ಕಷ್ಟಗಳು ಆದಾಗ ದೇವರ ಹೆಸರಿನಲ್ಲಿ ಸೇವೆಗಳನ್ನು ನಡೆಸುವುದು ರೂಢಿಯಲ್ಲಿರುವುದು ಇಂದಿಗೂ ನಡೆಯುತ್ತಾ ಇದೆ. ಉದಾಹರಣೆಗ ಮಡಿಕೇರಿ ತಾಲೋಕು ಅವಂದೂರು ಗ್ರಾಮದಲ್ಲಿ ಸುಮಾರು 45 ವರ್ಷಗಳ ಹಿಂದೆ ನಡೆಯುತ್ತಿದ್ದ ಹುತ್ತರಿ ಹಬ್ಬವನ್ನು ಕಡ್ಡಾಯವಾಗಿ ನಿಲ್ಲಿಸಲಾಯ್ತು. ಅದೇ ನೆಪದಲ್ಲಿ ಮುಂದೆ ಯಾಕಾದರೂ ಈ ಹಬ್ಬವನ್ನು ನಡೆಸಬೇಕು ಎಂದು ಕೆಲವರು ತೀರ್ಮಾನಿಸಿದಂತೆ

ಮುಂದೆ ಅಮಂದೂರು ಶ್ರೀ ಗೋಪಾಲ ಕೃಷ್ಣ ದೇವರ ದೇವಸ್ಥಾನದಲ್ಲಿ ಕಟ್ಟುತ್ತಿದ್ದ ಜೋಗಿ ವೇಷವು ತಾನಾಗಿಯೇ ನಿಂತು ಹೋಯ್ತು.

ಅಂದು ಚಿಕ್ಕವರಾಗಿದ್ದು ಕಣ್ಣಾರೆಕಂಡು ಅನುಭವಿಸಿದ ಆನಂದ ಉತ್ಸಾಹ ಹಿರಿಯರಿಂದ ಕೇಳಿದರೆ ನಿಜವಾಗಿ ಈ ಅದ್ಭುತ ಆಟವನ್ನು ಮತ್ತೆ ನೋಡಬೇಕೆಂದು ಹೃದಯ ಹಾತೊರೆಯುತ್ತಿದೆ.

ಇಂದಿನ ಜಾನಪದ ಆಟಗಳಲ್ಲಿ ನಾವು ಈ ಜೋಗಿ ಆಟವನ್ನು ಕಾಣಬೇಕು. ಗ್ರಾಮೀಣ ಯುವ ಸಂಘ ಸಂಸ್ಥೆಗಳ ಮೂಲಕ ಮತ್ತೆ ಅಂತಹ ಜಾನಪದ ಕುಣಿತವನ್ನು ಮತ್ತೆ ಮರುಚಿಗುರಿಸಬಹುದೆಂಬ ಕನಸು ನನಸಾಗಲೆಂದು ಈ ರೀತಿ ಚರಿತ್ರೆಯಲ್ಲಿ ಸೇರಿ ಹೋದ ಜಾನಪದ ಆಟಗಳು ಮತ್ತೆ ಬೆಳಕು ಕಾಣ ಬೇಕಾಗಿದೆ. ಇದಕ್ಕೆ ಊರಿನ ಯುವ ಸಂಘಗಳ ಪಾತ್ರಗಳು ಮುತುವರ್ಜಿವಹಿಸಬೇಕು ಎಂಬುದೇ ಮನದಾಳದ ಹಾರೈಕೆ.

ದೇವರಿಗೆ ನೈವೈದ್ಯ

ಕೊಡಗು ಜಿಲ್ಲೆಯಲ್ಲಿ ರೈತರ ಸುಗ್ಗಿ ಹುತ್ತರಿ ಹಬ್ಬ ಕಳೆದ ನಂತರ ಬರುವುದು ಮಕರ ಸಂಕ್ರಾಂತಿ ಹಬ್ಬ. ಕೊಡಗಿನಲ್ಲಿ ಆ ದಿನ ಹೊಸ ಅಕ್ಕಿಯನ್ನು ದೇವರಿಗೆ ನೈವೇದ್ಯಕ್ಕೆ ಕೊಡುತ್ತಾರೆ. ಆ ದಿನ ಮಳೆ ಬೆಳೆ ದೇವರಾದ ಇಗ್ಗುತ್ತಪ್ಪ ಕಾವೇರಮ್ಮ ಪಾಲೂರಪ್ಪ ಹಾಗೂ ಎಲ್ಲಾ ರೈತರು ಅವರವರ ಊರ ದೇವಸ್ಥಾನಕ್ಕೆ ಹೊಸ ಅಕ್ಕಿ ತೆಂಗಿನ ಕಾಯಿ ಬೆಲ್ಲವನ್ನು ಒಪ್ಪಿಸಿ ನೈವೇದ್ಯ ಮಾಡಿದ ಪ್ರಸಾದ ಉಂಡು ಮನೆಗೆ ಬಂದು ಸಂತೋಷದಿಂದ ಕೂಡಿ ಕಳೆಯುತ್ತಾರೆ. ರೈತನೆ ಶಿವ. ಭೂದೇವಿಯೆ ತಾಯಿ . ಎಂಬಂತೆ ಭತ್ತದ ಬೀಜ ಹಾಕಿ ಫಲ ಪಡೆದ ತೃಪ್ತಿಯಲ್ಲಿರುವ ರೈತ ಮತ್ತು ಅವನ ಮಡದಿಯ ಒಂದು ಚಿತ್ರಣವನ್ನು ಚಿತ್ರಿಸುವ ಪ್ರಯತ್ನ ನಡೆದಿದೆ.

ನಿರೂಪಣೆ . ಮುಂಗೋಳಿ ಕೂಗಿದಾಗ ರೈತ ಎದ್ದು ದೇವರನ್ನು ನೆನೆದು ತನ್ನ ನಿತ್ಯದ ಪರಿಯಂತೆ ನೇಗಿಲನ್ನು ಹೊರಕ್ಕೆ ತೆಗೆದು. ಗದ್ದೆಗೆ ಹೊರಡುತ್ತಾನೆ. ಅವನ ಮಡದಿ ಎತ್ತುಗಳನ್ನು ಬಿಚ್ಚಿ ಹೊಡೆದುಕೊಂಡು ಹೋಗಿ ಗದ್ದೆಗ ಇಳಿಸಿ ಎತ್ತುಗಳ ಹೆಗಲಿಗೆ ನೊಗ. ನೇಗಿಲು ಸಿಗಿಸಿಕೊಟ್ಟು ಮನೆಗೆ ಬರುತ್ತಾಳೆ.

ಹಾಡು

ಬಂದವಳು ರೊಟ್ಟಿಮಾಡಿ ಮುಂಬಾಳೆ ಬುತ್ತಿಕಟ್ಟಿ।
ಹೊತ್ತಾಳು ನಮ್ಮಪ್ಪ ಹರದೇವ ಮಾಶಿವಗೆ।
ಉತ್ತು ಬಿತ್ತಿ ಹೊತ್ತು ಕೊಯ್ಲು
ಮನೆಗೆ ಬಂತೀಗಾ.... ನಮ್ಮವ್ವ
ಭೂತಾಯ್ನ ನಮ್ಮಪ್ಪ ಹರದೇವ್ರ
ಮತ್ತೊಮ್ಮೆ ನೆನೆಯೋಣ ನಾವೆಲ್ಲಾ।। ಎನ್ನುತ್ತಾ

ಭತ್ತವನ್ನು ಕುಟ್ಟಿ, ಅಕ್ಕಿಮಾಡಿ ಪರದೇವ್ರಿಗೆ ನೈವೇದ್ಯ ವಿಟ್ಟು, ಮತ್ತೆ ನಾವೆಲ್ಲರೂ ಉಣ್ಣಬೇಕೆಂದು ತನ್ನ ಮಕ್ಕಳಿಗೆ ಬುದ್ದಿ ಹೇಳುತ್ತಾಳೆ ಆ ರೈತನ ಮಡದಿ.

ಇನ್ನು ಭತ್ತವನ್ನು ಕುಟ್ಟುವ ಕೆಲಸ. ಭತ್ತವನ್ನು ಕುಟ್ಟಲು ಯಾರ್ಯಾರು ಬರಬೇಕು, ಯಾವ ಮರದ ಒನಕೆಬೇಕು ಎಂಬುವುದನ್ನು ತಿಳಿಯೋಣ.

ಹೊಸಭತ್ತ ಬಂತು . ಭತ್ತವನ್ನು ಅಕ್ಕಿ ಮಾಡಲು ಒಕ್ಕಲು ಯಜಮಾನಿತಿ ನೆರೆಕರೆ ಮುತ್ತೈದೆಯರನ್ನು ಬರಮಾಡುತ್ತಾಳೆ. ಕುಕ್ಕೆಯಲ್ಲಿ ತುಂಬಿಸಿದ ಭತ್ತವನ್ನು ನೆಲ್ಲಕ್ಕಿ ಮುಂದೆ ಇಡುತ್ತಾಳೆ. ಮೂಡ, ಪಡುವ ತೆಂಕು ಬಡಗ ದಿಕ್ಕುಗಳಿಂದ ಬಂದ ಮುತ್ತೈದೆಯರು ಮರಗಳಲ್ಲಿ ಅತ್ಯಂತ ಗಟ್ಟಿಯಾದ ನಂದಿ ತೇಗ ಬೀಟೆ ಮರದ ಒನಕೆಗಳನ್ನು ತರುತ್ತಾರೆ.

ಒನಕೆಗಳಿಗೆ ಗಂಧ, ಧೂಪ ಹಾಕಿ ಶಿವನಿಗೆ ನೈವೇದ್ಯಕ್ಕೆ ಅಕ್ಕಿ ಮಾಡಲು ಹೊರಡುವ ದೃಶ್ಯವನ್ನು ಇಲ್ಲಿ ಆಳವಡಿಸಲಾಗಿದೆ. ಮುತ್ತೈದೆಯರು ಒನಕೆಗಳನ್ನು ಹಿಡಿದು ಕುಟ್ಟಲು ಹೊರಡುತ್ತಾರೆ.

ಕೋಲಾಟ ಹಾಡು (ಹೊಸ ಭತ್ತ ಕುಟ್ಟುವುದು)

ಕೋಲು ಕೋಲೆ ಸುಗ್ಗಿಯಾ ಕೋಲೆ
ಕೋಲು ಕೋಲೆ ಸುಗ್ಗಿಯಾ ಕೋಲೆ॥
ಮೂಡಣ ಕೇರಿಯಿಂದ ಮುತ್ತೈದೆಯರಾ ಬರಕೇಳಿ
ಮುತ್ತೀನ ಒನಕೆ ತರಹೇಳಿ ॥
ಮೂಡಣ ಕೇರಿಯಿಂದ ಮುತ್ತೈದೆಯರು ಬಂದು
ಮುತ್ತೀನ ಒನಕೆ.... ತಂದೂ...॥
ಅವರೆತ್ತಿ ಬಿಟ್ಟಾರು ಗಗನಕ್ಕೆ।
ಮಲ್ಲಿಗೆ ಹೂನಂಗೆ ತೊಳಸೇವ್ರೊ
ಕೋಲು ಕೋಲೇ ಸುಗ್ಗಿಯಾ ಕೋಲೆ॥
ಕೋಲು ಕೋಲೆ ಸುಗ್ಗಿಯಾ ಕೋಲೆ
ಪಡುವಣ ಕೇರಿಯಿಂದ ಮುತ್ತೈದೆಯರು ಬಂದು।
ನಂದಿ ಯ ಒನಕೆ ತಂದೂ....॥
ಅವರೆತ್ತಿ ಬಿಟ್ಟಾರು ಗಗನಕ್ಕೆ।
ತುಂಬೆಯ ಹೂನಂಗೆ ತೊಳಸೇವ್ರೊ...॥ ಕೋಲು॥
ತೆಂಕ ದಾ ಕೇರಿಯಿಂದ ಮುತ್ತೈದೆಯರು ಬಂದು।
ತೇಗ ದ ಒನಕೆ ತುಂದೂ....

ಅವರೆತ್ತಿ ಬಿಟ್ಟಾರು ಗಗನಕ್ಕೆ
ಸೋರೆಯ ಹೂನಂಗೆ ತೊಳಸೇವೊ।।ಕೋಲು।।
ಬಡಗದ ಬೀದಿಯಿಂದ ಮುತ್ತೈದೆಯರು ಬಂದು।
ಬೀಟೆಯ ಒನಕೆ ತಂದೂ...।।
ಅವರೆತ್ತಿ ಬಿಟ್ಟಾರು ಗಗನಕ್ಕೆ
ತಾಳೆಯ ಹೂನಂಗೆ ತೊಳಸೇವೊ।।ಕೋಲು।।
ಮಡಗಿದ್ದ ಒನಕೆಗೆ ಪಾವು ಧೂಪವ ಹಾಕಿ।
ಗಂಧ ಸಿರಿಗಂಧ ಹದಗೂಡಿ।।
ಮುತ್ತೈದೆಯರು ಎತ್ತಿ ಬಿಟ್ಟಾರು ಗಗನಕ್ಕೆ।
ಕಲ್ಲಾ ಒರಳಲ್ಲಿ ನೆಲ್ಲಕ್ಕಿ ತೊಳಸವ್ವಾ
ಮಲ್ಲಯ್ಯನ ಮಡದಿ ಗಿರಿಜವ್ವಾ।।
ತೊಳಸಿದ ಅಕ್ಕಿ ಮಲ್ಲಿಗೆ ಹೂನಂಗೆ ತೊಳಸೇವೊ।।
ಕುಟ್ಟಿ ಸೋಸಿದಾ ಅಕ್ಕಿ ಹಸನಾಗಿ
ಮುತ್ತೈದೆಯರು ಮಾಶಿವ ಶಂಕರನ ಮದುವೇಗೆ।
ತೊಳಸಿದ ಅಕ್ಕಿ ಮಲ್ಲಿಗೆ ಹೂನಂಗೆ ತೊಳಸೇವೊ ಕೋಲು
ಭತ್ತಾವ ಕುಟ್ಟುತ್ತಾ ಅಕ್ಕೀಯ ಮಾಡುತ್ತಾ
ಯಾರನ್ನು ನಾವು ನೆನೆಯೋಣ?।।
ಭತ್ತಾವ ಕುಟ್ಟುತ್ತಾ ಅಕ್ಕೀಯ ಮಾಡುತ್ತಾ
ಇಗ್ಗುತ್ತಪ್ಪ ಕಾವೇರಮ್ಮನಾ ಇಗ್ಗುತ್ತಪ್ಪ ಕಾವೇರಮ್ಮನಾ
ನೆನೆದಾರೆ ನಾವು ಹಿಡಿದಾ ಕೆಲಸ ಜಯವಾದೊ।।

ಹೊಸ ಭತ್ತ ಕುಟ್ಟುವ ಈ ಹಾಡನ್ನು ಸಂಗ್ರಹಿಸಿ ಕೋಲಾಟದ ರೂಪಕ್ಕೆ ತಂದು ಹಲವು ಕಡೆಗಳಲ್ಲಿ ಪ್ರದರ್ಶಿಸಿ ಪ್ರಶಂಸೆ ಪಡೆಯಲಾಗಿದೆ.

1. *ಮಹಿಳಾ ಒಕ್ಕೂಟದ ವಾರ್ಷಿಕೋತ್ಸವ* 2 *ದಸರಾ ಜನೋತ್ಸವ - ಗಾಂಧಿ ಮಂಟಪ,*
3 *ಕೊಡಗು ಮತ್ತು ಮಂಡ್ಯ ಉತ್ಸವ ನಾಲ್ವಡಿ ಕೃಷ್ಣರಾಜ ಒಡೆಯರ್ ಕಲಾಮಂದಿರ, ಮಂಡ್ಯ,*
4. *ಅಮೃತ ಮಹೋತ್ಸವ ಕೆ.ವಿ.ಜಿ.- ಸುಳ್ಯ.*
5 *ಕನ್ನಡ ಸಾಹಿತ್ಯ ಪರಿಷತ್ ಸಮ್ಮೇಳನ ಮರಗೋಡು- ಮಡಿಕೇರಿ.*
6 *ಜಾನಪದ ಜಾತ್ರೆ - ಮಡಿಕೇರಿ.* 7 *ಮಹಿಳಾ ಜಾಗೃತಿ ಸಮಾವೇಶ ಭಾಗಮಂಡಲ.*

ಹೊಸ್ತ್

ದೇವ್ರುನ ನೆನಿಯದೆ ಯಾವ ಕಾರ್ಬಾರೂ ಇಲ್ಲೆ. ಹಂಗೆ ಕಾಲಕ್ಕೆ ಸರಿಯಾಗಿ ಮುಂಗಾರ್ ಮಳೆ ಬಂದ್ ಪೈರ್ ಪಸಲ್ ಲಾಯ್ಕಾಗಿ ಬೆಳ್‌ದರೆ ಅದರ್‍ನ ನೋಡಿ ರೈತಂಗೆ ಎಸ್ಟ್ ಕುಸಿ ಅದೆ. ಗದ್ದೆಗೆ ಬೀಜ ಹಾಕುದರ್‌ಂದ ಹಿಡ್ದ್ ಪೈರ್‌ನ ಕೊಯ್ದ್ ತಾಕನ ಮುಟ್ಟ ಗಣ್‌ಪತಿನ ಗದ್ದೆ ಪರಿಗಳ್ಲಿ ನಾಟಿರಿ ಗಣದಿಗೆ ಕೂಡ್ಸಿಕೆ ತೇಳಿ ನೆನ್ಸ್ತಾ ಇದ್ದವೆ. ಹಂಗೆ ಇಂದ್ ಹೊಸ್ತ್ ಪಾಯ್ಸ ಉಂಡವೆ. ಅದ್ಕಿಂತ ಮುಂದೆ ಗಣ್‌ಪತಿನ ಮತ್ತೊಮ್ಮೆ ನಾವೆಲ್ಲವೂ ನೆನೆಯೋನ.

<u>ಪ್ರಾರ್ತನೆ</u> · ಬೇಡೊನ ನಾವೆಲ್ಲ ಗಣ್‌ಪತಿ ದೇವ್ರುನ।
ಬೇಡೊನ ನಾವೆಲ್ಲವು ಇಂದ್ ಬೇಡೊನ ನಾವೆಲ್ಲವು॥
ಬೆಟ್ಟದ ಕೆಳ್ಗೆ ನೀರ್‌ನ ಕಟ್ಟಿ ಕೆರೆನ ತುಂಬಿಸೊಳೊ ನಮ್ಮ ರೈತರ್
ನೀರ್‌ನ ಹಾಯ್ಸಿ ಹುಲ್ಸಾಗಿ ಪೈರ್‌ನ ಬೆಳ್ಸೊಳೊ ನಮ್ಮ ರೈತರ್।
ಇಂದ್ ಬೆಳ್ಸೊಳೊ ನಮ್ಮ ರೈತರ್ ಬೆಳ್ಸೊಳೊ ಸುತ್ತಾ ಕಾಫಿ ಮಾಲಿಕ್ರುನ
ಒಟ್ಟಿಗೆ ಸೇರ್‍ಸೊಳೊ ಸುಂರಿ ಕೃಸಿನ। ಒಟ್ಟಿಗೆ ಸೇರ್‍ಸೊಳೊ ಸುಂರಿ ಕೃಸಿನೂ।
ಸೊರ್ದರೆ ಕಾಲಕ್ಕೆ ಮುಂಗಾರ್ಮಳೆ। ಹರ್‌ದದೆ ಹರ್ಸದ ಹೊನ್ನುನ ಬೆಳೆ
ಹರ್‌ದದೆ ಹರ್ಸದ ಹೊನ್ನುನ ಬೆಳೆ
ಬೆಳ್‌ದರೆ ಬೆಡ್‌ಗ್‌ನ ಛತ್ರದ ಬೆಳೆ
ತಂದದೆ ಜೆನಕೆಲ್ಲಾ ಕುಸಿನ ಕಳೆ ತಂದದೆ ಜೆನಕೆಲ್ಲಾ ಕುಸಿನ ಕಳೆ।
ಮಾಗೊಳು ನಮ್ಮನ ಕಾಪಾಡಕು ತೇಳಿ
ಪ್ರಾರ್ತನೆ ಮಾಡ್ವೊ ಗಣ್‌ಪತಿನಾ ಪ್ರಾರ್ತನೆ ಮಾಡ್ವೊ ಗುರುಕಾರ್ಣರ।
ಹೊಸ್ತ್ ಪಾಯ್ಸ ತೇಳ್ರೆಂಬಲ್ಲಾ ಅದರ ಕ್ರಮ ಏನಾರ್ ನೀವ್ರುಗೆ ಗೊತ್ತಿದ್ರೆ ಹೇಳಿ

ಸಾಮಾನ್ಯಾಗಿ ಒಂದು ಕುಟುಂಬಲಿ ಯಾರ ಗದ್ದೆಲಿ ಬ್ಯಾಗ ಹಣ್ಣಾಗಿ ಕೊಯ್ದ್ ಕಳಕ್ಕೆ ತಂದ್ ಒಣ್‌ಗ್‌ಸಿ ಛತ್ತ ಕುಟ್ಟಿ ಅಕ್ಕಿ ಮಾಡಿ ಊರು ದೇವ್ರುಗೆ ನೈವೇದ್ಯಕ್ಕೆ ಕೊಟ್ಟ್ ಮತ್ತೆ ಕುಟುಂಬದವೆಲ್ಲಾ ಸೇರಿ ಒಟ್ಟಿಗೆ ಕುದ್ದ್ ಊಟ ಮಾಡ್ವೊಕ್ಕೆ ಹೊಸ್ತ್ ಊಟತ ಹೇಳುವೆ.

ಕಳಕ್ಕೆ ತಂದ ಛತ್ರನ ಒಳಗೆ ತಾಕೆ ಮುಂದೆ ಅದೂ ಕ್ರಮವುಟ್ಟು. ಛತ್ರನ ; ಕುಕ್ಕೆಗಳ್ಲಿ ತುಂಬ್‌ಸಿ ಹೆಣ್ಮಕ್ಕಳ್‌ಗೆ ಎಲೆ ಅಡ್‌ಕೆ। ತಲೆಗೆ ಎಣ್ಣೆ ಕೊಟ್ಟ್ ನೆಲ್ಲಕ್ಕಿಲಿ ಮಡ್ಗಿ ವನಲೆ ಮೊರ ಎಲ್ಲಾ ಸೇರ್‍ಸಿ ; ಜೆನ ಕುಟ್ಟಿಕೆ ಹೊರ್ಟವೆ. ಕೊಟಗೆಲಿ ಕಲ್ಲ್‌ನ ನೆರ್ಗುಳ್‌ಗೆ ಹಾಕಿ ಒಸ್ಸು ಒಸ್ಸು ತೇಳ್ಕಂಡ್ ರಭಸಾಗಿ ಕುಟ್ಟುವೆ. ಮತ್ತೆ ಅದರ್‍ನ ಹೊಡ್ಸಿ ರಾಟೆಗೆ ಹಾಕುವೆ. ರಾಟೆತೇಳ್ರೆ ಸ್ವಲ್ಪ ನಿಧಾನಲಿ ಕುಟ್ಟುದು. ಅಗ ಓ..... ಸುವ್ವಾ.....ಬಾ..... ಓ..... ಸುವ್ವಾ.....ಬಾ..... ತೇಳಿ ರಾಗ ಎಳ್ಕಂಡ್ ಪದ ಹೇಳ್ಕಂಡ್ ನೆಗಾಡಿಕಂಡ್ ಕುಟ್ಟುವೆ. ಸಾಧಾರಣ ಅಕ್ಕಿನ ದೇಸ್ಸಾನಕ್ಕೆ ಕೊಟ್ಟೇ ನಾವು ಉಪಯೋಗ್ಸುದು. ಯಾಕೆ ತೇಳ್ರೆ ಶಿವನೆ ರೈತ ಭೂದೇವಿನೇ ತಾಯಿ ತೇಳಿ ಜನಪದ ನಂಬಿಕೆನ ಉಟ್ಟು.

ಅಕ್ಕಿ ತೊಳ್ದು ಒಂಚಿ ಹೊಡ್ಸಿ ಎಲ್ಲವು ಸೇರಿ ಒಳಗೆ ತಂದವೆ. ನೆಟ್ಟಂಗೆ ಅಡಿಗೆ ಮನೆಲಿ ಐದ್‌ಜನ ಮುತ್ತೈದೆಗ ಸೇರಿ ಹಲೆ ಮಣ್ಣಿ ಪಾತ್ರಲಿ ನೀರ್ ಮಡ್ಗಿ ಅದ್ಕೆ ಅಕ್ಕಿ ಹಾಕಿ ಪಾಯ್ಸ ಮಾಡುವೆ. ಪಾಯ್‌ಸದೊಟ್ಟಿಗೆ ಹತ್ತಾರ್ ಬಗೆ ಬ್ಯಾರೆ ಪದಾರ್ಥಗ ಇದ್ದವೆ. ಗಂಡ್ ಜೆನ ಮುಂದೆ ಊಟಕ್ಕೆ

ಕುಟ್ಟುವೆ. ಹೆಣ್ಣ್‌ಜೆನ ಇಕ್ಕುವೆ. ಮತ್ತೆ ಉಟ್ಟೆಲ್ಲಾ ಹೊಸ ಕೂಸುಗಯಿದ್ದರೆ ಬಾಯಿಗೆ ಪಾಯ್ಸ ಕೊಡ್ದು ಮತ್ತೆಲ್ಲಾ ಸಂಪ್ರಾದಾಯಂಗೆ ನಡ್‌ದವೆ. ಮಾರ್‌ದಿನ ಪಾಯ್ಸನ ಸೋತ ಎತ್ತ್‌ಗಳಿಗೆ ಕೊಡಿ ಬಾಳೆಲೆಲಿ ಹಟ್ಟಿ, ಬಾಗ್ಲ್‌ಲಿ ಅಂಗರಂಗೆ ಮಡ್ಗಿ ದನಗಳಿಗೂ ತಿನ್ಸುವೆ. ಆದಿನ ಹೊಸ ಅಕ್ಕಿ ಕಪ್‌ಂಬಿಟ್ಟ್, ಅದ್ಕೆ ಸೆರಿಯಾಗಿ ಬೆಣ್‌ಗಿಲ್ ಮಾಸ ಇಲ್ಲರೆ ಬಂದು ಗೈಪು ಮಾಡಿ ಮತ್ತೆ ಮಾಮೂಲಾಗಿ ಭತ್ತನ ಉಪಯೋಗ್ಸುವೆ. ಕಿಡಾಸಲಿ ಕಲ್ಲಿಗೆ ಮುಳ್ಳು ಅಡ್ಡಿದ ಮ್ಯಾಲೆ ಸಾಮಾನ್ಯಾಗಿ ಉಪಯೋಗ್ಸುವೆ. ಕಿಡಾಸತೇಳ್ಕನ ಗ್ಯಾನಾತ್ ಆದರ್‌ನೂ ತಿಳ್ಸಿ ಬುಡಿ.

ಹೊಸ್ತ್‌ವೇ ಮುಕ್ತ್‌ಲೆ ಕಿಡಾಸದ್ ಮತ್ತೆ ಹೇಳ್ನೆ. ಅಯ್ಯೊ ಹೇಳ್ಳಂಗೆ ಕುಟ್ಟುವ ಒಂದು ಪದ ಹೇಳ್ತ್‌ಲೆಲಾ ಅದರ್ನ ಮತ್ತೆ ಹೇಳ್ನಿ. ಹೊಸ ಭತ್ತನ ಪಳ್ಳಗಳಿಗೆ ಹೊತಾರೆ ಚೊಂಬುಕ ಮರ್ಸ್‌ಕನ ಭತ್ತ ಕಡಿಕೆಗೆ ಹಾಕುದು ತೆಗಿಯೊದು ಉಟ್ಟು. ಮತ್ತೆ ಕಡಿಕೆಂದ ಸೋಮಾರ, ಸುಕ್ರಾರ ಮಧ್ಯಾಹ್ನ ಸಾಯ್‌ಂಕಾಲ ಎಲ್ಲಾ ತೆಗೆಕಾಗದ್ ಹಿಂದೆನವ್ರು ಪಿಳ್ಳೆದೆಲೆ ವ್ಯಾಪಾರಿಗೆ ಮುಂದೆ ಭತ್ತನ ಮಾರಿ ಆ ವರ್ಷದ ಲೇವಾದೇವಿನ ಸುರು ಮಾಡ್ತಿದ್ದೊ. ಯಾಕೆ ತೇಳ್ರೆ ಆಗ ಬರೀ ಭತ್ತನ ನಂಬಿಕಂಡ್ ಭತ್ತಕುಟ್ಟಿ ಅಕ್ಕಿ ಮಾರಿ ಜನ ಜೀವನ ಕಳೆತಿದ್ದೊ. ಈಗನಂತೆ ದುಡ್ಡು ಕಾಂಬಂಗೆ ಇತ್ತ್‌ಲೆ.

ಮಕರ ಸಂಕ್ರಾಂತಿ ಹಬ್ಬ

ಎಳ್ ಬೆಲ್ಲ ತಿಂದ್ ಪ್ರೊರ್ಲ್ಲನ ಮಾತಾಡಿ ತೇಳ್ವ ಗಾದೆ ಸಾಮಾನ್ಯ ಆಗಿ ರೂಢಿಲುಟ್ಟು. ಸೂರ್ಯ ಮಕರ ರಾಶಿನ ಸೇರುವ ದಿನ ಮತ್ತೆ ಉತ್ತರಾಯಣ ಪುಣ್ಯ ದಿನ ತೇಳಿ ಕರೆವ ದಿನವೆ ಮಕರ ಸಂಕ್ರಾಂತಿ. ಆ ದಿನ ದನಗಳಿಗೆ ಬಹಳ ಪ್ರಾಮುಖ್ಯತೆ. ಕೆಲು ಕಡೆ ಸಂಗಮಲಿ ಮೀದ್ ಪುಣ್ಯ ಪಡ್ಡುವೆ ಅಂದ್‌ನ ದಿನ ಪಾಪ ಪರಿಹಾರಕ್ಕಾಗಿ ಎಳ್‌ನ ದಾನಮಾಡುವೆ. ನವಧಾನ್ಯಗಳ್‌ಲಿ ಎಳ್‌ಗೆ ವಿಶೇಷ ಸ್ಥಾನ. ನಮ್ಮಲ್ಲಿ ಗಂಗೆ ಪೂಜೆಗಂತೂ ಅಕ್ಕಿ, ಬೆಲ್ಲ, ತೆಂಗಿನಕಾಯಿ ಜೊತೆ ಎಳ್ ಮಿಶ್ರ ಮಾಡಿ ಪ್ರಸಾದ ಹಂಚುದು ಯಾರು ಮರೆಯದ ಕೆಲ್ಸ. ಸಾಮಾನ್ಯಾಗಿ ಎಳ್ ನೊಟ್ಟಿಗೆ ಬೆಲ್ಲ, ಹುರಿಕಡ್ಲೆ, ಕೊಬ್ಬ್‌ರಿ, ನೆಲಕಡ್ಲೆ ಸೇರ್ಸಿ ಮಿಶ್ರಣ ಮಾಡಿ ಮನೆ ಮನೆಗೆ ಹಂಚುವ ಕ್ರಮವುಟ್ಟು. ಅದರೊಟ್ಟಿಗೆ ಹೊಸ ತರ್ಕಾರಿ ಜೊರುಗಳ್‌ನ ಸ್ವಾಂತೆ ಮಿಡಿಗಳ್‌ನ ಸಹ ಹಂಚಿಕುಡಿಪಟ್ಟುವೆ. ಇದರ್ನ ತಿಂದರೆ ಶೀತ ಕಮ್ಮಿ ಆದೆ ಕೆಲವು ರೋಗಕ್ಕು ಪಳ್ಳದ್ ತೇಳ್ರು ಎಳ್‌ನ ಜಾಸ್ತಿ ತಿಂದರೆ ಗಂಟ್ ಕೆರ್‌ತಕ್ಕೆ ಒಂದು ದಾರಿ ಆದೆ. ಹಂಗಾಗಿ ಮಕ್ಕ ತಿಂಬಕನ ಅಪ್ಪಂದ್‌ರ್ ಎಚ್ಚರಿಕೆ ವಹಿಸೊಕು. ಆದಿನ ಎಳ್ ನೊಟ್ಟಿಗೆ ಈ ಮಿಶ್ರಣ ವಸ್ತುಗಳ್‌ನ ತಿಂದರೆ ಕಬ್ಬಿಣದ ಅಂಶ ಕ್ಯಾಲ್ಸಿಯಂ ಸಿಕ್ಕಿದೆತನೂ ಹೇಳ್ವೆ. ಅದರ್‌ಂದಾಗಿ ಶರೀರಕ್ಕೆ ಪೋಷಕಾಂಶ ಸಿಕ್ಕಿದಂಗಾದೆ.

ಆ ದಿನ ಮಕ್ಕ ಹೊಸ ಬಟ್ಟೆ, ಹಾಕಂಡ್, ಬಾಳೆ ಹಣ್ಣ್, ಕಬ್ಬು ಮ್ಯಾಲೆ ಹೇಳ್ದ ಎಲ್ಲಾ ವಸ್ತುಗಳ್‌ನ ಒಂದು ತಟ್ಟೆಲಿ ಮಡ್ಕಂಡ್ ಬೇಕಾದವರ ಮನೆಗಳಿಗೆ ಹೋಗಿ ಕೊಡ್ದು ಅವ್ರಕೆ ಕುಸಿ ಕೊಡುವ ವಿಸಯ. ಹಂಗೆ ಎಳ್ಳು ಬೀರ್‌ವ ಎಲ್ಲ ವಸ್ತುಗಳ್‌ಂದ ಶರೀರಕ್ಕೆ ಸಕ್ತಿ ಸಿಕ್ಕಿದೆತ ಹೇಳ್ವೆ. ಇದರ್ನ ಕನ್ನಡದ ಜನ ಜಾಸ್ತಿ ಆಚರ್‌ಸುವೆ. ಕೊಡ್ಗ್‌ಲಿ ಹೊಸ ಭತ್ತ ಮನೆಗೆ ಬಂದದೆ. ಒಕ್ಕಲು ಕೆಲ್ಸ ಮುಗ್ಸಿ ಹೊಸ ಅಕ್ಕಿನ ದೇವ್ರಿಗೆ ನೈವೇದ್ಯಕ್ಕೆ ಕೊಟ್ಟ್ ಪಾಯ್ಸ ಮಾಡಿ ಪ್ರಸಾದ ಉಣ್ಣುವ ರೂಢಿ ಎಲ್ಲಾ ಊರ್‌ಲುವುಟ್ಟು. ಅದರ್‌ಂದ ಕೊಡ್ಗ್‌ಲಿರುವ ನಾವು ಪಾಯ್ಸನೂ ಉಣ್ಣನೊ, ಮತ್ತೆ ಬ್ಯಾರೆಯವರಂಗೆ ಎಳ್‌ನೂ ಬೀರ್ನೊಲಾ? ಪ್ರೀತಿ-ವಿಶ್ವಾಸ ಬಗ್ಗ್‌ಟ್ಸ್‌ನ ದಾರಿನೆ ಎಳ್ ಬೀರ್ದುತ ಸಂಪ್ರದಾಯಲಿ ನಡ್‌ಕಂಡ್ ಬಂದುಟು.

ಕಿಡಾಸ ಹಬ್ಬ ಆಚರಣೆ- ಭೂಮಿಗೆ ಎಣ್ಣೆ ಬುಡ್ದು

ಕಿಡಾಸ ತೇಳ್ರೆ ಎಂತದ್‌ತ ತಿಳ್ಕೊಮ್ಮನ ಅಲಾ!

ಹೌದು. ಅದ್ಕಿಂತ ಮುಂದೆ

ಭತ್ತದ ಕಪ್ಪೆಗೆ ಕಲ್ಲ್ ಮುಳ್ಳ್ ಅಡ್ಸುದಕ್ಕೆ ಕಿಡಾಸತೇಳ್ದು ನಮ್ಮಲ್ಲಿ ರೂಢಿಲುಟ್ಟು.

ಕಲ್ಲಮುಳ್ಳ್ ಅಡ್ಸುದು ತೇಳ್ರೆ ಕಾಪ್‌ಲಿರುವ ಚೂರಿ ಮುಳ್ಳ್‌ನ ಗೆಲ್ಲ್ ಕತ್ರಿಸಿ ಕತ್ರಿತರ ಮಡ್ಗಿ ಅದರ ಮ್ಯಾಲೆ ಒಂದು ಸಣ್ಣ ಕಲ್ಲ್‌ನ ಮಡ್ಗುದು. ಇದ್‌ರ್ನ ಭತ್ತದ ರಕ್ಷಣೆಗೆ ಮಡ್ಗುವೆ.

ಕಿಡಾಸದ ಬಗ್ಗೆ ನಾನ್ ನೀವುಗೆ ಸ್ವಲ್ಪ ವಿವರಣೆ ಕೊಟ್ಟನೆ. ಇದ್ ಸಾಮಾನ್ಯಾಗಿ ಜಾನಪದ ಸಾಂಪ್ರದಾಯ ರೀತಿಲಿ ಬರುವ ಹಬ್ಬ. ಪ್ರಕೃತಿಯ ವಾರ್ಷಿಕ ಆವರ್ತನಲಿ ಆಚರಣೆ ಆಗ್ತಾ ಬಂದುಟು. ಸಮೃದ್ಧಿ ಫಲಾಪೇಕ್ಷೆ ಇರುವ ಆಚರಣೆಗ ಪ್ರಕೃತಿನೊಟ್ಟಿಗೆ ನಿಕಟ ಸಂಬಂಧ ಪಡ್‌ದಿರುವ ಹಂಗೆ ಈ ಕಿಡಾಸ ಹಬ್ಬನೂ ಒಂದು.

ಇವರ ಹುಟ್ಟು ಆಚರಣೆಗಳ ಗಮನಿಸಿದರೆ ಫಲಾಪೇಕ್ಷೆ ಆಶಯನೇ ಪ್ರಾಮುಖ್ಯತ ವ್ಯಕ್ತ ಆದೆ. ಆ ದಿನ ಕಲ್ಲ್‌ಮುಳ್ಳ್ ಅಡ್ಸುದು ಮತ್ತೆ ಭೂಮಿತಾಯಿಗೆ ಎಣ್ಣೆ ಬುಡ್ಡು ತೇಳುವ ಕ್ರಮ ಸಾದಾರಣ ಇಂದೂ ಎಲ್ಲ ರೈತರ್ ಅಥವಾ ಹಳ್ಳಿಗಳ್ಲಿ ಆಚರ್ಸುವ ಕ್ರಮವುಟ್ಟು.

ಇದರ್ನ ಜನಪದರ ನಂಬಿಕೆನಂಗೆ ಭೂತಾಯಿನ ಪರಿಶುದ್ಧಗೊಳ್ಸುವ ಒಂದು ಕ್ರಿಯೆತೇಳಿ ತಿಳ್ಕೊಳೊ. ಸಾಮಾನ್ಯಾಗಿ ಹೆಂಗ್ಸರ್ ಮುಟ್ಟಾಕನ ಆಚರ್ಸುವ ; ದಿನ ಸೂತಕ ಆಚರಣೆನ ನಾವಿಲ್ಲಿ ಆಚರ್ಸುವೆ.

ಅದ್ ಹೆಂಗೆ ತೇಳ್ರೆ, ಸುರುದಿನ ಮನೆಮಾರೆಲ್ಲಾ ಮನಾರ ಮಾಡಿ ಅಂಗಳಲಿ ಸೆಗ್ಣೆ ಸಾರ್ಸಿ, ರಂಗೋಲೆ ಬರ್ದು ಹೊಮರಿ ಹೊರ್ದ ಅಕ್ಕಿಹೊಡಿ ಬೆಲ್ಲ ಇದರ್ನೆಲ್ಲಾ ಬಾಳೆಲೆಲಿ ಮಡ್ಗುವೆ. ಮಧ್ಯಾಹ್ನದ ಊಟಕ್ಕೆ ಸುಗ್ಗೆಕಾಯಿ ಮತ್ತೆ ಬದನೆಕಾಯಿಗ್ವೆಪ್ರ ಅಂಬರ ಮಾಡಿ ಉಂಡವೆ ತೇಳ್‌ವೆ ಇದ್ ಮಾಸಾಹಾರ ಊಟಕ್ಕೆ ಸಮತೇಳಿ ತಿಳ್ಕೊಳೊ.

ಇನ್ನ್ ; ನೇ ದಿನನ ನಡುಕಿಡಾಸತ ಕರ್ದವೆ. ಈ ದಿನದ ಮುಖ್ಯ ಕೆಲ್ಸತೇಳಿ, ಬ್ಯಾಟೆ ಆಡ್ದು. ಬ್ಯಾಟೆ ಇದರ ಉಪ ಅಂಗ ಆಗುಟ್ಟು.

ಇದೆಲ್ಲಾ ಯಾಕೆ ಮಾಡುವೆತ ಗೊತ್ತುಟಾ!

ಭೂಮಿತಾಯಿ ಅಂದ್ ; ನೇ ದಿನ ಮೀದ್ ಒಳಗೆ ಬಾಮುತ. ಜನ್ರ ಒಂದು ನಂಬಿಕೆ. ಈ ಕೆಲ್ಸನೆಲ್ಲಾ ಓರಿಮುತ್ತೈದೆ ಸಂಪ್ರದಾಯ ಆಗಿ ಮಾಡ್ದೆ ಹಂಗೆ ಬ್ಯಾರೆ ಬ್ಯಾರೆ ತರವ ತರ್‌ಕಾರಿಗಳ್‌ಂದ ಮಾಡ್ದ ಅನ್ನದ ಅಡ್ಗೆನೆಲ್ಲಾ ಒಂದು ಬಾಳೆಲೆಗೆ ಇಕ್ಕಿ ಒಂದು ಮಣೆ ಮುಂದೆ ಮಡ್ಗಿ, ಹತ್ರ ಒಂದು ಚೊಂಬು ನೀರ್ ಮಡ್ಗಿ ಸಂಪತ್ತ್ ಮತ್ತೆ ಸಮೃದ್ಧಿನ ಪಾಲ್ಕೊಕು ತೇಳಿ ನೆನ್ಸುವೆ. ಇದರ್ಲಿ ಹೆಂಗಸರ ಕೈವಾಡನೆ ಜ್ಯಾಸ್ತಿ.

ಇದರ್ನ ಅಡ್ಗೆ ಮನೆಲಿ ಮಡ್ಗುವೆ.. ಇದ್ಕೆ ಉಂಬೊಳಗೆ ತೇಳ್ದೆ ಸಾಮಾನ್ಯಾಗಿ ಭತ್ತನೆ ಪ್ರದಾನ ಆದ ರೈತರಿಗೆ ಇದ್ ಸುಗ್ಗಿಕಾಲ, ವಸಂತಕಾಲ ಆರಂಭ ಆಗುವ ದಿನಗ. ಮರಗಿಡಗ ಹಣ್ಣೆಲೆ ಕಣ್ಣ್‌ಕಂಡ್

ಮತ್ತೆ ಚಿಗ್‌ರ್ ಬಿಡುವ ಕಾಲಕ್ಕೆ ತಣ್ಣಂಗೆಗಾಳಿ ಬೀಸುವ ಕಾಲ. ಹಂಗಾಗಿ ಆಗ ಬೀಸುವ ಗಾಳಿಗೆ ಕಿಡಾಸದ ಕರೆಗಾಳಿ ತೇಳಿ ಕರ್‌ದವೆ.

ಈ ತರ ಹೊಸತನಕ್ಕೆ ಸುರು ಆಗುವ ಪ್ರಕೃತಿನ ಕಿಡಾಸಕ್ಕೆ ಸಂಬಂಧಿಸಿದಂಗೆ ನಿಯಮನ ಕೆಲವುಟ್ಟು.,..

ಆ ದಿನಗಳ್ಲಿ ಭೂಮಿನ ಹೂಡಿಕಾಗದ್,

ಕೊಟ್ಟ್‌ತಕಂಡ್ ಎಳ್ಕಿಕಾಗದ್, -ಒಟ್ಟಿಗೆ ಭೂಮಿತಾಯಿಗೆ ಬ್ಯಾನೆ ಆಕಾಗದ್‌ತ ಈ ನಿಯಮನ ಮಾಡ್ಯೊಳೊ.

ರೈತಂಗೆ ಈ ಕಿಡಾಸ ಸಾಮೂಹಿಕ ವಿಶ್ರಾಂತಿ-ಮನರಂಜನೆ-ಅಲ್ಲದೆ ರೈತರ ಕೃಷಿ ಉಪಕರಣ ಕೆಲಸ ಕಾರ್ಯಗಳಿಗೂ ಬಿಡುವುಯಿದ್ದವೆ. ಮನೆಗೆ ಛತ್ತ ಬಂದ ಕುಸಿಲಿ ಛತ್ತದ ಮ್ಯಾಲೆ ಕಲ್ಲ್‌ಮುಳ್ಳು ಅಡ್ಡುವ ಈ ಪದ್ಧತಿಯೆಲ್ಲಾ ಈಗನವುಕೇನ್ ಗೊತ್ತು ಹೇಳಿ?

ಅಂತೂ ವಿಶ್ವಮಹಿಳಾ ದಿನಾಚರಣೆನ ಈಗ ಜನ ಆ ಚರುಸುದು ಆದ್ರೆ ನಮ್ಮ ಭೂಮಿತಾಯಿನ ಎಷ್ಟೋ ಶತಮಾನಗಳ್‌ಂದ ಪೂಜಿಸ್ತಾ ಗೌರವಿಸ್ತಾ ಬಂದೊಳೊ ನೀವೇನ್ ಹೇಳ್ರಿ? ಹಿಂದೆ ನಮ್ಮ ಜನಯೆಲ್ಲಾ ಸೇರ್ಕಂಡ್ ನೆರೆಯವೆಲ್ಲಾ ಸೇರಿ ಕಾಡ್‌ಬ್ಯಾಟೆ ಮಾಡ್‌ತ್ತಿದ್ದೊ.

ಆಕಾಲಲಿ ಮೃಗಪಕ್ಷಿಗಳ ಕಾಟ ಬಹಳ ಹೆಚ್ಚಾಗಿತ್ತ್. ಮೀನ್‌ಬ್ಯಾಟೆ ಮಾಡ್‌ತ್ತಿದ್ದೊ ಕಾರೆಕಾಯಿ-ಬ್ಯಾಪೆರೆಕಾಯಿ ಇವರ್ನೆಲ್ಲಾ ಪಾರೆಕಲ್‌ಲಿ ಕುಟ್ಟಿ ಬೂದಿಸೇರ್ಸಿ ಮಿಶ್ರಮಾಡಿ ಹೊಳೆತೋಡಿಗೆ ಹಾಕ್ತಾಯಿದ್ದೊ.

ಆಗ ಮಕ್ಕಮರಿಯೆಲ್ಲಾ ಪಾತ್ರಗಳ್ನ ಹಿಡ್ಕಂಡ್ ಮೀನ್ ಹಿಡೆಕೆ ಹೋಗ್‌ತಿದ್ದೊ-ಸಿಕ್ಕಿದ ಮೀನ್‌ಗಳ್‌ನ ಬ್ಯಾರೆ ಬ್ಯಾರೆ ಮಾಡಿ ಕೊಂಡ್ಲಿ ಮೀನ್ ಅವರೆಕಾಳ್ ಹಾಕಿ ರೊಟ್ಟಿ ಮಾಡಿ ತಿಂದೊದು ಗ್ಯಾನಾದೆ ನೀವ್ರುಗೆ?ಮತ್ತೆ ಭರ್ಜರಿ ಅಡ್ಗೆ ಮಾಡಿ ಉಂಡ್ ಕುಷಿಪಡುವ ದಿನ ಅಂದಾಗಿತ್ತ್. 2ನೆದಿನ ತೇಳ್ರೆ ನಡುಕಿಡಾಸ ಹಿಂಗೆ ಕಳ್ದದೆ.

ಇನ್ನ್ ಮೂರ್ನೆದಿನ ಸಂಕ್ರಮಣ ಆಗಿದ್ದವೆ ಹೊತಾರೆ ಕೋಳಿ ಕೂಂಗಿಕೆ ಮುಂದೆ ಮನೆ ಯಜ್‌ಮಾನ್ರು ಮಿಂದ್ ಮಡಿ ಬಟ್ಟೆಪುಟ್ಟ್ ಎದ್‌ರ್ ಅಂಗಳದ ನಡುಲಿ ಚೌಕಾಗಿ ಸೆಗ್‌ಣಿ ಸಾರ್ಸಿ-ಅದರ್ಲಿ 7 ದೋರೆಸೊಪ್ಪು (ಸೂರ್ತಾಲೆ) 7 ಮಾವ್‌ನೆಲೆ-ಜೋಡ್ಸಿ, ಚಿಟ್ಲಿ ನೀಗೆ ಅರ್‌ಶಣ ಮಿಶ್ರ ಕುರ್ದಿನೀರ್, 3 ಕೊಡಿ ಗರಿಕೆ ಹುಲ್ಲು, 1 ಮಣೆ, 1 ಚೊಂಬು ನೀರ್- ಗುಡ್ಡದ ಪಲೆಂದ 1ಉರಿವ ಸೌದೆಕೊಳ್ಳಿ, ಅರ್‌ಶಣ ಕುಂಕುಮ ಕನ್ನಡಿ ಮಡ್ಗಿ ಅಂಗಳನ 3ಸಲ ಕೈಂದ ಸವ್ರುರಿ ಅರ್‌ಶಿಣ ನೀರ್‌ಂದ ಓಕುಳಿ ಮಾಡುವೆ. ಮತ್ತೆ ಎಣ್ಣೆಚರ್‌ಕ್‌ಂದ್ ಗರಿಕೆಲಿ ಭೂಮಿತಾಯಿಗೆ ಎಣ್ಣೆ ಹೊಯ್ಯುವೆ. ಅನ್ನಕೊಡುವ ಭೂಮಿ ತಾಯಿ ತಂಪಾಗಿ ಹೊಸ ಫಲನ ಕೊಡುವ ಉದ್ದೇಶನೆ ಎಣ್ಣೆ ಹೊಯ್ಯೊದು. ಇದ್ ಮೂರ್ನೆ ದಿನದ ಕಿಡಾಸದ ಮಹತ್ವ. ಮತ್ತೆ ಪ್ರಮುಖ ಕೊನೆ ಕಾರ್ಯಕ್ರಮ ಆಗುಟ್ಟು. ಇದೇ ಕಿಡಾಸ ಹಬ್ಬ.

ಎಷ್ಟೆಲ್ಲಾ ವಿಸಯ ಉಟ್ಟು -ಇದರ್ನೆಲ್ಲ ಬುಡಿಕಾಗದ್.

ಅರೆಭಾಷೆಲಿ ತಿಂಗಳ ಹೆಸ್ರ್ ಮತ್ತೆ ಅದರ್ಲಿ ಬರುವ ಆಚರಣೆಗ

1. ಸುಗ್ಗಿ ತಿಂಗ:- ಸುಗ್ಗಿ ತಿಂಗ ಮೀನ ಸಂಕ್ರಮಣ ಕಳ್ದ್ ಮಾರನೇ ದಿನ ಸುರಾವೆ. ಮೇಷ ಸಂಕ್ರಮಣವರೆಗೆ (ಮಾರ್ಚ್ 15ರ ಮೇಲೆ ಏಪ್ರಿಲ್ 15ರವರೆಗೆ) ಈ ತಿಂಗಳ್ಲಿ ಯುಗಾದಿ ಹಬ್ಬ ಬಂದವೆ. ಊರು ಹಬ್ಬಗ ಆದವೆ ಕೊಲ್ಲೂರು ಜಾತ್ರೆ ಈ ತಿಂಗಳ್ಲಿ ಬಂದವೆ.

2. ಪೊಗ್ಗು ತಿಂಗ:- ಈ ತಿಂಗ ಮೇಷ ಸಂಕ್ರಮಣ ಕಳ್ದ್ ಮಾರನೇ ದಿನಂದ ಸುರಾಗಿ ವೃಷಭ ಸಂಕ್ರಮಣದವರೆಗೆ ಬಂದದೆ. (ಏಪ್ರಿಲ್ 15ರ ಮೇಲೆ ಮೇ 15ರವರೆಗೆ) ಈ ತಿಂಗಳ್ಲಿ ಬಿಸು ಹಬ್ಬಂದ ಸುರಾವೆ. ಊರ್ ಹಬ್ಬಗ ಆದವೆ. ಗದ್ದೆಗೆ ಎತ್ತ್ ಕಟ್ಟುದು ಈ ತಿಂಗಳ್ಲಿ ಅಕ್ಷಯ ತದಿಗೆ ಬಂದವೆ.

3. ಬೇಸಿಗೆ ತಿಂಗ:- ಈ ತಿಂಗ ವೃಷಭ ಸಂಕ್ರಮಣ ಕಳ್ದ್ ಮಾರನೇ ದಿನಂದ ಸುರಾಗಿ, ಮಿಥುನ ಸಂಕ್ರಮಣವರೆಗೆ (ಮೇ 15ರ ಮೇಲೆ ಜೂನ್ 15ರವರೆಗೆ) ಈ ತಿಂಗಳ್ಲಿ ಊರು ಹಬ್ಬಗ ಇದ್ದವೆ. ಗದ್ದೆ ಹೂಡಿಕೆ ಸುರು ಮಾಡುವೆ.

4. ಕಾರ್ತಿಂಗ:- ಈ ತಿಂಗ ಮಿಥುನ ಸಂಕ್ರಮಣ ಕಳ್ದ್ ಮಾರನೇ ದಿನಂದ ಸುರಾಗಿ ಕರ್ಕಾಟ ಸಂಕ್ರಮಣದವರೆಗೆ (ಜೂನ್ 15ರ ಮೇಲೆ ಜುಲೈ 15ರವರೆಗೆ) ಈ ತಿಂಗಳ್ಲಿ ಗದ್ದೆ ಹೂಟಿ, ಗದ್ದೆಗೆ ಬೀಜ ಹಾಕುದು. ಕಾರ್ತಿಂಗ ದೆವ್ವಗಳಿಗೆ ಕೊಡ್ದು.

5. ಆಟಿ ತಿಂಗ:- ಆಟಿ ತಿಂಗ ಕರ್ಕಾಟ ಸಂಕ್ರಮಣ ಕಳ್ದ್ ಮಾರನೇ ದಿನಂದ ಸಿಂಹ ಸಂಕ್ರಮಣದವರೆಗೆ ಇದ್ದದೆ. (ಜುಲೈ 15ರ ಮೇಲೆ ಆಗಸ್ಟ್ 15ರ ವರೆಗೆ) ಈ ತಿಂಗಳ್ಲಿ ನಾಟಿ ಕೆಲ್ಸ ಮತ್ತೆ ಆಟಿ 18ಕ್ಕೆ ಆಟಿ ಪಾಯಸ ಮಾಡುವೆ. ನಾಗರ ಪಂಚಮಿ ಈ ತಿಂಗಳ್ಲಿ ಬಾದೋರ್‌ಂದ ನಾಗಂಗೆ ಕೊಟ್ಟುವೆ. ಮಂಗಳಗೌರಿ ವ್ರತ, ವರಮಹಾಲಕ್ಷ್ಮಿ ವ್ರತ, ರಕ್ಷಾಬಂಧನ ಈ ತಿಂಗಳ್ಲಿ ಬಂದವೆ.

6. ಸೋಣ ತಿಂಗ: ಸಿಂಹ ಸಂಕ್ರಮಣ ಕಳ್ದ್ ಮಾರನೇ ದಿನಂದ ಕನ್ಯಾ ಸಂಕ್ರಮಣದವರೆಗೆ(ಆಗಸ್ಟ್ 15ರ ಮೇಲೆ ಸೆಪ್ಟಂಬರ್ 15ರವರೆಗೆ) ಈ ತಿಂಗಳ್ಲಿ ಗೌರಿ ಹಬ್ಬ, ಗಣೇಶ್ ಚತುರ್ಥಿ, ಮತ್ತೆ ಸೋಣ 12 (ಆಗಸ್ಟ್ 28) ಸೋಣ 18ರ (ಸೆಪ್ಟಂಬರ್3) ಕೈಲ್‌ಮುಹೂರ್ತ ಬಂದವೆ. ಗೌರಿ ಹಬ್ಬದಂದ್ ಸೋಮವಾರಪೇಟೆ ಹತ್ರ ಹೊನ್ನಮ್ಮನ ಕೆರೆಗೆ ಬಾಗಿನ ಬುಡ್ದು.

7. ಸಿರ್ನಾಲ್ ತಿಂಗ: ಈ ತಿಂಗ ಕನ್ಯಾ ಸಂಕ್ರಮಣ ಕಳ್ದ್ ಮಾರನೇ ದಿನಂದ ತುಲಾ ಸಂಕ್ರಮಣದವರೆಗೆ ಬಂದದೆ (ಸೆಪ್ಟಂಬರ್ 15 ರಿಂದ ಅಕ್ಟೋಬರ್ 15) ಈ ತಿಂಗಳ್ಲಿ ನವರಾತ್ರಿ ಹಬ್ಬ, ಆಯುಧ ಪೂಜೆ, ಶಾರದಾ ಪೂಜೆ, ದುರ್ಗಾಷ್ಟಮಿ ಮಡಿಕೇರಿ ದಸರಾ ಬಂದವೆ. ತಿರುಪತಿ ಬ್ರಹ್ಮೋತ್ಸವ ಬಂದವೆ. ಮತ್ತೆ ಈ ತಿಂಗಳ ತುಲಾ ಸಂಕ್ರಮಣಲಿ ಕಾವೇರಿ ತೀರ್ಥ ಬಾದು (ಕಾವೇರಿ ಹಬ್ಬ)

8. ಬೆಳ್ತಿಂಗ:- ಈ ತಿಂಗ ತುಲಾ ಸಂಕ್ರಮಣ ಕಳ್ದ್ ಮಾರನೇ ದಿನಂದ ವೃಶ್ಚಿಕ ಸಂಕ್ರಮಣದವರೆಗೆ ಬಂದದೆ (ಅಕ್ಟೋಬರ್ 15 ರ ಮೇಲೆ ನವಂಬರ್ 15ರವರೆಗೆ) ಈ ತಿಂಗಳ್ಲಿ ಕಾವೇರಿ ಸಂಕ್ರಮಣ ಕಳ್ದ್ ಗದ್ದೆಗೆ ಪಿಟ್ಟ್ ಮಾಡ್‌ಗುದು. ಮತ್ತೆ ದೀಪಾವಳಿ ಹಬ್ಬ ಬಂದದೆ. ಹುತಾತ್ಮರ ದಿನ ಅಂದರೆ ಗುಡ್ಡೆಮನೆ ಅಪ್ಪಯ್ಯ ಗೌಡರ್‌ನ ಗಲ್ಲಿಗೇರಿಸಿದ ದಿನ (ಅಕ್ಟೋಬರ್31-1837 ಬೆಳಗ್ಗೆ 10-00ಗಂಟೆಗೆ)

9. ಜಾಳ್ತಿ:- ಈ ತಿಂಗ ವೃಶ್ಚಿಕ ಸಂಕ್ರಮಣ ಕಳ್ದ್ ಮಾರನೇ ದಿನಂದ ಧನು ಸಂಕ್ರಮಣದವರೆಗೆ (ನವೆಂಬರ್ 15ರಿಂದ ಡಿಸಂಬರ್ 15ರವರೆಗೆ)

ಈ ತಿಂಗಳ್ಲಿ ರೋಹಿಣಿ ನಕ್ಷತ್ರ ಬರುವ ಹುಣ್ಣಿಮೆ ದಿನ ಹುತ್ತರಿ ಹಬ್ಬ ಬಂದವೆ. ಧರ್ಮಸ್ಥಳ

ಲಕ್ಷದೀಪೋತ್ಸವ, ಕಟೀಲು ದೀಪೋತ್ಸವ, ಸುಬ್ರಹ್ಮಣ್ಯ ಷಷ್ಠಿ ಬಂದವೆ. ಗದ್ದೆ ಕವ್‌ರ್ ಹೋಗಿದ್ದವೆ. ಕಾಫಿ ತೋಟದ ಕೆಲ್ಸ ಸುರಾದೆ.

10. ಪೆರಗಾಳ್ಳಿ: ಈ ತಿಂಗ ಧನು ಸಂಕ್ರಮಣ ಕಳ್ದ್ ಮಾರನೇ ದಿನಂದ ಮಕರ ಸಂಕ್ರಮಣದವರೆಗೆ ಬಂದವೆ. (ಡಿಸಂಬರ್ 15ರಿಂದ ಜನವರಿ 15) ಈ ತಿಂಗಳ್ಲಿ ಪಾಕ ಹಬ್ಬ, ಮತ್ತೆ ಕೆಲವು ಊರು ಹಬ್ಬಗ ಸುರಾದವೆ. ಕೊಯ್ಲ್ ಕೆಲ್ಸ, ಕಾಫಿ ತೋಟದ ಕೆಲ್ಸ ಸುರಾದೆ. ಈ ತಿಂಗಳ್ಲಿ ಮಕರ ಸಂಕ್ರಮಣ ಹೊಸ್ತ್ ಮಾಡುವೆ. (ಮಕರ ಸಂಕ್ರಾಂತಿ)

11. ಪೊನ್ನಿ:- ಮಕರ ಸಂಕ್ರಮಣ ಕಳ್ದ್ ಮಾರನೆ ದಿನಂದ ಕುಂಭ ಸಂಕ್ರಮಣದವರೆಗೆ (ಜನವರಿ 15ರ ಮೇಲೆ ಫೆಬ್ರವರಿ 15ರವರೆಗೆ) ಈ ತಿಂಗಳ್ಲಿ ಕೊಯ್ಲ್ ಕೆಲ್ಸ ಕಳ್ದ್ ಒಕ್ಕಲು ಕೆಲ್ಸ, ಬೈತೂರು ಹಬ್ಬ, ಮತ್ತೆ ಈ ತಿಂಗಳ ಕುಂಭ ಸಂಕ್ರಮಣಲಿ ಕಿಡ್ಡಾಸ ಬಂದದೆ.

12. ಮಾಯಿ ತಿಂಗ: ಕುಂಭ ಸಂಕ್ರಮಣ ಕಳ್ದ್ ಮಾರನೇ ದಿನಂದ ಮೀನ ಸಂಕ್ರಮಣದವರೆಗೆ (ಫೆಬ್ರವರಿ 15ರ ಮೇಲೆ ಮಾರ್ಚ್ 15ರ ವರೆಗೆ) ಈ ತಿಂಗಳ್ಲಿ ಊರು ಹಬ್ಬಗ ಆದವೆ. ಶಿವರಾತ್ರಿ ಈ ತಿಂಗಳ್ಲಿ ಬಂದವೆ. ಪೆರೂರು ಈಶ್ವರ ಇಗ್ಗುತಪ್ಪ ಜಾತ್ರೆ ಈ ತಿಂಗಳ್ಲಿ ಬಂದವೆ.

ಕೋಲು

ಕೋಲು ತೇಳೊನೊ ।ನಾವು ಕೋಲು ತೇಳೊನಾ।
ಶೃಂಗೇರಿ ಮಠಕೊಂದು ।ಕೋಲು ತೇಳೊನಾ॥
ಶೃಂಗೇರಿ ಮಠಂದಾ ।ಸುಳ್ಯದ ಮಾರ್ಗಕ್ಕಾಗಿ।
ಮಡ್ಕೇರಿ ಕ್ಯಾಟೆಗೊಂದು ।ಕೋಲು ತೇಳೋನಾ ॥
ಸುಬ್ರಹ್ಮಣ್ಯಕಾಗಿ । ಗಾಳಿಬೀಡಿಗಾಗಿ
ಪೊರಮಲೆ ಭಗವತಿಗೊಂದು ಕೋಲು ತೇಳೋನಾ ॥ಕೋಲು॥
ಭಾಗಮಂಡ್ಲದಾ ।ಬ್ರಹ್ಮಗಿರಿ ಬೆಟ್ಟಕ್ಕಾಗಿ।
ಕಾವೇರಮ್ಮಗೊಂದು ಕೋಲು ತೇಳೋನಾ ॥
ನಾಲ್ಕ್ ನಾಡಿಗಾಗಿ । ತಡಿಯಂಡಮೋಳು ನೋಡಿ
ಇಗ್ಗುತ್ತಪ್ಪಗೊಂದು ಕೋಲು ತೇಳೋನಾ ॥
ನಾಪೋಕ್ಲು ಪ್ಯಾಟೆ । ಕಕ್ಕುಂದ ಕುಂದುನೋಡಿ ॥
ವೆಂಕಟರಮಣ ಸ್ವಾಮಿಗೊಂದು ಕೋಲು ತೇಳೋನಾ ॥ಕೋಲು॥
ಪಾಲೂರಿಗೆ ಬಂದ್ ।ಹರಿಶ್ಚಂದ್ರಲಿ ಮಿಂದ್।
ಪಾಲೂರಪ್ಪಗೊಂದು । ಕೋಲು ತೇಳೋನಾ ॥
ಕಾವೇರಿಲಿ ಮುಳ್ಗಿ । ಬಲ್ಲಂಬೇರಿಲಿ ಎದ್ದ್।
ಅಗಸ್ತ್ಯೇಶ್ವರ ಸ್ವಾಮಿಗೊಂದು ।ಕೋಲು ತೇಳೋನಾ ॥ಕೋಲು॥
ಸ್ವಾಮಾರ ಪ್ಯಾಟೆಗಾಗಿ । ಹೊನ್ನಮ್ಮನ ಕೆರೆನೋಡಿ
ಪಾರ್ವತಿ ದೇವಿಗೊಂದು । ಕೋಲು ತೇಳೋನಾ ॥
ಉದ್ರಿತ್ ಮಲ್ಲಿಗೆ । ಚದ್‌ರಿತ್ ಊರಿಗೆ।
ಪಾರ್ವತಿ ಮುಡಿಗೆ । ಕೋಲು ತೇಳೋನಾ ॥ ಕೋಲು ॥

ಕೊಡಗಿನ ಅಳಿಯ ನಮ್ಮ ವೆಂಕಟ್ರಮಣ ಗೌಡರು

ಹತ್ತು ಕುಟುಂಬ ಹದಿನೆಂಟು ಗೋತ್ರದ ಬುಡಕಟ್ಟಿನ ಅರೆಗನ್ನಡ ಮಾತೃಭಾಷೆಯನ್ನಾಡುವ ಕುರುಂಜಿ ಕುಟುಂಬದಲ್ಲಿ 75 ವರ್ಷಗಳ ಹಿಂದೆ ಅಮರ ಸುಳ್ಯದ ಕುಗ್ರಾಮದಲ್ಲಿ ಜನಿಸಿ, ಇದೀಗ ಆಧುನಿಕ ಸುಳ್ಯವನ್ನಾಗಿ ಮಾರ್ಪಡಿಸಿ-ಧಾರ್ಮಿಕ, ರಾಜಕೀಯ ಹಾಗೂ ಮೂಲ ಬಾಂಧವರೊಡಗೂಡಿ ತನ್ನ ಹುಟ್ಟುಹಬ್ಬದ ಅಮೃತಮಹೋತ್ಸವವನ್ನು ಆಚರಿಸಿಕೊಳ್ಳುತ್ತಿರುವ ಸನ್ಮಾನ್ಯ ಶ್ರೀಮಾನ್ ಕುರುಂಜಿ ವೆಂಕಟ್ರಮಣ ಗೌಡರ ಬಗ್ಗೆ ಪೂಜ್ಯ ಹಾಗೂ ಗೌರವ ಭಾವನೆ ಹುಟ್ಟಿ ನಮ್ಮೆಲ್ಲರ ಶಿರಬಾಗುತ್ತದೆ.

ಜಗತ್ತಿನ ಶೈಕ್ಷಣಿಕ ಭೂಪಟದಲ್ಲಿ ಸುಳ್ಯವನ್ನು ದಾಖಲಿಸಿ ಆಧುನಿಕ ಸುಳ್ಯದ ನಿರ್ಮಾತೃವಾಗಿ ಬೆಳೆದ ಶೈಕ್ಷಣಿಕ ಹರಿಕಾರ, ಸಮಾಜ ಸುಧಾರಕ, ಕೊಡುಗೈದಾನಿಗಳಾದ ಮಾನ್ಯ ಕುರುಂಜಿ ವೆಂಕಟ್ರಮಣ ಗೌಡರ ಹುಟ್ಟು ಹಬ್ಬದ ಅಮೃತಮಹೋತ್ಸವ ಅಭಿನಂದನಾ ಸಮಿತಿಯು ಅವರ ಜೀವನ, ಸಾಧನೆ - ಚಿಂತನೆಗಳ ಬಗ್ಗೆ ಸಂಗ್ರಹಿಸಿ ಅವರಿಗೆ ಅರ್ಪಿಸುವ ಆಕರ ಗ್ರಂಥವು ಸುಳ್ಯದಿಂದ ಹೊರಬಂದು ಕರ್ನಾಟಕದ ಗ್ರಂಥಾಲಯಗಳನ್ನು ಸೇರಿದ್ದೇ ಆದರೆ ಕರ್ನಾಟಕದ ಮಾತೆ ತಾಯಿ ಭುವನೇಶ್ವರಿಗೆ ಸೇರತಕ್ಕ ಗೌರವ ಎನ್ನಬೇಕು. ಅದಕ್ಕಾಗಿ ನಾವೆಲ್ಲರೂ ಅವರನ್ನು ವಂದಿಸೋಣ.

ಅಮರ ಸುಳ್ಯದ ಕುರುಂಜಿ ವೆಂಕಟ್ರಮಣ ಗೌಡರೆಂದರೆ ಕೊಡಗಿನ ಅಳಿಯಂದಿರು, ಅವರ ಶ್ರೀಮತಿ ಜಾನಕಿಯವರು ಕೊಡಗಿನ ಮಗಳು, ಅಂದು ಕೊಡಗಿನ ಕಾವೇರಿ ತಾಯಿಯ ಮಣ್ಣಿನ ಕುಡಿಯಾಗಿ ಬೆಳೆದು ಗೌಡರ ಕೈಹಿಡಿದು ಘಟ್ಟದ ಕೆಳಗಿನ ಸುಳ್ಯವನ್ನು ಸುತ್ತುವ ಪಯಸ್ವಿನಿ ನದಿಯ ದಡದಲ್ಲಿ ಜೀವನ ಸಂಗಾತಿಯಾಗಿ ಪ್ರಕೃತಿಯೊಡನೆ ಗೌಡರ ಹೆಗಲಿಗೆ ಹೆಗಲು ಕೊಟ್ಟು ದುಡಿದು ಸುಳ್ಯದ ಸಿರಿಯಾಗಿ ಗೌಡ ಸ್ತ್ರೀಯರಿಗೆ ಆದರ್ಶ ಅಕ್ಕ ಆಗಿದ್ದಾರೆ. ಈ ದಂಪತಿಗಳ ಬಗ್ಗೆ ಬರೆಯಬೇಕು-ಬರೆಯುವುದೊಂದು ಹೆಮ್ಮೆ ತಲಕಾವೇರಿಯಲ್ಲಿ ಹುಟ್ಟಿದ ಕಾವೇರಿ ನದಿಯು ಬೇರೆ ಕಡೆ ಹೋದಲೆಲ್ಲಾ ಬಹಳ ನೀರುಣಿಸಿ ಹಸಿರು ಕ್ರಾಂತಿಯನ್ನೇ ಮಾಡಿದ್ದಾವರೆ ಶ್ರೀಮತಿ ಕುರುಂಜಿ ವೆಂಕಟ್ರಮಣರು ತವರೂರನ್ನು ಮರೆಯದೆ ಅವರ ಕಲ್ಯಾಣಕ್ಕಾಗಿ ಮಾಡಿದ ಕಲ್ಯಾಣಮಂಟಪಗಳ ಕಾರ್ಯಗಳಲ್ಲಿ ಹೆಸರು ಮೊದಲು ಪ್ರಾರಂಭವಾಗುತ್ತದೆ. ಮಡಿಕೇರಿ ಗೌಡ ಕಲ್ಯಾಣ ಮಂಟಪವು ಕೊಡಗಿನಲ್ಲೇ ಉತ್ತಮ ಸೌಕರ್ಯವುಳ್ಳ ಕಲ್ಯಾಣ ಮಂಟಪವೆಂದು ಹೆಸರು ಪಡೆದು -ಭಾಗಮಂಡಲ, ಕುಶಾಲನಗರ, ಮೂರ್ನಾಡು, ಮರಗೋಡು, ವೀರಾಜಪೇಟೆ, ಪಾರಾಣೆ ಕಡೆಗಳಲ್ಲಿ ಕಲ್ಯಾಣ ಮಂಟಪಗಳು ಜನರ ಸೌಕರ್ಯಕ್ಕೆ ಅನುಕೂಲವಾಗಿದ್ದು - ವೀರಾಜಪೇಟೆ, ಪಾರಾಣೆ, ಭಾಗಮಂಡಲದಂತಹ ಬಡಪ್ರದೇಶದಲ್ಲಿ ವೃತ್ತಿ ತರಬೇತಿ ಕೇಂದ್ರ ಕಾಲೇಜುಗಳು ಬಡವರ ಪಾಲಿಗೆ ಅನುಕೂಲವಾಗಿದೆ. ಹಾಗೆ ಇತರ ಹಲವಾರು ಕಡೆ ಶಿಕ್ಷಣ ಕೇಂದ್ರಗಳನ್ನು ತೆರೆದು ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪ್ರೋತ್ಸಾಹಿಸಿದಲ್ಲದೆ ಅವರಿಗೆ ಪ್ರಖ್ಯಾತ ಕಂಪನಿಗಳಲ್ಲಿ ಉದ್ಯೋಗ ಸಿಕ್ಕುವಂತಾಗಿದೆ-ಬೇರೆಯವರು ಬರೆದುದನ್ನು ಓದಲು ಅತೀವ ಆಸಕ್ತಿ. ಆದರೆ ಗೌಡರ ಬಗ್ಗೆ ಬರೆಯುವುದೆಂದರೆ ಸಾಮಾನ್ಯವೇ? ಅವರು ಮಾಡಿದ ಸತ್ಕಾರ್ಯಗಳು ಒಂದೆ-ಎರಡೆ ಹಲವು ವಿಧ ಹಲವು ವರ್ಗಗಳು ಇವರ ಬಗ್ಗೆ ಬರೆಯುವ ಅವಕಾಶ ಒದಗಿಸಿದ ಅಭಿನಂದನಾ ಸಮಿತಿಗೆ ಕೃತಜ್ಞತೆ ಅರ್ಪಿಸುತ್ತೇನೆ.

ಇಂತಹ ಮಹಾಕಾರ್ಯ ಮಾಡುತ್ತಿರುವ ರಾಜಕೀಯ ಮಹಾಪುರುಷ ಅದ್ವಾನಿಯಂತಹ ಮುಖಂಡರನ್ನೂ ಆದಿ ಚುಂಚನಗಿರಿ ಸ್ವಾಮಿ ಶ್ರೀ ಬಾಲಗಂಗಾಧರ ಸ್ವಾಮಿ, ಧರ್ಮಸ್ಥಳದ ವೀರೇಂದ್ರ

ಹೆಗಡೆ ಸತ್ಯಸಾಯಿ ಬಾಬರಂತಹ ಮಹಾಪುರುಷರನ್ನು ವೆಂಕಟ್ರಮಣ ಗೌಡರ ಮೂಲಕ ತನ್ನತ್ತ ಸೆಳೆದುಕೊಳ್ಳುತ್ತಿರುವ ಅಮರ ಸುಳ್ಯದ ಇತಿಹಾಸದ 3 ಶತಮಾನಗಳ ಹಿಂದೆ ಹೋಗಿ ಮತ್ತೆ ಮುಂದೆ ಬರಬೇಕಾಗಿದೆ. ಅಂದಿನ ಸುಳ್ಯವು ಹೇಗಿದ್ದಿರಬಹುದು? ಸುಳ್ಯ ಮತ್ತು ಕೊಡಗಿಗೂ ಇರುವ ಸಂಬಂಧ ಏನಿರಬಹುದೆಂದು ತಿಳಿದುಕೊಳ್ಳುವುದು ಮುಖ್ಯವೆಂದು ನನಗನಿಸುತ್ತಿದೆ. ಶೈಕ್ಷಣಿಕ ಭೂಪಟದಲ್ಲಿ ಸುಳ್ಯದಲ್ಲಿ ದಾಖಲಿಸಿದ ಅಮರ ಸುಳ್ಯದಲ್ಲಿ ಜನಿಸಿದ ಕುರುಂಜಿ ಗೌಡರ ಊರಿನ ಪೂರ್ವ ಇತಿಹಾಸವನ್ನು ತಿಳಿಯುವ ಪ್ರಯತ್ನ ಮಾಡೋಣ.

ಸುಮಾರು 1645ರ ನಂತರದ ಆಕಾಲದಲ್ಲಿ ಇಕ್ಕೇರಿ ವಂಶದ ಶಿವಪ್ಪನಾಯಕನ ಆಶ್ರಿತರಾಜ ಮತ್ತು ಕೊಡಗಿನ ಹಾಲೇರಿ ವಂಶದ 3ನೇ ಮುದ್ದುರಾಜನು ಭೇಟಿಯಾದ ಸಂದರ್ಭದಲ್ಲಿ ವಾಪಸ್ಸು ಕೊಡಗಿಗೆ ಬರುವ ಅವನಿಗೆ ಏನಾದರೂ ಬಹುಮಾನ ಕೊಡುವ ಆಸೆಯಾಗಿ ಏನಾದರೂ ಕೇಳು ಎಂದು ಶಿವಪ್ಪ ನಾಯಕನು ಒತ್ತಾಯಿಸಿದನಂತೆ- ಆಗ ಕೊಡಗಿನ ಮುದ್ದುರಾಜನು ತನಗಿರುವ ಒಂದೇ ಚಿಂತೆ ಪುತ್ರ ಸಂತತಿ ಇಲ್ಲದೆ ಇರುವುದು. ತನ್ನ ನಂತರ ರಾಜ್ಯಕ್ಕೆ ಉತ್ತರಾಧಿಯಾಗಿ ರಾಜ್ಯವಾಳಲು ಸಂತತಿ ಇಲ್ಲದೆಯಿರುವುದೆಂದ ಮಾತಿಗೆ ಶಿವಪ್ಪ ನಾಯಕನು ತನ್ನ ಕುಲದೇವರಾದ ಕೆಳದಿಯ ರಾಮೇಶ್ವರನನ್ನು ಮನಸ್ಸಿನಲ್ಲಿ ಧ್ಯಾನಿಸಿ ಒಂದು ಚಿನ್ನದ ಕಾಲುದೀಪವನ್ನು ಮಾಡಿಸಿ ಅದಕ್ಕೆ ತುಪ್ಪ ಮತ್ತು ಬತ್ತಿಯನ್ನಿಟ್ಟು ಮುದ್ದುರಾಜನಿಗೆ ಕೊಟ್ಟು ಈ ದೀಪವನ್ನು ನಂದಿಸದೆ ಒಂದು ವರ್ಷದವರೆಗೂ ಉರಿಸಿದ್ದೇ ಆದರೆ, ಪುತ್ರ ಸಂತತಿ ಆಗುವುದೆಂದನು. ಅದರಂತೆ ಮುದ್ದು ರಾಜನಿಗೆ ದೊಡ್ಡ ವೀರಪ್ಪ ಎನ್ನುವ ಪುತ್ರ ಸಂತತಿ ಆದ ಸುದ್ದಿಯನ್ನು ಅನೇಕ ಬಹುಮಾನ ಸಹಿತ ತಿಳಿಸಲು ಶಿವಪ್ಪ ನಾಯಕನಲ್ಲಿಗೆ ಹೋದಾಗ ನಾಯಕನು ತನ್ನ ಮಾತಿನಂತೆ ರಾಜನಿಗೆ ಸಂತಾನಭಾಗ್ಯ ಒದಗಿದುದನ್ನು ಕಂಡು, ಸಂತೋಷಗೊಂಡು ಆ ಮಗುವಿನ ಪಾಲನೆ ಪೋಷಣೆಗೋಸ್ಕರ ಹಾಲು ಬೆಣ್ಣೆಗಾಗಿ 9 ಮಾಗಣೆಗಳನ್ನು ಬಿಟ್ಟುಕೊಟ್ಟನಂತೆ. ಅಂದಿನಿಂದ ಆ ಗುಂಪಾದ ಮಾಗಣೆಗೆ ಅಮೃತ ಮಾಗಣೆ ಎಂದು ಹೆಸರಾಯ್ತು. ಅಮೃತ ಎಂದರೆ ಹಾಲು. ಅಮೃತವು ಜನರ ಬಾಯಲ್ಲಿ ಬರುತ್ತಾ ಅಮರ ಮಾಗಣೆ, ಅಮರ ಸುಳ್ಯ ಹಾಗೂ ಇಂದಿನ ಸುಳ್ಯವಾಗಿದೆ. ಇದೇ ದೊಡ್ಡ ವೀರಪ್ಪ ರಾಜನಾಗಿ 69 ವರ್ಷ ಆಳಿ ಕೊಡಗನ್ನೇ ಸುಖೀರಾಜ್ಯವನ್ನಾಗಿ ಮಾಡಿದ್ದಲ್ಲದೆ ಕೊಡಗಿನಲ್ಲಿ ತೆಂಗಿನಕಾಯಿ ಬೆಳೆಯದೆ ಇದ್ದುದ್ದರಿಂದ ಭಾಗಮಂಡಲದ ಕಾವೇರಮ್ಮನ ಭಂಡಾರದಿಂದ ಹಣವನ್ನು ಕೊಟ್ಟು ಇಕ್ಕೇರಿ ಸಂಸ್ಥಾನದಿಂದ ಅಂದಿನ ಕೊಡಗು ರಾಜ್ಯಕ್ಕೆ ಅಮರ ಮಾಗಣೆಯನ್ನು ಸೇರಿಸಿಕೊಂಡನು. ಇಂದಿಗೂ ತಲಕಾವೇರಿ ದೇವಸ್ಥಾನದ ತಕ್ಕ ಮುಖ್ಯಸ್ಥರು ಅಮರ ಸುಳ್ಯದಿಂದ ಬಂದ ಗೌಡರೇ ಆಗಿರುತ್ತಾರೆ. ಹೀಗೆ ಭಾಗಮಂಡಲದ ಸಮೀಪವಿರುವ ಅಮರ ಮಾಗಣೆಯಿಂದ ತೆಂಗಿನಕಾಯಿ ಮತ್ತು ತುಪ್ಪ ಬರುವಂತಾಯ್ತೆಂದು ಹಿರಿಯರು ಹೇಳುವುದನ್ನು ಕೇಳಿದ್ದೇನೆ (ಕೊಡಗಿನ ಇತಿಹಾಸ).

ಈ ಪ್ರಕಾರವಾಗಿ ಇತಿಹಾಸ ದೈವ ಪ್ರೇರಣೆ ಹೊಂದಿರುವ ಸುಳ್ಯದಲ್ಲಿ ಜನಿಸಿದ ಗೌಡರನ್ನು ಮಗನಾಗಿ ಪಡೆದ ಮಾತಾಪಿತೃಗಳು ಧನ್ಯರು. ಅಲ್ಲದೆ ಅರೆಗನ್ನಡ ಮಾತೃಭಾಷೆ ಗೌಡ ಜನಾಂಗದ ಶೈಕ್ಷಣಿಕ ಕ್ಷೇತ್ರದಲ್ಲಿ ಸಾಧನೆ ಮಾಡಿದ ನಮ್ಮೆಲ್ಲರ ಮೇರು ವ್ಯಕ್ತಿಯ ಬಗ್ಗೆ ದೇವ ಮಾನವನ ಭಾವನೆ ಮೂಡುತ್ತದೆ.

ರಾಜೀವ ಗಾಂಧಿ ಏಕತಾ ಪ್ರಶಸ್ತಿ ಪಡೆದ ಇವರು ಗೌಡ ಸಮಾಜಗಳಲ್ಲಿ ಮುಖ್ಯ ಅತಿಥಿಗಳಾಗಿ ಭಾಷಣ ಮಾಡುವಾಗ ಯುವ ಜನರ ಬಗ್ಗೆ ವಿಶೇಷ ಕಾಳಜಿ ಹೊಂದಿ ಕುಡಿತ, ಧೂಮಪಾನ, ಮಾದಕ

ಪದಾರ್ಥಗಳಿಂದ ದೂರವಿರಲು ಕರೆ ನೀಡುತ್ತಾ, ಯುವಕರು ಆತ್ಮ ವಿಶ್ವಾಸವನ್ನು ಬೆಳೆಸಿಕೊಂಡು ಸ್ವಂತಿಕೆ ದುಡಿಮೆಗಳಿಸಬೇಕು ಎಂಬ ವಿಷಯ ಯುವಜನರಿಗೆ ಒಂದು ಬೆಳಕಾಗಿದೆ. ಇವರು ಮಣ್ಣಿನ ಮಗನಾಗಿದ್ದರೂ ನಮ್ಮ ಜನಾಂಗದ ಅಭಿವೃದ್ಧಿಗೆ ಶಿಕ್ಷಣವು ಬಹಳ ಪ್ರಾಮುಖ್ಯ ಎನ್ನುವ ಇವರು ಶೈಕ್ಷಣಿಕ ಕಾರ್ಯಗಳು ಅತಿ ಶ್ರೇಷ್ಠವೆಂದು ಶಿಕ್ಷಣಕ್ಕೆ ಅತಿ ಮಹತ್ವವನ್ನು ಕೊಟ್ಟಿದ್ದಾರೆ. ಅವರೆ ಹೇಳಿಕೊಂಡಂತೆ ಅವರ ಜೀವನದಲ್ಲಿ ರೂಢಿಸಿಕೊಂಡು ಬಂದ ಸತ್‌ಚಿಂತೆ ಮತ್ತು ಸದಾಚಾರಗಳೇ ಅವರ ಉನ್ನತಿಗೆ ಕಾರಣ ಎಂಬುವುದನ್ನು ಪ್ರತಿಯೊಬ್ಬರು ತಿಳಿಯ ತಕ್ಕ ಮಹತ್ವದ ವಿಷಯವಾಗಿದೆ. ಗೌಡ ಜನಾಂಗದ ಬಂಧುಗಳು ಶಿಕ್ಷಣ ಪಡೆದು ಆರೋಗ್ಯವನ್ನು ಕಾಪಾಡಿಕೊಂಡು ಸಚ್ಚರಿತರಾಗಬೇಕೆಂದು ಸಾರಿ ಹೇಳುತ್ತಿದ್ದರು. ಅವರು ಮಡಿಕೇರಿ ಗೌಡ ಕಲ್ಯಾಣ ಮಂಟಪದಲ್ಲಿ ಭಾಷಣ ಮಾಡುತ್ತಿದ್ದಾಗ ಎಲ್ಲಾದರೂ 2 ಎಕ್ರೆ ಜಾಗ ತೋರಿಸಿ ನಾನು ಅಲ್ಲಿ ಶಿಕ್ಷಣಕ್ಕೆ ಬೇಕಾಗುವ ಸಹಾಯವನ್ನು ಮಾಡುತ್ತೇನೆ ಎಂದು ಹೇಳುವುದನ್ನು ಕೇಳಿದ್ದೇನೆ. ಅಂದೊಮ್ಮೆ ಅವರು ತಾನೇ ಮೆಡಿಕಲ್ ಕಾಲೇಜು ಇಂಜಿನಿಯರಿಂಗ್ ಕಾಲೇಜು, ಆಯುರ್ವೇದ ಕಾಲೇಜುಗಳನ್ನು ತೆರೆಯುತ್ತಾರೆಂಬ ಸುದ್ದಿ ಕೊಡಗಿನಾದ್ಯಂತ ಹರಡಿತ್ತು. ಗೌಡರ ಈ ಸೇವೆಯನ್ನು ಸಹಿಸದ ರಾಜಕೀಯ ಕೈಗಳು ಅವರು ಇಲ್ಲಿ ಮಡಿಕೇರಿ ಸುತ್ತಮುತ್ತ ಬರುವುದನ್ನು ಸಹಿಸದಾದರು. ಅಂದು ಹಾಗೆ ವಿದ್ಯಾಸಂಸ್ಥೆಯೊಂದು ಇಲ್ಲಿ ತೆರೆದಿದ್ದರೆ ಹಳ್ಳಿಗುಡ್ಡದ ಅದೆಷ್ಟೋ ಪ್ರತಿಭಾವಂತರು ಇಂದು ಸುಳ್ಯದ ಪರಿಸರದಂತೆ ಊರಿಗೆ 10 ಇಂಜಿನಿಯರು, ಡಾಕ್ಟರು ಆಗುತ್ತಿದ್ದರು.

ಧರ್ಮಸ್ಥಳದ ವೀರೇಂದ್ರ ಹೆಗ್ಗಡೆ, ಆದಿಚುಂಚನಗಿರಿಯ ಬಾಲಗಂಗಾಧರ ಸ್ವಾಮಿಗಳ ನಿಕಟ ಸಂಪರ್ಕ ಹೊಂದಿರುವ ಗೌಡರು ಅವರು ಮಾಡುವ ಧಾರ್ಮಿಕ ಕಾರ್ಯಗಳಿಂದ ಸಮ್ಮೇಳನಗಳನ್ನು ನಡೆಸುತ್ತಾ ಗೌಡ ಜನಾಂಗವನ್ನು ಉದ್ಧರಿಸುವುದರೊಂದಿಗೆ ಇತರರಿಗೂ ಅಭಿವೃದ್ಧಿಯ ದಾರಿ ತೋರಿಸಿದರು. ಅಂದು ಶ್ರೀ ಕುರುಂಜಿಯವರು ಗೌಡ ಸಮ್ಮೇಳನದಲ್ಲಿ ರತ್ನ ಖಚಿತವಾದ ಕಿರೀಟವನ್ನು ದೇವೇಗೌಡರ ಸಮ್ಮುಖದಲ್ಲಿ ಶ್ರೀ ಬಾಲಗಂಗಾಧರನಾಥ ಸ್ವಾಮಿಗಳಿಗೆ ತೊಡಿಸಿದಾಗ ಆ ಸಮಾರಂಭದ ಶೋಭೆ ಇನ್ನೂ ಕಣ್ಣ ಮುಂದೆ ಹಸಿರಾಗಿದೆ. ಸ್ವಾಮಿಗಳು ಚಿನ್ನದ ಕಿರೀಟವನ್ನು ಧರಿಸಿ ಸುಳ್ಯದ ಭವ್ಯ ವೇದಿಕೆಯಲ್ಲಿ ಆಸೀನರಾಗಿ ಶೋಭಿಸುತ್ತಿದ್ದುದನ್ನು ಕಂಡು ಸಾವಿರಾರು ಗೌಡ ಬಾಂಧವರಲ್ಲದೆ ಲಕ್ಷಾಂತರ ಜನರು ಭಕ್ತಿ ಭಾವನೆಯಿಂದ ಆನಂದಿತರಾದರು. ಈ ರೀತಿ ಸುಲಭವಾಗಿ ಸ್ವಾಮಿಗಳ ದರ್ಶನವನ್ನು ಶ್ರೀ ಸಾಮಾನ್ಯರಿಗೂ ಮಾಡಿಸಿದ ಕೀರ್ತಿ ಶ್ರೀ ಕುರುಂಜಿ ವೆಂಕಟ್ರಮಣ ಗೌಡರದು. ಅದನ್ನು ಕಂಡ ಪ್ರತಿಯೊಬ್ಬ ವ್ಯಕ್ತಿಯೂ ಕುರುಂಜಿಯವರನ್ನು ಮನದಲ್ಲಿ ನೆನೆಯುವಂತಾಯ್ತು.

ಮಣ್ಣಿನ ಮಗ ಗೌಡರ ಶ್ರಮಕ್ಕೆ ಭೂದೇವಿ ಒಲಿದು ಕೃಷಿರಂಗದಲ್ಲಿ ಅವರು ಮಾಡಿರುವ ಸಾಧನೆಗಳನ್ನು ಓದುವುದೇ ಒಂದು ಮನಸ್ಸಿನ ಜ್ಞಾನವು ಹೆಚ್ಚುತ್ತದೆ. ಕೃಷಿಯಿಂದ ಬಂದ ಲಕ್ಷ್ಮಿಯನ್ನು ಶಿಕ್ಷಣ ಕ್ಷೇತ್ರಕ್ಕೆ ಸಮರ್ಪಿಸಿದ್ದಾರೆ. ಸುಳ್ಯದ ಸಿರಿ ಸಂಪತ್ತನ್ನು ಇತರ ಕಡೆಗೂ ಹರಿಸಿದ್ದಾರೆ. ಕಲ್ಯಾಣ ಮಂಟಪಗಳು ಶಿಕ್ಷಣ ಕೇಂದ್ರಗಳು ವೃತ್ತಿಪರ ಶಿಕ್ಷಣ ಕೈಗಾರಿಕಾ, ಧಾರ್ಮಿಕ ಕೇಂದ್ರ, ಆಸ್ಪತ್ರೆ ಇವುಗಳ ಕಡೆಗೆ ಧಾರೆಯೆರೆದಿದ್ದಾರೆ. ಸ್ವಂತ ದುಡಿಮೆಗೆ ಕೃಷಿಯಲ್ಲಿ ತನ್ಮಯತೆ ಬೇಕು ಎನ್ನುವ ಗೌಡರ ನುಡಿಗೆ ಇವರ ವಿದ್ಯಾ ಸಂಕೀರ್ಣ ಕುರುಂಜಿಬಾಗ್ ಸುತ್ತಲಿನ ತೋಟದ ಹಸಿರು ಸೊಗಸು ಪಯಸ್ವಿನಿ ನದಿಯ ನೆಲೆಯು ಕಾರಣ ಎನ್ನಬೇಕು. ಹೀಗೆ ಪಯಸ್ವಿನಿಯಿಂದ ಸೊಂಪಾದ ಕೃಷಿ ಭೂಮಿಯನ್ನು ತನ್ಮಯತೆಯಿಂದ ಪ್ರಯೋಗ ಶಾಲೆಯಾಗಿಸಿ ನೀಡಿದ ಸಂತೋಷ ಇಂದು ಅವರನ್ನು ಹಸಿರು ಕ್ರಾಂತಿಯ ಶೈಕ್ಷಣಿಕ ಜಗತ್ತಿನೆಡೆಗೆ ಕರೆತಂದು, ಕೈಗಾರಿಕೆ ವ್ಯಾಪಾರ ಶ್ರೀಮಂತ ಕೃಷಿಯಾಧಾರಿತ ಬದುಕು ಸಾಮಾನ್ಯ

ಜನರಿಗೂ ಲಭ್ಯವಾಯಿತು. ಅದರೊಡನೆ ಕಲೆ ಸಾಹಿತ್ಯ ಸಂಸ್ಕೃತಿಯನ್ನು ಪ್ರೀತಿಸುವ ಗೌರವಿಸುವ ಗೌಡರು ಸುಳ್ಯ ಎಂಬ ಮಹಾಗ್ರಾಮವನ್ನು ಕರ್ನಾಟಕದ ಭೂಪಟದಲ್ಲಿ ನಿಲ್ಲಿಸಿ ಜಗತ್ತಿಗೆ ತೋರಿಸಿದ್ದಾರೆ.

ಗೌಡರು ಸ್ವಂತ ಶ್ರಮ, ದುಡಿಮೆ ಹಾಗೂ ಬುದ್ಧಿಶಕ್ತಿಯಿಂದ ಅಡಿಕೆ ತೆಂಗು ಬೆಳೆಯ ಫಸಲನ್ನು ಉತ್ತಮ ಬೆಲೆಗೆ ಮಾರಿ ಹಣವನ್ನು ದ್ವಿಗುಣಗೊಳಿಸುವ ವಿಷಯ ಸಾಮಾನ್ಯರೂ ತಿಳಿದ ವಿಷಯವಾಗಿದ್ದು, ಅವರು ಅದರಿಂದ ಶಿಕ್ಷಣ ಹಾಗೂ ಇತರ ಕ್ಷೇತ್ರದಲ್ಲಿ ಅದ್ಭುತ ಸಾಧನೆ ಮಾಡಿದ್ದಾರೆ. ತಮ್ಮ ಆದರ್ಶ ಬಾಳಿನ ಮೂಲಕ ಸರ್ವರಿಗೂ ಆದರ್ಶ ವ್ಯಕ್ತಿಯಾಗಿದ್ದಾರೆ. ಸಮಾಜದ ಉದ್ಧಾರಕ್ಕಾಗಿ ಶ್ರಮಿಸುತ್ತಿರುವ ಸದಾ ಹಸನ್ಮುಖಿ ಸರಳ ಹಾಗೂ ನಮ್ಮ ಬಾಂಧವರೊಡನೆ ಅರೆಗನ್ನಡ ಭಾಷೆಯನ್ನೇ ಆಡುವ ಗೌಡರು ನಮ್ಮ ಜನಾಂಗದಲ್ಲಿ ಹುಟ್ಟಿದವರೆನ್ನುವಾಗ ನಮಗೆ ಅಭಿಮಾನವುಕ್ಕುತ್ತದೆ.

ಸುಳ್ಯವು ಇಂದಿನ ಭೂಪಟದಲ್ಲಿ ಕೇಂದ್ರ ಬಿಂದುವಾಗಲೂ ಅಲ್ಲಿ ನೆಲೆಸಿರುವ ಅರೆಗನ್ನಡ ಮಾತನಾಡುವ ಗೌಡ ಜನರೇ ಕಾರಣರಾಗಿದ್ದಾರೆ. ಯಾಕೆಂದರೆ ಹಾಲೇರಿ ರಾಜ ಮನೆತನದ ಅಂದಿನ ಕೊಡಗು ದೇಶವು 1834ರಲ್ಲಿ ಬ್ರಿಟಿಷ್ ಸರಕಾರದ ವಶವಾದ ನಂತರ ರೈತರ ತೆರಿಗೆಯನ್ನು ಧಾನ್ಯ ರೂಪದಿಂದ ಹಣದ ರೂಪಕ್ಕೆ ಪರಿವರ್ತಿಸಿದ, ಕೊಡಗು ಮತ್ತು ಸುಳ್ಯವನ್ನು ಬ್ರಿಟಿಷರ ಆಡಳಿತದ ಅನುಕೂಲಕ್ಕಾಗಿ ಬೇರ್ಪಡಿಸಿದ ಒಡೆದು ಆಳುವ ಅವರ ನೀತಿಯನ್ನು ಅಮರ ಸುಳ್ಯದ ರೈತರು, ಬ್ರಿಟಿಷ್ ಸರಕಾರದ ತೆರಿಗೆ ಪದ್ಧತಿ ಘೋರಣೆ ವಿರುದ್ಧ ಸಿಡಿದೆದ್ದು, ಕೊಡಗಿನ ಹಲವು ಹುತಾತ್ಮರ ಪೈಕಿ ಗುಡ್ಡೆಮನೆ ಅಪ್ಪಯ್ಯ ಗೌಡ ಎಂಬುವರು ಮಡಿಕೇರಿ ಕೋಟೆಯಲ್ಲಿ ಗಲ್ಲಿಗೇರಿಸಲ್ಪಟ್ಟು ಬಿಸ್ಲೆಯಲ್ಲಿ, ಅಮರ ಸುಳ್ಯದ ಪ್ರದೇಶವು ಪೂರ್ತಿಯಾಗಿ ಕಡೆಗಣಿಸಲ್ಪಟ್ಟಿತು. ಅಲ್ಲಿ ಸೇತುವೆ ಸಂಪರ್ಕವಾಗಲೀ ರಸ್ತೆಗಳಾಗಲಿ, ಶಾಲೆಗಳಾಗಲಿ, ಆಸ್ಪತ್ರೆಗಳಾಗಲಿ ಆಗಲಿಲ್ಲ. ಅಂದು ಬ್ರಿಟಿಷರಿಂದ ತುಳಿಯಲ್ಪಟ್ಟ ಗೌಡ ಜನರು ಶತಮಾನದವರೆಗೂ ಮೇಲೇಳಲೇ ಇಲ್ಲ. ಸ್ವಾತಂತ್ರ್ಯ ಬಂದು 50 ವರ್ಷಗಳಾದರೂ ಕೊಡಗಿನ ಮುಖ್ಯ ಪಟ್ಟಣಗಳಂತಹ ಪ್ರದೇಶಗಳಲ್ಲೂ ಕೀಳರಿಮೆ ಮತ್ತು ಸಂಕೋಚಗಳಿಂದ ಬಾಳುವಂತಾಗಿದ್ದರೂ ಇಂದು ಇದೆಲ್ಲವು ತೊಡೆದು ಹೋಗಿದೆ.

ಶ್ರೀ ಗೌಡರು ಭಾರತ ದೇಶದ ಭೂಪಟದಲ್ಲಿ ಕರ್ನಾಟಕದ ಸುಳ್ಯ ಎಂಬ ಅಂದಿನ ಕುಗ್ರಾಮವಾದ ಸುಳ್ಯ ಮಹಾನಗರವನ್ನು ವಿಶ್ವವು ಗುರುತಿಸುವಂತೆ ಮಾಡಿದ ಅವರ ಸಾಹಸ ಅಮರವಾದುದು ಸುಳ್ಯವು ಆಧುನಿಕ ತಂತ್ರಜ್ಞಾನದ ಶಿಕ್ಷಣದೊಂದಿಗೆ ಗೌಡರು ಸುಳ್ಯದ ಶತಮಾನದ ಹಿಂದಿನ ಅಂತರವನ್ನು ಧಾರ್ಮಿಕ ಕಾರ್ಯಗಳ ಮೂಲಕ ಮೇಲೆ ತರಲು ಯಶಸ್ವಿಯಾಗಿದ್ದಾರೆ.

ಹತ್ತು ಕುಟುಂಬ ಹದಿನೆಂಟು ಗೋತ್ರದ ಅರೆಗನ್ನಡ ಮಾತೃಭಾಷೆಯ ಗೌಡ ಜನಾಂಗದಲ್ಲಿ ಜನಿಸಿ ಬಡಜನರ ಪಾಲಿಗೆ ಬೆಳಕಾಗಿ ಅಂದಿನ ಕೊಡಗಿನ ಕುಡಿಯಾಗಿ, ಇಂದಿನ ಸುಳ್ಯದ ಸಿರಿಯಾಗಿ, ಶಿಲ್ಪಿಯಾಗಿ, ನಾಡಿಗೆ ಬೆಳಕಾಗಿ, ಯುವ ಜನತೆಗೆ ಮಾದರಿಯಾಗಿ, ಪೋಷಕರಾಗಿ, ಕನ್ನಡನಾಡಿನ ಓರ್ವ ಶ್ರೇಷ್ಠ ವ್ಯಕ್ತಿ ತನ್ನ ಹುಟ್ಟುಹಬ್ಬದ ಶತಮಾನೋತ್ಸವವನ್ನು ನಾವೆಲ್ಲರೂ ಆಚರಿಸುವಂತಾಗಲೆಂದು ನಮ್ಮ ಕುಲದೈವ ಶ್ರೀ ವೆಂಕಟ್ರಮಣ ಸ್ವಾಮಿಯನ್ನು ಶೃಂಗೇರಿ ಶಾರದಾಂಬೆಯನ್ನು ಭಕ್ತಿಯಿಂದ ಬೇಡುತ್ತೇನೆ.

ವಿದ್ಯಾಚೇತನ -ಮಹಾನ್‌ಚೇತನಾ -ಶ್ರೀ ಕುರುಂಜಿ

ಚೇತನ-ಚೇತನಾ-ಮಹಾನ್‌ಚೇತನಾ ಮಹಾನ್ ಚೇತನಾ
ಗೌಡ ಚೇತನಾ ವೆಂಕಟ್ರಮಣ ಗೌಡರು- ಗೌಡಚೇತನಾ - ಗೌಡಚೇತನಾ॥

ಆಧುನಿಕ ಸುಳ್ಯದ। ಅಮರ ಶಿಲ್ಪಿಯೆಂದೂ।
ಇವರ ಬಿರುದು ಬಹಳಾ.. ಅಲ್ಲಿರುವುದು ಚೇತನಾ।
ಮಹಾನ್ ಚೇತನಾ.. ಗೌಡ ಚೇತನಾ.. ಗೌಡ ಚೇತನಾ॥

ಸೃಷ್ಟಿಯ ಸಿರಿಯಿಂದಾ.. ಕೊಡುಗೈದಾನಿಯಾಗಿ
ಮಣ್ಣಿನ ಮಗನಾಗಿ।.. ದುಡಿಮೆಗಾರರೆಂದೂ
ಶಿಕ್ಷಣ ಲೋಕದಲ್ಲಿ। ಧ್ರುವತಾರೆ ಇವರೆಂದೂ ॥ಚೇತನಾ॥

ಸ್ಫೂರ್ತಿಯ ಚಿಲುಮೆ। ಗುಣಗಳ ಗಣಿಯಾಗಿ।
ಆದರ್ಶದ ಜೀವಿಯಾಗಿ, ಎದೆಗುಂದದ ಹೋರಾಟಗಾರ।
ಅವರು ನಡೆದ ದಾರಿ। ಆದರ್ಶಗಳ ಆಗರ ।ಚೇತನಾ॥

ಸಾಧನೆಯ ಅಧ್ಯಯನ। ಒಂದು ಮಹಾಕಾವ್ಯ
ಅದೇ ಒಂದು ಕಾವ್ಯ। ಅದೇ ಮಹಾಕಾವ್ಯ॥
ಕಾವ್ಯದ ರಸಸ್ವಾದ। ಎಲ್ಲರಿಗೂ ಚೇತನಾ.. ಚೇತನಾ॥

ಸುಳ್ಯದ ಕಾಡುಹೋಗಿ। ನಾಡು ಊರಾಯ್ತು।
ಬೋಳುಗುಡ್ಡ ಬಯಲಾಗಿ। ಅಡಿಕೆ ತೆಂಗಾಯ್ತು।
ಪಯಸ್ವಿನಿ ನೀರುಂಡು । ಗೌಡರ ಭೂಮಿ ತಂಪಾಯ್ತು॥

ಅಂದು ಶಿಕ್ಷಣ ಎಂದರೆ । ಗಗನ ಕುಸುಮ ಸುಳ್ಯಕೆ।
ಇಂದು ಅಲ್ಲಿ ಆಗುವುದು। ಆಧುನಿಕತೆಯ ಶಿಕ್ಷಣ।
ಶಿಸ್ತಿಕೆ ದಾರಿತೋರುವ ಮಾದರಿ ಶಿಕ್ಷಣ॥

ಜಡವಾಗಿ ಮಲಗಿದ್ದ ಸುಳ್ಯ ಅಂದು । ಅಮರ ಶಿಲ್ಪಿ
ಜೊಗಸೆಯಲ್ಲಿ ಸುಂದರಾ। ಮಿನಿಭಾರತ।
ಇದುವೆ.. ಕರ್ನಾಟಕದ। ಭೂಪಟದ ಆಧುನಿಕ ಸುಳ್ಯ॥

ಪೂರ್ವಯುಗದ ಸುಳ್ಯ। ಇಂದು ಎಲ್ಲಿದೆ?
ಕಾಂಕ್ರಿಟು ಯುಗದ ಸುಳ್ಯವಾಗಿದೆ-ಶುಭವಾಗಲಿ
ಜಯವಾಗಲಿ ಅವರಿಗೆ। ಶ್ರೀ ವೆಂಕಟರಮಣ ಗೌಡರಿಗೆ॥

ಶುಭವಾಗಲಿ ಕುರುಂಜಿ ವೆಂಕಟ್ರಮಣ ಗೌಡರಿಗೆ
ಒಲಿಯಲಿ ಕಾವೇರಿ ಮಾತೆ ಅವರಿಗೆ
ಶೃಂಗೇರಿ ಶಾರದಾಂಬೆ ಕೃಪೆಯಿರಲಿ ನಿಮಗೆ ॥ ಚೇತನಾ॥

ಗೌಡ ಭಾಷೆ ಮತ್ತು ಸಂಸ್ಕೃತಿ

ಕೊಡಗು ಮತ್ತು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನೆಲೆಸಿರುವ ಹತ್ತು ಕುಟುಂಬ ಹದಿನೆಂಟು ಗೋತ್ರದ ಬುಡಕಟ್ಟಿನ ಗೌಡ ಜನಾಂಗದವರು ಮನೆಮಾತಾಗಿ ಅರೆಭಾಷೆಯನ್ನು ಮಾತನಾಡುತ್ತಾರೆ. ಹಾಗಾಗಿ ಇವರನ್ನು ಅರೆಭಾಷಿಗರೆಂದು ಕರೆಯುತ್ತಾರೆ. ಅಲ್ಲದೆ ಈ ಭಾಷೆಗೆ ಅರೆಗನ್ನಡ, ಅರೆಭಾಷೆ, ಗೌಡಕನ್ನಡ, ಗೌಡಭಾಷೆ ಎಂದೂ ಕರೆಯುತ್ತಾರೆ. ಹಳೆಗನ್ನಡದ ಮೂಲರೂಪವನ್ನು ಹೊಂದಿರುವ ಜೀವಂತ ನಡುಗನ್ನಡ ಭಾಷೆ. ಹೊಸಕನ್ನಡದೊಂದಿಗೆ ಬೆರೆದು ಸ್ಥಿರವಾಗಿ ನಿಂತಿರುವ ಕನ್ನಡ ಭಾಷೆಯಾಗಿದೆ. ಕವಿರಾಜಮಾರ್ಗನು ತಿಳಿಸಿದ ಕನ್ನಡದ ಜನಸಮೂಹದಲ್ಲಿ ಗೌಡಜನಾಂಗವು ಒಂದಾಗಿ ಬೆರೆತು, ತಮ್ಮ ಭಾಷೆಯ ಮೂಲಕ ಕನ್ನಡದ ಮೂಲವನ್ನು ಉಳಿಸಿಕೊಂಡಿದೆ. ಬೆಳೆಯುತ್ತಾ ಇರುವ ಕನ್ನಡದೊಂದಿಗೆ ಈ ಭಾಷೆಯೂ ಬೆಳೆಯುತ್ತಾ ಇದೆ ಎನ್ನುವುದಕ್ಕೆ ಅವರ ಶುಭ ಸಮಾರಂಭಗಳಲ್ಲಿ ಹಾಡುವ ಗ್ರಾಂಥಿಕ ರೂಪದ ಸಂಸ್ಕೃತಿ ಪರಿಚಯದ ಸೋಬಾನೆ ಹಾಡುಗಳೇ ಸಾಕ್ಷಿಯಾಗಿದೆ.

ಅರೆ ಎಂದರೆ ಕಲ್ಲು- ಕಲ್ಲಿನಂತೆ ಸ್ಥಿರವಾದ ಭಾಷೆ ಎಂದು ಹೇಳುತ್ತಾರೆ. ಅರೆಭಾಷೆ ಗೌಡರ ಸ್ವಂತಭಾಷೆ. ಈ ಜನಾಂಗದ ಕೇಂದ್ರ ಎಂದು ಸುಳ್ಯದಲ್ಲಿ ಸಾರ್ವಜನಿಕವಾಗಿ ಗೌಡರ ಭಾಷೆಯು ರೂಢಿಯಲ್ಲಿದೆ. ಹಾಗಾಗಿ ಅಲ್ಲಿ ಈ ಭಾಷೆಗೆ ದೇಶೀಯ ಸ್ಥಾನಮಾನವಿದೆ. ಅಲ್ಲಿ ಇತರ ವರ್ಗದವರೂ ಸರಾಗವಾಗಿ ಮಾತನಾಡಬಲ್ಲರು. ಭಾಷಾ ವಿಜ್ಞಾನಿ ಪ್ರೊ. ಕೋಡಿ ಕುಶಾಲಪ್ಪಗೌಡರು ಇದರ ಬಗ್ಗೆ ವ್ಯಾಕರಣವನ್ನು ರಚಿಸಿ, ಗೌಡ ಕನ್ನಡ-ಅರೆಗನ್ನಡ ಎಂದು ಕರೆದಿದ್ದಾರೆ. ಅಲ್ಲದೆ, ಅನೇಕ ಗೌಡ ಸಾಹಿತಿಗಳು ಕಥೆ-ಕವನ- ಹಾಡು-ಪತ್ರಿಕೆ ಹಾಗೂ ಹಲವಾರು ಪುಸ್ತಕಗಳನ್ನು ಬರೆದು ಒಂದು ಜನಾಂಗದ ಸಂಸ್ಕೃತಿ ಹಾಗೂ ಭಾಷೆಯನ್ನು ಬೆಳಕಿಗೆ ತರುವಲ್ಲಿ ಯಶಸ್ವಿಯಾಗಿದ್ದಾರೆ. ಗ್ರಾಮಾಂತರ ಪ್ರದೇಶಗಳಲ್ಲಿ ಮಾತನಾಡುವ ಶಬ್ದಗಳು ಕಠಿಣವಾಗಿದ್ದು, ಮಾತನಾಡಲು, ಓದಲು ಪ್ರಯಾಸಪಡಬೇಕಿದ್ದರೂ, ಕೊಡಗಿನಲ್ಲಿ ಅದರಲ್ಲೂ ಮಡಿಕೇರಿ ಸುತ್ತಮುತ್ತ ಕನ್ನಡ ಮಿಶ್ರ ಅರೆಭಾಷೆಯು ಬಳಕೆಯಲ್ಲಿದೆ. ಕನ್ನಡದ ಮೂಲತತ್ವವನ್ನು ಉಳಿಸಿಕೊಂಡಿರುವ ಈ ಭಾಷೆಯ ಪರಿಚಯವನ್ನು ಕನ್ನಡಾಭಿಮಾನಿಗಳು ಪಡೆಯಲೇಬೇಕಾಗಿದೆ. ಉದಾಹರಣೆಗೆ ಸಾಮಾನ್ಯವಾಗಿ ಸಾರ್ವಜನಿಕ ಸ್ಥಳಗಳಲ್ಲಿ ಪಕ್ಕದಲ್ಲಿ ಕುಳಿತ ಮಹಿಳೆಯ ಕುತ್ತಿಗೆಯಲ್ಲಿರುವ ಗೌಡತಾಳಿಯನ್ನು ಗುರುತಿಸಿ, ನೀವ್ಯಾರ ಮನೆಯವ್ರು? ಅಥವಾ ನೀವು ಮನೆಯಲ್ಲಿ ಯಾವ ಭಾಷೆಯನ್ನು ಮಾತನಾಡುತ್ತೀರಿ? ಎಂದು ಕೇಳಿದರೆ, "ನಾವ್ ಅರೆಬಾಸೆನವ್ರು" ಎನ್ನುತ್ತಾಳೆ. ಮುಂದೆ ಕನ್ನಡದ ಸರಳ ಅಕ್ಷರಗಳನ್ನು ಬಳಸಿ ಮಾತು ಮುಂದುವರಿಯುತ್ತದೆ. ಅರೆಭಾಷೆಯು ಮನೆಮಾತಾದರೂ ಉಳಿದಂತೆ ಎಲ್ಲಾ ವ್ಯವಹಾರಗಳು ಕನ್ನಡದಲ್ಲೇ ನಡೆಯುತ್ತದೆ. (ಉ: ಬಾತ್- ಹೋತ್-ಗಡ- ಬನ್ನೆ-ಹೋನೆ-ಬಾಕನ-ಹೋಕನ ಇತ್ಯಾದಿ)

ಗೌಡ ಎನ್ನುವ ಪದವು ಒಂದು ದೇಶದ ಸಂಸ್ಕೃತಿಯನ್ನು ಪ್ರತಿಬಿಂಬಿಸುವುದರಿಂದ ಇದು ಒಂದು ಜನಾಂಗ ಸೂಚಕ ಪದವಾಗಿದೆ. ಗೌಡ ಎನ್ನುವ ಪದಕ್ಕೆ ಊರಿಗೆ ಯಜಮಾನ, ಹಿರಿಯ, ಪಟೇಲ ಎಂಬ ಅರ್ಥವಿದೆ. ಇಂದಿಗೂ ಗೌಡ ಸಂಸ್ಕೃತಿ ಇತರ ಸಂಸ್ಕೃತಿಗಿಂತ ಭಿನ್ನ-ವಿಶಿಷ್ಟ ಮತ್ತು ಬಲಾಢ್ಯವಾಗಿದೆ

ಎಂದು ವಿದ್ವಾಂಸರ ಅಭಿಪ್ರಾಯವಾಗಿದೆ. ಇವರು ಬಯಲು ಸೀಮೆಯಲ್ಲಿ ರಾಜಾಶ್ರಯವನ್ನು ಪಡೆದು ಕನ್ನಡವನ್ನೂ, ತುಳುನಾಡಲ್ಲಿ ತುಳು, ದಕ್ಷಿಣ ಕನ್ನಡದಲ್ಲಿ ಹವ್ಯಕರ ಒಡನಾಡಿಗಳಾಗಿ ಅರೆಭಾಷೆಯನ್ನೂ ಮಾತನಾಡಿದರು. ಆಗಿನ ಕಾಲದಲ್ಲಿ ಶೃಂಗೇರಿ ಜಗದ್ಗುರುಗಳ ಮಾರ್ಗದರ್ಶನದಲ್ಲಿ ಗೌಡರು ಸಂಘಟಿತರಾಗಿ ಕಟ್ಟೆಮನೆಗಳನ್ನು ಸ್ಥಾಪಿಸಿ, ಅದರ ಹಿರಿಯನ ಆದೇಶದಂತೆ ತಮ್ಮ ಜಾತಿ ಬಾಂಧವರನ್ನು ರಕ್ಷಿಸಲು "ಹತ್ತು ಕುಟುಂಬ ಹದಿನೆಂಟು ಗೋತ್ರ ಸಮಸ್ತರ ಸಂಗಡ ಕೇಳಿ" ಎಂಬ ನುಡಿಕಟ್ಟನ್ನು ಅನುಸರಿಸಿ ನಡೆಯಲಾರಂಭಿಸಿದರು. ಈ ಕಟ್ಟಳೆಯು ಮದುವೆಯಲ್ಲಿ ಇಂದಿಗೂ ನಡೆಯುತ್ತಿದೆ. ಹಿಂದೆ ಶೃಂಗೇರಿಯ ಜಗದ್ಗುರುಗಳು ಇವರಿಗೆ ಗುರುಗಳಾಗಿದ್ದರು. ಬ್ರಾಹ್ಮಣಧಾರೆ ಕ್ರಮವಿತ್ತು. ಆಗ ಸಸ್ಯಾಹಾರಿಗಳಾಗಿದ್ದರು. ಈಗ ಗೌಡಧಾರೆಯ ಕ್ರಮವಿದ್ದು ಶೃಂಗೇರಿಗೆ ಹರಿಕೆ ಕಾಣಿಕೆ ನೀಡುವ ಪದ್ಧತಿಯಿದೆ. ಕೊಡಗಿಗೆ ಬಂದ ಗೌಡರು ಪ್ರತಿಷ್ಠೆಯ ದೆಸೆಯಿಂದ ಮದ್ಯಪಾನ ಮಾಂಸಾಹಾರಗಳನ್ನು ಬಳಸಲು ಪ್ರಾರಂಭಿಸಿದರು. ಆಗಿನ ಹೆಂಗಸರು ಕಚ್ಚೆ ಸೀರೆಯನ್ನು ಉಡುತ್ತಿದ್ದರೆಂದು ಹಿರಿಯರು ಹೇಳುತ್ತಾರೆ.

ಕೊಡಗಿನ ಉಡುಪು

ಕೊಡಗಿನಲ್ಲಿ ಜಮ್ಮ ಆಸ್ತಿ ಹೊಂದಿರುವುದರಿಂದ ರಾಜನು ಕೊಟ್ಟ ಆಸ್ಥಾನದ ಉಡುಪಾದ ಬಿಳಿ ಕುಪ್ಪಸ, ಕೆಂಪು ರೇಷ್ಮೆ ಧಟ್ಟಿ, ಚಿನ್ನದ ಜರಿಯ ರುಮಾಲನ್ನು ತಲೆಗೆ ಕಟ್ಟಿ ಇಂದಿಗೂ ಹಬ್ಬದ ದಿನಗಳಲ್ಲಿ ಬರುತ್ತಾರೆ. ಹೆಂಗಸರು ಮುಂದೆ ನೆರಿಗೆಯಿಟ್ಟು ಗೇಂಟಿಕಟ್ಟಿ ಸೀರೆವುಟ್ಟು, ಉದ್ದ ತೋಳಿನ ರವಿಕೆ, ತಲೆಗೆ ಚಿನ್ನದ ಜರಿಯ ರೇಷ್ಮೆ ವಸ್ತ್ರವನ್ನು ಕಟ್ಟುತ್ತಿದ್ದರು. ಸುಮಾರು ಅರವತ್ತು ವರ್ಷಗಳ ಹಿಂದಿನ ತನಕ ಈ ಪದ್ಧತಿ ಮದುವೆಯಲ್ಲಿ ವಧುವರರಿಗೂ ಇತ್ತು. ಈಚೆಗೆ ವರನು ಕಚ್ಚೆಪಂಜೆ, ಶಾಲು, ಬಿಳಿಕೋಟು, ಶರ್ಟು, ಪೇಟವನ್ನು ವಧುವಿಗೆ ಕನ್ನಡ ಸೀರೆ, ಸೊಂಟಕ್ಕೆ ಶಾಲು, ಮುಸುಕಿನ ವಸ್ತ್ರಗಳೂ ಮುಂದುವರಿದಿದೆ. ಈ ಪದ್ಧತಿ ಮುಂದೆಯೂ ಸ್ಥಿರವಾಗಿ ಉಳಿಯುತ್ತದೆ. ಮುಸುಕು ಧರಿಸಿದ ಸಾಂಪ್ರದಾಯಿಕ ಉಡುಪಿನಲ್ಲಿ ಅಲಂಕೃತವಾಗಿ ಶೋಭಿಸುವುದೇ ಗೌಡ ಜನಾಂಗದ ಉಡುಪಿನ ಸಂಸ್ಕೃತಿ.

ಕೌಟುಂಬಿಕ ಪರಂಪರೆ ಐನ್‌ಮನೆಯ ನೆಲ್ಲಕ್ಕಿ ದೀಪದ ಎದುರು ನಡೆಯುತ್ತದೆ. ಅಟ್ಟದ ಮೇಲೆ ಕುಲದೇವರ ಮುಡುಪು ಇರುತ್ತದೆ. ಪ್ರತಿ ಐದು ವರ್ಷಗಳಿಗೊಮ್ಮೆ ಕುಟುಂಬಗಳಲ್ಲಿ ಹರಿಸೇವೆಯು ಗಂಭೀರವಾಗಿ ಸಾಂಪ್ರದಾಯಕ ಹಾಗೂ ಕಡ್ಡಾಯವಾಗಿ ನಡೆಯುತ್ತದೆ. ಐನ್‌ಮನೆಯ ಒಂದು ಕೋಣೆಯಲ್ಲಿ ಗುರುಕಾರೋಣರವರಿಗೆ ಇಡುವ ಕ್ರಮವಿದೆ. ಕುಟುಂಬದ ಪಟ್ಟೆದಾರನು ಮುಖ್ಯಸ್ಥನಾಗಿರುತ್ತಾನೆ.

ಇವರಲ್ಲಿ 18 ಗೋತ್ರಗಳಿದ್ದು, ಅವುಗಳನ್ನು ನೋಡಿ ನೆಂಟಸ್ತಿಕೆ ಮಾಡುವ ಕ್ರಮವಿದೆ. ಮದುವೆಯಲ್ಲಿ 12 ಕಂಬಗಳ ಸೀತಾವಳಿ ಚಪ್ಪರದಡಿಯಲ್ಲಿ ಕಾರ್ಯಕ್ರಮಗಳು ನಡೆಯುತ್ತವೆ. ಇದಕ್ಕೆ ದೇವಸಭೆ ಎನ್ನುತ್ತಾರೆ. ಒಳಗಿನ ಕಂಬಗಳು ತ್ರಿಮೂರ್ತಿ ಹಾಗೂ ಗಣಪತಿಯ ಸ್ಥಾನ ಪಡೆದಿದ್ದು, ಅಲ್ಲಿ ಧಾರೆ ನಡೆಯುತ್ತದೆ. ಇವರಲ್ಲಿ ಎಣ್ಣೆ ಶಾಸ್ತ್ರ, ಹಸೆ, ಮಡಿಲಕ್ಕಿ, ಮದುರಂಗಿ ಶಾಸ್ತ್ರ, ಧಾರೆ ಮುಖ್ಯವಾಗಿರುತ್ತದೆ. ಮದುವೆಯ ಪ್ರಾರಂಭವು ವೀಳ್ಯಶಾಸ್ತ್ರದಿಂದ ಪ್ರಾರಂಭವಾಗುತ್ತದೆ.

ಕೊಡಗಿನಲ್ಲಿ ಇವರು ಜಮ್ಮ ಗುರುತಿನ ಒಡಿಕತ್ತಿ, ಕೋವಿ ಮತ್ತು ಕುಲದೇವರ ಗುರುತಿನ ಸಂಕೇತವನ್ನು ಹೊಂದಿರುತ್ತಾರೆ. ಹುತ್ತರಿ, ಕಾವೇರಿ ಸಂಕ್ರಮಣ, ಕೈಲುಮುಹೂರ್ತ ಹಬ್ಬಗಳನ್ನು ಸಾಂಪ್ರದಾಯಿಕ ಉಡುಪಿನಲ್ಲಿ ನಡೆಸುತ್ತಾರಲ್ಲದೆ, ಯುಗಾದಿ, ಶಿವರಾತ್ರಿ, ಮಕರ ಸಂಕ್ರಾಂತಿ, ಬಿಸು, ಚೌತಿ, ದೀಪಾವಳಿಯಲ್ಲಿ ಊರ ದೇವರಿಗೆ ಪೂಜೆಗೆ ಕೊಡುತ್ತಾರೆ. ಮಕರ ಸಂಕ್ರಾಂತಿಯ ದಿನ ಹೊಸ ಅಕ್ಕಿಯನ್ನು ನೈವೇದ್ಯಕ್ಕೆ ಕೊಡುತ್ತಾರೆ.

ಹುಟ್ಟು ಸಾವುಗಳಲ್ಲಿ ಸೂತಕವಿದ್ದು, ಸತ್ತ 48 ನೇ ದಿನಕ್ಕೆ ಕಾವೇರಿ ಸಂಗಮದಲ್ಲಿ ಪಿಂಡ ಇಡುತ್ತಾರೆ. ಮತ್ತು ದೀಪಾವಳಿಯಲ್ಲಿ ಸತ್ತವರಿಗೆ ಅವಲಕ್ಕಿ ಎಡೆ ಹಾಕುತ್ತಾರೆ. ಶುಭ ಹಾಗೂ ಎಲ್ಲಾ ಸಂಪ್ರದಾಯಗಳಲ್ಲಿ ಬದಲಾವಣೆಯಿಲ್ಲದಿದ್ದರೂ, ಪರಭಾಷಾ ವ್ಯಾಪೋಹದಿಂದ ಭಾಷೆ, ಸಂಪ್ರದಾಯಗಳ ಮೇಲೆ ಅಲಕ್ಷ್ಯವಿದೆ. ರಕ್ಷಣೆಗಾಗಿ ವಿಧವಾ ವಿವಾಹ-ವಿಚ್ಛೇದನ, ಪುನರ್ವಿವಾಹ ಜಾರಿಯಲ್ಲಿದೆ. ಪ್ರಾದೇಶಿಕ ವೈವಿಧ್ಯತೆಯಿಂದ ಭಾಷೆ, ಉಡುಪು ಆಹಾರದಲ್ಲಿ ವೈವಿಧ್ಯತೆಯಿದೆ. ಮನೆಗೆ ಯಾರಾದರೂ ನೆಂಟರು ಬಂದರೆ ಕಾಲು ತೊಳೆಯಲು ನೀರು ಕೊಟ್ಟು, ಕಾಲು ತೊಳೆದ ನಂತರ ಹಿರಿಯರ ಕಾಲು ಮುಟ್ಟಿ ನಮಸ್ಕರಿಸಿ, ಹರಿವಾಣದಲ್ಲಿ ಎಲೆ ಅಡಿಕೆ ಕೊಟ್ಟು, ನಂತರ ಕಾಫಿ ತಿಂಡಿ ಕೊಡುತ್ತಾರೆ. ಬಂದವರು ಹೋಗುವಾಗ ಸ್ವಲ್ಪ ದೂರ ಕಳುಹಿಸಲು ಹೋಗುವದು ರೂಢಿ.

ಇತ್ತೀಚೆಗೆ ಆಯಾಯ ಜನಾಂಗಗಳ ಸಂಸ್ಕೃತಿ ಉಳಿವಿಗೆ ಸಮಾಜಗಳಲ್ಲಿ ಒಂದಾಗಿ ಬೆರೆತು ಬಾಳುವ ವಾತಾವರಣ ಸೃಷ್ಟಿಯಾಗಿದೆ. ಪ್ರತಿಯೊಂದು ಜನಾಂಗಕ್ಕೂ ಅವರದೇ ಆದ ಸಂಸ್ಕೃತಿಯಿದೆ. ವಿದ್ಯೆ ಮತ್ತು ಆರ್ಥಿಕ ಮಟ್ಟ ಪ್ರಗತಿಗೊಂಡಂತೆಲ್ಲಾ ನಾಗರಿಕತೆ ಬೆಳೆದಂತೆ ಸಂಸ್ಕೃತಿಯು ಸಂಪದ್ಭರಿತವಾಗಿ ಬೆಳೆಯುವುದು, ಪ್ರಗತಿಯ ದಿಕ್ಕು ಬದಲಾಯಿಸಿ ಇನ್ಯಾವುದೋ ಸಂಸ್ಕೃತಿ ಕಡೆ ವಾಲಿದರೆ ತಮ್ಮನ್ನು ತಾವ್ಯಾರು ಎಂದು ಗುರುತಿಸಿಕೊಳ್ಳುವುದು ಕಷ್ಟ. ಜನಾಂಗದ ಸಂಸ್ಕೃತಿಯು ಭಾಷೆ, ಉಡುಪು ಮತ್ತು ಆಹಾರಗಳಿಂದ ನಡೆಸಿಕೊಂಡು ಬಂದಿರುವ ಆಚಾರ-ವಿಚಾರ ಸಂಪ್ರದಾಯಗಳು ಜನಾಂಗಕ್ಕೆ ನೆಮ್ಮದಿ, ಶಾಂತಿ, ಪ್ರೀತಿ, ವಿಶ್ವಾಸಗಳನ್ನು ಬೆಳೆಸುವ ಸಾಧನವಾಗಿರಬೇಕು. ಅದರಂತೆ ಕೊಡಗಿನಲ್ಲಿ ಅರೆಭಾಷಿಗರು ತಮ್ಮ ಸಂಸ್ಕೃತಿಯನ್ನು ಉಳಿಸಲು ಇನ್ನೂ ಸಂಘಟಿತರಾಗಿ ಗೌಡರ ಕೃಷಿ ಉತ್ಪಾದನೆ -ಕಲೆ- ಸಾಹಿತ್ಯ -ಜಾನಪದ ಕ್ರೀಡೆ-ತಂತ್ರಜ್ಞಾನ -ಮಾಹಿತಿ-ಪದಕೋಶ-ಪುಸ್ತಕ ಭಂಡಾರ -ಆರ್ಥಿಕ ವ್ಯವಸ್ಥೆಗಳನ್ನು ಮುಖ್ಯವಾಗಿ ಮದುವೆಯಲ್ಲಿ ವಧುವರರು ತೊಡುವ ಉಡುಪುಗಳನ್ನು ಒಳಗೊಂಡಂತೆ ಬಲಗೊಳಿಸಬೇಕಾಗಿದೆ. ಇದಕ್ಕಾಗಿ ಗೌಡ ಸಮಾಜದ ಸಂಘ ಸಂಸ್ಥೆಗಳು, ಅಕಾಡೆಮಿಯು ಮುಂದೆ ಬಂದು ಭದ್ರತೆಯ ತಳಹದಿಯನ್ನು ನೀಡಬೇಕಾಗಿದೆ. ಒಂದು ಜನಾಂಗವನ್ನು ಗಂಡಸರ ತಲೆ ಉಡುಪಿನಿಂದಲೂ, ಹೆಂಗಸರು ಉಡುವ ಸೀರೆಯ ರೀತಿಯಿಂದಲೂ ಗುರುತಿಸಬಹುದಾಗಿದೆ.

ಇತ್ತೀಚೆಗೆ ನಡೆಸುವ ಬಹುಭಾಷಾ ಕವಿಗೋಷ್ಠಿಗಳಲ್ಲಿ ಎಲ್ಲಾ ಜನಾಂಗದವರ ಭಾಷೆಯಲ್ಲಿ ಕವಿವಾಚನವಾಗುತ್ತದೆ. ಗೌಡರು ಅರೆಭಾಷೆಯಲ್ಲಿ ವಾಚಿಸುತ್ತಾರೆ. ಇಲ್ಲಿ ಇದಕ್ಕೆ ಗೌಡ ಭಾಷೆ ಎಂದರೆ ಅರ್ಥಪೂರ್ಣವಾಗಬಲ್ಲದು.

ಕೊಡಗಿನಲ್ಲಿ ಗೌಡರು ಮತ್ತು ಸಂಸ್ಕೃತಿ

ಶತಮಾನದ ಕೊಡುಗೆಯಾಗಿ ಹೊರ ಬೀಳಲಿರುವ ಸ್ಮರಣ ಸಂಚಿಕೆಗೆ ಶುಭ ಕೋರುತ್ತಾ ಜನಾಂಗದ ಹಿನ್ನೆಲೆಯ ಮಹತ್ವವನ್ನು ಯುವ ಜನರಿಗೆ ತಿಳಿಯಪಡಿಸುವ ಸದುದ್ದೇಶದಿಂದ ಕೊಡಗಿನಲ್ಲಿ ಗೌಡರು ಮತ್ತು ಸಂಸ್ಕೃತಿ ಎಂಬ ವಿಷಯದ ಬಗ್ಗೆ ಲೇಖನ ಬರೆಯಲು ಅವಕಾಶವಿತ್ತ ಶತಮಾನೋತ್ಸವ ಸ್ಮರಣ ಸಂಚಿಕೆ ಸಮಿತಿಗೆ ನನ್ನ ವಂದನೆಗಳು. ಹಿರಿಯರು ತೋರಿಸಿದ ದಾರಿಯಲ್ಲಿ ವಿದ್ಯಾಸಂಘವನ್ನು ಕಟ್ಟಿ ಬೆಳೆಸಿದ ಹಿರಿಯರಿಗೆ ನನ್ನ ಕೃತಜ್ಞತೆಯನ್ನು ಅತಿ ಗೌರವದಿಂದ ಅರ್ಪಿಸುತ್ತಾ ಮುಂದುವರಿಯುತ್ತಿದ್ದೇನೆ.

ಎರಡು ಶತಮಾನಗಳ ಹಿಂದೆ ಕೊಡಗು ಅರಣ್ಯ ಪ್ರದೇಶ ಕಡಿಮೆ ವಿಸ್ತೀರ್ಣ ಹಾಗೂ ಗರಿಷ್ಠ ಮಟ್ಟದ ಎತ್ತರವನ್ನು ಹೊಂದಿರುವ ಕೊಡಗು ದೇಶ ಎಂಬ ಹೆಸರಿನಿಂದ ಕರೆಯಲ್ಪಡುತ್ತಿತ್ತು. ಕೊಡಗಿನಲ್ಲಿ ಗೌಡರನ್ನು ಹತ್ತು ಕುಟುಂಬಗಳಿಗೆ ಸೇರಿದ ಹದಿನೆಂಟು ಗೋತ್ರದ ಬುಡಕಟ್ಟಿನವರೆಂದು ಕರೆಯುತ್ತಾರೆ. ಕೊಡಗಿನ ಘಟ್ಟ ಪ್ರದೇಶಗಳಲ್ಲಿ ವಾಸಿಸುತ್ತಿದ್ದ ಗೌಡಜನರ ಸಂಖ್ಯೆ 1931ರಲ್ಲಿ ಕೇವಲ 14016 ಇದ್ದುದು 1961ರ ವೇಳೆಗೆ ಮೂವತ್ತು ಸಾವಿರಕ್ಕೂ ಅಧಿಕ ಏರಿರಬಹುದೆಂದು ನಂಬಲಾಗಿದೆ. ಈಗಿನ ಮಡಿಕೇರಿ ತಾಲೂಕಿನ ಸುತ್ತ ಮುತ್ತ ಇರುವ ಘಟ್ಟ ಪ್ರದೇಶವಾಗಿದ್ದ ಕೊಡಗು ದೇಶ ಎಂದರೆ ಹಿರಿಯಾಪಟ್ಟಣದಿಂದ ಅರಕಲಗೋಡು ಪುತ್ತೂರು ಬೆಳ್ಳಾರೆ ತನಕ ಹಾಲೇರಿ ಅರಸರ ಕೊಡಗು ದೇಶವಾಗಿದಿತ್ತು. ಕೊಡಗು ದೇಶದ ಇನ್ನೊಂದು ಭಾಗದ ಅಮರ ಸುಳ್ಯ ಕಡೆಯಿಂದ ಇಲ್ಲಿಗೆ ಬಂದು ನೆಲೆಸಲು ಟಿಪ್ಪು ಸುಲ್ತಾನನ ಧಾಳಿಯಲ್ಲಿ ನಾಶವಾದ ಅಪಾರ ಜನ ಸಂಖ್ಯೆಯು ಕಾರಣವಾಯಿತೆನ್ನುತ್ತಾರೆ. ಗೌಡರು 1792 ಮತ್ತು 1799ಕ್ಕೆ ಮಡಿಕೇರಿ ಸುತ್ತಮುತ್ತ ಬಂದಿರುವರೆಂದು ಚರಿತ್ರೆ ಹೇಳಿದ್ದರೂ ಅದಕ್ಕೂ ಹಿಂದೆ ಕೆಲವು ಮನೆತನದವರು ಇಲ್ಲಿದ್ದರೆಂಬುದಕ್ಕೆ ಉದಾಹರಣೆಯಾಗಿ ಹಿರಿಯರಿಂದ ಕೇಳಿದ ಮಾತುಗಳೆಂದರೆ ಧಾಳಿಯ ಸಮಯ ಭಯಗೊಂಡ ಜನರು ತಮ್ಮ ತಮ್ಮ ಆಯುಧಗಳೊಂದಿಗೆ ಕಾಡಿನ ದೇವರ ಬನಗಳಲ್ಲಿ ಅಡಗಿ ಕುಳಿತರೆಂದೂ ಆಗಿನ ನಾಲ್ಕು ಕಟ್ಟಿನ ಐನ್‌ಮನೆಗಳಲ್ಲಿ ಸೈನಿಕರು ಬಂದು ನೋಡುವಾಗ ತೊಟ್ಟಿಲಲ್ಲಿ ನೂರಾರು ಮಕ್ಕಳು ಮಲಗಿದ್ದನ್ನು ಕಂಡು ಮಕ್ಕಳೇ ಇಷ್ಟಿರುವಾಗ ಇನ್ನು ದೊಡ್ಡವರೆಷ್ಟು ಮಂದಿ ಇರಬಹುದೆಂದು ತಿರುಗಿ ಹೋದರು ಎಂಬ ವಿಷಯವನ್ನು ಹಿರಿಯರು ಹೇಳುತ್ತಿದ್ದುದನ್ನು ನಾವು ಕೇಳಿದ್ದೇವೆ. ಅದರಂತೆ 1792 ಕಿಂತಲೂ ಹಿಂದೆ ಗೌಡರು ಇಲ್ಲಿ ನೆಲೆಸಿದ್ದರು ಎಂಬುದು ಸಹ ಪಟ್ಟೋಲೆ ಪಳಮೆ ಹಾಗೂ ಇನ್ನಿತರ ಮೂಲಗಳಿಂದ ತಿಳಿದು ಬರುತ್ತದೆ. ಹೀಗೆ 1792 ಮತ್ತು 1799, 1808ರಿಂದ 1820ರ ತನಕ ಬಹಳಷ್ಟು ಜನರು ತೊಡಿಕಾನ ಮಾರ್ಗವಾಗಿ ಭಾಗಮಂಡಲ ಕಡೆ, ಸುಬ್ರಹ್ಮಣ್ಯಕ್ಕಾಗಿ ಗಾಳಿಬೀಡಿನ ಕಡೆ, ಪುಷ್ಪಗಿರಿ ಬೆಟ್ಟಕ್ಕಾಗಿ ಸೋಮವಾರಪೇಟೆ ಕಡೆ ಹಾಗೂ ಐಗೂರು ಸೀಮೆಯಿಂದಲೂ ಇಲ್ಲಿಗೆ ಬಂದು ನೆಲೆಸಿದರೆಂಬ ಮಾಹಿತಿಯಿದೆ. ಆಗಿನ ಕಾಲದಲ್ಲಿ ದಟ್ಟ ಅರಣ್ಯದಲ್ಲಿ ಸೊಳ್ಳೆಗಳು, ಚಳಿಯ ಕೊರೆತ ಹಾಗೂ ಮಳೆಯ ಆರ್ಭಟವು ಭೀತಿಯನ್ನು ಹುಟ್ಟಿಸುತ್ತಿತ್ತೆನ್ನುತ್ತಾರೆ ಚರಿತ್ರಾಕಾರರು

ಕೊಡಗು ಗೌಡ ಸಂಸ್ಕೃತಿಯನ್ನು ವಿವಿಧ ಸಂದರ್ಭಗಳಲ್ಲಿ ಹಾಡುವ ಸೋಬಾನೆ ಜಾನಪದಕ್ಕೆ ಸಂಬಂಧಿಸಿದ ನಂಬಿಕೆ ಆಚರಣೆ ಇತ್ಯಾದಿಗಳನ್ನು 1970ರಲ್ಲಿ ಹೊರತರಲಾದ ಕೊಡಗು ಮತ್ತು ದಕ್ಷಿಣ ಕನ್ನಡ ಗೌಡ ಸಮಾಜದ ಸಂಸ್ಕೃತಿ ಎಂಬ ಕಿರು ಹೊತ್ತಿಗೆಯಲ್ಲಿ ಸಂಗ್ರಹಿಸಿ ಕೊಡಲಾಗಿದೆ. ಗೌಡರ

ವಿಷಯಗಳು ಕೊಡಗು ಗಜೆಟಿಯರ್‌ನಲ್ಲಿ ಇರುವುದು. ಕೊಡಗು ರಾಜರ ಕಟ್ಟು, ಕಟ್ಟಳೆಗಳ ತೀರ್ಮಾನಗಳು ಪದ್ಧತಿಗಳು ಹರಿಸೇವೆ, ಅರೆ ಭಾಷೆ, ಕವನ ಇತ್ಯಾದಿ ಬರಹಗಳನ್ನು ಪ್ರಕಟಿಸಲಾಗಿದೆ. ಮಡಿಕೇರಿಯಲ್ಲಿ ಗೌಡ ವಿದ್ಯಾರ್ಥಿನಿಯರ ವಸತಿ ನಿಲಯದ ಮೇಲ್ವಿಚಾರಕಿಯಾಗಿದ್ದ ಚೆಟ್ಟಿಮಾಡ ಶ್ರೀಮತಿ ಅಮ್ಮಪ್ಪನವರು ಕೆಲವು ಸೋಬಾನೆ ಹಾಡುಗಳನ್ನು ಸಂಗ್ರಹಿಸಿದವರು. ಕೊಡಗಿನಲ್ಲಿ ಗೌಡರ ಇರುವಿಕೆಯನ್ನು ಡಿ. ಎನ್. ಕೃಷ್ಣಯ್ಯ ಮತ್ತು ಎನ್. ಎಸ್. ದೇವಿ ಪ್ರಸಾದ್ ಅವರ ಅಭಿಪ್ರಾಯಗಳ ಲೇಖನಗಳು ಗಮನಿಸಬೇಕಾದ ಉಪಯುಕ್ತ ಕೃತಿಯಾಗಿದೆ. ಗೌಡರು ಮಾತನಾಡುವ ಕನ್ನಡ ಭಾಷೆಯನ್ನು ಅರೆ ಭಾಷೆ ಎನ್ನಲಾಗಿದೆ. ಹರಿಸೇವೆಯನ್ನು ಆಚರಿಸುವುದು ಜಿಲ್ಲೆಯ ಗೌಡರ ವೈಶಿಷ್ಟ್ಯ. ಹಾಗೂ ಕಯ್ಯಾಲೆಯಿರುವ ಐನ್‌ಮನೆ ಇವರ ಪ್ರಧಾನ ವಾಸ್ತುವಿನ ಮಾನದಂಡ ಐನ್‌ಮನೆಯೆಂದರೆ ಯುದ್ಧದ ಧಾಳಿಯಿಂದಾಗುವ ರಕ್ಷಣೆ-ದುಷ್ಟ ಪ್ರಾಣಿಗಳಿಂದ ರಕ್ಷಣೆ ಪಡೆಯುವ ಸಲುವಾಗಿ ಒಗ್ಗಟ್ಟು ಪ್ರೀತಿ ವಿಶ್ವಾಸದ ನೆಲೆ ಐನ್‌ಮನೆಯ ರಹಸ್ಯ. ಕೊಡಗಿನಲ್ಲಿ ಸುಮಾರು 1830ರ ತನಕ ಒಂದಕ್ಷರ ಕಲಿತವರಾರು ಇರಲಿಲ್ಲವೆಂಬುವುದು ವಾಸ್ತವ ಸತ್ಯವಿದ್ದು. ಮುಂದೆ ಶತಮಾನದ ನಂತರ ಕೊಡಗು ಗೌಡ ವಿದ್ಯಾ ಸಂಘವನ್ನು ವಿದ್ಯೆಗಾಗಿ ಜನಾಂಗದ ಮಕ್ಕಳ ಹಿತದೃಷ್ಟಿಯಿಂದ ಸ್ಥಾಪಿಸಲು ಹೊರಟ ನಮ್ಮ ಹಿರಿಯರ ದೂರದೃಷ್ಟಿ ಜನಾಂಗಕ್ಕಾಗಿ ಮಾಡಿದ ಅತ್ಯಂತ ಪವಿತ್ರ ಕೆಲಸವಾಗಿದೆ.

ಹದಿನೆಂಟನೆ ಶತಮಾನ ಮತ್ತು ಹತ್ತೊಂಬತ್ತರ ಆದಿಯಲ್ಲಿ ಕೊಡಗು ಮುಸ್ಲಿಂರ ಧಾಳಿಗೆ ತುತ್ತಾಗಿ ಇಲ್ಲಿನ ಜನಸಂಖ್ಯೆ ಕಡಿಮೆ ಆದಾಗ ಹಾಲೇರಿ ವಂಶದ ದೊಡ್ಡ ವೀರ ರಾಜೇಂದ್ರನು ಇಲ್ಲಿನ ಭೂಮಿಯನ್ನು ಬಂಜರು ಬಿಡಲು ಇಷ್ಟಪಡದೆ ಮತ್ತು ತನ್ನ ಸೈನ್ಯವನ್ನು ಬಲಪಡಿಸುವ ಉದ್ದೇಶದಿಂದ ಅಂದಿನ ವಿಶಾಲ ಕೊಡಗು ದೇಶದ ಅಮರ ಸುಳ್ಯ ಮತ್ತು ಕೊಡಗಿನ ಗಡಿಭಾಗವಾಗಿದ್ದ ಅರಕಲಗೋಡು ಹಾಗೂ ಇತರ ಭಾಗಗಳಿಂದ ಕಡ್ಡಾಯವಾಗಿ ಊರಿಗೆ ಹದಿನೈದು ಜನರಂತೆ ಕುಟುಂಬದವರನ್ನು ಕರೆತಂದು ಘಟ್ಟ ಮತ್ತು ಅರಣ್ಯ ಪ್ರದೇಶವಾದ ಭಾಗಮಂಡಲದಿಂದ ಸೋಮವಾರಪೇಟೆ ತನಕ ನೆಲೆ ನಿಲ್ಲುವಂತೆ ಮಾಡಿದನು. ವಿಶಾಲ ಕೊಡಗು ಅಂದರೆ ಪಿರಿಯಾಪಟ್ಟಣ ತಾಲೂಕು ಸರಹದ್ದುವಿನಿಂದ, ಅರಕಲಗೋಡು ತಾಲ್ಲೂಕು, ಮಂಜರಾಬಾದ್ ಏಳು ಸಾವಿರ ಸೀಮೆ ಭಾಗವು ಪಶ್ಚಿಮಕ್ಕೆ ಸುಳ್ಯ, ಬೆಳ್ಳಾರೆ, ಪುತ್ತೂರು ಹಾಗೂ ಈಗಿನ ಪಾಣೆ ಮಂಗಳೂರು ತನಕವು ಇದ್ದದ್ದು ತಿಳಿಯುತ್ತದೆ.

ಮೊದಲು ಬಂದ ತೊಂಬತ್ತು (90) ಜನ ಗೌಡರಿಗೆ ರಾಜನು ಜಮ್ಮ ಉಂಬಳಿ ಭೂಮಿ, ಒಡಿಕತ್ತಿ-ಕೋವಿ-ಚಿನ್ನದ ಚೂರಿ ಕತ್ತಿಗಳನ್ನು (ಪೀಚೆಕತ್ತಿ) ಕೊಟ್ಟು ಗೌರವಿಸಿ ಇನ್ನು ಮುಂದೆ ರಾಜನ ಆಸ್ಥಾನಕ್ಕೆ ಬರುವಾಗ ರಾಜ ಮರ್ಯಾದೆಯ ಉಡುಪಾದ ಬಿಳಿ ಕುಪ್ಪಸ, ಕೆಂಪು ರೇಷ್ಮೆ ಧಟ್ಟಿ ಮತ್ತು ತಲೆಗೆ ಚಿನ್ನದ ಜರಿ ರುಮಾಲನ್ನು ಕಟ್ಟಿ ಬರಬೇಕೆಂದು ಆದೇಶಿಸಿದನು. ಅಂದು ಹಾಗೆ ಬಂದು ಈಗಿನ ಮಡಿಕೇರಿ ತಾಲೋಕಿನಲ್ಲಿ ನೆಲೆಸಿದ ಗೌಡರ ಸಂಖ್ಯೆ ಇಂದು ಸುಮಾರು ಒಂದೂವರೆ ಲಕ್ಷಕ್ಕೂ ಅಧಿಕ ಜನ ಸಂಖ್ಯೆಯನ್ನು ಹೊಂದಿದ್ದು, ಪ್ರಾಮಾಣಿಕರಾಗಿ, ವೀರರಾಗಿ, ವ್ಯವಸಾಯಗಾರರಾಗಿ, ಸಾಮಾಜಿಕವಾಗಿ, ರಾಜಕೀಯವಾಗಿ ದುಡಿಯುತ್ತಿದ್ದಾರೆ. ಗೌಡರು ಮಡಿಕೇರಿ ತಾಲೋಕಿನಲ್ಲಿ ಅಧಿಕವಾಗಿ ನೆಲೆಸಿದ್ದು, ಗೌಡ ಜನಾಂಗದವರಿಗೆ ಜಮ್ಮ ಕೊಟ್ಟು ಕೂರಿಸಿದ ಕೀರ್ತಿಯು ಅಂದು ಮಡಿಕೇರಿ ಕೋಟೆಯನ್ನು (ಕೊಡಗು ದೇಶ) ಆಳುತ್ತಿದ್ದ ಹಾಲೇರಿ ಅರಸರಿಗೆ ಸಲ್ಲುತ್ತದೆ. ಅಲ್ಲದೆ, ಇಲ್ಲಿನ ಕೊಡವರು ಗೌಡರು ತಮ್ಮ ತಮ್ಮ ಧರ್ಮಶಾಸ್ತ್ರ ಪದ್ಧತಿ ಕಟ್ಟುಪಾಡುಗಳಿಗೆ ಚ್ಯುತಿ ಬಾರದಂತೆ ಹಬ್ಬ ಹರಿದಿನ ಹಾಗೂ ಇತರ ಸಂದರ್ಭಗಳಲ್ಲಿ ಅಣ್ಣ ತಮ್ಮಂದಿರಂತೆ ಬಾಳಲು ತಿಳಿಸಿರುವುದು ಕಂಡು ಬರುತ್ತದೆ.

ಅದರಂತೆ ಗೌಡರು ತಮ್ಮ ಧರ್ಮಶಾಸ್ತ್ರದಂತೆ ಮದುವೆ ಸಂಪ್ರದಾಯವನ್ನು ಶೃಂಗೇರಿಗೆ ಹರಿಕೆ ಹಣ ಕಟ್ಟುವುದರ ಮೂಲಕ ಉಳಿಸಿಕೊಂಡು ತಮ್ಮ ಕುಲದೇವರು ಶ್ರೀ ತಿರುಪತಿ ವೆಂಕಟರಮಣ ಸ್ವಾಮಿಯನ್ನು ಹರಿಸೇವೆ ಉತ್ಸವದ ಮೂಲಕ ಆರಾಧಿಸುತ್ತಾ ಕೊಡಗಿನ ಕಾವೇರಿ ಮಾತೆಯ ಮಣ್ಣಿನ ಪರಂಪರೆಗೆ ಹೊಂದಿಕೊಂಡರು. ಇದೇ ರೀತಿ ತಲಕಾವೇರಿಯಲ್ಲಿ ಕೋಡಿ ಮನೆತನದವರೂ ಭಾಗಮಂಡ್ಲದ ಭಗಂಡೇಶ್ವರ ದೇವಸ್ಥಾನದಲ್ಲಿ ಬಳ್ಳಡ್ಕ ಮನೆತನದವರೂ - ಪಾಲೂರು ಶ್ರೀ ಮಹಾಲಿಂಗೇಶ್ವರ ದೇವಸ್ಥಾನದಲ್ಲಿ ಎಡಿಕೇರಿ ಮನೆತನದವರೂ ತಕ್ಕ ಮುಖ್ಯಸ್ಥರಾಗಿ ಇಂದಿಗೂ ಸೇವೆ ಸಲ್ಲಿಸುತ್ತಾ ಬರುತ್ತಿದ್ದಾರೆ. ಅಲ್ಲದೆ ಅನೇಕ ಊರುಗಳಲ್ಲಿ ಎಲೆಮರೆಯ ಕಾಯಿಗಳಂತೆ ಕೋಲಾಟ -ಜೋಗಿ- ಬಾಳೊಪಾಟ್ ಇವುಗಳನ್ನು ಹಬ್ಬಗಳಲ್ಲಿ ಬೆಳಕುಪ್ಪಸವುಟ್ಟು ತಕ್ಕರಾಗಿಯೂ ಸೇವೆ ಸಲ್ಲಿಸುತ್ತಿರುವುದು ಕಂಡು ಬರುತಿದೆ.

ಧಾರ್ಮಿಕ ಪರಂಪರೆ:- ಗೌಡರ ಪ್ರತಿ ಕುಟುಂಬಕ್ಕೂ ಐನ್‌ಮನೆಯಿದ್ದು ನೆಲ್ಲಕ್ಕಿ ದೀಪದ ಎದುರು ಎಲ್ಲಾ ಶುಭ ಕಾರ್ಯಗಳೂ ನಡೆಯುತ್ತವೆ. ಐನ್‌ಮನೆಯ ಅಟ್ಟದಲ್ಲಿ ಕುಟುಂಬದ "ಮುಡುಪು" ಇರುತ್ತದೆ. ತಮ್ಮ ಕುಲದೇವರು ಶ್ರೀವೆಂಕಟರಮಣ ಸ್ವಾಮಿಯ ಹರಿಸೇವೆಯ ಉತ್ಸವವನ್ನು ಪ್ರತಿ ಐದು ವರ್ಷಗಳಿಗೊಮ್ಮೆ ಆಚರಿಸುತ್ತಾರೆ. ಆ ದಿನ ಕುಟುಂಬದಿಂದ ಕೊಟ್ಟ ಹೆಣ್ಣು ಮಕ್ಕಳಿಗೂ ತಂದವರ ಮನೆಗಳಿಗೂ ವಿಶೇಷ ಆಹ್ವಾನವಿರುತ್ತದೆ. ಹರಿಸೇವೆಯ ನಂತರ ಕಂಚರಾಯನಿಗೆ ಬಲಿಕೊಡುವ ಕ್ರಮವಿದೆ. ಹರಿಸೇವೆಯಲ್ಲಿ ಭಂಡಾರಕ್ಕೆ ಬಿದ್ದ ಹಣವನ್ನು "ಮುಡುಪು" ನಲ್ಲಿಟ್ಟು ಬೀಗ ಮುದ್ರಿಸಿ ತಿರುಪತಿ ಭಂಡಾರಕ್ಕೆ ತಲುಪಿಸಿ ಯಾತ್ರೆ ಮಾಡಿ ಬಂದು ಮಾಡುವ ಈ ವಿಶೇಷ ಪೂಜೆಗೆ ಹರಿಸೇವೆ ಉತ್ಸವ ಎನ್ನುತ್ತಾರೆ. ಕೆಲವು ಕುಟುಂಬದವರು ಸಬ್ಬಮ್ಮ ದೇವಿಯನ್ನು ಸಹ ಕುಲದೇವರಾಗಿ ಪೂಜಿಸಿ ಹರಿಸೇವೆ ಮಾಡುತ್ತಾರೆ. ಹರಿಸೇವೆಯಲ್ಲಿ ಘನ ಹರಿಸೇವೆಯು ಬಹಳ ವಿಶೇಷವುಳ್ಳದ್ದಾಗಿದೆ. ಐನ್‌ಮನೆಯಲ್ಲಿ ಶುಭಾಶುಭ ಸಂದರ್ಭಗಳಲ್ಲಿ ಕಾರಣರವರಿಗೆ ಇಡುವ ಕ್ರಮ (ಹಿರಿಯರಿಗೆ) ವಿದ್ದು ಈ ಕಾರ್ಯಕ್ಕಾಗಿ ಅಲ್ಲಿ ಒಂದು ಪ್ರತ್ಯೇಕವಾದ ಕೋಣೆಯಿರುತ್ತದೆ.

ಹಿಂದೆ ಶೃಂಗೇರಿಯ ಜಗದ್ಗುರುಗಳು ಇವರಿಗೆ ಗುರುಗಳಾಗಿದ್ದರು. ಆಗ ಗೌಡರಲ್ಲಿ ಬ್ರಾಹ್ಮಣ ಧಾರೆಯ ಕ್ರಮವಿತ್ತು. ನಂತರದಲ್ಲಿ ಒಮ್ಮೆ ಮಳೆಗಾಲ ಹೊಳೆ ತುಂಬಿ ಹರಿಯುತ್ತಿದ್ದುದರಿಂದ ಬ್ರಾಹ್ಮಣ ಮದುವೆಗೆ ಬರಲಾಗಲಿಲ್ಲ. ಧಾರೆಯ ವೇಳೆ ಮೀರುತ್ತಿದ್ದುದರಿಂದ ಊರು ಹಿರಿಯರ ಆಜ್ಞೆಯಂತೆ ಗೌಡಧಾರೆಯ ಪದ್ಧತಿ ಪ್ರಾರಂಭವಾಯ್ತು. ಇದನ್ನು ತಿಳಿದು ಗುರುಗಳಿಗೆ ತುಂಬಾ ಬೇಸರವಾಗಿ ಇನ್ನು ಮುಂದೆ ಅಮರ ಸುಳ್ಯದ ಗೌಡರ ಮದುವೆಯಲ್ಲಿ ಬ್ರಾಹ್ಮಣ ಧಾರೆ ಕ್ರಮವಿಲ್ಲವೆಂದರಂತೆ ಹೀಗಾಗಿ ಅಂದಿನಿಂದ ಇಂದಿನವರೆಗೂ ವಧುವರರ ಕೈಯಲ್ಲಿ ಹೆಣ್ಣಿನ ಮುತ್ತೈದೆ ತನಕ್ಕ ಶೃಂಗೇರಿಗೆ ನಾಲ್ಕಾಣೆ ಪಾವಲಿಯನ್ನು ಹರಿಕೆ ಕಾಣಿಕೆಯಾಗಿ ಒಂದು ವಾಟೆಯ ಗೊಟ್ಟದೊಳಗಿಟ್ಟು ಅದನ್ನು ಅಲ್ಲಿಗೆ ತಲುಪಿಸುತ್ತಾರೆ. ಕೊಡಗಿನ ಗೌಡರು ಹೆಚ್ಚಾಗಿ ತಿರುಪತಿ ಭಂಡಾರಕ್ಕೆ ತಲುಪಿಸುತ್ತಾರೆ. ಈ ಸಂದರ್ಭ ಸಬ್ಬಮ್ಮ ದೇವಿಯನ್ನು ಕುರಿತಾದ ಹಾಡಿನಿಂದ ಗೌಡರ ಪೂರ್ವ ಸಂಸ್ಕೃತಿಯನ್ನು ತಿಳಿಯಬಹುದಾದ ಈ ಅರ್ಥ ಗರ್ಭಿತವಾದ ಹಾಡನ್ನು ಮುತ್ತೈದೆಯರ ಬಾಯಿಂದಲೇ ಕೇಳಿದರೆ ಸೊಗಸು.

ಗೌಡರ ಮದುವೆಯಲ್ಲಿ ಶಾಸ್ತ್ರಕ್ಕೊಂದು ಹಾಡು ಹಾಗೆ ಸೋಬಾನೆ ಹಾಡುಗಳು ಮಹತ್ತರ ಪಾತ್ರ ವಹಿಸುತ್ತವೆ. ಪುರೋಹಿತರಿಲ್ಲದ ಮದುವೆಯಲ್ಲಿ ಜಾನಪದ ಸೋಬಾನೆ ಹಾಡುಗಳು ಮಂಗಳಕರ ಮತ್ತು ವಿಧಿ ಪೂರ್ವಕ ಮಂತ್ರಗಳಿದ್ದಂತೆ. ಜೊತೆಗೆ ಮದುವೆಯ ಆಚರಣೆಯ ರೀತಿ ನೀತಿಗಳು ಕ್ರಮ

ತಪ್ಪದಂತೆ ನಿಯಂತ್ರಿಸುವ ವರ್ಣನೆಗಳಿದ್ದು, ಗೌಡರ ಪೂರ್ವ ಸಂಸ್ಕೃತಿಯನ್ನು ತಿಳಿಯ ಬಹುದಾಗಿದೆ. ಇವರ ಸಂಸ್ಕೃತಿಯಲ್ಲಿ ಹಳೆ ಗನ್ನಡದ ಮೂಲರೂಪವನ್ನು ಹೊಂದಿರುವ ಮನೆ ಮಾತು ಅರೆ ಭಾಷೆ ಮತ್ತು ಸೋಬಾನೆ ಹಾಡುಗಳು ನಶಿಸದೆ ಉಳಿದಿರುವ ಅಮೂಲ್ಯ ಸೊತ್ತಾಗಿದೆಯಾದರೂ ಸಾಂಪ್ರದಾಯಿಕ ಉಡುಪು ಗೇಂಟೆ ಸೀರೆಯು ಅಳಿಯುವ ಅಂಚಿನಲ್ಲಿರುವುದು ವಿಷಾದನೀಯ.

ಗೌಡರು ಹತ್ತು ಕುಟುಂಬಗಳಿಗೆ ಸೇರಿದ ಹದಿನೆಂಟು ಗೋತ್ರದವರಾಗಿರುತ್ತಾರೆ. ಇವರ ಮದುವೆಯ ಪ್ರಾರಂಭವು ವೀಳ್ಯ ಶಾಸ್ತ್ರದಿಂದ ಆರಂಭವಾಗುತ್ತದೆ. ಪ್ರತಿ ಶಾಸ್ತ್ರದಲ್ಲೂ "ಹತ್ತು ಕುಟುಂಬ-ಹದಿನೆಂಟು ಗೋತ್ರ, ದೇವಸಭೆ, ಕೂಡಿದ ಕುಲಸ್ಥರ ಸಂಗಡ ಕೇಳಿ ಎಂಬ ನುಡಿಕಟ್ಟನ್ನು ಅನುಸರಿಸುತ್ತಾರೆ. ಸೋದರ ಮಾಂವ ಮುಖ್ಯ ಪಾತ್ರ ವಹಿಸುವುದರೊಂದಿಗೆ ವಧುವರರ ಕುತ್ತಿಗೆಗೆ ಹವಳದ ಕಾಸ್ತಾಳಿಯೆಂಬ ಮೂಹೂರ್ತಮಣಿಯನ್ನು ಕಟ್ಟಿ ಎಣ್ಣೆಶಾಸ್ತ್ರಕ್ಕೆ ಕೂರಿಸುತ್ತಾರೆ. ಎಣ್ಣೆ ಅರಶಿಣ ಶಾಸ್ತ್ರ, ಮಂಗಳ ಸ್ನಾನ, ಗಂಗೆ ಪೂಜೆ, ಹಸೆ-ಆರತಿ-ಹರಿಕೆ ಹಣ ಕಟ್ಟುವುದು-ಮದುರಂಗಿ ಶಾಸ್ತ್ರ -ಮಡಿಲಕ್ಕಿ ಶಾಸ್ತ್ರ-ಧಾರೆಯೆರೆದು ತಾಳಿಕಟ್ಟುವುದು ಹೆಣ್ಣಿಗೆ ಬಳುವಳಿ (ಅಂದರೆ ಪೆಟ್ಟಿಗೆ ತುಂಬಿಸುವುದು) ಹೆಣ್ಣು ಇಳಿಸುವುದು ಇತ್ಯಾದಿ ಹಲವಾರು ಶಾಸ್ತ್ರಗಳು ಸಂಪ್ರದಾಯದಂತೆ ನಡೆಯುತ್ತವೆ. ಇವರಲ್ಲಿ ಗೋತ್ರಗಳನ್ನು ನೋಡಿ ನೆಂಟಸ್ತಾನ ಮಾಡುವ ಕ್ರಮವಿದ್ದು - ಒಂದೇ ಗೋತ್ರದಲ್ಲಿ ಮದುವೆ ನಿಷಿದ್ಧವಾದರೂ ಕೆಲವು ಸವಿ ಗೋತ್ರವೆಂದು ನಡೆಯುವುದಿದೆ. ಗೋತ್ರಗಳು:- ನಂದರ, ಬಂಗಾರ, ಹೆಮ್ಮನ, ಕಬರ್, ಮೂಲ್ಯರ, ಚಾಲ್ಯರ, ಬಳಸನ್ನ,ಕರ್ಬನ್ನ ಜಿದನ್ನಲಿಂಗಾಯ್ತು ಸೆಟ್ಟಿ, ಗೋಳಿ, ಗುಂಡನ, ಚಿತ್ತೆರ್, ಕರಂಬೆರ್, ದೇವರ, ನಾಯರ್, ಸಾಲಿ. ಇವರಲ್ಲಿ ನಂದರ, ಬಂಗಾರ, ಹೆಮ್ಮನ ಗೋತ್ರದವರು ಹೆಚ್ಚಾಗಿದ್ದಾರೆಂದು ಸಮೀಕ್ಷೆಯಿಂದ ತಿಳಿದು ಬಂದಿದೆ.

ಹತ್ತು ಕುಟುಂಬ ಹದಿನೆಂಟು ಗೋತ್ರಗಳಿಗೆ ಸೇರಿದ ಇವರ ಮದುವೆ ಚಪ್ಪರ ಹನ್ನೆರಡು ಕಂಬಗಳಿಂದ ಕೂಡಿದ್ದು, ಇದಕ್ಕೆ ಸೀತಾವಳಿ ಚಪ್ಪರವೆನ್ನುತ್ತಾರೆ. ಒಳಗಿನ ನಾಲ್ಕು ಕಂಬಗಳು ಗಣಪತಿ ಮತ್ತು ತ್ರಿಮೂರ್ತಿಗಳ ಸ್ಥಾನವೆಂದೂ ಹೊರಗಿನ ಎಂಟು ಕಂಬಗಳು ಅಷ್ಟ ದಿಕ್ಪಾಲಕರ ಸಂಕೇತವೆಂದೂ ಮಧ್ಯದ ನಾಲ್ಕು ಕಂಬಗಳೊಳಗೆ ಧಾರೆಯು ನಡೆಯುವುದಲ್ಲದೆ ಈ ಸ್ಥಳವನ್ನು ದೇವಸ್ಥಾನದಷ್ಟೇ ಪವಿತ್ರವೆಂದು ಇದನ್ನು ದೇವಸಭೆ ಎಂದು ಕರೆಯಲಾಗಿದೆ. ವಧುವಿಗೆ ಧಾರೆಯ ಸಂದರ್ಭ ಮಾತ್ರ ಮಡಿಲಕ್ಕಿ ತುಂಬಿಸುತ್ತಾರೆ. ವರನು ಕಡ್ಡಾಯವಾಗಿ ವಧುವಿಗೆ ಸೀರೆ ತಾಳಿ-ಓಲೆ -ಮೂಗುತಿ -ಕಾಲುಂಗುರ ತರಬೇಕು.

ಗೌಡ ಜನಾಂಗದ ಆಚಾರ ವಿಚಾರಗಳು ಸಾಂಸ್ಕೃತಿಕ ಹಾಗೂ ಸಾಹಿತ್ಯಕವಾಗಿ ಕೃಷಿಯನ್ನೇ ಆಧರಿಸಿಕೊಂಡಿದೆ. ಇವರು ಯುಗಾದಿ -ಕೈಲು ಮುಹೂರ್ತ-ಕಾವೇರಿ ಸಂಕ್ರಮಣ ಹುತ್ತರಿ ಹಬ್ಬಗಳನ್ನು ಆಚರಿಸುವುದರೊಂದಿಗೆ -ಕಿಡ್ವಾಸ -ಶಿವರಾತ್ರಿ-ಕೃಷ್ಣ ಜನ್ಮಾಷ್ಟಮಿ-ಷಷ್ಠಿ-ಗಣೇಶ ಚತುರ್ಥಿ-ದೀಪಾವಳಿಗಳಲ್ಲಿ ಊರ ದೇವರಿಗೆ ಪೂಜೆ ಸಲ್ಲಿಸುತ್ತಾರೆ. ಹೊಸ ಭತ್ತ ಬಂದ ನಂತರ ಮಕರ ಸಂಕ್ರಾತಿಯ ದಿನ ದೇವರಿಗೆ ಅಕ್ಕಿಯನ್ನು ನೈವೇದ್ಯಕ್ಕೆ ಕೊಟ್ಟು ದೇವಸ್ಥಾನದಲ್ಲಿ ಊಟ ಮಾಡಿ ಬಂದು ಮನೆಯಲ್ಲಿ ವಿರಾಮವಾಗಿ ಕಳೆಯುತ್ತಾರೆ.

ಗೌಡರಲ್ಲಿ ಹುಟ್ಟಿದಾಗ 7 ದಿನ ಸೂತಕವಿದ್ದು 16ನೇ ದಿನಕ್ಕೆ ಮಗುವಿಗೆ ನಾಮಕರಣ ಮಾಡುತ್ತಾರೆ. ಸತ್ತರೆ ಗುರುತಿಗಾಗಿ ಜೋಡುಗುಂಡನ್ನು ಹಾರಿಸುತ್ತಾರೆ. 3ನೇ ದಿನ ಮಡಿವಾಳನಿಂದ ಶುದ್ಧ 11ನೇ ದಿನಕ್ಕೆ ತಿಥಿ ಹಾಗೂ 16ನೇ ದಿನ ಕೊಲೆಗೆ ಕೂಡಿಸುವ ಪದ್ಧತಿಯಿದ್ದು, 48ನೆ ದಿವಸಕ್ಕೆ ಕಾವೇರಿ

ಸಂಗಮದಲ್ಲಿ ಪಿಂಡಪ್ರಧಾನ ಮತ್ತು ಪಿಂಡಾವಳಿ ಅಮಾವಾಸ್ಯೆಯಂದು ಅವರ ಹೆಸರಿನಲ್ಲಿ ಅವಲಕ್ಕಿ ಎಡೆ ಹಾಕುವ ಕ್ರಮವಿದೆ. ರಕ್ಷಣೆಗಾಗಿ ವಿಧವಾ ವಿವಾಹ - ಪುನರ್ವಿವಾಹ ಜಾರಿಯಲ್ಲಿದೆ. ಆಧುನಿಕ ಬದುಕಿನಲ್ಲಿ ಸ್ತ್ರೀ ಪುರುಷರಿಗೆ ಸಮಾನತೆಯ ಹಕ್ಕಿದೆ. ಕಾನೂನಿನ ಚೌಕಟ್ಟಿನಲ್ಲಿ ಪಿತ್ರಾರ್ಜಿತ ಆಸ್ತಿಯಲ್ಲಿ ಹಕ್ಕಿದ್ದರೂ ತವರು ಮನೆಯ ಆಸ್ತಿಯ ಪಡೆಯುವುದಿಲ್ಲ. ಗೌಡರ ಪ್ರಾದೇಶಿಕ ವೈವಿಧ್ಯತೆಯಿಂದ ಭಾಷೆ ಆಹಾರ ಉಡುಪುಗಳಲ್ಲಿ ವ್ಯತ್ಯಾಸವಿರುವುದು. ಗಮನಿಸಬೇಕಾದ ಅಂಶ. ಮದುವೆ ಹುಟ್ಟು, ಸಾವುಗಳ ಆಚರಣೆಗಳ ಸಂಪ್ರದಾಯ ಬದಲಾಗದಿದ್ದರೂ ಆಹಾರ ಉಡುಪುಗಳಲ್ಲಿ ವೈಭವವಿದೆ.

ಗುರುತು:- ಕೃಷಿ ಪ್ರಧಾನ ಗೌಡರಿಗೆ ನೇಗಿಲು ಹೆಗ್ಗುರುತಾದರೂ ಕೊಡಗಿನಲ್ಲಿ ಒಡಿಕತ್ತಿ-ಕೋವಿ ಮತ್ತು ವೆಂಕಟೇಶ್ವರನ ಗುರುತನ್ನು ಹೊಂದಿದ್ದು, ಇದು ಕೊಡಗಿನ ಜಮ್ಮ ಮತ್ತು ಕುಲದೇವರ ಗುರುತನ್ನು ಹೊಂದಿರುತ್ತದೆ.

ಸ್ವಾತಂತ್ರ್ಯಾಭಿಮಾನಿಗಳು:- ಸುಮಾರು 1834ರ ದಶಕದಲ್ಲಿ ತೆರಿಗೆಯಲ್ಲಿ ಭತ್ತವನ್ನು ಹಣವನ್ನಾಗಿ ಮಾರ್ಪಡಿಸುವ ಬ್ರಿಟಿಷರ ಧೋರಣೆಯಲ್ಲಿ ಅವರ ಒಡೆದು ಆಳುವ ನೀತಿಯನ್ನು ಬಲವಾಗಿ ಪ್ರತಿಭಟಿಸಿದ ಗೌಡರು ಅವರ ವಿರುದ್ಧ ಹೋರಾಟ ನಡೆಸಿ ಗಲ್ಲಿಗೇರಿಸಲ್ಪಟ್ಟ ಹಲವು ಮಂದಿ ಹುತಾತ್ಮರೊಡನೆ ಗುಡ್ಡೆಮನೆ ಅಪ್ಪಯ್ಯ ಗೌಡ ಕೆದಂಬಾಡಿ ರಾಮಯ್ಯಗೌಡ, ಕುಕ್ಕುನೂರು ಚೆನ್ನಯ್ಯ ಎಂಬುವರು ಚರಿತ್ರೆಯಲ್ಲಿ ಸ್ಥಿರವಾಗಿದ್ದಾರೆ ಎಂಬುವುದಕ್ಕೆ ಮಡಿಕೇರಿ ನಗರದ ಗೌಡ ಸಮಾಜಕ್ಕೆ ಹೋಗುವ ದಾರಿಗೆ ಗುಡ್ಡೆಮನೆ ಅಪ್ಪಯ್ಯ ಗೌಡ ರಸ್ತೆ ಎಂಬ ಹೆಸರು ಇಟ್ಟಿರುವ ನಾಮ ಫಲಕವೇ ಸಾಕ್ಷಿಯಾಗಿದೆ. ಇಂದಿಗೂ ಗೌಡ ಸೇನಾನಿಗಳು ಭಾರತದ ಗಡಿಗಳಲ್ಲಿ ಹೋರಾಡಿ ಹುತಾತ್ಮರಾಗುತ್ತಲೇ ಇದ್ದಾರೆ.

ಕೊಡಗಿನಲ್ಲಿ ಜಮ್ಮ ಆಸ್ತಿ ಹೊಂದಿರುವುದರಿಂದ ಮೇಲೆ ಹೇಳಿದ ಆಸ್ಥಾನದ ಉಡುಪು ಗಂಡಸರು ತೊಡುತ್ತಿದ್ದರು, ಸ್ತ್ರೀಯರು ಮುಂದೆ ನೆರಿಗೆ ಗೇಂಟಿಯ ಸೀರೆ ಸೊಂಟಕ್ಕೆ ಡಾಬು ಉದ್ದ ತೋಳಿನ ರವಿಕೆ, ಚಿನ್ನದ ಜರಿಯ ಗಿಳಿ ಅಂಚಿನ ಮುಸುಕು (ಕೋರ್‌ವಸ್ತ್ರ) ಈ ಉಡುಪಿನಲ್ಲಿ 1955ರ (ಸಾವಿರದ ಒಂಭೈನೂರ ಐವತ್ತೈದು) ತನಕ ಮದುವೆಗಳು ನಡೆಯುತ್ತಿದ್ದು ಅಲ್ಲಿ ತನಕ ಗೌಡ ಜನರ ಉಡುಪು ಅದೇ ಆಗಿದ್ದಿತು. ನಂತರ 1955 ರಿಂದ ಈ ಉಡುಪಿನ ಪದ್ಧತಿಯನ್ನು ಬದಲಾಯಿಸಿ, ವರನು ಕಚ್ಚೆ ಪಂಚೆ, ಶಾಲು, ಬಿಳಿ ಕೋಟು ತಲೆಗೆ ಜರಿ ಪೇಟವನ್ನು ವಧುವಿಗೆ ಕನ್ನಡ ಸೀರೆ ಸೊಂಟಕ್ಕೆ ಡಾಬು, ಮುಸುಕಿನ ವಸ್ತ್ರಗಳು ಮುಂದುವರಿದಿವೆ. ಮುಸುಕು ಧರಿಸಿದ ವಧು ವರರು ಸಾಂಪ್ರದಾಯಕ ಉಡುಪಿನಲ್ಲಿ ಅಲಂಕೃತರಾಗಿ ಶೋಭಿಸುವುದೇ ಗೌಡ ಜನಾಂಗದ ಉಡುಪಿನ ಸಂಸ್ಕೃತಿ. ಮನೆಗೆ ನೆಂಟರು ಬಂದರೆ ಕಾಲು ತೊಳೆಯಲು ನೀರು ಕೊಟ್ಟು, ಕಾಲು ತೊಳೆದ ನಂತರ ಹಿರಿಯರ ಕಾಲು ಮುಟ್ಟಿ ನಮಸ್ಕರಿಸಿ ಹರಿವಾಣದಲ್ಲಿ ವೀಳ್ಯದೆಲೆ, ಅಡಿಕೆ ಕೊಟ್ಟ ನಂತರ ಕಾಫಿ ತಿಂಡಿ ಕೊಡುವುದು. ಬಂದವರು ವಾಪಾಸು ಹೋಗುವಾಗ ಸ್ವಲ್ಪ ದೂರ ಕಳುಹಿಸಲು ಹೋಗುವುದು ನಮ್ಮ ಹಿರಿಯರಿಂದ ಬಂದ ಸಂಸ್ಕೃತಿ.

ಕೊಡಗಿನಲ್ಲಿ ಗೌಡರು ವಾಣಿಜ್ಯ ಕೃಷಿಯಲ್ಲೂ ಮುಂದಿದ್ದು, ಕಷ್ಟಪಟ್ಟು ಓದಿದರೂ ನಿರುದ್ಯೋಗ ಸಮಸ್ಯೆಯಿಂದ ಉದ್ಯೋಗ ಅರಸಿ ನಗರ ಪ್ರದೇಶಗಳಿಗೆ ತೆರಳುವ ಯುವ ಜನರ ಸಂಖ್ಯೆ ಹೆಚ್ಚಾಗಿದೆ. ಉನ್ನತ ಶಿಕ್ಷಣ ಪಡೆದು ತಾಂತ್ರಿಕ ಕ್ಷೇತ್ರದ ಮೂಲಕ ಬಹು ರಾಷ್ಟ್ರೀಯ ಕಂಪೆನಿಗಳಲ್ಲಿ ಉದ್ಯೋಗ ಪಡೆದು ವಿದೇಶಗಳಿಗೆ ಹೋಗುವುದರಲ್ಲೂ ಹಿಂದೆ ಬಿದ್ದಿಲ್ಲ. ಇಂದು ಅಂತರ್ಜಾತಿಯ ವಿವಾಹಗಳು ಹೆಚ್ಚುತ್ತಿದ್ದು ಅಂತರ್ಜಾಲದ ಮೂಲಕ ಮದುವೆ ಆಗುವವರೆಗೂ ಸಾಗಿದ್ದಾರೆ. ಎಲ್ಲೇ ಸಾಗಲಿ ವಿದ್ಯೆ ಕಲಿತು ಕೋಟಿಗಳಿಸಿದರೂ ಮಾತೃ ಸಂಸ್ಕೃತಿಯನ್ನು ಗೌರವಿಸಿ ಉಳಿಸುವುದೇ ಹೃದಯ ಸಂಸ್ಕೃತಿ.

ಮಾವುನ ಹಣ್ಣ್‌ನ ಸುಗ್ಗಿ

ಮಾವುನ ಹಣ್ಣ್ ತೇಳ್‌ಕನ ಎಲ್ಲವರ ಬಾಯ್‌ಲಿ ನೀರ್ ಬಂದದೆ. ಒಂದೊಂದು ವರ್ಷ ಮಾವುನ ಹಣ್ಣ್‌ನ ಸುಗ್ಗಿನೆ ಆದೆ. ಇದರ್‌ನ ವರ್ಷ ಇಡೀ ಸಿಕ್ಕುವಂಗೆ ಮಾಡ್ಯಂಡವೆ. ನಮ್ಮ ದೇಸಲಿ ಮಾವುನ ಮರನ ಕಲ್ಪವೃಕ್ಷ ತೇಳಿ ಪೂಜೆ ಮಾಡುವೆ. ಮಾವುನ ಮರ ಪ್ರೇಮ ಮತ್ತೆ ಭಕ್ತಿಯ ಸಂಕೇತ. ಮಾವು ಚಿಗ್‌ರಿ ಹೂ ಬಿಡುಕನ ಮನ್ಮಥನೇ ಈ ಭೂಮಿಗೆ ಇಳ್ದ್ ಬಂದದೆತ ಜನರ ಭಾವನೆತ ಹಿಂದೆ ಜಾನಪದ ಕವಿಗ ವರ್ಣಿಸೊಳೊ

ಯಾಗೊಳು ಮಾವುನ ಮರಕ್ಕೆ ಮಲ್ಲಿಗೆ ಬಳ್ಳಿನೆ ಮಡ್ಗುತ ನೆಂಟಸ್ತಾನ ವಿಸಯಲಿ ಹಿರಿಯವು ಹೇಳುವೆ. ಮಾವುನ ಚಿಗ್‌ರ್ ತಿಂದ್ ಮಧುರ ಆಗಿ ಹಾಡುವೆತ ಕೋಗಿಲೆನ ವರ್ಣನೆ ಮಾಡ್ವೆ ಕವಿಗ.

ಹಬ್ಬ, ಹರಿದಿನ ಮದುವೆ ಶುಭ ಸೋಬನಕೆ ಮಾವುನ ತೋರಣ ಬೇಕೆ ಬೇಕು. ಹಬ್ಬ, ಮದುವೆ ಸಮಾರಂಭ ಇದ್ಕೆಲ್ಲಾ ತೋರಣ ಇದ್ದರೆ ಶೋಭೆ ಮತ್ತೆ ಶುಭನು ಹೌದು. ಅದರ್‌ಂದಾಗಿ ಮಾವುನ ತೋರಣ ಮೂಡಣ ಬಾಗ್‌ಲ್‌ಗೆ ಕಟ್ರೆ ಅಲ್ಲೀನೊ ವಿಶೇಷವುಟ್ಟು ತೇಳಿ ತಿಳ್ಕಂಡವೆ. ದಾರಿ ಹೋಗೊವು ಬರೊವು. ನೂರಾರ್ ತರದ ಮಾವುನ ಹಣ್ಣ್‌ಗಳಿದ್ದರೂ ರುಚಿಲಿ ಸ್ವಲ್ಪ ವ್ಯತ್ಯಾಸ ಆದ್ರೂ ಗುಣ ಮಟ್ಟ ಎಲೆ ಬೇರ್ ಕಾಂಡಲಿ ಎಲ್ಲಾ ಒಂದೇ ಮಟ್ಟದಲ್ಲುಟ್ಟು ತೇಳುವೆ. ಮಾವುನ ಹಣ್ಣ್ ಹಣ್ಣ್‌ಗಳ್ಲಿ ರಾಜ ತೇಳಿ ಹೆಸ್ರ್ ಪಡ್ದುಟ್ಟು. ಅದರ್ಲಿ ರಸಪೂರಿ -ಬಾದಾಮಿ- ಮಲ್‌ಗೋವಾ-ರತ್ನಗಿರಿ -ರುಚಿಲಿ ಶ್ರೇಷ್ಠ ತೇಳಿ ಹೆಸ್‌ರುಟ್ಟು.

ಮಿಡಿ ಉಪ್ಪ್‌ನಕಾಯಿ ಸಣ್ಣಕೊಚ್ಚಿ ಮಾಡುವ ಉಪ್ಪ್‌ನ ಕಾಯಿ ಅದ್‌ಂಗೆ ನಿತ್ಯ ಊಟಲಿ ಸವಿ ಜಾಸ್ತಿ ತೇಳಿ ಪ್ರಖ್ಯಾತಿಲಿದ್ದುಟ್ಟು. ಇನ್ನ್ ಮಕ್ಕ ಬಸ್‌ರಿ ಹೆಣ್ಮಕ್ಕಳಿಗೆಲ್ಲಾ ಮಾವುನ ಮಿಡಿತೇಳ್ರೆ ಪಂಚಪ್ರಾಣ. ಹಂಗೆ ಬೆಲ್ಲ ಮತ್ತೆ ಮಾವುನ ಕಾಯಿನ ಕಡ್ದ್ 4ಭಾಗ ಮಾಡಿ ಸೋಂಪು ಹಾಕಿ ಲಾಯ್ಕ ಬೇಯ್ಸಿ ಗಟ್ಟಿ ಅದ ಮ್ಯಾಲೆ ಕುಪ್ಪಿಲಿ ಹಾಕ್ಕಂಡ್ ಸ್ವಲ್ಪ ದಿನ ಮಡ್ಕ್ಯಂಡ್ ತಿಂದರೆ ಅಜೀರ್ಣಕ್ಕೆ ವಳ್ಳೆದ್ ರುಚಿಸ ಆಗಿದ್ದದೆ.

ಮತ್ತೆ ಹಣ್ಣ್‌ಕೊಯ್ಯುಕನ ಬರುವ ಸೊನೆನ ಚರ್ಮರೋಗಕ್ಕೆ ಹಾಕುವೆ. ಚಿಗ್‌ರ್ ಮಾವುನ ಸಿಪ್ಪೆನ ಸೊಣ್ಣಂಗೆ ಅರ್ದ್ ಹಾಲ್‌ಲಿ ಹಾಕಿ ಕುಡ್ದರೆ ರಕ್ತ ಭೇದಿ ನಿವಾರಣೆ, ಹುಳಿ ಮಾವುನ ಸಿಪ್ಪೆನ ಅರ್ದ್ ತುಪ್ಪಲಿ ಹೊರ್ದ್ ಸ್ವಲ್ಪ ಸಕ್ಕರೆ ಹಾಕಿ ತಿಂದರೆ ಹೆಣ್ಮಕ್ಕಳ ರಕ್ತಸ್ರಾವಕ್ಕೆ ವಳ್ಳೆದ್‌ತ ಹೇಳುವೆ. ಹಣ್ಣ್ ತಿಂದಾದ ಮ್ಯಾಲೆ ನೀರ್ ಕುಡಿಯಕಾಗದ್. ಹಣ್ಣ್ ತಿಂಬಕೆ ಮುಂದೆ ಸ್ವಲ್ಪ ಹೊತ್ತು ನೀರ್‌ಲಿ ಮಡ್ಗಿ ತಿನ್ನೊಕು ಸಿಪ್ಪೆ ಸಮೇತ ಕಚ್ಚಿ ತಿಂದರೆ ಆರೋಗ್ಯಕ್ಕೆವಳ್ಳೆದ್. ಆದರೆ ವಳಗೆ ಕೆಡುವ ಸಂದರ್ಭಯಿರ್ದೊರ್‌ಂದ ಕತ್ತ್‌ರ್ಸಿ ತಿಂಬೋದೆ ಕ್ಷೇಮ. ಅಂಗ್ಡಿಲಿ ಮಾವುನ ಪುಡಿಸ ಸಿಕ್ಕದೆ. ಸುವಾಸನೆಗೋಸ್ಕರಯಾಗ ಬೇಕಾರ್ ಉಪಯೋಗ್ಸರ್. ಹಿಂಗೆ ಒಂದಲ್ಲ, ಎರಡಲ್ಲ ಮಾವುನ ಮರದಡಿಲಿ ಪಂಚಾಯ್ತಿ ಕಟ್ಟೆಯಿದ್ದ್ ನ್ಯಾಯ ತೀರ್ಮಾನ ಆಗುದರ್‌ಂದ ಹಿಡ್ದ್ ಮನೆಕಟ್ಟುಕೆ ಮರ ಕೊಯ್ದ್ ಸಹ ಉಪಯೋಗ್ಸುವ ಮಾವುನ ಮರನ ಕಲ್ಪವೃಕ್ಷತ ಹೇಳ್ರೊರ್ಲಿ ತಪ್ಪಿಲ್ಲೆ ಅಲ್ಲಾ?

ಗೌಡರಲ್ಲಿರ್‌ವ ಕೆಲು ಅಸುಬ ನಂಬಿಕೆಗ

1. ಆಟಿ ತಿಂಗ ಯಾವುದೇ ಸುಬ ಕಾರ್ಯಯಿಲ್ಲೆ.
2. ಉದ್ದ ಕಡ್‌ಬು ಮಾಡಿಕಾಗದ್ -ಯಾಕೆ?
3. ಊಟಕ್ಕೆ ಕುದ್ದಲ್ಲಿ ತಲೆಗೆ ಎಣ್ಣೆ ಮತ್ತೆ ಎಲೆ ಅಡಿಕೆ ಕೊಡಿ ಕಾಗದ್
4. ಸೂತ್‌ಕಯಿರ್‌ಕನ ವಿಳ್ಯದೆಲೆ ತೊಳ್ಸಿಗಿಡ ಸಣ್ಣ ಮಕ್ಕಳ್ನ ಮುಟ್ಟಿಕಾಗದ್
5. ದೇವಸ್ಥಾನಕ್ಕೆ ಹೋಕಾಗದ್
6. ಎರಡ್ ಗುಂಡ್ ಜೊತೆಲಿ ಸಾಯಕನ ಮಾತ್ರ ಹೊಡೆಯೊದು
7. ಸೂರ್ಯ ಮುಳ್ಗುವ ಸಮಯ ನಿದ್ರೆ ಮಾಡಿಕಾಗದ್, ಲಕ್ಷ್ಮಿ ಮನೆಗೆ ಬರುವ ಸಮಯ ಅದ್ಕೆ
8. ಮಿನ್ಚುಳಿ ಹಕ್ಕಿ ಮೊಮೀ ಮರ್ಟರೆ ಸಾವು ಖಂಡಿತಾ
9. ಒಡ್ಡ ಕನ್ನಡಿ ಮನೆಲಿ ಮಡ್ಕಣಿಕಾಗದ್
10. ಕುತ್ತಿಗೆಗೆ ಹಗ್ಗ ಹಾಕ್ಯಂಡ್ ಸತ್ತನೆತ ಹೇಳ್ಕಾಗದ್ ಹಂಗೆ
11. ಕತ್ತಿ ಹಿಡ್ಕಂಡ್ ಯಾರಿಗೆ ಆಗಲಿ ಕಡ್ವನೆತ ಹೇಳಿಕಾಗದ್
12. ಅಪ್ಪಪ್ಪ ಸತ್ತರೆ ಆ ವರ್ಸನೆ ಮದುವೆ ಆಕು. ಇಲ್ಲರೆ 3 ವರ್ಷ ಆಕಾಗದ್
13. ಒಂದು ವಳ್ಳ ಕಾರ್ಯಕ್ಕೆ ಎಲ್ಲಾರ್ ಹೊರ್ಡ್‌ಕನ ಮತ್ತೆ ಬ್ಯಾರೆಯುವರ ಮನೆಗೆ ಹೋಗಿ ಹತ್ತ್‌ಕನ ತಲೆ ಬಾಚ್ ಕಂಡ್‌ರುವ ಮತ್ತೆ ಚೀಪೆ ಹಿಡ್ಕಂಡಿರ್‌ದು ಕಂಡರೆ ಹೋದ ಕಾರ್ಯ ಆಮುಲೆ.
14. ಮಧ್ಯಾನ ಮ್ಯಾಲೆ ಬಾಳೆಗೊನೆ ಕಡೆ ಕಾಗದೆ
15. ಮಲಗಿದವರ ಹತ್ರ ದೀಪ ಹೊತ್ತಿಕಾಗದ್-ಅಳ್‌ಂಬು ತಂದ್ ರಾತ್ರೆ ಮನೆಲಿ ಮಡ್ಗಿಕೆ ಬೊತ್ತುಕೆಟ್ಟಿಕನ್ಸ್ ಬಿದ್ದದೆ.
16. ಸಾವು ಸುದ್ದಿ ಕೇಳಿಕೆ ಹೋದ ವ್ಯಕ್ತಿ ಮನೆ ಹತ್ತದೆ ಅಂಗಳಲಿ ನಿತ್ತ್ ಹೇಳಿ ಬರೊಕು.
17. ಸ್ವಾಮಾರ ಎತ್ತ್‌ಗಳ್ನ ಹೂಡಿಕಾಗದ್ ಕಾವೇರಮ್ಮನ ಮಣ್ಣ್‌ಲಿ ಮಧ್ಯಾನದ ಮ್ಯಾಲೆ ಹೂಡ್ಡುಲೆ.
18. ಮನೆ ಇಳ್ಕ್ ಹೋಕಾಕನ ಹೋಗಿ ಬನ್ನೆ ತೇಳೊಕು ಹೋನೆ ಅಥವಾ ಹೇಳಿದೆ ಹೋಕಾಗದ್

<u>ಹೊಟ್ಟೊ ಕತೆ</u> : -

1. ಉದ್ದಕ್ಕೂ ಓಡ್ತೆ -ನನ್ನಸ್ಟ್ ಶಕ್ತಿ ಯಾರಿಗೂಯಿಲ್ಲೆ. ನಾನಿಲ್ಲದಿದ್ರೆ ಯಾರೂ ಬದ್ಕುಮುಲೆ - ಗಾಳಿ
2. ಸಣ್ಣ ಕೂಸಿಗೆ ಮೈ ತುಂಬಾ ಬೆಳಿಬಟ್ಟೆ - **ಬೆಳ್ಳುಳ್ಳಿ.**
4. ಮೂರು ಕಣ್ಣ್, ತಲೆಲಿ ಜುಟ್ಟು, ಹೊಟ್ಟೆಲಿ ನೀರ್ - **ತೆಂಗ್‌ನಕಾಯಿ**
5. ಬಂಗಾರದ ಗಿಣಿ ಬಾಗ್‌ಲ್ ಕಾದದೆ - **ಬೀಗ**
6. ಗಿಡ ನೆಟ್ಟ್ ಬೆಳ್ಸದುಲೆ ಅದಿಲ್ಲದೆ ಊಟನೂ ಸೇರ್ದುಲೆ - ಉಪ್ಪು
7. ಮನೆ ಒಳಗೂ ಹೊರಗೂ ಕೆಲ್ಸ ಮಾಡಿ, ಮೂಲೆಲಿ ಕೂರುವ ಜಾಣೆಯಾರ್ - **ಚೀಪೆ,**
8. ಕೆಂಚ್ ಕೂದಲುವುಟ್ಟು, ಪ್ರಾಣಿ ಅಲ್ಲ, ಮುತ್ತುಗವಳೊ,ಕಪ್ಪೆ ಚಿಪ್ಪಲ್ಲ -**ಮುಸುಕಿನ ಜೋಳ**
9. ಉದ್ದುದ್ದವನೆ ಉರಿಮೊಕದವನೆ ಬ್ಯಾಗ ಸುದ್ದಿ ಹೇಳ್ -**ಹಸಿ ಮೆಣ್ಸ್‌ಕಾಯಿ**
10. ಕಡ್ಡರೆಹಾಲ್, ವಳಗೆ ಮೂನ್ನೂರು ಮಕ್ಕ - **ಹಲ್ಸ್‌ನ ಹಣ್ಣ್**
11. ಗಂಟೆವಳಗೆ ನಾಲಿಗೆ, ನಾಲಿಗೆ ವಳಗೆ ಕುಸುಮ -**ಚಕ್ಕೋತನ ಹಣ್ಣ್**

ಅಂತ್ಯಕ್ರಿಯೆ ಆಚರಣೆ

ನಿಯಮ ಪ್ರಕಾರ ಒಂದು ಜೀವಿ ಹುಟ್ಟುದು, ಸಾಯೊದು ವಿಧಿ ಬರಹ. ಅದರ್ಲಿ ಪ್ರಾಣಿ ಪಕ್ಷಿಗ ಎಲ್ಲೊಂದರಲ್ಲಿ ಸತ್ತ್ ಬಿದ್ದವೆ. ಆದರೆ ಮನ್ಸ ಹಂಗಲ್ಲ. ಸಾವು ಮನ್ಸನ ಜೀವನದ ಕೊನೆ ಹಾದಿ. ಅಂವ ಬುದ್ಧಿವಂತ ಆಗಿರೊದ್ರಿಂದ ಅಂವನ ಸಂಸ್ಕಾರನ ಸಂಸಾರದವು ಸಂಪ್ರದಾಯ ಆಗಿ ನಡ್ಸಿಕೊಡುದು. ಅವರವರ ಜನಾಂಗಗಳ್‌ಲ್ಲಿ ನಡ್‌ಕಂಡ್ ಬರುವ ವಿಧಿ ವಿಧಾನ ರೂಢಿಲುಟು. ಹಂಗೆ ಗೌಡ ಜನಾಂಗದವು ಸಹ ಅವರ್ದ ಕ್ರಮ ಬದ್ಧವಾಗಿ ನಡ್ಸಿಕಂಡ್ ಬರ್ತಾವೆಳೊ ತೇಳ್ದುದ್ರ ಈಗ ಕೇಳೊನ.

ಮನೆಲಿ ಯಾರಾವ್ರ ಸತ್ತ್ ಹೋದರೆ ತಕ್ಷಣ ಜೋಡುಗುಂಡುಗಳ್‌ನ ಹಾರ್ಸಿ ಅಕ್ಕಪಕ್ಕದವ್ಕೆ ಗೊತ್ತಾಗುವಂಗೆ ಮಾಡುವೆ. ದೂರದ ನೆಂಟರಿಷ್ಟರಿಗೆ ತಕ್ಷಣ ತಿಳ್ಸುದು ಕ್ರಮ. ಈಗಾದರೆ ಫೋನುಲಿ ತಿಳ್ಸುವೆ. ಆದರೆ ಹಿಂದೆನ ಕಾಲಲಿ ಹಂಗಲ್ಲ ಜನಕಳ್ಸಿ ಹೇಳಿ ಬಾತಿದ್ದೊ ಆ ಸುದ್ದಿ ಹೇಳಿಕೆ ಹೋದಂವ ಮನೆ ಹತ್ತವೆ ಅಂಗ್ಳಲಿ ನಿತ್ತ್ ಹೇಳಿಬಾದು. ಸ್ವಂತ ನೆಂಟ್ರು ತವರ್‌ಮನೆವು ಬೆಳಿಬಟ್ಟೆ ತಕಂಡ್ ಹೂ ಅಗರಬತ್ತಿ ತಾಪ ಕ್ರಮ ಮತ್ತೆ ಗೌರವ ಸೂಚನೆ ಆಗುಟ್ಟು.

ಒಂದು ಕುಟುಂಬಲಿ ಸಾವು ತೇಳಿ ಸುದ್ದಿ ಕೇಳ್ದಂಗೆ ಎಲ್ಲವು ಅಲ್ಲಿ ಬಂದ್ ಕೂಡುವೆ. ಸತ್ತಂಗೆ ತೆಂಗಿನಕಾಯಿ ಒಡ್ದ್ ನೀರ್ ಕುಡ್ಸಿ ಪಡೆಗಳ್ದ ಮಡ್ಗುವೆ. ತೊಳ್ಸಿ ಕೂಡಿಲಿ ಬಾಯಿಗೆ ನೀರ್ ಕೊಟ್ಟುವೆ. ಅಲ್ಲಿಂದ ಎಲ್ಲವು ಸೇರಿ ಮೊಸಿ (ಅಂಗಳಲ್ಲಿ) ಬೆಳಿ ಬಟ್ಟೆ ಹೊದ್ಸಿ ಕಯ್ಯೊಲೆಲಿ 2 ಬೆಂಚ್ ಜೋಡ್ಸಿ ಮಲ್‌ಗ್ಸುವೆ. ಮತ್ತೆ ಶವದ ಬಲದ ಬದಿಲಿ ಕೊಸ್‌ಲಕ್ಕಿ ಮತ್ತೆ ಎಡದ ಕಾಲ್ ಬರಿಲಿ ಕೂಸುಲು ಭತ್ತ ಮಡ್ಗಿ ಅದರ ಮ್ಯಾಲೆ ಒಡ್ದ ತೆಂಗ್‌ನ ಕಾಯಿಯ 2 ಪಡೆನ ಮಡ್ಗಿ ಅದ್ಕೆ ಎಣ್ಣೆ ಹೊಯ್ದ್ ಬೆಳಿ ಬಟ್ಟೆ ಸುತ್ತಿದ ಗಂಧದ ಕಡ್ಡಿನ ಮಡ್ಗಿ ದೀಪ ಹೊತ್ಸುವೆ. ಕಂಚ್‌ನ ಬಟ್ಲ್‌ಲಿ ಹಾಲ್ ಮತ್ತೆ ತೊಳ್ಸಿ ಗಿಡದ 3 ಕೊಡಿನ ಮಡ್ಗುವೆ. ಬಂದವೆಲ್ಲ ತೊಳ್ಸಿ ತಕಂಡ್ ಬಾಯಿಗೆ ನೀರ್ ಕೊಟ್ಟ್‌ವೆ. ಬಾಯಿಗೆ ನೀರ್ ಕೊಡ್ದು ಹೆಂಗೆ? ಪ್ರತಿಯೊಬ್ಬ ಬಂದ್ ಶವದ ತಲೆಗೆ 3 ಸುತ್ತು ತಂದ್ 3ಸಾರಿ ಬಾಯಿಗೆ ನೀರ್ ಕೊಟ್ಟ್ ಸುರುಗೆ ಹೂಮಾಲೆ ಎದೆ ಮ್ಯಾಲೆ ಹಾಕಿ ಬಾಯಿಗೆ ದೊಡ್ಡದಾದ್ ನೀರ್ ಕೊಟ್ಟಿತ್ ಕಾಲ್ ಮುಟ್ಟಿದೆ ನಮಸ್ಕರಿಸುವೆ. ಹಿಂಗೆ ಬಂದವು ಸ್ವಂತದವು ಆದರೆ ಬೆಳಿ ಬಟ್ಟೆ ಹಾಕುವೆ (11/2 -2ಮಿಟರ್) ಅಗರ ಬತ್ತಿ ಹೂ ಮಾಲೆ ಮತ್ತೆ ಅಲ್ಲೊಂದು ಪಚ್ಚೆ ಮಡ್ಗಿದ್ದವೆ. ಅದ್ಕೆ ದುಡ್ಡು ಹಾಕುವೆ. ಈ ಕ್ರಮ ಯಾಕೆತೇಳ್ರೆ ಖರ್ಚಿಗೆ ತೇಳುವೆ ಕನಿಕರನೊ, ಗೌರವನೋ ಏನೋ ಒಂದು.

ಇನ್ನ್ ಊರವು ನೆರೆ ಮನೆವು ಎಲ್ಲವು ಬಂದ್ ಸಾವು ತೆಗೆಕೆ ಎಲ್ಲಾತ ಯಾರ್ ಮಾಡುವೆ. ಅಲ್ಲಿ ಹಾಕಿದ ಹೂಮಾಲೆ ಗಂಧದ ಕಡ್ಡಿ ಬಟ್ಟೆಗಳ್‌ನ ಬ್ಯಾರೆ ಬ್ಯಾರೆ ಅದೇ ಬಟ್ಟೆಂದ ಕಟ್ಟಿ ತೀಕೆಗೆ ನಿಲ್ಲುವಂಗೆ ಬೆಳಿ ಬಟ್ಟೆನ ಬಟ್ಟೆನ ಹರ್ದ್ ಕುತ್ತಿಗೆಗೆ ಕಟ್ಟುವೆ. ಮತ್ತೆ ಮನೆವು ಎಲ್ಲವು ಕೊನೆ ಗೌರವ ತೋರ್ಸ್ಕಾಗಿ 3 ಸಲ ಸುತ್ತು ಬಂದ್ ಬಾಯಿಗೆ ಪುನಃ ನೀರ್ ಕೊಟ್ಟ್ ಹೊರಗೆ ಬಂದವೆ. ಮತ್ತೆ ಶವನ ಹೊರಗೆ ಸಾಗ್ಸುವೆ. ಅಷ್ಟೊತ್ತಿಗೆ ಹೊರ್ಗ ಬಿದ್‌ರ್‌ಂದ ಚಟ್ಟ ತೇಳಿ ಕಟ್ಟುವೆ. ಮೇಲ್ಗಡೆ ಕಮಾನ್ ಮಾಡಿದ್ದವೆ ಶವನ ಮಲ್‌ಗಿಸಿ. ಮ್ಯಾಲೆ ಧಾರೆ ಸೀರೆನ ಗಂಡಂಗೆ ಒಂದು ತುಂಡುನ ಹರ್ದ್ ಅದರ ಮ್ಯಾಲೆ ಹೊದ್ಸಿ ಅಲಂಕಾರ ಮಾಡಿ ಮತ್ತೆ ಹೊರ್ಸುವೆ ತಲೆ ಕಡೆ ಮನೆವು ಕಾಲ್‌ಕಡೆ ಊರವು ಹಿಡ್ಕಂಡ್ 3 ಸಲ ಜೋರಾಗಿ ಕೂಣ್ಸಿ -ದಂಗೆ ಮಾಡಿ ಸುಡ್ಗಳಿಗೆ ತಕಂಡ್ ಹೊರ್ಸುವೆ.

ಮನೆಂದ ಇಳ್‌ಕಾಕನ ಒಳ್ಳಗಳಗೆ ನೋಡಿ ಇಳ್ಸವೆ. ಅಕ್ಕಿ ಅರಶಿಣ ಚಿಲ್ರೆ ನಾಣ್ಯಗಳ್‌ನ ಸೇರಿಸಿ ಮಿಶ್ರಮಾಡಿ ಶವದ ಮಧ್ಯಂದ ಎಡದ ಕೈಂದ ಬಿಸಾಡುವೆ. ಹಿಂಗೆ ಹೋಗುವ ದಾರಿಲಿ 3 ಬುತ್ತಿಗಳ್‌ನ ಮಡ್ಗುವೆ. ಮತ್ತೆ ಸ್ಮಶಾನಲಿ ಸೌದೆ ಮೇಲೆ ಮಲ್‌ಗಿಸಿ ಪುನ ಎಲ್ಲವು ಒಂದೊಂದು ಚೂರು ಗಂಧದ ಚೂರು ತುಂಡುಗಳ್‌ನ ಮತ್ತೆ ಅಗರ ಬತ್ತಿನ ಎಷ್ಟ ಕೈಲಿ ಹಾಕುವೆ. ಮತ್ತೆ ಅಪ್ಪ ಸತ್ತರೆ ಹಿರಿ ಮಂಙ ಅಮ್ಮ ಸತ್ತರೆ ಕಿರಿ ಮಂಙ ಬೆಂಕಿಕೊಟ್ಟವೆ. ಮತ್ತೆ ಮನೆಗೆ ಬಂದ್‌ವೆ.

ಇನ್ನ್ ಮೂರ್‍ನೆ ದಿನ ಶುದ್ದ ಮಾಡುವೆ. ಶುದ್ದದ ಹಿಂದಿನ ದಿನ ಕತ್ತಲಾಕನ ಕೊಟ್ಟು, ಹೆಣ್ಣ್ ಮಗಳ್ ಇದ್ದಲ್ಲಿ ಅವಳು ಸರ್‌ಕು ತರೋಕು. ಅದ್ ತೇಳ್ರೆ ಪ್ರತಿ ಅಡುಗೆ ಪದಾರ್ಥ.

ಬಾಳೆಕಾಯಿ, ಕುಂಬಳಕಾಯಿ, ಜೇನ್, ತೆಂಗಿನ ಎಣ್ಣೆ, ಒಳ್ಳೆಣ್ಣೆ, ಎಲೆ ಅಡಿಕೆ, ನೆಣೆಬತ್ತಿ ಬೇಳೆ ಸಂಬಾರ, ಬೆಲ್ಲ, ಮೆಣ್‌ಸ್, ಉಪ್ಪು, ಹುಣಸೆಹಣ್ಣ್, ಹಪ್ಪಳ, ಅಕ್ಕಿಹೊಡಿ, ಬೆಳ್ತಕ್ಕಿ, ಕುಸ್‌ಲಕ್ಕಿ, ಅರಶಿಣ ಹೊಡಿ. ಇವನ್ನ ಬಿಟ್ಟು ಇನ್ನು ಉಳ್‌ದ ಎಲ್ಲಾ ಅಡುಗೆಯ ವಸ್ತುಗಳ್‌ನ್ನ ಬಾಳೆ ಎಲೆನ ಬಾಡ್‌ಸಿ ಅದರ್‍ ಮಗ್‌ಚಿ ಅದರ್‍ಲಿ ಎಲ್ಲಾ ವಸ್ತುಗಳ್‌ನ ಹಾಕಿಕಟ್ಟಿ, ತವರ್‌ನ ಸರ್‌ಕು ಮತ್ತೆ ಮಗಳ ಕಡೆಂದ ಬಂದ ಸರಕ್‌ನ ಬೇರೆ ಬೇರೆಯಾಗಿ ಜೋಡಿಸ್ಲಿ, ನೀರ್‌ನೆಳಲು ಇಡುವ ಕ್ರಮವುಟ್ಟು. ನಾಪ್ರ ಇಟ್ಟಿ ಬಾಗಲೆ ಒಂದು ಕುಪ್ಪಿ ಗ್ಲಾಸ್‌ಲಿ ಹಾಲ್ ಮತ್ತೊಂದರ್‍ಲಿ ನೀರ್‌ನ ಮಡ್ಗುದು ಹಿಂಗೆ ಮಡ್ಗಿದ ಗ್ಲಾಸ್ ಮೇಲೆ ಬಿಟ್ಟಿಂದ ಮೂರು ಹಗ್ಗ ಕಟ್ಟುವೆ. ಈ ಹಗ್ಗದ ತುದಿಲಿ ಒಂದು ಮಸಿಕೆಂಡ ಮತ್ತೊಂದು ಕಡೆ ಅಕ್ಕಿ ಹೊಡಿ ಹರಡಿ ಚೌಕಾಕರಲಿ ಮಡ್ಗುವೆ. ಇದ್ ಯಾಕೆತೇಳ್ರೆ ಕೊಲೆ ಸತ್ತವು ಬಂದ್ ಹೋದರೆ ಅದರ್‍ಲಿ ಗುರುತಾದೆಂತ ನಂಬಿಕೆ. ಹಿಂಗೆ ಅದರ್‍ನೆಲ್ಲಾ ಅಲ್ಲಿ ಮಡ್ಗಿ ಮನೆಲಿ ಕತ್ತಲೆ ಮಾಡಿ ಎದ್‌ರ್ ಬಾಗ್‌ಲ್‌ನ ಮೆಟ್ಲ್‌ಕಲ್ಲ್‌ಲಿ ತೀಕೆಗೆ ನಿತ್ತವ 3 ಸಾರಿ ಕರ್‌ದವೆ. ಅವ್ವಾ ನೀರ್ ನೆಳಲ್‌ಗೆ ಮಡ್ಗೊಳೊತ 3 ಸಲ ಕರ್‍ದ್ ಒಳಗೆ ಬಂದ್ 5 ನಿಮಿಷ ಯಾರೂ ಮಾತಾಡ್ತುಲೆ. ಮತ್ತೆ ಕುಂಬಳಕಾಯಿನ ಮೆಟ್ಟಿಕಲ್ಲ್‌ಲಿ ಅಡ್ಡಕೆ 2 ಭಾಗ ಮಾಡ್ತೆ. ಹಿಂಗೆ ಭಾಗ ಮಾಡ್ದ ಕುಂಬಳಕಾಯಿನ ಒಂದು ಭಾಗಲಿ ಮತ್ತೆ ಎರಡ್ ಭಾಗ ಮಾಡಿ ಒಂದು ಭಾಗ ಮಡಿವಾಳಂಗೆ, ಇನ್ನೊಂದು ಹಜಾಮಂಗೆ ಕೊಟ್ಟವೆ. ಇದ್ ರಾತ್ರೆನ ಕ್ರಮ

ಮೂರ್‍ನೆ ದಿನ ಹೊತ್ತಾರೆ ಶುದ್ದ. ಆ ದಿನ ಮನೆಯವೆಲ್ಲ ತೇಳ್ರೆ ಗಂಡ್ ಜನ ಮಕ್ಕ ಸತ್ತವರ ನೆನ್‌ಪ್‌ಲಿ ತಲೆ ಕೂದಲುನ ತೆಗ್ದವೆ. ಆ ದಿನ ಹೊತಾರೆನೆ ಬರಿ ರಾಗಿ ಮುದ್ದೆನ ತಿಂದವೆ. ಇದ್ ದುಃಖದ ಸಂಕೇತ ಆಗುಟ್ಟು. ಹಿರಿಯವು ಆದರೆ ಒಂದು ಕುಟುಂಬಲಿ ಇರೊವೆಲ್ಲಾ ಕೂದ್‌ಲ್ ತೆಗ್ದವೆ. ಮತ್ತೆ ಮೀದ್ ಸ್ಮಶಾನಕ್ಕೆ ಹೊರಡಿಕೆ ಸುರುಮಾಡುವೆ. ಹಿಂಗೆ ಹೊರ್ಡಿಕೆ ಮುಂದೆ ಬಾಡೆಲ್ಲಿ ಒಂದು ಕಂಚ್‌ನ ತಟ್ಟೆ, ಬೆಳಿ ಬಟ್ಟೆ, ಮೇಲೆ ಐದ್ ಕೊಡಿ ಬಾಳೆಲೆ ಅದರ ಮ್ಯಾಲೆ ದೀಪ ಮಡ್ಗಿ ಅದರ್‍ಲಿ ತೀಕೆ ನಿತ್ತ ಮಂಙನ ತಲೆ ತೊಳ್‌ದ್ ಅಕ್ಕಿನ ಅರ್‌ಶಿಣ ಹೊಡಿಂದ ನೆನ್ಸಿ ಕಲ್ಸ್‌ಟ್ಟವೆ. ಇವರ್‍ನೆಲ್ಲಾ ಸೇರ್‍ಸಿ ಮುಕ್ಕಾಲ್‌ಲಿ ಇಟ್ಟವೆ. ಇದರ ಸುತ್ತ ಮನೆಯವು 3 ಸುತ್ತು ಬಂದ್ ಸ್ಮಶಾನಕ್ಕೆ ಹೊರ್‍ಡವೆ.

ಮತ್ತೆ 11ನೇ ದಿನ ತಿಥಿ - ಹೊತಾರೆ ಕೋಳಿ ಕೂಗ್‌ಕಾಕನ ಸತ್ತವರ ಹೆಸ್ರ್‌ಲಿ ಎಡೆ ಮಡ್ಗುವೆ. ಬಂದವ್ರಕೆಲ್ಲಾ ಗೌಜಿಲಿ ಊಟ ಹಾಕುವೆ, ಕತ್ತಲಾಕನ ಎಡೆ ಎಳ್‌ದವೆ.

16ನೇ ದಿನ ಐನ್‌ಮನೆಲಿ ಕೊಲೆಗೆ ಕೂಡ್ಸುದು 48ನೇ ದಿನ ಕಾವೇರಿಲಿ ಪಿಂಡ ಹಾಕುದು.

ಸ್ವರಚನೆ ಕವನಗ

ಕೂಡಕಂಡಿ ವಿ॥ ಪೊನ್ನಪ್ಪಗೌಡನವು ನಮ್ಮ ಹಿರಿಯ ಅರೆ ಭಾಸೆ ಕವಿ ಸಾಹಿತಿಗ. ಅವು ಮಳೆಗಾಲ ಯಾರ್‍ಯಾರಿಗೆ ಏನೇನ್ ಕೆಲ್ಸ ತ ಪದ್ಯ ರೂಪಲಿ ಬರ್ದೊಳೊ ಅದರ್ನ ಈ ಸಂದರ್ಭಲಿ ನೆನ್ಪ ಕೊಂಬದು ನಮ್ಮೆಲ್ಲರ ಕರ್ತವ್ಯ ಆಗುಟು

ದೊಡ್ಡಂವಂದೊಂದು ಪಟ್ಟೆದಾರಿಕೆ। ಸಣ್ಣಂವಂದೊಂದು ತಾಬೇದಾರಿಗೆ।
ಕೊಡೆಕಂಣಗೊಂದು ಪಾಲ್‌ದಾರಿಕೆ। ಕೊಂಬಿನ ಮೀಸೆಗೊಂದು ಓದುಗಾರಿಕೆ ॥
ಮಾಳಂದ ಹೊರ್ಗ್ ಪಟ ಪಟ ನೋಡ್ತ। ಬರೆ ಮೀಸೆಗೊಂದು ಯಜ್‌ಮಾನಿಕೆ।
ಕುರೆಗಳ ಹಂಗೆ ಚೈ ಚೈ ತೇಳುವ। ತರ ತರ ಮನ್‌ಸಂಗೆ ಗಂಪ್‌ಗಾರಿಕೆ ॥
ಮೊರಟೆ ಮೀಸೆಗೊಂದು ರಾಜಗಾರಿಕೆ। ಕುರುಟು ನ್ಯಾಯಗಾರಂಗೆ ಸುಬೇದಾರಿಕೆ।
ಏಸಂಪ್ ಓದೆಕೆ ಕಷ್ಟ ಕೋಲು ಹಾಕುವ। ಕಸಂಪ್ ಮಕ್ಕಳಿಗೆ ಪೋಲಿಗಾರಿಕೆ॥
ರಬ್ಬರ್ ಬಿಲ್ಲ್‌ನ ಕೈಲಿ ಹಿಡ್ಕ್। ಎರ್ಡ್ ಜೋಬಿಗೆ ಕಲ್ಲ್‌ತುರ್ಕಿ।
ಕಾಡ್‌ನ ಬ್ಯಾಟೆಗೆ ಹೋದು। ನಮ್ಮೂರ ಮಕ್ಕಳ ಬ್ಯಾಟೆಗಾರಿಕೆ ॥
ಹೂಟಿಕೆ ಮೂರ್ತ ಮಾಡೊಕುತೇಳಿ। ಹೂಡೊವ್ರ ಎಲ್ಲಾ ಒಟ್ಟಿಗೆ ಕೂಡಿ।
ಬಿಸು ಹಬ್ಬಲಿ ಎತ್ತ್ ಕಟ್ಟುದು। ಎಲ್ಲವ್ರಕ್ಕಿರುವ ರೈತಗಾರಿಕೆ ॥
ಅಪ್ಪನ ಮುಂಡಾಸು ಹೂಡ್ನು ನೋಡಿ। ಅಪ್ಪ ಬಿತ್ತಿ ತಾದು ನೋಡು।
ಮುಟ್ಟ ಕಂತೆ ತಕಂಡ್ ಬಾದು। ಅಪ್ಪಂಗೆ ಇರುವ ಕೆಲ್ಸಗಾರಿಕೆ ॥
ಹಲ್ಲ್‌ನೆಕ್ಕಿ ಪೊಟ್ಟ ಪೊಕ್ಕಳರೊಟ್ಟಿ। ಟೊಂಯಿಲಿ ತುಂಬಾ ಬಿಸಿ ಬಿಸಿ ಕಾಫಿ।
ಗದ್ದೆ ಪುಣೆಲಿ ಕುದ್ದ್ ಕಂಡ್ ತಿಂಬೊದು। ಹೂಡೊವ್ರಕ್ಕಿರುವ ಪಾಲ್‌ಗಾರಿಕೆ ॥
ಹಾಸಿಗೆ ಅಡಿಲಿ ಸುರಾಲ್ ಮಡ್ಗಿ ಇಸ್ತ್ರಿ ಆಕುತ ಅದನ್ನ ಮಡ್ಗಿ।
ಬೆಳ್ಕ್‌ನ ಹಬ್ಬಲಿ ಹಾಕಿದೆ ನೋಡಿ। ನೆಗೆ ಅಡ್ಡೊ ಜೆನ ನನ್ನೇ ನೋಡಿ ॥
ಅರೆ ಭಾಸೆಲೊಂದು ಪದ್ಯ ಬರೆಕುತ। ತರತರ ಹೇಳ್ದೊ ಪೊಣ್ಣಪ್ಪಂಣ।
ಸರಸರ ಪೆನ್ನ್ ತೆಗ್ದ್ ಬರ್ದೊ ನೋಡಿ। ಕೂಡಕಂಡಿ ಪೊನ್ನಪ್ಪಗೌಡ ॥
ನಮ್ಮದೆಲ್ಲಾ ಭಾಸೆ। ಅರೆ ಭಾಸೆ ಕೇಳಿ। ಕನ್ನಡನಾಡ್‌ನ ಹಳೆ ಭಾಸೆ।
ಹುಟ್ಟುಭಾಸೆನ ಗಟ್ಟಿ ಆಡಿಕೆ। ಬ್ಯಾಡಪ್ಪಾ ಯಾರ ತಾಬೇದಾರಿಕೆ॥

ಅರೆಭಾಸೆ ಚುಟುಕಗ

ಸುರುಗೆ-ಕುಲ್ಲಚನ ಕಾರ್ಯಪ್ಪನವು ಸಂಗ್ರಹಿಸಿದ ಚುಟುಕ ಹೆಂಗುಟ್ಟು, ತೇಳ್ರಿ

2. ಕೊಟ್ಪ್ಕತ್ತಿ ಬಾಣೆಲಿ
ಕೊಂಬೋಲಗ ಕೇಳ್ದಿ
ಅಳ್ಬ್ಯಾಡ ಸಣ್ಣಕ್ಕ
ದಬ್ಬಡ್ಕ ಬಾಣೆಲಿ
ದಿಬ್ಬಣ ಬಂದುಟು
ಮಡ್ಗಬಡ ಸಣ್ಣಕ್ಕ
ನೀನ್ ಮಡ್ಗಬಡ

ದಾಸ ಬಾತ್
ದೋಸೆತಿಂತ್
ನೀರ್ ಕುಡ್ತ್
ನಿಗ್ರಿಬೀತ್

ಹೊಳೆಕರೆ ಭೂಮಿ
ಬರೆಕರೆ ಮನೆ
ಕುರ್ಬ್ಬ ನೇಗ್ಲ್
ಬಡಕಲ್ ಎತ್ತ್
ಇಂವ ನಮ್ಮ ಅಳಿಯ
ಇಂವ ನಮ್ಮ ಮನೆ ತೊಳಿಯ

ತೇಳುವ ಮಾತ್‌ಗ ಇಂದ್ ಬಹಳಷ್ಟ್, ಇದ್ದರೂ ಬಾರಿ ಅರ್ಥಪೂರ್ಣವಾಗಿ ಅರೆಭಾಸೆಲಿ ಉಳ್ದುಟ್ಟು

3. ಇನ್ನ್ ಪಿ.ಡಿ. ಬೋಪಯ್ಯ ತೇಳವು ಏನ್ ಹೇಳ್ಯೊಳೊ ತೇಳ್ರಿ
ಹರಂಡಿನೆ ಗೊಬ್ಬರ ಬಿತ್ತಿನೆ ಬೀಜ
ಹೂಡ್‌ನೆ ನೆಟ್ಟನೆ। ಕೊಯ್ದನೆ ಹೊತ್ತನೆ।
ಹೊಡ್ಡನೆ ಕಳಲಿ ಒಕ್ಕುಲ್। ಕಟ್ಟಿನೆ ಭತ್ತ ಅಟ್ಟದಕಡ್ಮೆಲಿ।
ತುಂಬಾ ।ಇದರ್ನ ಬುಟ್ರೆ ನಂಗೆ ಇನ್ನ್‌ನ್ ಕೆಲ್ಸ?
ಕಾಡಿಗೆ ಹೋಗಿ ಹೊತ್ತನೆ ವಾಟೆಕಟ್ಟ್ ।।
ಮಾಡ್ನೆ ಅದರ್ಲಿ ಪೊಡಕೂಳಿ ಗೊರ್ಗ್।
ಗೋರಿ ತಟ್ ಮಳೆಬಾಕನ ಒಡ್ನೆ ।ಕೂಳಿ ಪೊಡ ಹೊತ್ಕಂಡ್
ಗೋರಿ ತುಂಬಾ ಮೀನ್ ತನ್ನೆ ಚೆಳಿ ಹಿಡ್ಕಂಡ್।
ಹಿಂಗೆ ಕಳ್‌ದನೆ ಮಳೆಲಿ ಬಾರಿ ಕುಸಿನಂಗೆ ಈ ಚಳಿಮಳೆಗಾಳಿ ಹಿಂಗಿರ್‌ಕನ ನನ್ನ
ನೀವ್ಯಾಕೆ ಪೀಡ್ಸಿರೆ? ಕತೆಬರಿ ಸೋಬಾನೆ ಬರೀತ ? ನನ್ನ ಹಿಂಗೇ ಬುಟ್‌ಬುಡಿತ!

4. ಇದರ್ನೆಲ್ಲಾ ಕೇಳ್ದ ಹೊದ್ದೆಟ್ಟಿ ಭವಾನಿ ಶಂಕರನವು ನಾನೇನ್ ಇವ್ರಕೆ ಕಮ್ಮಿಯಿಲ್ಲೆ ತ
ಅವುನೂ ಸುರು ಮಾಡ್ದೊ ಮೊದುವೆಲಿ ಬಂದ್‌ಕುದ್ದ ಗಂಡ್‌ನ ಬಗ್ಗೆ.
ಮೊದ್‌ಮಂಞ ಕುದ್ದುಟ್ಟು - ಮುಂಡಾಸ್‌ಕಟ್ಟಿ, ಅಡೊಳಿ ಪಕ್ಕಲಿ।
ಹತ್ತ್‌ಗಂಟೆ ಆತ್‌ನೋಡಿ-ಎದ್ರಿಸಿ -ಮೂರ್ತಕೆ ಕೂರ್ಸಿ!
ಗೂಡೆನ ಕರೆಕೆ ಹೋದರೆ ಗೂಡೆ ಎಲ್ಲ್ಯುಟ್ಟು?
ಸಣ್ಣ ಗಂಡ್‌ಂವತೇಳಿ ಗೂಡೆ ಅಣ್ಂಗ್ಯುಟ್ಟು!
ಇನ್ನೆಂತದ್ ಒಪ್ಪಿಸಿತ ಹೇಳ್ದೊ ಬ್ಯಾರೆ ಗೂಡೆನಾ-
ಗೂಡೆನ ಅಪ್ಪ ಹೇಳ್ದೆ ಎಂತದ್ ಮಾಡ್ದುನಾ ?ಯಾರೊ ಹೇಳ್ಯೊ-ಅಪ್ಪೊನ್ನಿ ಗೂಡೆಗೆ
"ಗಂಡನ ಬುಟ್ಟಿ ಗೂಡೆ ಅದ್! ಒಪ್ಪಿತ್ ಮೊದುವೆಗೆ ॥
ಹಿಂಗೆ ಹಿರಿಯ ಅರೆಬಾಸೆ ಕವಿಗಳ್ನ ನೆನ್ಸಿಕೊಂಬನೊ

ವೀಳ್ಯದೆಲೆ

ವೀಳ್ಯದೆಲೆ ಲಕ್ಷ್ಮಿ ಸ್ವರೂಪವಾದ್ದರಿಂದ ಪೂಜಾರ್ಹವಾಗಿದೆ. ವೀಳ್ಯ ಸ್ವೀಕರಿಸಿದ ನಂತರ ಮಾತಿಗೆ ತಪ್ಪುವುದಿಲ್ಲವೆಂಬ ಸಂಕೇತ. ಒಪ್ಪಂದದ ಅಂತ್ಯದಲ್ಲಿ ವೀಳ್ಯ ಸ್ವೀಕರಿಸಿದರೆ ವ್ಯವಹಾರ ಬಗೆಹರಿದಂತೆ.

ತಾಂಬೂಲ ಸೇವನೆ ಭಾರತದಲ್ಲಷ್ಟೆ ಅಲ್ಲ ಪೂರ್ವ ಏಷ್ಯದಲ್ಲಿಯೂ ವ್ಯಾಪಕವಾಗಿ ಹರಡಿರುವ ಒಂದು ಪದ್ಧತಿ. ವೀಳ್ಯದೆಲೆಯಲ್ಲಿ ಬಿಳಿ ಎಲೆ, ಕರಿಎಲೆ ಎಂಬ ಎರಡು ವಿಧಗಳಿವೆ. ರೈತ ಜನರು ಕರಿಎಲೆಯನ್ನೂ ನಗರದ ಜನರು ಸಾಮಾನ್ಯವಾಗಿ ಬಿಳಿ ಎಲೆ ಉಪಯೋಗಿಸುತ್ತಾರೆ. ಪೂಜೆಯ ಸಂದರ್ಭದಲ್ಲಿ ಮಂಗಳ ಪ್ರಸಂಗಗಳಲ್ಲಿ ಹಾಗೂ ಇತರ ವಿಶೇಷ ಸಂದರ್ಭಗಳಲ್ಲಿ ಕುಡಿಯುಳ್ಳ ಬಿಳಿಎಲೆಗಳನ್ನೇ ಉಪಯೋಗಿಸುತ್ತಾರೆ.

ಗ್ರಾಮೀಣರು ತಾಂಬೂಲ ಪ್ರಿಯರು. ತಮ್ಮ ದುಡಿಮೆಯ ಬೇಸರ ಬಳಲಿಕೆಯನ್ನು ಕಳೆಯಲು ಯಾವಾಗಲೂ ತಾಂಬೂಲ ಹಾಕುತ್ತಾ ಬಂದಿದ್ದಾರೆ. ರೈತ ಕಾರ್ಮಿಕರು ಬಿಡುವಾದಾಗಲೆಲ್ಲಾ ಎಲೆ ಅಡಿಕೆ ಹಾಕಿಕೊಂಡು ಮೆಲ್ಲುತ್ತಿರುತ್ತಾರೆ. ಪ್ರಾಚೀನ ಕಾಲದಲ್ಲಿ ತಾಂಬೂಲ ಸೇವನೆ ಕವಿಯ ಅರ್ಹತೆಗಳಲ್ಲಿ ಒಂದೆಂದು ಪರಿಗಣಿಸಲಾಗಿತ್ತು. ಊಟದ ನಂತರ ತಾಂಬೂಲ ಸೇವನೆ - ಪತಿಗೆ ಸತಿಯು ಮಡಚಿ ಕೊಡುವ ಪ್ರೇಮದ ಸಂಕೇತವಾದ ಈ ಪದ್ಧತಿ ಬಹಳ ವರ್ಷಗಳಿಂದಲೇ ರೂಢಿಯಲ್ಲಿದೆ. ಸಂಚಿಯ ಹೊನ್ನಮ್ಮ ಮೈಸೂರು ಮಹಾರಾಜರಿಗೆ ತಾಂಬೂಲ ಸೇವಕಿಯಾಗಿದ್ದು, ಕವಯಿತ್ರಿ ಯಾದುದು! ದ್ರೌಪದಿಯ ಸ್ವಯಂವರದಲ್ಲಿ ಅವಳನ್ನು ನೋಡಿದ ಕೂಡಲೆ ರಾಜಮಹಾರಾಜರುಗಳ ಕೈಯಲ್ಲಿದ್ದ ವೀಳ್ಯವು ಬಾಯಲ್ಲಿ ಕೈಯಲ್ಲಿ ಅಲ್ಲಲ್ಲೆ ಇದ್ದಂತೆ ಆಘಾತದ ಸುದ್ದಿ ಕೇಳಿ ಆಸ್ಥಾನದಲ್ಲಿದ್ದವರ್‍ಯಾರೂ ವೀಳ್ಯ ಸೇವಿಸಲಿಲ್ಲವೆಂಬುದು ಅದೆಷ್ಟು ನಿಜ. ತಾಂಬೂಲದಿಂದ ತುಟಿ ಕೆಂಪಾದರೆ ಪ್ರೀತಿಯೆಂತಲೂ, ಕೆಂಪಾಗದಿದ್ದರೆ ಬಿಪ್ಪೂ ಎಂಬರ್ಥವಿದೆ. ಬೆಣ್ಣೆಯನ್ನು ಕಾಯಿಸುವಾಗ ತುಪ್ಪಕ್ಕೆ ವೀಳ್ಯದೆಲೆ ಹಾಕುವುದಿದೆ. ವೀಳ್ಯದೆಲೆ ತಿನ್ನುವುದರಿಂದ ರಕ್ತ ಶುದ್ಧಿಯಾಗುತ್ತದೆ. ಹಾಗೂ ತಾಂಬೂಲ ಸೇವನೆಯಿಂದ ಪಚನ ಕ್ರಿಯೆಗೆ ಸಹಾಯವಾಗುವುದೆಂದು ವೈಜ್ಞಾನಿಕ ನಂಬಿಕೆಗಳೂ ಇವೆ. ವೀಳ್ಯದೆಲೆ ನಾನಾ ಸಂದರ್ಭಗಳಲ್ಲಿ ಆಮಂತ್ರಣದ ಪ್ರತೀಕವಾಗಿ ಉಪಚಾರದ ಸಂಕೇತವಾಗಿ ಗೌರವದ ದ್ಯೋತಕವಾಗಿ ಆಹ್ವಾನದ ಸಂಕೇತವಾಗಿ ಅಭಿಮಾನದ ಕುರುಹಾಗಿ ಒಪ್ಪಂದದ ಪ್ರತೀಕವಾಗಿ ಪೂಜೆಯ ವಿಧಿ ವಿಧಾನಗಳಲ್ಲಿ ಶುಭ ಸಂಪ್ರದಾಯಗಳಲ್ಲಿ ಬಳಸುತ್ತಾ ಬರಲಾಗಿದೆ. ಹಿಂದೂ ಸಂಸ್ಕೃತಿಯಲ್ಲಿ ವೀಳ್ಯಕ್ಕೆ ವಿಶಿಷ್ಟ ಸ್ಥಾನವಿದ್ದು, ಸಾಮಾಜಿಕವಾಗಿ- ಧಾರ್ಮಿಕವಾಗಿ- ಸಾಂಸ್ಕೃತಿಕವಾಗಿ ವೀಳ್ಯ ತನ್ನದೇ ಸ್ಥಾನಮಾನ ಉಳಿಸಿಕೊಂಡು ಇಂದಿನವರೆಗೂ ತನ್ನ ಗುಣದ ಮಹತ್ವವನ್ನು ಉಳಿಸಿಕೊಂಡಿದೆ. ಹಿಂದಿನ ಕಾಲದಲ್ಲಿ ಮನೆಗೆ ಬಂದ ಅತಿಥಿಗೆ ಮೊದಲು ಉಪಚಾರ ವೀಳ್ಯದೆಲೆ ಅಡಿಕೆ ಆಗಿರುತ್ತಿತ್ತು. ಅತಿಥಿಗಳಿಗಾಗಿ ಬೀಡಗಳನ್ನು ಕಟ್ಟುವುದು ಮನೆಯ ಹೆಂಗಸರ ಕೆಲಸವಾಗಿರುತ್ತಿತ್ತು. ಶಿವಮೊಗ್ಗ, ಮೈಸೂರು ಕೊಡಗಿನ ಕಡೆಯಲ್ಲಿ ವೀಳ್ಯವೇ ಪ್ರಥಮ ಆತಿಥ್ಯ. ವಿಶೇಷ ಸಾಧನೆ ಗೈದವರನ್ನು ತಾಂಬೂಲ ನೀಡುವುದರ ಮೂಲಕ ಸತ್ಕರಿಸುವುದು ಸಂಪ್ರದಾಯ. ಪ್ರಶಸ್ತಿ ಪುರಸ್ಕಾರ, ಉಡುಗೊರೆ ನೀಡುವಾಗ ಫಲಪುಷ್ಪ ತಟ್ಟೆಯಲ್ಲಿ ಎಲೆ ಅಡಿಕೆ ಇರಲೇಬೇಕೆಂಬ ಸಾಂಪ್ರದಾಯಿಕ ವಿಧಿ. ಗೌಡರ ಮದುವೆ ಕ್ರಮವು ಸಾಂಪ್ರದಾಯಿಕ ವೀಳ್ಯದೆಲೆ ಅಡಿಕೆಯಿಂದ ಪ್ರಾರಂಭವಾಗುತ್ತದೆ. ಇದಕ್ಕೆ ವೀಳ್ಯಶಾಸ್ತ್ರ ಎನ್ನುತ್ತಾರೆ. ಹಿಂದಿನವರು ಮದುವೆಯಲ್ಲಿ 60 ವೀಳ್ಯಗಳನ್ನು ಬಳಸುತ್ತಿದ್ದರು. ಅದರ ಒಟ್ಟಿಗೆ ಲೆಕ್ಕ 1500 ಆಗಿರುತ್ತಿತ್ತು. ಈಗ ಮದುವೆಗಳಲ್ಲಿ ಕೇವಲ 9 ವೀಳ್ಯಗಳಿಗೆ ಪ್ರಾಧಾನ್ಯತೆಯಿರುವುದು.

ಕತೆ ಕೇಳೋಕಾ? ದೊಡಪನತ್ರ ಪೋಯಿ

(ಗುಡ್ಡೆಮನೆ ಅಪ್ಪಯಗೌಡರ ಕಥೆ)

ಚಾಮಿ : ದೊಡಪ-ಓ ದೊಡಪಾ....ಏನ್ ಮಾಡ್ತಾವಳರಿ - ಬಾರಿ ಕೆಲ್ಸ ಮಾಡುವಂಗೆ ಕಂಡದೆ?

ದೊಡಪ: ಎಂತ ಇಲ್ಲೆನೆ ಹೈದ -ಹಿಂಗೆ ಬೇಳಿ ಕಟ್ಟಿಕೆ ಹಗ್ಗ ಮಾಡೊನತಾ... ಭೂತಾಳೆ ಹಾಳೆನ ಕಡಿತಾವಳೆ.

ಚಾಮಿ : ಅಲ್ಲಾ ದೊಡಪ-ಭೂತಾಳೆ ನಾರ್‌ಗಿಂತ ಇನ್ನೊಂದು ತಡೆದ್ ನಾರ್‌ನ ಸಿಗ್ತ್ ಹಗ್ಗ ಮಾಡ್ತು ವಳ್ಳದಲ್ಲಾ ಈ ನಾರ್ ತೆಗಿಯೊದು ಸುತ್ತಾದು ಮಾಡ್‌ಕನ ಕೈ ತೊರ್ಸ್ತುದು ಉರಿ ಆಕಿಲ್ಲಾ ದೊಡಪ?

ದೊಡಪ: ಅಲ್ಲನೆ ಹೈದಾ? ಆ ತಡೆ ಗಿಡೆ ಎಲ್ಲಾ ಆ ಕಾಲಕೇ... ಆಗೋತು ನೋಡು ಈಗ ಎಲ್ಲಿ ಸಿಕ್ಕದೆ? ಕಾಪಿ ತ್ವಾಟ ಸುಂಟಿ ಕೃಸಿ ಬರ್‍ಬಾಗಿ ಕಾಡ್‌ಲಿ ಒಂದು ವಳ್ಳ ಮರ ಆಗಲಿ -ಮದ್ದ್ ಆಗಲಿ ಸಿಕ್ತುದುಲೆ. ನಿಂಗೆ ಗೊತ್ತುಟಲೆ ಕಾಪಿ ತ್ವಾಟ ಮಾಡ್‌ಕಾಕನ ಕಾಡ್‌ನ ಎಸ್ಟ್ ನಾಸ ಮಾಡುವೆತ?

ಚಾಮಿ : ಅಲ್ಲಾ ಹಂಗೆ ಮಾಡದರೆ ತ್ವಾಟ ಹೆಂಗೆ ಆದು ದೊಡಪ? ಜೆನ ಬದ್ಕುದು ಹೆಂಗೆ?ಉದ್ಯೋಗಂತೂ ಸಿಕ್ತುದುಲೆ - ಕೃಷಿ ಮಾಡ್ರು ಆದೂ ಫಲಯಿಲ್ಲೆ. ಅಲ್ಲಾ ದೊಡಪಾ- ನಾ ಬಂದ ವಿಸಯನೆ ಬ್ಯಾರೆ!

ದೊಡಪ: ಅದೆ! ನಿನ್ನ ನೋಡ್ಕನೆ ನಾನ್ ಗ್ಯಾನ ಮಾಡ್ದೆ- ಈ ಹೈದ ಏನೋ... ಕೆಲ್ಸದ ಮ್ಯಾಲೆ ಇತ್ತ ಬರ್‍ತಾ ಉಟ್ಟು ಕಂಡದೆತ.

ಚಾಮಿ : ಅದೆ ದೊಡಪಾ... ನಾನ್ ಈಗ ಮಾಸ್ಟ್ರ ಕೆಲ್ಸಕೆ ಟ್ರೈಯಿನಿಂಗ್ ಮಾಡ್ತಾ ವಳದ್ ನಿಮಿಗೂ ಗೊತ್ತುಟು. ಈ ಹುತಾತ್ಮರ್ ತೇಳುವ ಒಂದು ವಿಸಯದ ಬಗ್ಗೆ ಚರ್ಚೆ ಇರ್‍ಸಿಕೊಂಡೊಳೊ. ಅದರ್‍ಲಿ ನಂಗೆ ಸಿಕ್ಕಿದ ವಿಸಯ ತೇಳ್ರೆ - ಕೊಡಗ್‌ನ ಹುತಾತ್ಮರ ಬಗ್ಗೆ- ಹಂಗಾಗಿ ಇತ್ತ ನಿಮ್ಮನ ಕೇಳೊನತ ಬಂದೆ.

ದೊಡಪ: ಅಲ್ಲನೆ ಹೈದ-ಅದೆಂತ ಒಂದು ಚರ್ಚೆತ? ಹಂಗೂ ಒಂದು ವಿಸಯ ಉಟ್ಟಾ?

ಚಾಮಿ : ಅಯ್ಯೊ ದೊಡಪಾ... ನಿಮಿಗೆ ಅರ್ತ ಆದುಲೆ ಬುಡಿ. ಈ ಹುತಾತ್ಮರ್ ತೇಳ್ರೆ ಸ್ವಾತಂತ್ರಕಾಗಿ ಹೋರಾಡ್‌ದವು. ದೇಸಕಾಗಿ ಹೋರಾಡ್‌ದವರ್‍ನ ಹುತಾತ್ಮರ್ ತ ಕರ್‍ದವೆ. ಈಗ ನನ್ನ ವಿಸಯ ಏನ್ ತೇಳ್ರೆ -ಅಂತದೇನಾರ್ ವಿಸಯ ನೀವುಗೆ ಗೊತ್ತುಟಾತ? (ದೊಡಪ ಮಾಡ್ತಾಯಿದ್ದ ಕೆಲ್ಸನ ಒಮ್ಮೆಗೆ ನಿಲ್ಸಿತ್! ಗ್ಯಾನ ಮಾಡ್ತ್ -ತಲೆಗೆ ಕಟ್ಟಿದ ಚೆಕ್ಕ್ ವಸ್ತ್ರನ ಇನ್ನೂ ಗಟ್ಟಿ ಕಟ್ಟಿ ಸೊಂಟಕ್ಕೆ ಕೈ ಕೊಟ್ಟ್ ಗ್ಯಾನ ಮಾಡಿ ಹೇಳ್ದೆ...

ದೊಡಪ: ನೋಡು ಚಾಮಿ, ನಾನೇನೊ 2ನೇ ಕ್ಲಾಸ್ ಮಾತ್ರ ಓದಿದಂವ. ಆದರೆ ನಮ್ಮಪ್ಪನಪ್ಪ ತೇಳ್ರೆ ನನ್ನ ಚಾಂಪ ಆಗನೆ ನಾಕನೆ ಕ್ಲಾಸ್ ಓದಿ ಮಾಸ್ಟ್ರ ಕೆಲ್ಸ ಮಾಡ್ತಾಯಿದ್ದೊ ಗಡ! ಆಗನ ಕಾಲಲಿ ಇಸ್ಕೂಲುಗಳೇ ಇತ್ತ್‌ಲೆ. ಹೊಯ್ಗೆ ಮ್ಯಾಲೆ ಬೆರಳ್‌ನ ಹಿಡ್ಕಂಡ್ ಬರ್‍ಸ್ತಿದ್ದೊಗಡಾ. ಅದರ್‍ನ ಊರ್‍ಲಿರುವ ಹಾರೋವುತೇಳ್ರೆ ಬ್ರಾಹ್ಮಣರ್ ಮಾಡ್ತಾಯಿದ್ದೊ, ಅದ್ಕೆ ಐಗಳ ಮಠತ ಹೇಳಿದ್ದೊಗಡ. ಬ್ರಿಟಿಷ್‌ನವು ಬಂದ ಮ್ಯಾಲೆ ಸ್ಕೂಲ್‌ಗ ಆದೊ.

ಸ್ಕೂಲುಗೆ ಹೋಗಿ ಅಕ್ಷರ ಬರೆಯೊವ್ರ ಕಾಂಬಕಾದೊ ಅಂದ್‌ನ ಕಾಲಕ್ಕ 4 ನೇ ಕ್ಲಾಸ್ ಓದಿದ ನಮ್ಮ ಚಾಂಪ ಬಾರಿ ಹೆಸ್ರ್‌ವಾಸಿ ಎಂತೆಂತೊ ಕತೆಗಳ್‌ನ ಒಕ್ಕಲು ಹುಲ್ಲ ಕಟ್ಟ್‌ಕಾಕನ ಹೇಳ್ತಿದ್ದೊಗಡಾ.

ಚಾಮಿ : ಅತ್ ದೊಡಪ- ನಿಮ್ಮ ಚಾಂಪ ಹೆಂಗೆ ಹೇಳ್ದೊ ಹಂಗೆ ನಿಮಗೆ ಗೊತ್ತಿದ್ದಷ್ಟ್ ಹೇಳಿ.

ದೊಡಪ: ಅಗನ ಕಾಲಲಿ ಅವ್ರ ಮಡ್ಕೇರಿ ಅರಮನೆಲಿ ಕೆಲ್ಸ ಮಾಡ್ತಾಯಿದ್ದೊ ಗಡಾ. ಅಗೆಲ್ಲಾ ಅವ್ರ ನಡ್ಕಂಡ್ ಹೋಗ್‌ತಿತ್‌ಲೆ. ಕುದ್ರೆ ಮ್ಯಾಲೆ ಕುದ್ದೇ ಓಡಾಡಿ ಅಭ್ಯಸ. ಕುದ್‌ರೆಗಳಿಗೆ ಅಗನ ಕಾಲಲಿ ಬ್ರಿಟಿಸರ್ ಬ್ರಾಂಡಿ ಕುಡ್ಸ್‌ತಿದ್ದೊಗಡಾ. ಹಂಗೆ ಚಾಂಪನ ಕುದುರೆಗೂ ಕುಡ್ಸ್ ಜ್ಯಾಸ್ತಿ ಅಗಿ ಕುದುರೆ ಸಿಕ್ಕಾ ಬಟ್ಟೆ ಓಡ್‌ಗಡ್ತ. ಅಗ ಚಾಂಪ ಬಿದ್ದ್ ಕಾಲಿಗೆ ಪೆಟ್ಟಾದ ಮ್ಯಾಲೆ ಕುದ್ದಲ್ಲೇ ಇರ್ತಿದ್ದೊ ಗಡಾ. ಬಂದವರ ಹತ್ರೆಲ್ಲಾ ಅಂದ್‌ನ ಕತೆಗಳ್‌ನ ರಸ-ಕೂಡ್ಸಿ ಹೇಳ್ತಿದ್ದೊಗಡ. ಆ ಕತೆ ಕೇಳಿಕೆ ನೆರೆಮನೆವ್ರ ದಾರ್ಲಿ ಹೋಗೊವೆಲ್ಲಾ ಬಂದ್ ಇವರ ಕೆಲ್ಸಕೆ ಸೇರ್ಕಂಡ್ ಕೆಲ್ಸ ಮುಗ್ಸುವದೇ-ಗೊತ್ತಾತಿತ್‌ಲೆಗಡ.

ಚಾಮಿ : ದೊಡಪಾ ನಿಮ್ಮ ಕತೆ ಸೋಂದ್ರೆ ಬಾರಿ ಲಾಯ್ಕರೊಕು ಕಂಡದೆ. ನಿಮಗೆ ಮರೆವ್ರ ಜ್ಯಾಸ್ತಿ. ಅದ್ಕೆ ನೀವ್ರ ಹೇಳ್ದಂಗೆ ನಾನ್ ಬರ್ದನೆ. ನಾನ್ ಬಾಕನ ಬರೆಕೆ ಎಂತದು ತಾತ್‌ಲೆ. ನಿಮ್ಮ ಹತ್ರ ಬರೆಕೆ ಏನಾರ್ ಉಟ್ಟಾ ದೊಡಪಾ?

ದೊಡಪಾ : ಆ ಮ್ಯಾಜದ ಡ್ರಾದೊಳಗೆ ಕಾಗದ ಪೆನ್ನ್ ಇದ್ದರೆ ತಕ. ಹಿಂಗೆ ಎಂತಕಾರ್ ಬೇಕಾದು ತೇಳಿ ಪ್ಯಾಟೆಗೆ ಹೋಕನ ಕಾಗದ ತಂದ್ ಮಡ್ಕೊಂಬ ಅಭ್ಯಸ ನಂಗೆ. ನಂಗೆ ಮರೊತ್ತದು ಬ್ಯಾಗ. ಅದ್ಕೆ ಕೆಲು ವಿಸಯನೆಲ್ಲಾ ನಾನ್ ಬರ್ದೊಂಬದು. ನೋಡು ಚಾಮಿ, ನಾ ಹೇಳುವ ಕತೆ ನೀ ಬರೆವ ಕತೆ ಎಲ್ಲಾ ಕೂಡ್‌ಕನ ಒಂದು ವಳ್ಯ ಕೆಲ್ಸ ಮಾಡಿ ಉಳ್ಸದಂಗಾದು ಅಲ್ಲಾ?

ಚಾಮಿ : ಅತ್ ದೊಡಪ-ಇಂತ ವಿಸಯ ಎಲ್ಲವ್ರಕು ಗೊತ್ತಿರ್ದುಲಿ (ಮನ್ಸ್‌ಲಿ ದೊಡಪನ ಕಾಗದ ಹೊಗೆ ಹಿಡ್ಸ್‌ಟು ಈ ಹೊಗೆ ಅಷ್ಟ್ ಮನೆ ಹತ್ರ ಚೀಲದೊಳಗೆ ಹಾಕಿ ಮಡ್ಗಿರೆ ಹೆಂಗಾದು ವರವಿಲ್ಲೆ. ವಳ್ಯ ವಿಸಯ ಬರೆಕೆ ಏನಾಕು? ಮುಂದೆ ಹೇಳಿ ದೊಡಪ....

ದೊಡಪ ಕತೆ ಹೇಳಿಕೆ ಸುರು ಮಾಡ್ದೊ ಚಾಮಿ ಬರ್‌ಕಂಡದೆ. ದೊಡಪ ಭಾರತ ದೇಸಲಿ ಎಷ್ಟೋ ಜೆನ ಸ್ವತಂತ್ರಕಾಗಿ ಹೋರಾಡ್‌ದವ್ರವಳೊ. ಭಾರತ ಮತ್ತೆ ಭಾರತ ಸಂಸ್ಕೃತಿ ತೇಳ್ರೆ ಅಂದ್ ನಮ್ಮವ್ರಕೆ ಬಾರಿ ಅಭಿಮಾನ ಇತ್ತ್. ಬ್ರಿಟಿಸರ್ ಬಾಕೆ ಮುಂದೆ ಇಲ್ಲಿ ಬಾರಿ ಒಗ್ಗಟ್ಟ್ ಯಿತ್ತ್. ಆಗೊಳು ಕೊಡ್ಗ್‌ಲಿ ವೀರರ್ ಧೀರರ್ ಸ್ವಾಮಿ ಭಕ್ತರ್ ತೇಳಿಯಿದ್ದೊ. ಅಗ ಆದ ಒಂದು ಕತೆ ಬೆಳ್ಕಿಗೂ ಬಾತ್‌ಲೆ ನೋಡು.

ಚಾಮಿ : ಅದೆಂತದ್ ದೊಡಪ ಮುಂದೆ ಹೇಳಿ....

ದೊಡಪ: ಮಡ್ಕೇರಿ ಕ್ಯಾಟೆನ ಹಾಲೇರಿ ವಂಸದ ಲಿಂಗಾಯಿತ ರಾಜರ್ ಆಳ್ತಾಯಿದ್ದೊ. ಆ ಕಾಲದ ರಾಜರ ಆಡಳಿತ ಹೆಂಗಿದ್ರೂ ಪ್ರಜೆಗಳಿಗೆ ರಾಜನ ಮ್ಯಾಲೆ ಬಾರಿ ಭಕ್ತಿ, ಗೌರವಯಿತ್ತ್. ಪ್ರಜೆಗ ಬ್ರಿಟಿಸರ್‌ನ ಸಹಿಸದಾದೊ. ಬ್ರಿಟಿಸರ್‌ನ ಸ್ನೇಹ ಮಾಡ್ರೆ ಅಪಾಯ ಕಟ್ಟಿಟ್ಟದ್ದ್. ಚಿಕ್ಕ ವೀರರಾಜಂಗೆ ಅವ್ರ ಇವರ ರಾಜ್ಯಬಾರದ ವಿಸಯಕ್ಕೆ ಕೈ ಹಾಕುದು ಇಷ್ಟ ಇತ್ತ್‌ಲೆ.

ಚಾಮಿ : ಬ್ರಿಟಿಸರ್ ಇಲ್ಲಿಗೆ ಹೆಂಗೆ ಬಂದ್ ಸೇರ್ದೊತ ಗೊತ್ತುಟಾ ದೊಡಪಾ?

ದೊಡಪ: ಬ್ರಿಟಿಸರ್ ಬಾಕೆ ಮುಂದೆ ಕೊಡಗ್‌ನ ಮುಸ್ಲಿಮರ್ ತೇಳ್ರೆ ಟಿಪ್ಪು ಸುಲ್ತಾನ ಬಾರಿಸಲ ದಾಳಿ ಮಾಡಿ ಅವನ ಕಾಟ ತಡಿಯಕೆ ಜೊತ್ತದಾತ್, ಅದ್ಕೊ ಹಿಂದೆ ತಲ್‌ಚೇರಿಂದ ಬ್ರಿಟಿಸರ್ ಕೊಡ್ಗ್‌ನ ಲಿಂಗರಾಜನ ಸ್ನೇಹ ಬೆಳ್ಸಿಕಂಡ್ ಕೊಡ್ಗಿಗೆ ಬ್ಯಾಟೆಗೆ ತೇಳಿ ಬರ್ತಾಯಿದ್ದೊ. ಈ ರಾಜರೂ ಬ್ರಿಟಿಸರ್‌ನ ಆಗ ಗೌರವಂದ ಕಂಡೊ. ಹಂಗೆ ಬಂದಾಕನ ಇಲ್ಲಿನ ವನ ಸಂಪತ್ತ್ ಮತ್ತೆ ಪ್ರಕೃತಿ ಸೌಂದರ್ಯನ ಕಂಡ್ ಹಂಗಾರ್ ಮಾಡಿ ಕೊಡ್ಗ್‌ನ ನಮ್ಮ ವಸಕ್ಕೆ ತಕೊಣಕುತ ಮನ್ಸ್‌ಲೇ ಲೆಕ್ಕಾಚಾರ ಹಾಕಿದೊ. ಈ ಮುಸ್ಲಿಂಮರ್ನ ಓಡ್ಸಿಕ್ಕಾಗಿ ರಾಜ ಬ್ರಿಟಿಸರ ಸಹಾಯ ಪಡ್ಕಂಡತ್. ಹಿಂಗೆ ಇವ್ರು ಮಡಿಕೇರಿ ಕ್ಯಾಟೆಗೆ ನುಗ್ಗಿದೊ.

ಚಾಮಿ : ಇದ್ ಸುಮಾರ್ ಯಾವ ಸಮಯಲಿ ಆತ್‌ತ ಗೊತ್ತುಟಾ ದೊಡಪಾ?

ದೊಡಪ: ಗೊತ್ತಿಲ್ಲದೇನ್? ನಮ್ಮ ಚಾಂಪ ಕತೆನೆಲ್ಲಾ ಒಂದು ಪುಸ್ತಕಲಿ ಬರ್ದ್ ಮಡ್ಗಿದ್ದೊ. ಅದ್ ಅಪ್ಪನ ಚಿತ್ರದ ಕುತ್ತು ಪೆಟ್ಟಿಗೆ ವಳಗೆ ಇತ್ತ್. ಅಪ್ಪ ಸತ್ತ ಮ್ಯಾಲೆ ಪೆಟ್ಟಿಗೆ ಹುಡ್ಕ್ಯಾಕನ ಅಲ್ಲೊಂದು ಹೊಗೆ ಹಿಡ್ದ ಪುಸ್ತಕಯಿತ್ತ್. ಅದರ್ನ ತೆಗ್ದ್ ನಾನ್ ಓದಿ ತಿಳ್ಕಂಡದ್ ಹೈದಾ?
(ದೊಡಪ ಹೆಮ್ಮೆಯಿಂದ ಹೇಳಿ ನೆಗಾಡುವೆ)
ಚಾಮಿ ಗಂಭೀರಾಗಿ ಕತೆ ಕೇಳಿಕೆ ಕುದ್ದದೆ. ಹಿನ್ನೆಲೆ.... ಸಂಗೀತ....
: ದೊಡಪ ಕತೆ ಮುಂದುವರ್ಸಿದೆ.
ಸುಮಾರ್ 1834 ಏಪ್ರಿಲ್ ಸಂಜೆ 6 ಗಂಟೆ ಹೊತ್ತಿಗೆ ಮಡ್ಕೇರಿ ಕ್ಯಾಟೆನ ಬ್ರಿಟಿಸರ್ ವಸ ಪಡ್ಸಿಕಂಡ್ ಅಲ್ಲಿ ಅವರ ಬಾವುಟನ ಹಾರ್ಸಿದೊ. ಆಗ ಹಾಲೇರಿ ವಂಸದ ಚಿಕ್ಕ ವೀರರಾಜ ಅಲ್ಲಿ ಆಳ್‌ತಿತ್ತ್. ಮತ್ತೆ ಅವನೇ ಕೊಡಗ್‌ನ ಕೊನೆ ರಾಜನೂ ಆತ್. ಪಾಪ! ಬ್ರಿಟಿಸರ್ ವಳಗೊಳಗೆ ಇಲ್ಲಿನ ಕೆಲವ್ರುಕೆ ದುರಾಸೆ ತೋರ್ಸಿ ವಿಸ ಬೀಜ ಬಿತ್ತಿದೊ. ಹಿಂಗಾಗಿ ಇವ್ರು ಸುಲ್ಭಾಗಿ ಕೊಡ್ಗ್‌ನ ಗೆದ್ದ್ ಮಡ್ಕೇರಿ ಅರಮನೆನ ವಸಪಡ್ಸಿಕಂಡೊ. ಚಿಕ್ಕ ವೀರರಾಜಂಗೆ ಅವನ ಸಂಸಾರಕ್ಕೆ ಬೇಕಾಗುವಸ್ಟ್ ಪೆನ್ಸನ್ ಕೊಡ್ತ್ ಸಂಸಾರ ಸಮೇತ ಕಾಸಿಗೆ ಕಳ್ಸಿಕೊಟ್ಟೊ. ಅವನ ಉಪಾಯ ಮಾಡಿ ಅತ್ತ ಕಳ್ಸಿದ ಮ್ಯಾಲೆ ಕೊಡ್‌ಗ್‌ಲಿ ದೊರೆತನ ಇಲ್ಲದಾತ್, ಬ್ರಿಟಿಸರ್ ಈ ಮಡಿಕೇರಿ ಕ್ಯಾಟೆನ ವಸ ಪಡ್ಸಿಕೊಂಡ ಮ್ಯಾಲೆ ಇಲ್ಲಿಗೆ ಲಿಹಾರ್ಡ ತೇಳುವ ಒಬ್ಬ ಅಧಿಕಾರಿನ ನೇಮಿಸುವೆ. ಇವನೊ ಹ್ಯಾಟ್ ಬೂಟ್ ಹಾಕಿ ಪ್ರಜೆಗಳಿಗೆ ಬಾರಿ ಹಿಂಸೆ ಕೊಡ್ತಿತ್ತ್. ಕೊಡ್ಗ್‌ನ ಪ್ರಜೆಗಳಿಗೆ ಇಂವನ ತಲೆ ಕಂಡರೆ ಆತಿತ್‌ಲೆ!

ಚಾಮಿ : ಆಗ ಇಲ್ಲಿ ಯಾರು ವೀರರ್ ಧೀರರ್ ಇತ್ತ್‌ಲ್ಯೊ?

ದೊಡಪ: ಇಲ್ಲದೇನ್? ಆಗ ಕೊಡ್ಗ್ ದೇಸತ ಹೇಳ್ತಿದ್ದೊ-ಕೊಡ್ಗ್ ತೇಳ್ರೆ ಶ್ರೀರಂಗಪಟ್ಣಂದ ಹಿಡ್ದ್ ಪುತ್ತೂರು ಬೆಳ್ಳಾರೆಗೆ ಮುಟ್ಟಿ ಇತ್ತ್. ಇಂದ್‌ನಂಗೆ ಕೊಡ್ಗ್‌ಲಿ ಬರೀ ಮೂರು ತಾಲೋಕುತ ಇತ್ತ್‌ಲೆ. ದೊಡ್ಡ ದೇಸತ ಹೇಳ್ತಿದ್ದೊ. ಹಂಗೆ ಸುಳ್ಯ ಸೀಮೆತ ಸಹ ಹೇಳ್‌ತಿದ್ದೊ. ಈ ಸುಳ್ಯ ಸೀಮೇಲಿ ಹೆಚ್ಚಿನ ಸಂಕೆಲಿ ಗೌಡ ಜನ ನೆಲ್ಸಿದ್ದೊ. ಅಲ್ಲಿಂದ ಬಂದ್ ಕೊಡ್ಗ್‌ನ ಬಲಮುರಿ ತೇಳುವ ಜಾಗಲಿ ನೆಲೆ ನಿತ್ತಿದ್ದ ಗುಡ್ಡೆಮನೆ ಅಪ್ಪಯ್ಯಗೌಡ ತೇಳಂವ ಅರಸರ ಕಾಲಲಿ ಜಮೆದಾರ ಆಗಿ ಕೆಲ್ಸ ಮಾಡ್ತಾಯಿತ್ತ್. ಬ್ರಿಟಿಸ್ ಸರ್ಕಾರ ಈಗ ಅಂವನ ಸುಭೇದಾರ್ ತೇಳಿ ತಕಂಡಿದ್ದೊ. ಸ್ವೊಲ್ಪ ಸಮಯ ಅವರ ಆಡಳ್‌ತಲ್ಲಿದ್ದ ಅಪ್ಪಯ್ಯ ಗೌಡಂಗೆ ಬಾರಿ ಬೇಜಾರ ಆಗಿ ಈ ಬ್ರಿಟಿಸರ್‌ನ ಹಂಗಾರ್ ಓಡ್ಸಿ ಮಡ್ಕೇರಿ ಕ್ಯಾಟೆಲಿ

ಹಾಲೇರಿ ಅರಸರ ಒಡೆತನನ ಪುನಃ ತರೊಕು ತೇಳಿ ಮಸ್ಸ್ ಗಟ್ಟಿ ಮಾಡಿ ಇಂವ ಸುಭೇದಾರ ಕೆಲ್ಸನ ಬುಟ್ಟಿತ್. ಚಿಕ್ಕವೀರರಾಜನ ಶಾಶ್ವತ ಆಗಿ ಕಾಶಿಗೆ ಕಳ್ಸಿದ ವಿಚಾರ ಕೆಲು ಜನತೇಳ್ರೆ . ಪುಟ್ಟ ಬಸವರಾಜು, ಹುಲಿಕುಂದ ನಂಜಯ್ಯ, ಚೆಟ್ಟಿ ಕುಡಿಯ, ಕುರ್ತುಕುಡಿಯ, ಗುಡ್ಡೆಮನೆ ಅಪ್ಪಯ್ಯ ಗೌಡ. ಸೋಮಯ್ಯ, ಮಾಚಯ್ಯ ತೇಳುವವ್ರಕೆ ಗೊತ್ತಿತ್, ಪ್ರಜೆಗಳಿಗೆ ಗೊತ್ತಿತ್‌ಲೆ. ಅಂವ ಪುನಃ ಬಂದದೆ ತೇಳಿ ಪ್ರಜೆಗ ಗ್ಯಾನ ಮಾಡಿಕಂಡ್ ಭಾರಿ ದುಃಖಿಲಿ ಬೀಳ್ದೊಟ್ಟೊ. ಹಿಂಗೆ ಇವೆಲ್ಲವೂ ಸನ ಒಟ್ಟಾಗಿ ಸೇರ್ದೊ. ಮುಂದೆ ಏನೇನ್ ಮಾಡೊಕು ತೇಳಿ ಒಳಗೊಳಗೆ ಉಪಾಯ ಮಾಡ್ತಾಯಿದ್ದೊ. ಆಗನ ಕಾಲಲಿ ಸುಳ್ಯಂದ ಮಡ್ಕೇರಿ ಅರಮನೆಗ ಬರೊಕುತಾದರೆ ಕಾಲ್‌ದಾರಿಲಿ ನಡ್ಕಂಡ್ ಅಲ್ಲರೆ ಕುದ್ರೆ ಮ್ಯಾಲೆ ಕುದ್ದ್ ಕುಂದುರುಮೊಟ್ಟೆ ಹತ್ತಿ ಬರಕಾಗಿತ್. ಆ ಮೊಟ್ಟೆನ ಪ್ರತಿಯೊಬ್ಬನೂ ಹತ್ತಿ ಬಂದ್ ಇಳ್ದ್ ಹೋತಿದ್ದೊ. ದಾರಿ ಬಾರಿ ಕಠಿಣದ ಕಾಡ್ ದಾರಿ ಆಗಿತ್ ಅಂದ್.

ಚಾಮಿ ಈ ಅಪ್ಪಯ್ಯ ಗೌಡನೊಟ್ಟಿಗೆ ಇನ್ಯಾರಾರಿದ್ದೊ ಗೊತ್ತುಟಾ

ದೊಡಪ ಇವನೊಟ್ಟಿಗೆ ಇನ್ನೂ ಕೆಲುಜೆನ ದೊಡ್ಡ ಮುಕಂಡರಿದ್ದೊ. ಆಗನ ಕಾಲಲಿ ಯುದ್ಧ ಯಾಗ ಆದೆತ ಗೊತ್ತಿತ್‌ಲೆ. ಅದ್ಕೆ ರೈತರ್ ಸಹ ಸೈನಿಕರಂಗೆ ತಯಾರಾಗಿರ್ತಿದ್ದೊ. ಇವಲ್ಲದೆ ಹೆಚ್ಚಿನ ಕೊಡ್ಗನವ್ರು ಸೇರ್ದೊ. ಇವರೆಲ್ಲರವರ ಗುರಿ ಸಹ ಒಂದೇ ಒಂದು ಈ ಬ್ರಿಟಿಸರ್‌ನ ಓಡ್ಸಿ ಮುಂದೆ ಹಾಲೇರಿ ಅರಸು ಮನೆತನದವರ್ನ ಸಿಂಹಾಸನಲಿ ಕೂರ್ಸೊಕುತ.

ಚಾಮಿ ಇದ್ಕೆ ಇನ್ನೂ ಮುಖ್ಯ ಕಾರಣ ಏನಾರ್ ಗೊತ್ತುಟಾ ದೊಡಪ

ದೊಡಪ ಬ್ರಿಟಿಸ್‌ನವ್ರಕೆ ಕೊಡ್ಗನ ಅರಣ್ಯ ಕಾಡ್‌ಲಿ ಓಡಾಡಿಕೆ ಕಷ್ಟ ಆತ್. ಇವ್ರು ಉಪ್ಪು ಹೊಸೆಪ್ರುಗೆ ಸನ ಸುಂಕ ಹಾಕಿದೊ. ಅವರ ಆಡಳ್ತದ ಅನ್‌ಕೂಲಕ್ಕಾಗಿ ಸುಳ್ಯ ಸೀಮೆನ ದಕ್ಷಿಣ ಕನ್ನಡದ ಮಂಗ್ಳೂರಿಗೆ ಸೇರ್ಸಿದೊ. ಅದ್ಕಿಂತ ಮುಂದೆ ಸುಳ್ಯದ ರೈತರ್ ತೆರಿಗೆ ರೂಪಲಿ ಭತ್ತ ಅಥವಾ ಇತರ ದಾನ್ಯಗಳ್‌ನ ಎತ್ತ್‌ಗಳ ಬೆನ್ನ್ ಮ್ಯಾಲೆ ಹೇರ್‌ಕಟ್ಟಿ, ಹೊರ್ಸಿ ಮಡ್ಕೇರಿ ಅರಮನೆಗೆ ತರುವ ಪದ್ಧತಿಯಿತ್. ಬ್ರಿಟಿಸರ್ ಹೇಳ್ದೊ. ನೋಡಿ ರೈತರೆ, ನಮಿಗೆ ನೀವು ಬೆಳ್ಸಿದ ಧಾನ್ಯ ಬ್ಯಾಡ. ಅದ್ರ ಬದ್ಲಿಗೆ ದುಡ್ಡುನ ರೂಪಲಿ ತೆರಿಗೆ ಕೊಡಿತ! ಇದ್‌ರ್‌ಂದ ರೈತರ್‌ಗೆ ಬಾರೀ ಬ್ಯಾಜರ ಆಗಿ ಸಿಟ್ಟ್ ಸಹ ಬಾತ್. ಆಗ ಒಂದು ಬಟ್ಟಿ ಭತ್ತಕ್ಕೆ ಬರೀ ' ರೂ. 1 ರೂ. ಇತ್ತ್‌ಗಡ. ಹಿಂಗಾಗಿ ಸುಳ್ಯದ ರೈತರ್ ಎಲ್ಲ ಸೇರಿಕಂಡ್ ದಂಗೆ ಏಳಿಕೆ ಕಾರಣ ಆತ್‌ತ ಚರಿತ್ರೆ ಇಂದಿಗೂ ಹೇಳ್ತೆ.

ಚಾಮಿ ಆಗ ಎಷ್ಟ್ ಕಷ್ಟ ಇದ್ದಿರೊಕು ಜೆನಕೆ ಅಲಾ. ದೊಡಪಾ! ಈ ಕತೆ ಇನ್ನೆಷ್ಟುಟ್ಟು ದೊಡಪಾ!

ದೊಡಪ ಈಗ ನೀನ್ ಎಲ್ಲಿಗೆ ಮುಟ್ಟಿ ಬರ್ದು! ಹ್‌ಂ, ಈಗ ಈ ತಂಡದ ನಾಯಕ ಆಗಿ ಅಪ್ಪಯ್ಯ ಗೌಡನ ಬುಟ್ಟೊ, ಇಂವಂಗೆ ಸುಭೇದಾರ ಆಗಿದ್ದ ಅನುಭವ, ಅರಸನ ಜಮೆದಾರ ಆಗಿದ್ದ ಅನುಭವ ಇತ್. ಇಂವನ ಹಿಂದೆ ಕಲ್ಯಾಣ ಸ್ವಾಮಿ, ರಾಮ ಗೌಡ, ನಂಜಯ್ಯ, ಸೋಮಯ್ಯ ಸೇರಿ ಒಟ್ಟಿಗೆ ಕೊಡ್ಗನ ' ! ಜನ ಬ್ಯಾರೆ ಬ್ಯಾರೆ ಜನಾಂಗದ ವೀರ ಮುಖಂಡರಿದ್ದೊ ಮತ್ತೆ ಚೆಟ್ಟಿಕುಡಿಯ ಕುರ್ತು ಕುಡಿಯ ತೇಳುವ ಇಬ್ಬರು ಅಂಗ ರಕ್ಷಕರಿದ್ದೊ. ಈ ತಂಡದ ಸೈನ್ಯ ಸೇರಿ ಒಟ್ಟಿಗೆ ಮಂಗ್‌ಳೂರ್ ಕಡೆಗೆ ಹೊರ್ಟತ್. ಆಗ ಲಕ್ಷ್ಮೀ ನಾರಾಯಣ ಸೈನ್ಯ ತೇಳುವ ಒಬ್ಬ ದಿವಾನ ಅಮರ ಸುಳ್ಯದ ರೈತರಿಗೆ ಭಾರಿ ಕಾಟ ಕೊಡ್‌ತ್ತಿತ್. ಈ ಸೈನ್ಯ

ಇಂವನ ಸೊಂಟನ ಮುರ್ಟ್ ಹಾಕಿ ಅಲ್ಲಿಗೆ ಸುಭೇದಾರ್ ತಿಮ್ಮಪ್ಪಯ್ಯ ತೇಳುವವನ ಕೂರ್ಸಿದೊ. ಬೆಳ್ಳಾರೆ ಪುತ್ತೂರು ಪೂರ್ತಿ ಇವರ ವಸ ಆತ್. ಮತ್ತೆ ರಭಸಂದ ಈ ಸೈನ್ಯ ಮಂಗ್ಳೂರ್ ಕಡೆ ಹೊರ್ಟ್ಟತ್. ಆಗ ಅಲ್ಲಿದ್ದ ಬ್ರಿಟಿಸರ್ ಇವರ ದಂಡ್ ನೋಡಿ ಹೆದ್‌ರಿ ತಲ್ಚೇರಿಗೆ ಓಡಿ ಹೋದೊ. ಮಂಗಳೂರ್‌ಲಿದ್ದ ಖಜಾನೆ ಇವರ ಕೈವಸ ಆತ್.

ಚಾಮಿ ದೊಡಪ ಕುಡಿಯಕೆ ನೀರ್ ತಕಣೆ. ಕತೆ ಹೇಳಿ ಸುಸ್ತಾ ಗುಟ್ಟು ನೀವುಗೆ

ದೊಡಪ ಮದ್ಯ ಮಾತಾಡ್ ಬಡ ನೋಡು. ಈಗ ಈ ವಿಸಯ ಜೆನಕೆಲ್ಲ ಗೊತ್ತಾಗಿ ಬ್ರಿಟಿಸರ್‌ನ ಓಡ್ಸಿಕೆ ಜನ ನಾಪ್ರೋಕ್ಲು, ಭಾಗಮಂಡ್ಲ ಕಡೆಂದ ಓಡೋಡಿ ಬಂದೊ. ಇವೆಲ್ಲವೂ ಸಾವ್ರಾರು ಜೆನ ಕತ್ತಿ ಕೋವಿ ಇನ್ನೂ ಎಂತೆಂತದೊ ಆಯುಧಗಳನ ದೊಣ್ಣೆ ಬಡ್ಗಿ ತಕಂಡ್ ದಾರ್ಲಿ ಸಿಕ್ಕಿದ ಬ್ರಿಟಿಸರ್‌ನ ತಲೆ ಕಂಡಲ್ಲಿ ಕಡ್ಕ್ಯಂಡ್ ಹೊರ್ಟ್ರೊ. ಆಗ ಬ್ರಿಟಿಸ್‌ನವುಕೆ ನಿಜಾಗಿ ಹೆದ್ರಿಕೆ ಆತ್. ಆಗ ಅವು ಗುಳ್ಳೇನರಿ ಕುರ್ಕ ನಂಗೆ ಒಂದು ಹೊಸ ಆಲೋಚನೆ ಮಾಡ್ರೊ. ದೊಡ್ಡ ಪದವಿಲಿ ಇರೊರ್ನ ವಳ್ಳದ್ ಮಾಡ್‌ಕಂಡ್ ಇಲ್ಲಿನವರ್ನ ಚೂಬುಟ್ರೊ ಈ ದಂಡ್‌ನ ಮುಖ್ಯಸ್ತ ಅಪ್ಪಯ್ಯ ಗೌಡನ ಹಿಡ್ಡ್ ಕೊಟ್ಟವುಕೆ ಹತ್ತ್ ಸಾವಿರ (10) ಸಾವಿರ ರೂ. ಕೊಟ್ಟವೆ ತೇಳಿ ಘೋಸಣೆ ಮಾಡ್ರೊ. ಗ್ಯಾನ ಮಾಡ್ ಅಂದ್‌ನ ಕಾಲಕ್ಕೆ ಅವನ ತಲೆಗೆ ಬೆಲೆ ಎಷ್ಟಿತ್ತ್‌ತ. ಹಿಂಗೆ ನಮ್ಮವರ ಕೈಲೇ. ಅವನ ಹಿಡ್ಡ್ ಕೊಡದರೆ ನಿಮಿಗೂ ಗುಂಡು ಹೊಡ್ಡವೆತ ಎದೆಗೆ ಗುರಿ ತೋರ್ಸಿ ಹೆದ್ರಿಸಿದೊ. ಹಿಂಗೆ ಅಣ್ಣ ತಮ್ಮಂದರಂಗಿದ್ದ ಕೊಡಗರ್ನ ಗೌಡುಗಳ್ನ ಬ್ಯಾರೆ ಬ್ಯಾರೆ ಮಾಡ್ರೊ. ಇವರ ಕಾರ್ಯಕ್ಕೆ ಉಪಯೋಗ್‌ಸಿ ಕಂಡ್ ಕೆಲ್ಸ ಮುಗ್ದ ಮ್ಯಾಲೆ ಅವರ್ನೂ ಕೊಂದೊ.

ಚಾಮಿ ನಿಶಬ್ದ ಪಾಪ... (ಕತೆ ಮುಂದುವರ್ದದೆ)

ಅಪ್ಪಯ್ಯ ಗೌಡ ಜಾರಿ ಸೂರತನಲಿ ಹೋರಾಡ್ತ. ಮಡ್ಕೇರಿಗೆ 4 ಮೈಲ್ ದೂರದ ಕಾಟಿಗೇರಿತೇಳುವಲ್ಲಿ ಸೆರೆಸಿಕ್ತ. ಉಳ್ಳ ಕಡೆ ಎಲ್ಲಾ ಗೆದ್ದ್ ಬಂದ್ ಮಡ್ಕೇರಿ ಕ್ವಾಟೆ ಮಾತ್ರ ಬಾಕಿ ಇತ್ತ್. ಹಿಂಗೆ ಭಾಗಮಂಡ್ಲ ಕಡೆಂದ ಬಂದವು ಕಾಟಿಗೇರಿ ಹತ್ರ ಹಿಡ್ಡೊತ ಹೇಳುವೆ. ಇಂವನ ಹಿಡ್ದ್ ತಂದ್ ಮಡ್ಕೇರಿ ಕ್ವಾಟೆ ಎದ್‌ರ್ ಎತ್ತರ ಸ್ಥಳಲಿ ನೇಣುಗಂಬಕೆ ಏರ್ಸಿದೊ. ಕಲ್ಯಾಣಪ್ಪ ರಾಮಗೌಡನ ಮಂಗಳೂರ್‌ನ ಬಿಕ್ರನಕಟ್ಟೆಲಿ ಗಲ್ಲಿಗೇರ್ಸಿದೊ. ಉಳ್ಳೊವುಕೆ ಜೀವಾವಧಿ ಶಿಕ್ಷೆ ಕೊಟ್ಟ್ ಗಡಿಪಾರ್ ಮಾಡ್ದ ಪಳ್‌ಮೆ ಅಂದ್ ಇತ್ತ್.

ಚಾಮಿ ಇದ್ ಸುಮಾರ್ ಯಾಗ ಆತ್‌ತ ಗೊತ್ತುಟಾ ದೊಡಪಾ

ದೊಡಪ ಇದ್ ಸುಮಾರ್ 1837 ಅಕ್ಟೋಬರ್ 31 ರ ಹೊತ್ತಾರೆ 10 ಗಂಟೆಗೆತ ಬರ್‌ಕಂಡುಟ್ಟು. ಆ ದಿನ ಹೊತಾರೆ 10 ಗಂಟೆಗೆ ಊರುನಾಡ್ ಪಟೇಲರ್‌ಗಳ್ನ ಮುಖ್ಯಸ್ಥರ್ನೆಲ್ಲಾ ಕರ್ಸಿ ಅವರ ಕೈಲಿದ್ದ ಆಯುಧಗಳ್‌ನ ಅವರ ಕಾಲ್‌ಕೆಳ್‌ಗೆ ಮಡ್ಗಿಸಿ ಶರಣಾಗುವಂಗೆ ಮಾಡ್ರೊ ಇನ್ನ್ ಮುಂದೆ ನೀವೆಲ್ಲಾ ನಮ್ಮ ಅಡಿಯಾಳಾಗಿರೊಕುತ ನಮ್ಮ ಎದ್‌ರ್ ತಿರ್ಗಿ ನಿಲ್ಲಿಕಾಗದ್‌ತ್ ಪ್ರಜೆಗಳ ಕಣ್ಮುಂದೆ ಗಲ್ಲಿ ಗೇರ್ಸಿ ಈ ಭೀಕರ ದೃಶ್ಯನ ಪ್ರತಿಯೊಬ್ಬ ನೋಡುವಂಗೆ ಮಾಡ್ರೊ. ಹಂಗೆ ಇವೆಲ್ಲವು ಈ ಕರ್‌ಳ್ ಕತ್‌ಸುವ ದೃಶ್ಯನ ನೋಡಿ ಕಣ್ಣೀರ್ ಸೊರ್ಸಿದೊ. ಅಂದ್‌ಂದ ಬ್ರಿಟಿಸರ್ ಕೊಡಗ್‌ನ ನೂರು (100) ವರ್ಷ ಆಳ್ರೊ. ಅವರ ಸಂಸ್ಕೃತಿನ ಇಲ್ಲಿ ಬುಟ್ಟ್ ಹೋದೊ.

ಚಾಮಿ ಎಂತಹ ಅನ್ಯಾಯ ! ಈ ಕತೆನ ಕೇಳಿ ಚಾಮಿ ಬೇಚಾರಲಿಸೊಲ್ಪ ಹೊತ್ತು ಕುದ್ದ್ ಮತ್ತೆ ಹೇಳ್ತ್ ಅಲ್ಲಾ ಇಂತ ಕತೆಗ ಬೆಳ್‌ಕಿಗೆ ಯಾಕೆ ಬಾತ್‌ಲೆತ! ಗ್ಯಾನ ಮಾಡ್ದೆ.

ಆಗ ಅವರ ವಯಸ್ ಎಷ್ಟಿತ್ತ್ತ ಗೊತುಟಾ ದೊಡಪಾ!

ದೊಡಪ ಅವರ ಮತ್ತೆ ಅವರ ಕೂಟುನವು ತೀರಾ 40-45 ರೊಳಗೆ ವಯಸ್‌ನವು ಆಗಿದ್ದೊ . ಎಲ್ಲಾ 13 ಜನ ಧೀರರ್ ಸನ ಒಮ್ಮೆಗೆ ಹೋದೊ.

ಅಪ್ಪಯ್ಯ ಗೌಡನ ಕುಟುಂಬದವು ಸುಳ್ಯಂದ ಬಂದ್ ಬಲಂಬೇರಿಲಿ ಈಗನ ಮಡ್ಕೇರಿ ತಾಲೋಕು ಬಲಮುರಿ ಗ್ರಾಮ ನೆಲ್ಸಿದ್ದೊ ಇವುಕೆ ಸೋಲು ಆದೆತ ಗೊತ್ತಾಗಿ ರಾತ್ರೊ ರಾತ್ರೆ ಬಲಮುರಿಗೆ ಹೋಗಿ ಹೆಣ್ಣ್‌ನ ಒಬ್ಬಳೇ ಮಗಳ್ನ ಅವರ ಅಣ್ಣ ತಮ್ಮಂದ್ರ್‌ಗೆ ಒಪ್ಪ್ಸಿ ಅವುಕೆ ಜೀವನಾಂಶಕ್ಕೆ ತೊಂದರೆ ಆಗದಂಗೆ ಮಾಡಿ ಮತ್ತೆ ಬಂದ್ ಬ್ರಿಟಿಸರ ಕೈಗೆ ಸಿಕ್ಕಾಕಂಡೊ. ನೇಣಿಗೆ ಏರ್ಸುವ ದಿನ ಹೆಣ್ಣ್‌ನ ಮಗಳ ಸಹ ಕರ್ಸಿದ್ದೊ. ಆಗ ಅಪ್ಪಯ್ಯ ಗೌಡ ಬೆಳಿ ಕುಪ್ಪಸ ದಟ್ಟಿ ಕಟ್ಟಿ ತಲೆಗೆ ಜರಿ ರುಮಾಲ್ ಜಿಗ್ದ್ ಮತ್ತೆ ಅವರ ಹೆಣ್ಣ್ ಅಕ್ಕವ್ವ ತೇಳೊವು ಧಾರೆಸೀರೆ, ಉದ್ದ್ ಕೈರವುಕೆ, ಕೋರ್ ವಸ್ತ್ರ ಕಟ್ಟಿ ಮುಂದೆ ನೆರಿಗೆ ಸೀರೆಲಿ ಗೇಂಟಿ ಕಟ್ಟಿದ್ದೊಗಡ. ಇದ್ ಆಗನ ಮದುವೆ ಉಡ್ಪು ಆಗಿತ್ತ್. ಅವರ ಮಗ್ಳು ಪ್ರೇಮ ಬರೀ ಹತ್ತ್ ವರ್ಸದ ಗೂಡೆ ಆಗಿತ್ತ್‌ಗಡ. ಆಗನ ಕಾಲಲಿ ಎಲ್ಲಿ ಹೋದರೂ ಗೌಡ ಹೆಣ್ಣ್‌ಜೆನ ಅದೇ ಉಡ್ಪುಲಿ ಹೋತಿದ್ದೊಗಡ. ಈಗನಂಗೆ ಕನ್ನಾಡಸೀರೆ ಉಡ್ತಾ ಇತ್ತ್‌ಲೆ.

ಚಾಮಿ ಮತ್ತೇನಾತ್ ದೊಡಪ!

ಅಂತೂ ಈ ದಂಗೆಲಿ ಬ್ರಿಟಿಸ್‌ನವುಕೆ ಸಹಾಯ ಮಾಡ್ದವುಕೆಲ್ಲಾ ಬಾರಿ ಬಾರಿ ಬಹುಮಾನ ಒಟಿಕತ್ತ್. ಕೋವಿ ಚಿನ್ನದ ಪದಕ ಚಿನ್ನದ ಪೀಚೆಕತ್ತಿ. ಮೂರು ತಲೆಮಾರ್‌ಗಾಗುವಷ್ಟು ಉಂಬಳಿ ಆಸ್ತಿ ಕೊಟ್ಟೊ. ಹಿಂಗೆ ಸುಳ್ಯದ ಗೌಡರ ಮ್ಯಾಲೆ ಬ್ರಿಟಿಸರ್ ಸಿಟ್ಟಾಗಿ ಇವರ್ನ ತುಳ್ದ್ ಬುಟ್ಟೊ. ಆಕಡೆ ರಸ್ತೆ . ಸೇತುವೆ . ಸ್ಕೂಲು. ಆಸ್ಪತ್ರೆ ಎಂತದು ಮಾಡ್ತ್‌ಲೆ. ಹಂಗೆ ಅಲ್ಲಿನ ಜೆನ ಬ್ರಿಟಿಸರ್ ಇದ್ದಷ್ಟ್ ದಿನ ವಳ್ಳದಾತ್‌ಲೆ. ಮುಂದೆ ಬ್ರಿಟಿಸರ್ ಕೊಡ್ಗ್‌ನ ನೂರು ವರ್ಸ ಸುಖವಾಗಿ ಆಳಿ . ಅವರ ಪದ್ಧತಿನೆಲ್ಲಾ ಇಲ್ಲಿ ಬುಟ್ಟ್ ಹೋದೊ. ಅಲ್ಲದೆ ಚರಿತ್ರೆಲಿ ಇದ್ದ್ ಅಮರ ಸುಳ್ಯದ ರೈತರ ದಂಗೆತೇಳಿ ಹೆಸ್ರಾತ್.

ನಿರೂಪಣೆ ಕತೆ ಕೇಳಿ ಮುಗೆಕಾಕಾನ ದೊಡಪನ ಮೊಕ ಕಂದಿ ಹೋಗಿತ್ತ್. ಒಂದು ಚಾಲೆಮುಂಡು ತಸ್ನಿತ ಅಲ್ಲಿದ್ದವುಕೆ ಹೇಳ್ತ್. ಇದ್ಯಾಕಪ್ಪತ ನೋಡ್‌ಕಾಕನ ಚಾಲೆಮುಂಡು ತೆಗ್ದ್ ಕುತ್ತಿಗೆಗೆ ನೇಣ್ ಜಿಗ್ದ್. ಸತ್ತಂಗೆ ಆಡಿ ತೋರ್ಸಿತ್. ದೊಡಪನ ಕಣ್ಣ್‌ಲಿ ನೀರ್ ಸೊರಿತಾ ಇತ್ತ್. ಕತೆ ಕೇಳಿ ನಂಗೂ ಮನ್ಸ್‌ಕಲ್ಲಾತ್. ಆದರೂ ವಳ್ಳ ಕತೆ ಸಿಕ್ತ್ತ ಕುಸೀನೂ ಆತ್. ಈ ಅಪ್ಪಯ್ಯಗೌಡ ದೊಡಪನ ಸ್ವಂತ ನೆಂಟ್ರ ಸಂಬಂಧಿ ಆಗಿದ್ದೊಗಡಾ. ಅಂತೂ ಈ ಸಲ ನಂಗೆ ಬಹುಮಾನ ಬಂದೇ ಬರೋಕುತ ಚಾಮಿ ಮನೆಕಡೆ ಹೊರ್ಟದೆ.

ಅದರ ಸಾಕ್ಷಿಗೆ ಇಂದಿಗೂ ಮಡಿಕೇರಿ ಗೌಡ ಸಮಾಜಕ್ಕೆ ಹೋಗುವ ದಾರಿಗೆ ಗುಡ್ಡೆಮನೆ ಅಪ್ಪಯ್ಯಗೌಡ ರಸ್ತೆ ತೇಳಿ ಕಲ್ಲ್‌ಲಿ ಬರ್ದ್ ಮಡ್‌ಗ್ಯೊಳೊ.

ಹಿರಿಯವುಕೆ ಅರ್ಪಣೆ ಮತ್ತೆ ಸ್ಮರಣೆ

ಬನ್ನಿ ಬನ್ನಿ ಕೊಡ್ಗ್‌ನಾ ವೀರಮಕ್ಕಳೇ
ಕೊಡ್ಗ್‌ನಾ ಏಳ್ಗೆಗಾಗಿ ತನುಮನನಾ ಅರ್ಪ್‌ಸೊನಾ
ಕೊಡ್ಗ್‌ನಾಡ್‌ಲೇ ಜಯಭೇರಿ ಮೊಳ್ಗ್‌ಸೊನಾ....
ಕಾವೇರಮ್ಮನ ಪಾದಸೇವೆ ಬೇಕುತೇಳಿ ಬೇಡೊನಾ
ಕೊಡ್ಗ್‌ನಾ ಹಿರಿಮೆನ ದಸದಿಕ್ಕಿಗೂ ಹಬ್ಬ್‌ಸೊನಾ
ಕೊಡ್ಗ್‌ನಾ ಅರೆಗನ್ನಡ ಬಾಸೆ ಕಸ್ತೂರಿನಂಗೆ
ಕೊಡ್ಗ್‌ನಾ ನಾಡಿದ್ ನಂದನ ಬನದಂಗೆ
ಕೊಡ್ಗ್‌ನವರ ಹೃದಯಲಿ ಕರುಣೆ ಬಾರಿ ಉಟ್ಟುಗಡಾ
ಕೊಡ್ಗ್‌ನಾ ನಾಡ್ ಇದ್ ವನಸಿರಿನ ತೌರುಗಡಾ....॥
ಹಾಲೇರಿ ವಂಸದಾ ಜಂಗಮಾ ಮುದ್ದುರಾಜ ದೊರೆಯಾದೊ
ಕೊಡ್ಗ್ ನಾಡ್‌ನ ಏಕತೆಗೆ ಮೂಲಕಾರಣರಾದೊ
ದೊಡ್ಡ ವೀರಪ್ಪಾ ವೀರರಾಜೇಂದ್ರ ಲಿಂಗರಾಜ ಒಡೆಯರ್
ಕೊಡ್ಗ್‌ನಾಡ್‌ನ ರಕ್ಷಣೆಗೆ ಎದೆ ತಟ್ಟಿ ನಿತ್ತೊ ಅವ್ರ
ಗುಡ್ಡೆಮನೆ ಅಪ್ಪಯ್ಯ ಗೌಡ ಕೆದಂಬಾಡಿ ರಾಮಯ್ಯಗೌಡ
ಚೆಟ್ಟಿ ಕುಡಿಯ ಕರ್ತು ಕುಡಿಯ ಹೋರಾಡ್ಡ ನಾಡ್ ಇದ್....
ಆಂಗ್ಲ ಸಾಮ್ರಾಜ್ಯನ ಬೀಳ್ಸುವ ಕನ್ಸ್ ಕಂಡೊ ಕ್ರಾಂತಿಕಾರರ್
ಸಿಂಹ ಸ್ವಪ್ನದಂಗೆ ಅವ್ರ ವೀರಸ್ವರ್ಗ ಪಡ್ದೊ ಬನ್ನಿ
ಉಂಬಳಿ ಜಮ್ಮ ಭೂಮಿ ಹಾಲೇರಿ ರಾಜರ್ ಕೊಟ್ಟೊ
ಕೊಟ್ಟ ಭೂಮಿ ಪರಮಾನ್ನ ತೇಳಿ ಗೌಡ್ರ ತಿಳ್ದೊ
ಸ್ವಂತಿಕೆಗೆ ತನುಮನನಾ ಅರ್ಪಿಸಿದೊ ಇವ್ರ ಇವ್ರ ಕಷ್ಟ ಪಟ್ಟ್ ದುಡ್ದೊ
ಮೆರ್ದೊ ಜೆನ ದೇಸಸೇವೆ ಮಾಡ್‌ತಿದ್ದೊವ್ರ
ಧೀರ ವೀರ ಸೇನಾನಿ ತಿಮ್ಮಯ್ಯ ಕಾರ್ಯಪ್ಪ
ಕೀರ್ತಿ ತಂದೊ ನಮ್ಮ ನಾಡ್‌ಗೆ ಕೊಡ್ಗ್‌ನಾಡ್‌ಗೆ ಕೊಡ್ಗ್‌ನಾಡ್‌ಗೆ
ಬನ್ನಿ ಬನ್ನಿ ಕೊಡ್ಗ್‌ನಾ ವೀರಮಕ್ಕಳೇ

ಹೊನ್ನಮ್ಮನ ಕೆರೆ

ಗುಂಪು ಹಾಡ್

ತುಂಬಿ ತುಂಬಿ ನೀರ್ತುಂಬಿ ಕೆರೆ ತುಂಬಿತ್
ತುಂಬಿ . ತುಂಬಿ ಕುಸಿ ತುಂಬಿತ್ ತುಂಬಿ ತುಂಬಿ ದುಕ್ಕ ತುಂಬಿತ್
ತುಂಬಿ ತುಂಬಿ ನೀರ್ ತುಂಬಿತ್. ಕೆರೆ ತುಂಬಿತ್ . ಕೆರೆ ತುಂಬಿತ್
ಹತ್ತೂರು ಮುತ್ತೂರು। ಸುತ್ತೂರು ಸಿರಿಪೂರು.....।।
ಹಸ್‌ರಾದ ಹೊನ್ನೂರು। ಹೆಸ್‌ರಿಗೆ ನವುಲೂರು।
ಸೊಸೆ ಮುದ್ದು ಹೊನ್ನಮ್ಮಾ ಗಂಡತೇಳ್ರೆ ಶಿವರಾಯಾ..ಆ...ಆ...ಆ..
ಮಾವ ತೇಳ್ರೆ ಮುತ್ತೆಗೌಡಾ ಅತ್ತೆವ್ವ ನಂಜವ್ವ ತುಂಬಿ... ತುಂಬಿ...
ಬಾವ ತೇಳ್ರೆ ಬಲರಾಯ... ಅಕ್ಕ ತೇಳ್ರೆ ನಾಗವ್ವಾ.... ಆ....ಆ...ಆ..
ಮೈದ್‌ನ ಬಸುವಣ್ಣ ಕುಸಿಲಿರುವ ಸಂಸಾರ
ಸುಕ ಆಗೆ ಇರ್‌ಕನ.... ತುಂಬಿ....ತುಂಬಿ.....
ಹಂಚ್‌ನ ಮನೆಮಾಡ್। ಕಂಚ್‌ನ ಮೂಡಣ ಬಾಗ್ಲು।
ಚೊಚ್ಚಲ್ ಬಸ್‌ರಿ ಹೆಂಗ್ಸು ಸೊಸೆ ಮುದ್ದು ಹೊನ್ನಮ್ಮಾ ತುಂಬಿ...
ಪೊರ್ಲ್ನನ ಗಂಡ್ ಕೂಸುನ। ಹೆತ್ತತ್ ಹೊನ್ನಮ್ಮಾ......
ಅಷ್ಟೊಂದು ಹೊತ್ತಿಗೆ ಊರುನ ದೇಶಕೆ
ದಂಡೊಂದು ಬಂದೋತು ।। ಗಂಡ ಶಿವರಾಯಾ
ಯುದ್ದಕ್ಕೆನೆ ನಡ್ದ್ ಬುಟ್ಟ್ ಯುದ್ದಕ್ಕೆನೆ ನಡ್ದ್‌ಬುಟ್ಟ್... ತುಂಬಿ...
ಅಯ್ಯಯ್ಯೊ.... ಊರಿಗೆ ನೀರೆ ಇಲ್ಲೆ।
ಬಾಯಾರ್ತ್ ತೇಳ್ರೆ ಕುಡಿಯಕೆ ನೀರಿಲ್ಲೆ
ಊರುಗೌಡ ಮುತ್ತಯ್ಯ ಬಾರಿ ಬಾರಿ ಗ್ಯಾನ ಮಾಡ್ತ್
ಊರಿಗೊಂದು ಹೊಸ ಕೆರೆ । ತೋಂಡಕುತ ಗ್ಯಾನ ಮಾಡ್ತ್ ತುಂಬಿ... ತುಂಬಿ...

ರೂಪಕ : ಊರುಗೌಡ ಮುತ್ತಯ್ಯ ಕೆರೆ ತೋಂಡಿಕೆ ಒಡ್ಡನ ಕರ್ಸಿದೆ. ಮನೆಗೆ ಬಂದ ದಪ್ಪ ಮೀಸೆ ಕೆಂಗಣ್ಣ್‌ನ ನೀರೊಡ್ಡ ಗೌಡನ ಸೊಸೆ ಹೊನ್ನಮ್ಮನ ಜೆಳ್ಳಂಗಿರುವ ಪೊರ್ಲ್ನಿಗೆ ಮರ್‌ಳಾಗಿ ಅವಳ್ನ ಮೆಲ್ಲಂಗೆ ಮುಟ್ಟಿಕೆ ಹೋದೆ. ಹೊನ್ನಮ್ಮಂಗೆ ಬಂದ ಸಿಟ್ಟ್ ನೆತ್ತಿಗೇರ್ತ್. ಆ ಸೇಡ್‌ನ ಒಡ್ಡ ಮಣ್ಣ್‌ಲಿ ತೀರ್ಸಿಕೆ ಗ್ಯಾನ ಮಾಡ್ದೆ ಪೆಣ್ಣ್ ಮ್ಯಾಲೆ ಆಸೆ ಇದ್ದ ನೀರೊಡ್ಡ ಕೆರೆಲಿ ಬರುವ ಜಲ ಕಣ್ಣ್‌ನ ತಪ್ಪ್‌ಸಿ ಬ್ಯಾರೆ ಕಡೆ ಅಂವ ಕೆರೆ ತೋಂಡಿಕೆ ಸುರು ಮಾಡ್ದೆ. ಎಸ್ಟ್ ತೋಂಡಿರೂ ತೋಂಡಿರೂ ನೀರೇ ಬಾದುಲೆ. ನೀರ್ ಸಿಕ್ತ್‌ಲೆ. ನೀರ್ ಸಿಕ್‌ತ್ಲೆ ತೇಳಿ ಜೆನ ಬಾಯಾರಿಕಂಡ್ ಬಾಯ್ ಬಾಯ್ ಬಡ್ಕಂಡೊ. ಕಡೆಗೆ ನೀರ್ ಸಿಕ್ತ್‌ಲೆ ತೇಳಿ ನಿರಾಸೆಲಿ ಗೌಡ ಒಡ್ಡಂಗೆ ಹಿಂಗೆ ಹೇಳ್ತ್.

(ಅಭಿನಯ)

ಗೌಡ ಒಂದು ವರಹ ಕೊಟ್ಟನೆ ಕೆರೆ ತೋಂಡು ಒಡ್ಡಾ...... ತುಂಬಿ

ಒಡ್ಡ ಒಂದು ವರಹಕೆ ನೀರ್ ಬಾದುಲೆ ಗೌಡರೆ.............

ಗೌ ಎರ್ಡ್ ವರಹ ಕೊಟ್ಟನೆ ಕೆರೆ ತೋಂಡು ಒಡ್ಡಾ..........

ಒ ಎರ್ಡ್ ವರಹಕೆ ನೀರೇ... ಬಾದುಲೆ... ಗೌಡರೆ..........

ಗೌ ಅಂಗೈ ತೊಳಿಯಕೆ ದೊಡ್ಡ ಚೊಂಬು ಕೊಟ್ಟನೆ.........

ಒ ಅದ್ ಆದುಲೆ ಗೌಡರೆ...

ಗೌ ನಿಂಗೆ ನಮ್ಮ ಕರ್‌ಬುಡುವ ಕಪಿಲೆ ಹಸ್ನ ಕೊಟ್ಟನೆ...

ಒ ಅದೂ ಆಕಿಲೆ.. ಇಲ್ಲೆ...ಇಲ್ಲೆ...ಆಕೇಲೆ............... ತುಂಬಿ

ಗೌ ಹಂಗಾರೆ ಗದ್ದೆ ಹೂಡುವ ಜೋಡು ಎತ್ತ್‌ಗಳ ಬುಜ ಸವುರಿ ಕೊಟ್ಟನೆ

ಒ ಆದುಲೆತ ಹೇಳ್ಲಿಲಾ ಗೌಡರೆ!

ಗೌ ಬಾರಿ ಓಟದ ಕುದುರೆನ ಕೊಟ್ಟನೆ....

ಒ ಆದೇಲೆ ಆದೇಲೆ....

ಗೌ ಕಂಬ್ಳಕೆ ಕಟ್ಟಿದ ಕ್ವಾಣನ ಕೊಟ್ಟನೆ....

ಒ ಇಲ್ಲೆ... ಇಲ್ಲೆ....

ಗೌ ಬೀಸಿಕೆ ಬೆಳ್ಳಿ ಬೀಸಣಿಗೆ ಕೊಟ್ಟನೆ.....

ಒ ಅದ್ಯಾವುದಕ್ಕೂ ನೀರ್ ಬಾದುಲೆತ ಹೇಳ್ಳಿಲ್ಲಾ ಗೌಡರೆ ನಾನ್! ಮಣ್ಣೊಡ್ಡ ಬೀಸಣಿಗೆ ತಕಂಡ್ ನಾನೇನ್ ಮಾಡ್ಲು! ಅದ್ಕಿಂತ ಕುಕ್ಕೆ ಕೊಟ್ರೆ ಕೆಲ್‌ಸಕೆ ಆದು (ದರ್ಪಂದ)

ಗೌ ಇಂವ ಎಂತ ಹಠಮಾರಿ ಒಡ್ಡ! ಎಷ್ಟ್ ಹೇಳ್ರು ಕೇಳ್ದುಲೆ! ಕೇಳ್ದೊಕೆ ಒಂದು ಅರ್ತ ಬ್ಯಾಡನಾ! ಹಂಗಾರೆ ನಾನ್ ಇನ್ನೆಂತದ್ ಕೊಡೊಕು ನೀರೊಡ್ಡಾ! ಬ್ಯಾಗ ಹೇಳ್.

ಒಡ್ಡ ಮೆಲ್ಲಂಗೆ ಗೌಡರೆ ನಾನ್ ಹಿಂಗೆ ಹೇಳ್ನೆ ತೇಳಿ ನೀವು ಬ್ಯಾಜಾರ ಮಾಡಿಕಾಗದ್. ಈ ಒಡ್ಡಂಗೆ ಏನ್ ಸೊಯ ಉಟ್ಟೊ ಇಲ್ಲೆತ ನೋಡಿ....

(ಜೋರಾಗಿ) ಗೌಡ್ರೆ... ನಿಮ್ಮ ನಿಮ್ಮಾ... ಆ ಸೊಸೆ... ಅದೇ ನಿಮ್ಮ ಮುದ್ದು ಸೊಸೆ ಬಾಣ್‌ಂತಿ ಹೊನ್ನಮ್ಮ ಉಟ್ಟಲ್ಲಾ! ಅವ್ಳನ ಈ ಕೆರೆಗೆ ಬಲಿ ಕೊಟ್ಟರೆ ನೀರ್ ಉಕ್ಕಿ ಉಕ್ಕಿ ಬಂದದೆ.... ಇದ್ ನಾನ್ ಹೇಳ್ದು ಅಲ್ಲ ಎಲ್ಲಾ ಆ ಸಿವನಿಚ್ಚೆ.

ನಿರೂಪಕ ಈ ವಿಸಯ ಕೇಳಿ ಗೌಡ ಬ್ಯಾಜಾರ ತಡ್ಕಕೆ ಜೊತ್ತದೆ (ಆಗದೆ) ಕುಸ್ತ್ ಬೀತ್. ತಲೆಗೆ ಕೈ ಹೊತ್ತ್ ಗ್ಯಾನ ಮಾಡ್ದೆ (ಕಳವಳಂದ)

ಗೌ ಅಲ್ಲಾ..... ಅತ್ತ ಊರಿಗೆ ನೀರಿಲ್ಲೆ. ದನಕರ್‌ಗ ಸಾಯ್ತಾವಳೊ. ಮಂಞ ಶಿವರಾಯನೊ ಯುದ್ದ ಮಾಡಿಕೆ ದಂಡಿಗೆ ಹೋಗುಟ್ಟು. ಅಯ್ಯೋ! ನೀರೊಡ್ಡಾ ನಾನ್ ಹೆಂಗೆ ಒಪ್ಪುದು! ನನ್ನ ಮುದ್ದು ಸೊಸೆ ಹೊನ್ನಮ್ಮನ ನಾನ್ ಹೆಂಗಪ್ಪಾ ಕೆರೆಗೆ ಬಲಿ ಕೊಡ್ಲುದು! ಅಯ್ಯೋ ನೀರೊಡ್ಡಾ ಹಿಂಗೆ ಕೇಳಿಕೆ ನಿಂಗೆ ಹೆಂಗೆ ಮನ್ಸಾರ್ ಬಾತ್ ಅಯ್ಯೊ.... ನೀರೊಡ್ಡಾ...

ಒ — ಗೌಡ್ರೆ.... ನೀವು ಆ ಹಸ್‌ಕೂಸುನ ಅವ್ವ ಹೊನ್ನಮ್ಮನ ಈ ಕೆರೆಗೆ ಬಲಿಕೊಟ್ರೇ ಕೊಡೊಕು. ಇಲ್ಲರೆ ನೀರೆ ಬಾದುಲೆ.

ಗೌ — ನಾನ್ ಈ ವಿಸಯುನ ನನ್ನ ಹೆಣ್ಣ್ ನಂಜವ್ವನೊಟ್ಟಿಗೆ ಕೇಳಿ ನೋಡ್ನೆ.

(ಹೆಣ್ಣ್‌ನೊಟ್ಟಿಗೆ) ನಂಜವ್ವ..... ನಂಜವ್ವಾ... ಒಡ್ಡ ಹೇಳ್ದ ಮಾತ್ ಕೇಳ್ತಾ ನಿಂಗೆ)

ನಂಜವ್ವ — ಕೇಳ್ತ್, ನೋಡಿ ಒಂದು ಲೆಕ್ಕಲಿ ಅದು ಸೆರಿಯೆ. ನಮ್ಮ ಕುಟುಂಬಲಿ ಇಂತ ಒಂದು ಗಟನೆ ಆಕುತ ಮ್ಯಾಲೆ ಇದ್ದಂಪೆ ಬರ್ರಿದ್ದರೆ ಏನ್ ಮಾಡಿಕಾದೆ ಹೇಳಿ. ಒಂದು.... ಒಂದು ಊರುನ ನಾವು ಉಳ್ಸ್ಕೊಕುತಾದರೆ ಒಂದು ಜುವ್ವನ ಬಲಿಕೊಡ್ಡು ದೊಡ್ಡದಲ್ಲ. ಈ ಊರುನ ಉಳ್ಸಿದ ಪುಣ್ಯ ನಮ್ಮದಾದೆ... (ತೇಳಿ ಅವ್ವ ಮರ್ಟದೆ)

ನಿರೂಪಕ — (ಮೈದ್‌ನ ಬಸುವ ಹೈದ ಓಡಿ ಹೋಗಿ ಅತ್ತಿಗೆಗೆ ಹಿಂಗೆ ಹೇಳ್ಚೆ. ಹೈದಗ್‌ಡ್ ಗ್‌ಡ್ ನಡ್‌ಗಿದೆ)

ಬಸುವ — ಅತ್ತಿಗೆ... ಅತ್ತಿಗೆ... ಇಂದ್ ಹೊತ್ತು ಮುಳ್ಗಿಕೆ ಮುಂದೆ ನಿನ್ನನ ಹೊಸ ಕೆರೆಗೆ ಬಲಿಕೊಟ್ಟವೆ ಗಡ ಅತ್ತಿಗೆ ತುಂಬಿ.... ತುಂಬಿ

ನಿರೂಪಕ — ಬಸುವನ ಮಾತ್‌ಕೇಳಿ ಹೊನ್ನಮ್ಮನ ನಿತ್ತ ನೆಲ ಅಪ್ಪಿಗೆ ಮುಳ್ಯಾತ್. ಮನ್ಸ್ ಕಲ್ಲಾತ್. ಗ್ಯಾನ ಮಾಡಿ ಕಣ್ಣೀರ್ ಸೊರ್ರಿಕಂಡ್ ನಿತ್ತ ಮೈದ್‌ನ ಬಸುವ ಹೈದನ ತಲೆ ಪೂಜಿ.... ತೊಟ್ಲ್ ಕೂಸುನ ಬಿಗ್ದ್ ತಬ್ಬಿಕಂಡ್ ದುಕ್ಕಂದ ಹಿಂಗೆ ಹೇಳ್ದೆ... ಅವ್ವಗೆ ಭೂಮಿ ತಿರ್ಗಿದಂಗಾತ್

ಹೊನ್ನಮ್ಮ — ಬಸುವಾ.... ಬಸುವಾ... ನಾನ್ ಹೊಸ ಕೆರೆ ಬಲಿಗಾಗಿ ಹೋನೆ......ಬಲಿಗಾಗಿ ಹೋನೆ... ತುಂಬಿ....

(ಇದರ್ನೆಲ್ಲಾ ನೋಡ್ಕಂಡಿದ್ದ ನಂಜವ್ವ ಸೊಸೆಗೆ ಹೇಳ್ಟೆ)

ನಂಜವ್ವ — ಸೊಸೆ ಮುದ್ದು ಹೊನ್ನಮ್ಮಾ... ಚಿನ್ನದ ಬಿಂದಿಗೆ ಬೆಳ್ಳಿ ಹಗ್ಗನ ತಕಂಡ್ ಹೊಸ ಕೆರೆಂದ ನೀರ್ ತಾಕೆ ನಿನ್ನ ಮಾಂವ ಹೇಳಿ ಕಳ್‌ಸ್ಕೊಳೊ......

ಹೊನ್ನಮ್ಮ — ಅತ್ತೆವ್ವ, ಅತ್ತೆವ್ವಾ... ನಾನ್ ಹೊಸಕೆರೆ ಬಲಿಗೆ ಹೋಕೆ ಮುಂದೆ ನನ್ನ ತೌರು ಮನೆಗೊಮ್ಮೆ ಹೋಗಿ ಬನ್ನೆ

ಅತ್ತೆ — ಹೊನ್ನಮ್ಮಾ ನಿನ್ನ ಮಾಂವನೊಟ್ಟಿಗೆ ಕೇಳಿ ಹೋಗಿ ಬಾ... ತುಂಬ....

ಮಾಂವ — ನನ್ನೊಟ್ಟಿಗೆ ನೀನ್ ಕೇಳ್‌ಬ್ಯಾಡ, ಹೊನ್ನಮ್ಮಾ ನಿನ್ನ ಅಕ್ಕ ಬಾವನೊಟ್ಟಿಗೆ ಕೇಳಿ ಹೋಗಿ ಬಾ

ಅಕ್ಕಬಾವ — ನಮ್ಮೊಟ್ಟಿಗೆ ನೀನ್ ಕೇಳ್‌ಬಡ ಹೊನ್ನಮ್ಮಾ ನೀನ್ ಬಸುವ ಹೈದಂಗೆ ಹೇಳಿ ಹೋಗಿ ಬಾ.

ಹೊನ್ನಮ್ಮ — ಬಸುವಾ ನಾನ್ ತೌರುಮನೆಗೊಮ್ಮೆ ಹೋಗಿ ಬನ್ನೆ, ನೀನ್ ಕೂಸುನ ನೋಡಿಕ

ಬಸುವ — ಅತ್ತಿಗೆ ತೊಟ್ಲ್ ಕೂಸು ಏಳಿಕೆ ಮುಂದೆ ನೀನ್ ತಿರ್ಗಿ ಬರೊಕು ಅತ್ತಿಗೆ.

ನಿರೂಪಕ — (ಹೊನ್ನಮ್ಮ ತಲೆ ಬಗ್ಗಿಸಿ ಹೊರ್ಟದೆ. ನಿರೂಪಕ ಕನ್ನಡನಾಡ್‌ನ ತೌರುಮನೆ ಗನತೆನ ಹಾಡ್ತೆ)

ಹಾಡ್ — ಬಲ್ದ ಕೈಲಿ ಗೆಜ್ಜೆಕತ್ತಿ। ಎಡ್‌ದ ಕೈಲಿ ಪನ್ನಕೊಡೆ।
ತೌರು ಮನೆ ದಾರಿಲಿ। ಕಲ್ಲಿಲ್ಲೆ. ಮುಳ್ಳಿಲ್ಲೆ।
ಸಾಸ್ತೆ ಕಾಳ್‌ಸಸ್ಟ್ ಮರ್‌ಳಿಲ್ಲೆ... ಮರ್‌ಳಿಲ್ಲೆ ತೌರೂರು ನೆಲ ಕಾಲಿಗೆ ಹಸ್‌ರಾತ್....
ತೆಂಗ್ ತಲೆಬಾಗಿ ಬೀಸಣಿಗೆ ಬೀಸಿತ್... ಕದೋಳಿ ಬಾಳೆ ಗೊನೆ ಗಾ ಮುಟ್ಟಿ ಮುಟ್ಟಿ ಮುಟ್ಟಿಸಿದೊ.....

ನಿರೂಪಕ — ದೂರಂದ ತೌರುಮನೆ ಕಂಡದೆ. ಉಪ್ಪರಿಗೆ ಮ್ಯಾಲೆ ಕುದ್ದ್ ಕಂಡ್ ನೋಡ್ತಾಯಿದ್ದ ಹೊನ್ನಮ್ಮನ ಅಪ್ಪಂಗೆ ಗದ್ದೆ ಪುಣೆಲಿ ನಡ್‌ಕಂಡ್ ಬರುವ ಮಗಳ್ನ ನೋಡಿ ಆಶ್ಚರ್ಯ ಆತ್. ಹೊನ್ನಮ್ಮ ಬಂದ್ ಅಂಗಳಕೆ ಎತ್ತಿತ್. ಆಳ್‌ನ ಕರ್‌ದದೆ ಅಪ್ಪ.
ಹೊನ್ನಮ್ಮನ ಅಪ್ಪ ಮನ್ಸ್‌ಲಿ ಇದೇನ್ ಹೊನ್ನಮ್ಮ ಸಣ್ಣಕ್ಕಿ ಬಯ್ಲ್‌ಲಿ ಉರಿಬಿಸ್‌ಲ್‌ಲಿ ಒಂದೇ ಬರ್ತಾವುಟ್ಟು. ಮೊಕ ಕಂದಿ ಹೋಗುಟ್ಟು. ಏ ಚಿಮ್ಮಿ ಗೂಡೆ ನೋಡಲ್ಲಿ ಹೊನ್ನಮ್ಮ ಬರ್ತಾವುಟ್ಟು ಕಾಲ್ತೊಳೆಕೆ ಚೊಂಬುಲಿ ಪಾತಾಳದ ಪನ್ನೀರ್ ತಕಂಡ್ ಬಾ. ಕೂರಿಕೆ ರತ್ನ ಕಂಬ್‌ಳಿ ಹಾಸ್ ಕುಡಿಯಕೆ ಬೆಳ್ಳಿ ಮಿಳ್ಳಿಲಿ ಕಾಸಿದ ನೊರೆ ಹಾಲ್ ತಕಂಡ್ ಬಾ.

ನಿರೂಪಕ — ಮಿಳ್ಳಿ ತುಂಬ ತಂದ್ ಮಡ್ಗಿದ ಬಿಸಿ ಬಿಸಿ ನೊರೆಹಾಲ್‌ನ ಅಪ್ಪ, ಕುದ್ದ್ ದನಗಳ ಹಟ್ಟಿ ಬಾಗ್ಲ್‌ಲಿ ನಿತ್ತ್ ಸೂರೊಂದು ಗೋವುಗಳ ಹಿಂಡ್ ಹಸ್ ಕರ್‌ಗಳ ಕಣ್ಣ್ ತುಂಬ ನೋಡಿ ಅವ್ವನ ಹತ್ರ ಬಂದದೆ. ತುಂಬಿ.... ತುಂಬಿ.....
ಅಪ್ಪಾ.... ಅವ್ವಾ... ಅಣ್ಣಯ್ಯ ಅತ್ತಿಗೆ ನಿಮ್ಮ ಕೈಲಿ ನಂಗೆ ಇಂದ್ ಒಂದೊಂದು ತುತ್ತು ಅನ್ನ ಉಣ್ಸಿ... ಇನ್ನ್ ನಂಗೆ ಇತ್ತ ಬಾಕೆ ಆದ್ದೊ ಇಲ್ಲ್ಯೋ ಹೇಳಿ ಕಾಮುಲೆ. ತುಂಬಿ.... ತುಂಬಿ..

ನಿರೂಪಕ — ಉಂಡ್ ಅಪ್ಪ, ಒಂದು ಬೆಳಿ ತೊಳ್ಳಿ ಗಿಡನ ಮನೆ ಮುಂದೆ ನೆಟ್ಟದೆ.

ಹೊನ್ನಮ್ಮ — ಅಪ್ಪಾ ಅವ್ವಾ ಅಣ್ಣಯ್ಯ ಅತ್ತಿಗೆ, ನಾನ್ ಇಲ್ಲಿ ಈ ತೊಳ್ಳಿ ಗಿಡನ ನೆಟ್ಟನೆ ಇದ್ ಯಾಗ ಬಾಡಿ ಹೋತೂ ಅಂದ್‌ಗೆ ನನ್ನಾಸೆನ ನೀವು ಬುಡೊಕು ಅಂದ್‌ಗೆ ನನ್ನ ಋಣ ಮುಗ್ದದೆ.

ಮನೆಯವು — ಅಂತ ಏನ್ ಕಷ್ಟ ನಿಂಗೆ ಬಂದುಟು ಮಗಳೆ

ಹೊನ್ನಮ್ಮ — ಅಂತ ಕಷ್ಟ ನಂಗೆ ಬಾತ್‌ಲೆ. ನನ್ನ ಗಂಡ ದಂಡ್‌ಗೆ (ಯುದ್ಧ) ಹೋದವು ಇನ್ನೂ ಬಾತ್‌ಲೆ (ಮಾತ್ ಹಾರ್‍ಸಿದೆ...) ತುಂಬಿ... ತುಂಬಿ....

ಅತ್ತಿಗೆ — ನಿನ್ನ ಹಣೆಲಿ ಕುಂಕುಮ ಇರ್ದು ನಿಜಾದ್ರೆ ನಿನ್ನ ಗಂಡ . ನಿನ್ನ ಗಂಡ ಕಂಡಿತ ಯುದ್ಧ ಮುಗ್ಸಿ ಬಂದದೆ. ಕಣ್ಣೀರ್ ಸೊರ್ಸ್ ಬಡ ಕಾಲಾಳ್‌ಗಳ್‌ನ ಕಳ್ಸಿ ನಿನ್ನ ಕೂಸುನ ತೊಟ್ಲ್‌ನ ಇಲ್ಲಿಗೆ ತರ್ಸೊನ

ಹೊನ್ನಮ್ಮ — ಹಂಗೇನ್ ಮಾಡ್‌ಬಡಿ ಬಾಕನ ನನ್ನ ಮೊಕ ನೋಡ್‌ದರಿ ನೀವು ಹೋಕನ ನನ್ನ ಬೆನ್ನ್‌ನ ನೋಡ್ಕಣಿತ ರೊಂಯ್ ವಾಪಾಸ್ ಬಾತ್.

ನಿರೂಪಕ — ವಾಸಾಪ್ ಬಂದ್ ತನ್ನ ಕ್ಯಾಂಬರೆಗೆ ಹೋಗಿ ತೊಟ್ಲ್‌ಲಿರುವ ಕೂಸುನ ಎತ್ತಿಕಂಡ್

ಕೂಸಿಗೆ ಹಾಲ್ ಕುಡ್ಸಿ, ಬಳ್ಳಿಗ್ನೆ ದೀಪ ಹೊತ್ಸಿ ನಾಯಿನ ಕೊತ್ತಿನ ತೊಟ್ಲ್ ಹತ್ರ ಕೂರ್ಸಿ ತೊಟ್ಲ್ ಎಳ್ಳ್ ಬುಟ್ಟಿತ್ ಕೂಸುನ ನೋಡ್ಕೆ ..... ತುಂಬಿ.... ತುಂಬಿ....

ಹೊನ್ನಮ್ಮ ಹೊತ್ಸಿದ ದೀಪ ಹೊತ್ಸಿದಂಗೆ ಇರ್ಲಿ|
ತೂಗಿದ ತೊಟ್ಲ್ ತೂಗಿ ಕಂಡೆ ಇರ್ಲಿ|
ಯಾರ್ಯಾರ್ ಬಂದ್ ಕರ್‌ದರೂ ತೆರ್‌ದ್ ಬರ್‌ಬಡ ಬಾಗ್‌ಲೆ
ದಂಡ್‌ಂದ ನನ್ನ ಗಂಡ ಬಂದ್ ತೆರೆಕನ ಮಾತ್ರ ತೆರ್ಲ್ ಬಾ ಬಾಗ್‌ಲೆ
ತುಂಬಿ.... ತುಂಬಿ....

ನಿರೂಪಕ ಹೇಳಿ ಅತ್ತೆ ಮಾವ ಅಕ್ಕ ಬಾವಂದ್‌ರ ಕೈಂದ ತುತ್ತನ್ನ ಉಣ್ಸಿಕಂಡ್ ಮೈದ್‌ನ ಬಸುವನ ತಲೆ ಸವ್ರಿ ಗೋವ್ರುಗಳ ಓಂದ್‌ನ ಕಣ್ಣ್ ತುಂಬ ನೋಡಿ ಕಣ್ಣ್. ಬಲಿಗಾಗಿ ಹೋಕನ ಧಾರೆ ಸೀರೆವುಟ್ಟ್, ಚಿನ್ನಾಭರಣ ತೊಟ್ಕಂಡ್ ಬಗ್‌ತಲೆ ಬಾಚಿ ಹಣೆಗೆ ಕುಂಕುಮ ಮಡ್ಗಿ ಹೂ ಮುಡ್ಸ್. ಮದ್‌ಮಗಳಂಗೆ ಸಿಂಗರಿಸಿಕಂಡ್ ಚಿನ್ನದ ಕೊಡ್‌ಪಾನ ಸೊಂಟಲಿ ಮಡ್ಗಿ. ಬೆಳ್ಳಿ ಹಗ್ಗನ ಕೈಲಿ ಹಿಡ್ಕಂಡ್... ತುಂಬಿ.... ತುಂಬಿ....

ಹೊನ್ನಮ್ಮ ಮೈದ್‌ನ ಬಸುವ... ಬಸುವಾ.... ನಾನ್ ಹೊಸ ಕೆರೆಗೆ ಹೋನೆ ಹೊಸಕೆರೆಗೆ ಹೋನೆ...
ಬಲಿಗಾಗಿ ಹೊಸ ಕೆರೆಗೆ ಹೋನೆ.....

ನಿರೂಪಕ ಹೇಳಿ ಮನೆ ಮೆಟ್ಲ್‌ನ ದಡ ದಡನೆ ಇಳ್ಳ್ ಹೊಸ ಕೆರೆಕಡೆ ಹೋಕನ ಆ ಸದ್ದ್‌ಗೆ. ಸದ್ದ್‌ಗೆ ತೊಟ್ಲ್‌ಲಿದ್ದ ಕೂಸು ಜೋರಾಗಿ ಕಿರ್ಚಿದೆ. ಓಂದ್ ಗೋವ್ರುಗ ಅಂಬಾ... ಹೇಳ್ತೋ... ಹೊನ್ನಮ್ಮ ಮುಂದೆ ಮಡ್ಗಿದ ಕಾಲ್‌ನ ಹಿಂದೆ ಮಡ್ಗಿತ್‌ಲೆ.... ತುಂಬಿ....ತುಂಬಿ.....

ಹೊನ್ನಮ್ಮ (ಶೋಕವೀಣೆ) ಅವ್ವ ಕೆರೆ ದಂಡೆಗೆ ಬಂದದೆ....
ಮಾಂವಯ್ಯ..... ಮಾಂವಯ್ಯ.... ನೀರಿಗೆ ಬಂದೋಳೆ... ಹೊಸಕೆರೆಗೆ ನೀರಿಗೆ ಬಂದೋಳೆ. ಚಿನ್ನದ ಕೊಡ್‌ಪಾನ ಬೆಳ್ಳಿ ಹಗ್ಗನ ಹಿಡ್ಕಂಡ್ ಬಂದೋಳೆ ಮಾಂವ. ಹೊಸಕೆರೆ ಬಲಿಗಾಗಿ ಬಂದೋಳೆ ಮಾಂವ ಮಃಖಿ

ಮಾಂವ (ಬ್ಯಾಜಾರಂದ) ಮೆಟ್ಲ್ ಇಳ್ಳ್ ನೀರ್ ತೆಗಿ ಹೊನ್ನಮ್ಮಾ..... ನೀರ್‌ತೆಗಿ... ಹೊನ್ನಮ್ಮಾ. ನೀರ್...ತೆಗಿ..

ಹೊನ್ನಮ್ಮ ಪಾದಕ್ಕೆ ನೀರ್‌ಬಾತ್.. ಮಾಂವ, ಪಾದಕ್ಕೆ ನೀರ್ ಬಾತ್..... ಸೊಂಟಕ್ಕೆ ನೀರ್ ಬಾತ್ ಮಾಂವ.... ತುಂಬಿ.... ತುಂಬಿ....

ಮಾಂವ ಇನ್ನೊಂದು ಮೆಟ್ಲಿಳಿ ಹೊನ್ನಮ್ಮಾ.....

ಹೊನ್ನಮ್ಮ ಮಾಂವ ಕುತ್ತಿಗೆಗೆ ನೀರ್ ಬಾತ್ ಮಾಂವ... ತುಂಬಿ... ತುಂಬಿ...

ನಿರೂಪಕ ಹೊನ್ನಮ್ಮ ಇಳಿತಿದ್ದಂಗೆ ನೀರ್ ಮ್ಯಾಲೆ ಬರ್ತಾ ಇತ್ತ್. ಹೊನ್ನಮ್ಮ ಮುಳ್ಗಿದೆ ಹೊನ್ನಮ್ಮ ಮುಳ್ಗಿದೆ ಮುಳ್ಗಿದೆ.
ಹೊಸಕೆರೆ ಹೊನ್ನಮ್ಮನ ಮರೆಮಾಡಿಕಂಡತ್. ನೀರ್ ತುಂಬಿ ಉಕ್ಕಿತ್, ತುಂಬಿ ನಿತ್ತತ್. ಹೊಸ ಕೆರೆ ನೀರ್‌ಂದಾ ಊರಿಗೆ ಕುಸಿ ಆತ್. ಊರ್ ಜನಕೆಲ್ಲಾ ಕುಸಿ ಆತ್.... ಕುಸಿ..

ಆತ್... ತುಂಬಿ...
ತುಂಬಿ... ತುಂಬಿ... ತುಂಬಿ.. ತುಂಬಿತ್
ತುಂಬಿ... ತುಂಬಿ... ಕುಸಿ... ತುಂಬಿತ್
ತುಂಬಿ... ತುಂಬಿ... ನೀರ್‌ತುಂಬಿತ್.. ಕೆರೆ ತುಂಬಿತ್

ಭಾಗ 1

ನಿರೂಪಕ : ಶಿವರಾಯ ಕುದುರೆಲಿ ಯುದ್ದ ಮುಗ್‌ಸಿ ವಾಪಾಸ್ ಮನೆಗೆ ಬಂದದೆ ಮನೆಲಿ ಯಾಗೊಳುನಷ್ಟ್ ಕಳೆಯಿಲ್ಲೆ. ಹೊನ್ನಮ್ಮ ಜ್ಯಾರೆ ಕಾಂಬೊದುಲೆ ಅಪ್ಪನ ಹತ್ರ ಕೇಳ್ಚೆ.

ಶಿವರಾಯ : ಅಪ್ಪಾ... ಅಪ್ಪಾ.. ಹೊನ್ನಮ್ಮ ಕಾಂಬೊದುಲೆ... ಎಲ್ಲಿ ಹೋತಪ್ಪಾ?

ಅಪ್ಪ : (ಮೌನ... ಮರ್ಟದೆ)

ಬಸುವ : ನಿನ್ನ ಅತ್ತಿಗೆ ಎಲ್ಲಿಗೆ ಹೋಗುಟ್ಟು (ಆತಂಕಂದ ಮರ್ಟದೆ ಅಂವ) ಅಣ್ಣಯ್ಯ.... ಅಣ್ಣಯ್ಯ ಅತ್ತಿಗೆನ ಒಡ್ಡನ ಮಾತ್‌ಕೇಳಿ ಹೊಸ ಕೆರೆಗೆ ಬಲಿ ಕೊಟ್ಟೊಳೊ.

ನಿರೂಪಕ : ಶಿವರಾಯನ ಸಿಟ್ಟ್ ನೆತ್ತಿಗೇರ್ತ್ ಸಿಟ್ಟ್‌ಂದ ಅಂವನ ರಕ್ತ ಕೊದ್ದದೆ. ಒಡ್ಡನ ಹುಡ್ಕಿದೆ.

<u>ಗಂಭೀರಸ್ವರಲಿ</u> ಅಂವನ ತಲೆ ಜುಟ್ಟು ಹಿಡ್ಡ್ ಎಳ್ಕಂಡ್ ಬಂದ್ ಹೊಸ ಕೆರೆ ಏರಿ ದಂಡೆ ಮ್ಯಾಲೆ ಅಂವನ ಬಾಳ್ ಕತ್ತಿಂದ ಕುತ್ತಿಗೆನ ಕಡ್ಡ್ ತಲೆನ ಹಾರ್ಸಿದೆ. ಹಾರ್ಸಿದ ರಭಸಕ್ಕೆ ಊರುಜೆನ ಎಲ್ಲಾ ಹೆದ್ರಿ ಹೋದೊ. ಬಿದ್ದ ರಕ್ತನ ಹಣೆಗೆ ಬೊಟ್ಟು ಹಾಕಂಡ್ ಪುನಃ ಮನೆಗೆ ಓಡಿ ಬಂದ್... ಕ್ಯಾಂಬರೆ ಬಾಗ್‌ಲ್ ಬಡಿಯಕನ ಬಾಗ್‌ಲ್ ತೆರ್ದ್‌ಬಾತ್. ದೀಪ ಹೊತ್ತ್‌ತಾಯಿತ್. ತೊಟ್ಲ್‌ಲಿ ಕೂಸು ಮಲ್ಗಿತ್ತ್ ದೀಪ ಉರಿತಾಯಿತ್. ಶಿವರಾಯ ತೊಟ್ಲು ಕೂಸುನ ಹೊತ್ಕಂಡ್ ಮದುವ ತಮ್ಮ ಬಸುವನ ಕೈ ಹಿಡ್ದ್ ಹೊಸ ಕೆರೆ ದಂಡೆಗೆ ಬಂದ್ ನಿತ್ತತ್. ಅಷ್ಟೊತ್ತಿಗೆ ಊರಿಗೆ ಊರೇ ಅಲ್ಲಿ ಸೇರಿತ್. ಮನೆಯವು ಹೊನ್ನಮ್ಮನ ತೌರುನವು ಎಸ್ಟ್ ಕರ್‌ದರೂ....ತುಂಬಿ..ತುಂಬಿ
ಊರು ಜೆನಕ್ಕೆ ಅವರ ತಪ್ಪು ಗೊತ್ತಾಗಿ ತಲೆ ತಲೆ ಹೊಡ್ಕಂಡೊ.

ಶಿವರಾಯ : (ಎಲ್ಲವುಕು ಕೇಳುವಂಗೆ)
ಕೇಳಿ . ನನ್ನ ನೆಂಟರಿಸ್ಟರೆ. ಬಂದುಗಳೇ. ನನ್ನ ಋಣ ಇಂದ್‌ಗೆ ಮುಗ್ತ್. ಇನ್ನ್ ನೀವು ಬಂದ ದಾರಿಲಿ ನಿಮ್ಮ ನಿಮ್ಮ ಮನೆಗಳಿಗೆ ಹೋಗಿ ಸುಖವಾಗಿರಿ.. ತೇಳಿ

ನಿರೂಪಕ : ಏರಿಮ್ಯಾಲೆ ನಿತ್ತ್ ಜೋರಾಗಿ ಮೂರು ಸಲ ಹೊನ್ನಮ್ಮನ ಕರ್‌ದದೆ

ಶಿವರಾಯ : ಹೊನ್ನಮ್ಮಾ.... ಹೊನ್ನಮ್ಮಾ.... ಹೊಸ ಕೆರೆ ಹೊನ್ನಮ್ಮಾ ಸತ್ಯಲಿ ಹುಟ್ಟಿ ಧರ್ಮಲಿ ಬೆಳ್ದ್ ನ್ಯಾಯಲಿ ನಡ್ದ್, ನೀತಿಲಿ ನಿತ್ತಿರುವವಳೆ. ಕೆರೆ ನೀರ್ ನಡುಂದ ಬಂದ್ ನಂಗೊಮ್ಮೆ ನಿನ್ನ ಮೊಕ ತೋರ್ಸು.... ನನ್ನ ಪ್ರೀತಿಯ ಹೊನ್ನಮ್ಮಾ... ಹೊನ್ನಮ್ಮಾ.... ಹೊನ್ನಮ್ಮಾ... ತುಂಬಿ... ತುಂಬಿ...

ನಿರೂಪಕ : ಗಂಡನ ದನಿ ಕೇಳಿ ಹೊನ್ನಮ್ಮ ಕೆರೆ ನೀರ್ ನಡುಂದ ಬಲ್‌ದ ಕೈ ತೋರು ಬೆರ್ಳ್‌ನ ಎತ್ತಿ ಮುದ್ರೆ ಉಂಗುರನ ತೋರ್ಸಿದೆ.

<u>ಜಾನಪದ ಶೈಲಿ ಹಾಡ್</u>

ಅದರ್ನ ನೋಡಿ ಶಿವರಾಯ.... ಹೊನ್ನಮ್ಮನ ಪತಿರಾಯಾ
ತೊಟ್ಲು ಕೂಸುಕೂಡಿ . ಬಸುವನ ಜೊತೆ ಕೂಡಿ
ಹೊಸಕೆರೆ ನೀರಿಗೆ ಹಾರ್‍ತ್ ನೋಡಿ. ಹಾರ್‍ತ್ ನೋಡಿ ಶಿವರಾಯಾ
·ಹೊಸ ಕೆರೆ ನೀರಿಗೆ ಹಾರ್‍ತ್ ನೋಡಿ.... ತುಂಬಿ....ತುಂಬಿ.....
ಕೆರೆ ನೀರ್ ಮೂರು ಜನ್ರ ಮರೆ ಮಾಡಿ ಉಕ್ಕ್‌ಸಿತ್
ತೆರೆ ನೀರ್ ನಾಕ್ ಜನ್ರ ಜೊತೆಕೂಡಿ ನಲಿದಾಡ್ತ್
ಹೊನ್ನಮ್ಮನ ಕೆರೆ ತೇಳಿ ಹೆಸ್‌ರಾತ್ ಅಲ್ಲಿಗೆ
ಹೊನ್ನಮ್ಮನ ಕೆರೆ ತೇಳಿ ಹೆಸ್‌ರಾತ್ ಅಲ್ಲಿಗೆ।।
ಹೊನ್ನಮ್ಮನ ಕೆರೆ ತೇಳಿ ಹೆಸ್...ರಾತ್।।
ಶಿವನಂದಿ ಪಾರ್ವತಿ ರೂಪುಂದ ಕಲ್ಲಾಗಿ।।
ಉಳ್ದೊನೋಡಿ ಜಲಮಧ್ಯ. ವರವಾಗಿ ಮೆರ್‍ದೊ ನೋಡಿ।।
ವರವಾಗಿ ಮೆರ್‍ದೊ ನೋಡಿ ವರವಾಗಿ ಮೆರ್‍ದೊನೋಡಿ।।

ಕುಣಿತ

ಪ್ರಾಚೀನ ಕಾಲದ ಜನಾಂಗಗಳಲ್ಲಿ ಒಂದು ಹೆಣ್ಣನ್ನು ಪಡೆಯಲು ನೃತ್ಯಗಳು ನಡೆಯುತ್ತಿದ್ದವು. ಹೆಣ್ಣನ್ನು ಆಕರ್ಷಣೆಯಿಂದ ಒಲಿಸಲಾಗದ ಗಂಡು ಅವಳ ದೃಷ್ಟಿಯಲ್ಲಿ ಕೀಳಾಗುತ್ತಿದ್ದ. ಜನಾಂಗದಲ್ಲಿ ಗೌರವ ಕಳೆದುಕೊಳ್ಳುತ್ತಿದ್ದ.. ಹೀಗೆ ನಡೆಯುತ್ತಿದ್ದ ಇಂತಹ ಅವಶ್ಯಕ ಅವಕಾಶಗಳಿಂದ ಮನುಷ್ಯನ ದೇಹ ಹಾಗೂ ಬುದ್ಧಿಯು ವಿಕಾಸಗೊಂಡು ಸೌಂದರ್ಯ ಪ್ರಜ್ಞೆ ನರ್ತನಗಳಲ್ಲಿ ಪರಿಷ್ಕಾರವನ್ನು ಸಹಜವಾಗಿಯೇ ಸಾಧಿಸಿತು. ಕುಣಿಯುವ ಪ್ರವೃತ್ತಿ ಮಾನವನಲ್ಲಿ ಅಡಗಿರುವ ಅನೇಕ ಪ್ರತಿಭೆಗಳನ್ನು ಬೆಳಕಿಗೆ ತರುತ್ತದೆ. ಅಂತಹ ಪ್ರತಿಭೆಗಳು ಬಲಿತು ಭಾವಗಳುಕ್ಕಿ ಸೌಂದರ್ಯದ ಹಾದಿಯಲ್ಲಿ ಹರಿಯುವಾಗ ಅದು ನೆಲದ ಸಮಗ್ರ ಇತಿಹಾಸವನ್ನು ರೂಪಿಸುತ್ತದೆ. ಮೂಲ ನಿವಾಸಿಗಳ ಕುಣಿತದಲ್ಲಿ ಬದಲಾವಣೆ ಅನಿವಾರ್ಯವಾಯ್ತು. ಮನರಂಜನೆಯು ಒಂದು ಉದ್ದೇಶವಾಯ್ತು. ನಾಗರಿಕತೆ ಹರಡಿದಂತೆ ನಾಜೂಕು ಔಚಿತ್ಯ ವಾಸ್ತವಿಕೆಗಳೆಲ್ಲವು ರೂಪು ಪಡೆದು ಜಾನಪದ ಕುಣಿತಗಳೆಂಬ ಹೊಸ ದಾರಿಯಲ್ಲಿ ಹೆಜ್ಜೆಯಿಟ್ಟವು.

ಜಾನಪದ ಕುಣಿತಗಳು ಜನಗಳ ಸಾಂಸ್ಕೃತಿಕ ಕಾಲಕ್ಷೇಪವಾಗಿ ಪರಿಣಮಿಸಿದುದ್ದು ಮಾತ್ರವಲ್ಲ ಜನತೆಯಲ್ಲಿ ರುಚಿ ಶುದ್ಧಿಯನ್ನು ಜನ ಜೀವನದಲ್ಲಿ ಒಂದು ನಿಷ್ಠೆಯನ್ನು ಸಾಧಿಸಿವೆಯೆನ್ನಬಹುದು. ಇವು ಜನರಲ್ಲಿ ದೈವ ಭಕ್ತಿಯನ್ನು ಪ್ರೇರಿಸುವುದರ ಜೊತೆಗೆ ಸಮಾಜ ಆಚಾರ ವಿಚಾರಗಳಲ್ಲಿ

ಕ್ರಮಬದ್ಧತೆಯನ್ನು ಪ್ರದರ್ಶಿಸಿದೆ. ಒಂದು ಸಮೂಹದ ಸಾಂಸ್ಕೃತಿಕ ಪರಂಪರೆ ಜೀವನಕ್ರಮ ರೀತಿ ನೀತಿ ರೂಢಿ ಪದ್ಧತಿಗಳು ಸಾಮಾಜಿಕ ಸಮಸ್ಯೆಗಳೆಲ್ಲವನ್ನು ಪ್ರತಿ ಬಿಂಬಿಸುತ್ತಾ ಸರಳವಾಗಿ ನೇರ ಹಾಗೂ ತೀವ್ರವಾಗಿ ಪರಿಣಾಮ ಉಂಟು ಮಾಡುವ ಹಿರಿಯ ಕಲೆಗಳೆನಿಸಿವೆ. ನೃತ್ಯ ಕಲೆಗಳಲ್ಲಿ ಭಾರತೀಯ ಜನ ಜೀವನದ ಎಲ್ಲಾ ಮುಖಗಳೂ ಸೇರಿವೆ.

ಪ್ರಾಚೀನ ಕುಣಿತಗಳಲ್ಲಿ ಧಾರ್ಮಿಕ ದೃಷ್ಟಿ ಮಾತ್ರವಾದರೆ ಶಾಸ್ತ್ರೀಯ ನೃತ್ಯಗಳು ಕಲಾತ್ಮಕವಾಗಿವೆ. ಭಾರತದ ನರ್ತನದ ಕಲೆಗೂ ಜನತೆಗೂ ನಡುವೆ ಬೆಳೆದ ಆಳಿದ ಹಾಗೂ ಉಳಿದ ಸಂಬಂಧವನ್ನು ಇತಿಹಾಸದ ಬೆಳಕಿನಲ್ಲಿ ಕಂಡು ಅರಿಯಬೇಕು. ಮಾನವನಲ್ಲಿ ಪ್ರಕಾಶಗೊಳ್ಳುವ ಒಂದೊಂದು ಪ್ರತಿಭಾ ಶಕ್ತಿಗೂ ಪ್ರೇರಕವಾದುದ್ದು ನರ್ತನ. ಅಭಿನಯಗಳು ಅವನ ಅಂತರಂಗದಲ್ಲಿ ಹುಟ್ಟಿ ವ್ಯಕ್ತವಾಗುವ ಕಲೆಗಳೇ ವಾಸ್ತು ಶಿಲ್ಪ ಚಿತ್ರಗಳು. ಪ್ರೇರಣೆಯಿಂದ ಉಕ್ಕಿ ಅವನಿಂದಲೇ ಸೃಷ್ಟಿಗೊಳ್ಳುವ ಬಾಹ್ಯ ಕಲೆಗಳು ಅವುಗಳ ನಡುವೆ ಆಂತರಿಕ ಸಹ ಬಂಧುತ್ವ ವಿದ್ಯೆ ಇರುತ್ತದೆ.

ಓಂಕಾರದ ಧ್ವನಿ ಅದು ನಿಸರ್ಗದ ಕೂಗು. ದಿವ್ಯ ಶಕ್ತಿಗಳ ಆರಾಧನೆಗೆ ಮಾನವ ತನ್ನ ಹೃದಯದಲ್ಲಿ ಉದಯಿಸಿದ ಎಲ್ಲಾ ಭಾವಗಳೊಂದಿಗೆ ನರ್ತಿಸತೊಡಗಿದ. ತನ್ನನ್ನು ತಾನೆ ಮರೆತು ವಿಶ್ವ ರಹಸ್ಯದಲ್ಲಿ ಲೀನವಾಗಿ ಸುತ್ತಣ ಜಗತ್ತನ್ನು ಎಚ್ಚರಿಸಿದ. ಹೀಗೆ ನರ್ತನದಲ್ಲಿ ಪ್ರಕೃತಿಯ ಸೌಂದರ್ಯವನ್ನು ಕಂಡು ಪ್ರಕೃತಿಯನ್ನು ಭಕ್ತಿ ಗೌರವಗಳಿಂದ ನರ್ತನದಲ್ಲಿ ತೊಡಗಿಸಿದ ಅದರಂತೆ ಅವನ ಜನಾಂಗವೇ ಧಾರ್ಮಿಕ ನಾಟ್ಯ ಸಂಪ್ರದಾಯದ ಮೂಲವಾದಾಗ ಅವನ ಜನಾಂಗವೇ ನರ್ತನದಲ್ಲಿ ತೊಡಗಿತು. ಹೀಗೆ ಇದು ಸಾಮೂಹಿಕ ನರ್ತನವಾಯಿತು. ಬೇಟೆಗೆ ಹೊರಡುವ ಮುನ್ನ ಮರಳಿದ ನಂತರವೂ ಕೃತಾರ್ಥತೆಯ ಸಂತಸದಲ್ಲಿ ಸಾಮೂಹಿಕ ನರ್ತನ. ಜನಾಂಗಗಳೊಡನೆ ಹೊಡೆದಾಟ ಸನ್ನಿವೇಶಗಳಲ್ಲಿ ಕಿಚ್ಚನ್ನು ಪ್ರಚೋದಿಸುವಂತಹ ಸಾಮೂಹಿಕ ನರ್ತನ. ಶಾಂತಿ ಕಾಲ. ಹುಟ್ಟು, ಸಾವು, ಮದುವೆ, ಋತು ಕಾಲಿಕೆ ಆಚರಣೆ . ಬೇಸಾಯದ ವಿವಿಧ ಹಂತಗಳಲ್ಲಿ ನರ್ತನ ಪ್ರಕಾರ ಹಾಗೆ ರೋಗರುಜಿನ ಬಾಧಿಸದಂತೆ ದೇವತೆಗಳಿಗೆ ಅರ್ಪಿಸುವ ವಿಶಿಷ್ಟ ನರ್ತನ ಕೆಂಡದ ಮೇಲೇರಿ ಕುಣಿತದ ಪ್ರಕಾರಗಳು. ಭೌಗೋಳಿಕ ಜನ ಜೀವನದ ವೈವಿಧ್ಯಗಳೂ ನರ್ತನದಲ್ಲಿ ಅವರವರ ಜನಾಂಗ ಧರ್ಮ, ಜೀವನ ಧರ್ಮಗಳೆಲ್ಲದರ ಪರಿಚಯವಿತ್ತು. ಕಲಾ ಜಗತ್ತಿನ ಅಭಿನಯ ಕಲಾವಿದ ಮೆಚ್ಚುಗೆಗೆ ಪಾತ್ರಧಾರಿಯಾಗುತ್ತಾನೆ. ಸಂಗೀತ, ನೃತ್ಯ, ಕಲೆಗಳು ಭಾರತೀಯ ಕಲೆಗಳಲ್ಲಿ ಶ್ರೇಷ್ಠವಾದುದ್ದು. ಸತತ ಪರಿಶ್ರಮವೇ ಕಲೆಯ ಹುಟ್ಟಿಗೆ ಕಾರಣವಾಗಿದೆ. ಮಾನವ ಜೀವನದಲ್ಲಿ ಮಾನಸಿಕ ಸ್ಥಿರತೆ ಸಮಾಜದಲ್ಲಿ ಶಾಂತಿ ಸೌಹಾರ್ದತೆ ನೆಲೆಸಲು ಸಾಧ್ಯ. ಈ ಕಲಾ ಯೋಗವೇ ಎಲ್ಲಾ ಕಾಲಕ್ಕೂ ಪ್ರಸ್ತುತ.

ಕೊಡಗಿನ ಗೌಡರಲ್ಲಿ ಮದುವೆ ಶಾಸ್ತ್ರಗಳಿಗೆ ಅನುಗುಣವಾಗಿ ವಾದ್ಯ ಮೇಳದೊಂದಿಗೆ ವಿವಿಧ ರೀತಿಯ ಕುಣಿತಗಳನ್ನು ಮನರಂಜನೆಗಾಗಿ ಕಂಡು ಕೊಂಡಿದ್ದಾರೆ. ವಾದ್ಯಕುಣಿತಗಳಲ್ಲಿ ಹಾವಾಡಿಗ ನೃತ್ಯವು ಸುಂದರವಾಗಿರುತ್ತದೆ.

ಹಿಂದೆ ಕೊಡಗ್‌ನ ಕಾಡ್‌ಗಳ್‌ಲಿ ಸಿಕ್ಕ್‌ತ್ತಿದ್ದ ಕಾಡ್‌ನ ಹಣ್ಣ್‌ಗ ಮತ್ತೆ ಸಂಪತ್ತ್

ನೇರಳೆ ಹಣ್ಣ್
ಜಂನೇರಳೆ ಹಣ್ಣ್
ಕುಂಟು ನೇರಳೆ ಹಣ್ಣ್
ತಡಸಿಲ ಹಣ್ಣ್
ಚಾಕಟೆ ಹಣ್ಣ್
ಕೂಮೆ (ಕೂಮತಿ) ಹಣ್ಣ್
ಸರಳಿ ಹಣ್ಣ್
ರೋಜಿ ಹಣ್ಣ್
ಬುಗುಡಿ ಹಣ್ಣ್
ಮಜ್ಜಿಗೆ ಹಣ್ಣ್
ಜೀರುಂಗುಳಿ ಹಣ್ಣ್
ಬೀರುಂಗುಳಿ ಹಣ್ಣ್
ಮಡಿಕೆ ಹಣ್ಣ್
ಹಾಲೆ ಹಣ್ಣ್
ರಂಜೆಳೆ ಹಣ್ಣ್
ಮೇದ ಪಡಚಿ ಹಣ್ಣ್
ಸೂರ್ತಲೆ ಹಣ್ಣ್
ಅತ್ತಿ ಹಣ್ಣ್
ಆಜಿನ ಹಣ್ಣ್
ಅಮೆ ಹಣ್ಣ್
ಇಪ್ಪಲಿ ಹಣ್ಣ್
ಸೋಮಾರಿ ಹಣ್ಣ್
ಗೊಟ್ಟೆ ಹಣ್ಣ್
ಇಡ್‌ಂಜಿ ಹಣ್ಣ್
ಚೀಪೆ ಹಣ್ಣ್
ಕಕ್ಕಡೆ ಹಣ್ಣ್ = ಮಲೆ ಕಕ್ಕಡೆ ಹಣ್ಣ್
ಕರ್ಮಜಿ ಹಣ್ಣ್
ವಾಟೆ ಹುಳಿ
ಬೆಣ್ಣೆ ಹಣ್ಣ್
ಪಣ್‌ಪುಳಿ + ಕಂಯ್ಯುಳಿ
ನುಚ್ಚಟೆ
ಗುಮ್ಮಟೆ
ಗಿಣಿಕೆ
ನೆಕ್ಕರೆ - ಮಕ್ಕರೆ

<u>ಉಪಯೋಗಿಸುವ ಗೆಡ್ಡೆ ಗೆಣ್‌ಸ್‌ಗ</u>:-

ಕಬುರು ಗೆಣ್‌ಸ್
ಮೂರ್ಕಬರು ಗೆಣ್‌ಸ್
ತೀನ ಗೆಣ್‌ಸ್
ಅಕ್ಕಿ ಗೆಣ್‌ಸ್
ಸರ್ಪಗೆಣ್‌ಸ್
ಮರಗೆಣ್‌ಸ್
ಬೆಳಿ ಗೆಣ್‌ಸ್
ಸಿಹಿ ಗೆಣ್‌ಸ್
ಕೆಂಪು ಗೆಣ್‌ಸ್
ಹುತ್ತರಿ ಗೆಣ್‌ಸ್
ಕ್ಯಾನೆ ಗೆಂಡೆ
ಕೆಸನ ಗೆಂಡೆ
ಚಪ್ಪೆ ಗೆಂಡೆ
ಕೊವಿ ಗೆಂಡೆ
ಮಡಗಲ ಕಾಯಿ

<u>ಕೊಲ್ಲಿ ತೋಡುಗಳ್‌ಲ್ಲಿ ಸಿಕ್ಕುದು</u>:-

ಇಟ್ಟೆ ಮೀನ್
ಕೊಯ್ಲೆ ಮೀನ್
ಮೊರಟೆ ಮೀನ್
ಹೊಳೆಲಿ - ಬರೆ ಮೀನ್, ಬಾಳೆ ಮೀನ್, ಮುಳ್ಳ
ಏಸಂಡ್ (ಏಡಿ) ಕೊಲ್ಲಿ ತೋಡುಗಳಲ್ಲಿ
ಕಕ್ಕಡೆ ಏಸಂಡ್ ತಿಂಬಕೆ ರುಚಿ.
ಶೀತ ನೀರಿರುವಲ್ಲಿ ಬಾನ್‌ಏಸಂಡ್
ಮರಳ್ ಸಾಲ್‌ನ ಶೀತ ನಾಟಿ ಗದ್ದೆಲಿ ನುಲಿ
ಏಸಂಡ್

ಅಳಂಬೆ

ನಾಯಿ ಮರಿ

ಹೆಗ್ಗಲ್

ಬೆಳಂಜಿರ್

ಸುಳೆರಿ

ಹರಳ್

ಕಲ್ಲ್ ಅಳಂಬು

ಅಳಂಬು ಬೆಳವ ಮರ

ಹರಳ್ . ಕಾಚ್‌ಪಾನುವಾಳ

ಕರಿಮರ ಇತ್ಯಾದಿ

ಗುಡಿಕೈಗಾರಿಕೆ

ನೆಟ್ಟಿಕಡ್ಡಿಂದ ಚೀಪೆ

ಬೆತ್ತ. ವಾಟೆ

ಕಾಡ್‌ಲಿ ಜೇನ್

ದೊಡ್ಡ ಜೇನ್ . ಮರಲಿ

ಪೆಟ್ಟಿಗೆ ಜೇನ್ . ಮಡಿಕೆಲಿ

ಹುತ್ತಲಿ

ಕೋಲ್ ಜೇನ್ . ಬಲ್ಲೆಗಳ್ಳಿ

ಮುಜೆಂಟಿ ಜೇನ್ . ಗಿಡ ಕಲ್ಲ್‌ಗಳ್ಳಿ

ಇದೆಲ್ಲವು ಔಷಧಿಗೆ ಪ್ರಯೋಜನಕಾರಿ

ಪ್ರಾಣಿಗ

ಕಡವೆ

ಹಂದಿ

ಕುರೆಂಗಿ

ಮುಳ್ಳಂದಿ

ಮೊಲ

ಕೆಂಜೆರಿ

ಪಾಂಜ

ಬರಿಕ

ಕಬ್ಬೆಕ್ಕ್

ಅಣ್‌ಕ್

ಉಡುಂಬು

ಆನೆ

ಹುಲಿ

ಪಕ್ಷಿಗ

ಕಾಡ್ ಕೋಳಿ

ಕಿರ್ಕೋಳಿ

ಕುಂಡ ಕೋಳಿ

ಚೋರೆ ಹಕ್ಕಿ

ಪ್ಪಾಳೆ

ಮಂಡೆಮುಕ್ರ

ಗಿಣಿ

ಕೊಟ್ಟು ಮುಡ್‌ಚ

ಕೋಂಬಕ್ಕಿ

ಹೊಟ್ಟಕ್ಕಿ

ಗಿಡ್‌ಗ

ಚೊಂಬುಕ

ನವಿಲ್ ಗಿಡ್‌ಗ ಕಿರ್‌ಕೋಟ

ಮೀನ್ ಹಿಡಿಯಕೆ

ಕೂಳಿ

ಗೋರಿ

ಮದ್ದ್ ಹಾಕುದು

ಕಾಡ್ ಬ್ಯಾಟೆಲಿ ಆಯುಧ ಬಳಕೆ

ಕೋವಿ

ಸಿಡಿಹಾಕುದು

ರಬ್ಬರ್ ಬಿಲ್ಲ್

ಕವಣೆ ಕಲ್ಲ್

ಮಹಿಳಾ ಸಮಾವೇಸ

ಜಾಗೃತಿ ಮಹಿಳಾ ಸಮಾವೇಸ । ಹೋಬಳಿ ಮಹಿಳಾ ಸಮಾವೇಸ
ಭಾಗಮಂಡ್ಲ ಮಹಿಳೆಗ ಸೇರ್ರೊ। ಒಕ್ಕೂಟತೇಳಿ ರಚನೆ ಮಾಡ್ರೊ ।
ಮುಂದಾಳ್ ತೇಳಿ ಇಂದಿರ ಆದೊ । ಸಹಾಯಕ ತೇಳಿ ಮಂಡಳ ಆತ್
ಅಂತೂ ಇಂತೂ ತಯಾರ್ ಮಾಡ್ರೊ । ಮಾಡ್ರೊ ನೋಡಿ ಬಾರಿ ಸಂಕೇಸ
ಅತಿಥಿಗ ಬಂದೊ ಮಂಡ್ಯಂದಾ । ಸ್ವಾಮಾರ್ ಪ್ಯಾಟೆ । ಮಡ್ಕೇರಿಂದಾ ।
ಭಾಗಮಂಡ್ಲ ಮಹಿಳೆಗ ಅವರ್ನ । ಕರ್ಕೊಂಡೊದೊ ಪಾಲಗಲೀ
ವೇದಿಕೆ ಹತ್ತಿದ ಅತಿಥಿಗೆಲ್ಲಾ । ಕಾವೇರಿ ಮಾತೆನ ಗ್ಯಾನ ಮಾಡಿ
ಮಡ್ಗಿದ ದೀಪನ ಬೆಳ್ಗಿದೊ। ಭಾಸಣ ಬಿಗ್ರೊ ಬಾಯಿಲಿ ಬಾರಿ ॥
ಒಕ್ಕೊಂಡೋದಿದೊ ಕೆಲುವೆಲ್ಲಾ । ನಾವೇನ್ ಕಮ್ಮಿ ತ । ಮಕ್ಕಳ್ಳ
ಓದ್ಸಿ ದುಡ್ಡು ಸಂಪಾದ್ಸಿತ। ಹೇಳ್ದಿ ಹೇಳ್ದ್ ಬಾಸಣಲಿ।
ಯಾರಿಗೆ ಎಸ್ಟ್ ಮುಟ್ಟಿತೊ ಏನೊ । ಬಾತ್ ನೋಡಿ ಮಾರ್ನೆ ದಿನ ಪೇಪರ್ಲಿ
ಮಂಡ್ಯಂದ ಬಂದವು ಹೇಳ್ರೊ ನೋಡಿ । ರೈತ ಹೆಣ್ಮಕ್ಕ ನಾವೆಲ್ಲಾ
ರೈತರ್ ತೇಳಿಕೆ ನಾಚಿಕೆ ಆದೆ। ಕಾವೇರಿ ಹೊಳೆಲಿ ನೀರಿಲ್ಲೆ ।
ಒಂದು ಬೆಳೆ ತೆಗೆವು ನೀವಿಲ್ಲಿ। ಎರ್ಡ್ ಬೆಳೆ ತೆಗೆವು ನಾವಲ್ಲಿ ॥
ಮೂರ್ಬೆಳೆ ತೆಗ್ದವೆ ನಾವೂ ತೇಳ್ದ್। ತಮಿಳ್ನಾಡ್ ಜೆನ ಅಲ್ಲಿ ॥
ಎಲ್ಲವು ಉಟ್ಟಿದ್ರೊ ರಂಗ್ ರಂಗ್ ಸೀರೆ । ಅಲ್ಲಲ್ಲಿ ಉಟ್ಟಿದ್ರೊ ಗೇಂಟಿಸೀರೆ
ಕಾವೇರಿ ತಾಯಿನ ಪಾದಲಿ ಇರೊವು । ಅಪ್ಪನ ಉಪ್ಪನ ಮರ್ತಲೆ

ಕ್ರಿಕೆಟ್ ಮ್ಯಾಚ್

ವಿಶ್ವಕಪ್ ಮುಗ್ದಂಗೆ ಕೊಡ್ಗ್‌ಲಿ ಕಪ್‌ಗ ಸುರಾದೊ
ಮನೆ ಮನೆವೆಲ್ಲಾ ಸೇರ್ರೊ. ಒಗ್ಗಟ್ ಬೇಕು ನಮ್ಮಲ್ಲಿತಾ ॥
ಪ್ಯಾನ್ಸ್ ಕಾಂಪೌಂಡ್ ಮೈದಾನಲಿ ಕ್ರಿಕೆಟ್ ಮ್ಯಾಚ್ ನಡ್‌ದವೆತೇಳಿ
ಊರ್ ನಾಡ್ ಗೌಡುಗ ಎಲ್ಲಾ ಅಲ್ಲಿ ಸೇರಿದ್ರೊ॥
ಗಣ್ಯರ್ ಬಂದೊ ವೇದಿಕೆಗೆ। ಮಡ್ಗಿದ ದೀಪನ ಬೆಳ್ಗಿದೊ
ದೀಪದ ಹಂಗೆ ಕ್ರಿಕೆಟ್ ಮ್ಯಾಚ್ ಬೆಳ್‌ಗೊಕು ತೇಳಿ ಹರ್ಸಿದೊ
ಮೈದಾನ ಸುತ್ತಾ ಕುದ್ದ ಜನ್ರ। ಕಣ್ಣೆಲ್ಲ ಗ್ರವುಂಡ್‌ಲಿತ್ತ್।
ಮದುವೆಗೆ ಬಂದಂಗಾತ್। ಮ್ಯಾಚ್‌ನು ನೋಡ್ದಂಗಾತ್॥
ಹೆಣ್ಮಕ್ಕೆಲ್ಲಾ ವಳ್ಳೊಳ್ಳ ಸೀರೆ। ಉಟ್ಕಂಡ್ ಬಂದಿದ್ರೊ।
ಗೂಡೆಗಳು ಬಂದೊ ಹೈದಂಗಳೂ ಬಂದೊ।

ಅಜ್ಜಿಕ ಪಿಳ್ಳಿಕಳ ಕರ್ಕಂಡ್ ಬಂದೊ।
ಕುಪ್ಪಿಲಿ ನೀರ್ ಬ್ಯಾಗ್‌ಲಿ ತಿಂಡಿ ಕಟ್ಟಿಕಂಡ್ ಬಂದಿದ್ದೊ॥
ಓಡಿ ಓಡಿ ರನ್ನರ್ಸ್ ಆದೊ ಬಾರ್ಸಿ ಬಾರ್ಸಿ ಸಿಕ್ಸರ್ಸ್ ಮಾಡ್ದೊ
ನಾವೂ ನೀವೂ ಎಲ್ಲವು ನೋಡ್ದೊ। ಕ್ರಿಕೆಟ್ ಮ್ಯಾಚ್‌ನ।
ಮುಂದಕು ಹಿಂಗೆ ನಡಿತಾ ಇರ್ಲಿ ನಮ್ಮವು ಎಲ್ಲಾ ಮುಂದಕೆ ಬರ್ಲಿ
ಸಂಸ್ಕೃತಿ ಅಕಾಡೆಮಿ ಮೆರಿತಾ ಇರ್ಲಿ ಮಾಧ್ಯಮ ಸಂಗಾತಿ ಬರಿತಾ ಇರ್ಲಿ
ಆಟದ ಮುಂದೆ ಕೆಲ್ಸಯಿಲ್ಲೆ ಕೆಲ್ಸದ ಮುಂದೆ ಆಟಯಿಲ್ಲೆ
ಎಲ್ಲವು ಇದರ್ನ ತಿಳ್ಕಂಡ್ರೆ। ಮನೆಗೂ ಹೆಸ್‌ರ್ ಬಂದದೆ॥
ಕುಲದೇವ್ರು ವೆಂಕಟರಮಣ ಸ್ವಾಮಿನ ಎಲ್ಲವು ನೆನಿಯೋಕು
ಊರುನಾಡ್ ಗೌಡುಗ ಸೇರಿ। ಎಲ್ಲವು ನೆನಿಯೋಕು
ಮ್ಯಾನ್ಸ್ ಕಾಂಪೌಂಡ್ ಮೈದಾನಲಿ ಕ್ರಿಕೆಟ್ ಆಟ ಆಡ್‌ದವ್ರುಕು
ಬಂದವ್ರುಕು ನೋಡ್‌ದವ್ರುಕು ದೇವ್ರು ವಳ್ಳೆದ್ ಮಾಡಲಿತೇಳಿ
ಬೇಡೋನ ನಾವೆಲ್ಲಾ। ಕುಲದೇವ್ರು ವೆಂಕಟರಮಣ ಸ್ವಾಮಿನ
ಬೇಡೋನ ನಾವೆಲ್ಲಾ ಊರುನಾಡ್ ಗೌಡುಗ ಸೇರಿ ಬೇಡೋನ ನಾವೆಲ್ಲಾ

ಗಾಳಿಬೀಡ್‌ನ ಮಹತ್ವ

ಹಬ್ಬ, ಹಬ್ಬ, ಅದೇ ಹಬ್ಬ, ಗಾಳಿಬೀಡ್‌ಲಿ ಕೈಲ್‌ಪೊದು ಹಬ್ಬಾ,
ಗಾಳಿಬೀಡ್‌ನ ಅದೊಂದು ಹಬ್ಬಕೆ ನೆಂಟ್ರ್‌ಗ ಹೋದೆ ಪ್ರೊರ್ಲು ನೋಡಿಕೆ
ಗಾಳಿಬೀಡ್‌ನ ಅಡ್ಕದ ಬಾಣೆಲಿ ಕೈಲ್‌ಪೊದು ಆಟ ಉಟ್ಟುತ್ತೇಳಿ
ಸೇರುವೆ ಎಲ್ಲಾ ಅಡ್ಕದ ಬಾಣೆಲಿ ಹಬ್ಬ, ಹಬ್ಬ, ಅದೇ ಹಬ್ಬ,
ಅಡ್ಕದ ಬಾಣೆಗೆ ಹತ್ರನೆ ಉಟ್ಟು, ಮಾದೂರಪ್ಪನ ದೇಸ್ಥಾನ
ಮ್ಯಾಲೆನೆ ಉಟ್ಟು, ಚಪ್ಪಂಡ ಕೆರೆ ನೋಡಿಕೆ ಬರೊವ್ರು ಸಿನಿಮಾದವೆಷ್ಟೊ,
ಗಾಳಿಬೀಡಿಗೆ ಹೋಗುವ ದಾರ್‌ಲಿ ಸಿಕ್ಕುದೇ ಅದ್ ಕೂಟು ಹೊಳೆ
ಗಾಳಿಬೀಡ್ ನೀರೂ ಮಡ್ಕೇರಿ ನೀರೂ ಸೇರ್ದೊಕೆ ಹೇಳ್ದು ಕೂಟು ಹೊಳೆತ
ಕೂಟು ಹೊಳೆ ನೀರ್ ಬೇಕಾದು ಅದ್ ಮಡ್ಕೇರಿ ಜನಕೆ ಕುಡಿಯಕೆ ನೀರ್
ಬಡತನ ಸಿರಿತನ ಅಲ್ಲಿಲ್ಲೆ ಕೂಡಾಡಿ ಕೆಲ್ಸ ಮಾಡುವೆ ಅಲ್ಲೆಲ್ಲಾ
ಗಾಳಿಬೀಡ್‌ಲಿ ಇರ್ದು ಭದ್ರಕಾಳಿ ದೇವ್ರು ಹಾಲೇರಿ ವಂಸದ
ಹೊರಮಲೆರಾಜ ಕಟ್ಟಿ ಸಿತ್। ಅದ್ಕೆಕಲ್ಲ್‌ನ ಗುಡಿನಾ।
ಪೂರ್ತಿ ಆತ್‌ಲೆ ಅದ್ ಒಂದೇ ದಿನಲಿ ಇಂದಿಗೂ ಹಂಗೆ
ಉಳ್ದುಟ್ಟು ತೇಳಿ ಹಿರ್ಯವು ಹೇಳುವ ಮಾತುಟ್ಟು।

ಭದ್ರಕಾಳಿ ದೇವಿ ಹಬ್ಬತೇಳ್ರೆ ಜಾರಿ ಕಠಿಣ ಅದ್
ಕಟ್ಟ್ ನಿಟ್ಟ್‌ಲಿ ನಡಿಯೊದು ಅದ್ ಒಂದೊಂದುವಾರ।
ಪಟ್ಟಣೆ ಇರ್ರು ನೀರ್‌ದ್ವಾಸೆ, ಹುಳಿದೋಸೆ ಹಲ್‌ಸ್‌ನ ಕುಜ್ಜೆ ಹುರುಳಿ ಗೈಪು
ಗುಡ್ಡಿಕೆ ಜೀಪೆ ಬೇಕುತಾಪರೆ ಹೋಗೊಪ್ಪು ಎಷ್ಟ್ ಜೆನಕುಂಮುಗ:
ಕೆಳ್‌ಗೆನ ಕುಂದ್‌ಲಿ ಇರ್ರು ಟೀತ್ವಾಟ ಪ್ರವಾಸ ಹೋಗೊಪ್ಪು ಬೇಕಸ್ಟ್.......
ಇಸ್ಟ್ ವರ್ಸ ಓಂಗೆ ಆಗೆ ಇತ್ತ್‌ಲೆ। ಈ ವರ್ಸ ಜಾತ್ ನೋಡಿ ಬರಗಾಲ
ಎಲ್ಲಪ್ಪು ಹೇಳುವ ಮಾತಿದ್ ಕೂಟ್‌ಹೋಳಿ ಕೆರೆಲಿ ನೀರಿಲ್ಲೆ
ಒಮ್ಮೆ ಮಳೆ ಬಂದರೆ ಸಾಕಪ್ಪಾ ಗಾಳಿಬೀಡ್ ತೇಳ್ರೆ ಕೆಲವ್ರುಕೆ ಆಸಡ್ಡೆ
ಈಗ ಕಂಡರಿಯಾ ಗಾಳಿಬೀಡ್‌ನ ಮಹತ್ವ। ಇದೆ ಹೊರ ಮಲೆನಾಡ್‌ನ ಮಹತ್ವ।

ಹದಿನೆಂಟು ಚಂಡೆ ಪಾಲೂರಪ್ಪಂಗೆ

ಒಟ್ಟಿಗೆ . ಒಟ್ಟಿಗೆ ಒಂಬತ್ತು ಚಂಡೆ। ಪಾಲೂರಪ್ಪಂಗೆ
ಒಂಬತ್ತು ಒಂಬತ್ತು ಹದಿನೆಂಟು ಚಂಡೆ ಪಾಲೂರಪ್ಪಂಗೆ॥
ಬನ್ನಿ ಬನ್ನಿ ಭಕ್ತರೆಲ್ಲಾ ಪಾಲೂರಿಗೆ ಹೋಗೋಣ।
ಪಾಲೂರಪ್ಪಂಗೆ ನಮಿಸುತ್ತಾ ನೂರಾಹತ್ತು ಮೆಟ್ಟು ಹತ್ತಿ
ಸ್ವಾಮಿ ಶಿವ ಎಂದು ಶಿವನ ಪಾದ ಕೆರಗೋಣ।
ಹಾಲು ಹರಿಸಿದ ಪಾಲೂರಪ್ಪನ ಪಾದಕೆರಗೋಣ।
ಬಸವನಿಗೆ ಕೈಮುಗಿದು। ಸುಬ್ರಹ್ಮಣ್ಯಂಗೆ ವಂದಿಸುತ್ತಾ
ನಾಗನಿಗೆ ಹಾಲೆರೆದು ಮುಂದೆ ಸಾಗೋಣಾ
ಗಣಪನಾ ಪಾದಕೆರಗಿ ಹಣ್ಣುಕಾಯಿ ಹೂವುಕೊಟ್ಟು,
ಮಹಾಲಿಂಗೇಶಂಗೆ ಮಂಗಳಾರ್ತಿ ಸೇವೆ ಮಾಡೋಣಾ
ಕಾವೇರಿಲಿ ಮೀಯಲೆಂದು ಹರಿಶ್ಚಂದ್ರಕೆ ಬಂದೇವು
ಕಂಡೇವು ನಾವಲ್ಲಿ ಪಾಲೂರಪ್ಪ ನಾ ಆ ಮಹಾಲಿಂಗೇಶ್ವರನಾ
ಕೊಡಿಮರವಾ ನೋಡಲೆಂದು ಬಂದಿರುವಾ ಭಕ್ತರಾ
ಪೌಳಿ ಸುತ್ತಾ ನೋಡೋಣೊಮ್ಮೆ ಬನ್ನಿರಿ
ಮಹಾಲಿಂಗೇಶಂಗೆ ಮಂಗಳಾರ್ತಿ ಸೇವೆ
ಪಾಲೂರಪ್ಪಂಗೆ ಎತ್ರಾಟ ಸೇವೆ। ಒಟ್ಟಿಗೆ॥
ಮುಂದೆ ಅಣ್ಣ ಇಗ್ಗುತ್ತಪ್ಪಾ . ಹಿಂದೆ ತಮ್ಮ ಮಾದೂರಪ್ಪಾ
ಮೋಡ ಕವಿದು ಬರುವ ತಂಗೀ... ಪನ್ನಂಗಾಲ ತಮ್ಮೆಯೋ....
ಪಾಲೂರಪ್ಪಂಗೆ ವಂದಿಸುತ್ತಾ ನೂರಾಹತ್ತು ಮೆಟ್ಟು ಇಳಿದು
ಕಾಳಿಕಾಂಬೆಗೆ ಧೂಪಾರತಿ ಮಾಡಲೆಂದು ಮುಂದೆ ಸಾಗೋಣಾ
ಪಾಲೂರಪ್ಪಂಗೆ ನಮಿಸುತ್ತಾ ಎಲ್ಲರಿಗೂ ಪ್ರೀತಿ ಶಾಂತಿ
ಒಗ್ಗಟ್ಟಿಗೆ ಕೈಯ್ಯ ಮುಗಿಯೋಣಾ ಕೈಯ್ಯ ಮುಗಿಯೋಣಾ।

ಕಾಳಿಕಾಂಬೆ ದೇವಿಗೆ (ಪಾಲೂರು ಕನ್ನಂಬಾಡಿ ಅಮ್ಮನವರಿಗೆ)

ಬ್ಯಾಸಗೆ ಹತ್ತರಂದು। ಕೊಂಬೋಲಗ ಮಧ್ಯದಿಂದಾ।
ಕೇಳಿ ಬರುವುದು ಈ ನುಡಿಯು ॥ ಹರಿಯೋಂ ಹರಿಯೋಂ ಎಂಬ ನುಡಿಯು
ಕಾಶಿಯಲಿ ಹುಟ್ಟಿ। ಗೋಕುಲಕೆ ಬಂದು
ಕೊಲ್ಲೂರಿನಲ್ಲಿ ನೆಲೆಸಿದಾ ತಾಯೇ ॥
ದಕ್ಷಿಣಕೆ ಮುಖ ಮಾಡಿ। ಕನ್ನಂಬಾಡಿಯಲ್ಲಿ ಉದ್ಭವಿಸಿ।
ಕಾವೇರಿಲಿ ಮೀಯಲೆಂದು। ಮತ್ತೆ ಪೂರ್ವಕೆ ॥
ಅಗಸ್ತ್ಯೇಶ್ವರ ತಪಗೈದ। ಪುಣ್ಯಕ್ಷೇತ್ರ ಹರಿಶ್ಚಂದ್ರಕೆ
ಗುಪ್ತಗಾಮಿನಿಯಾಗಿ ಶಿವನಲಿ ಐಕ್ಯಳಾದೆ। ಕಾವೇರಿತಟದಲ್ಲಿ
ಹರಿಶ್ಚಂದ್ರದಲ್ಲಿ ಮಿಂದು। ಮಹಾಲಿಂಗೇಶ್ವರನ ಸನ್ನಿಧಿಯಲ್ಲಿ
ಪಾರ್ವತಿ ಮಾತೆಯಾಗಿ ಮೆರೆದೆ।
ಶಕ್ತಿರೂಪಿಣಿಯಾಗಿ। ಕಾಳಿಕಾಂಬೆ ಎಂಬ ಹೆಸರಲಿ
ಅಮ್ಮ ನೂರು ದೇವಿ ಎಂಬ ನಾಮ ಪಡೆದು
ನೆಲೆ ನಿಂತೆ ಈ ಊರಲಿ... ಈ ಪಾಲೂರಲಿ....
ಪ್ರತಿ ಸಂಕ್ರಮಣ ದಿನದಂದು। ಹರಿಯೋಂ ಹರಿಯೋಂ
ಎಂಬ ನುಡಿಯು ಈ ಊರಿಗೇ... ಈ ನಾಡಿಗೇ.. ॥
ಬ್ಯಾಸಗೆ ಹತ್ತರಂದು। ಕೊಂಬೋಲಗ ಮಧ್ಯದಿಂದಾ
ಕೇಳಿ ಬರುವುದು ಈ ನುಡಿಯು ಹರಿಯೋಂ... ಹರಿಯೋಂ.. ಎಂಬ.... ನುಡಿಯು

ಜನಪದದಲ್ಲಿ ಪಾಂಡವರ ಬದುಕು

ಕಿನ್ನೂರಿ ಕಿರುಗೆಜ್ಜೆ ಕೈಯಲ್ಲಿ ನುಡಿಸುತ್ತಾ
ಕಿನ್ನೂಡಿ ಮ್ಯಾಲೆ ಕಿರುಗೆಜ್ಜೆ.... ತಾನಂದನ್ನಾ ತಾನನೊ ತಂದನ್ನಾನೊ
ಮಂಟಪದ ಮನೆಕಟ್ಟಿ ಪಾಂಡವರು ಜೂಜನಾಡಿ
ಸೋತರು ರಾಜ್ಯನ್ನೆಲ್ಲಾ... ತಾನಂದನ್ನಾ ತಾನನೊ ತಂದಾನ್ನಾನೊ
ಕರಿಯಾಪುರದ ನಗರದಲ್ಲಿ ಕೌರವರು ಪಾಂಡವರು
ಧರಣಿಯನ್ನು ಒತ್ತೆಯಿಟ್ಟು ಜೂಜನಾಡಲು ॥ ತಾನಂದನ್ನಾ ತಾನನೊ ತಂದಾನ್ನಾನೊ
ಪಾಪಿ ಕೇಡಿ ಶಕುನಿ ತಾನು। ಪಾಪದೊಳಗೆ ಸಿಲುಕಿ
ಪಾಂಡವ, ಧರ್ಮಜನು। ದ್ರೌಪದಿಯ ಸೋತನು ತಾನಂದನ್ನಾ ತಾನನೊ ತಂದಾನ್ನಾನೊ
ಭೂಮಿಕಾಣಿ ಎಲ್ಲಾ ಸೋತು। ಆನೆ ಸಾಲು ಒಂಟೆಸಾಲು।
ಜೇಡವೆಂದರೂ ಭಂಡಾರಾ ತರಿಸಿದಾ। ತಾನಂದನ್ನಾ ತಾನನೊ ತಂದಾನ್ನಾನೊ
ಸೋತರೆಂಬ ಸುದ್ದಿ ಕೇಳಿ ಮುದ್ದು ಮುಖದ।

ದ್ರೌಪದಿಯ ಮುಂದೆ ಮಾಡಿ ಎಳೆದು ತಂದೂ
ಮುದ್ರೆ ಮಾನವರು ಬಂದು। ದ್ರೌಪದಿಯ ಮುಂದೆ ನಿಂತು।
ಅಮ್ಮ ಕೇಳ್। ನಮ್ಮರಸುಗಳು ಹೆಮ್ಮೆಯಿಂದ ಜೂಜನಿಟ್ಟು।
ತಾನಂದನ್ನಾ ತಾನನೊ ತಂದಾನ್ನಾನೊ
ಧರ್ಮರಾಯ ಸೋತರೆಂಬಾ ಸತ್ಯ ತಿಳಿದು।
ಧಾರುಣಿಗೆ ಮುಖವ ಮಾಡಿ ತಗ್ಗಿ ನಿಂತಳು   ತಾನಂದನ್ನಾ ತಾನನೊ ತಂದಾನ್ನಾನೊ
ಭೀಮ ಧರ್ಮಜರಿಗೆ ವನವಾಸ ಬಂದಾಗ
ಬೆರಗೆ ತಟ್ಟಿ ಎದುರೊಡೆದು   ತಾನಂದನ್ನಾ ತಾನನೊ ತಂದಾನ್ನಾನೊ
ಪಾಂಡವರ ಬದುಕು ಏನಾದೊ ಎಂತಾದೊ
ತಳಿಗೆ ತಾವರೆ ಎಲೆಯಾದೊ ॥
ತಳಿಗೆ ಚೆಂಬು . ತುಂಬೇಯ ಗಿಡವಾದೊ
ಕರೆವೆಮ್ಮೆ ಕಾಡು ಮೃಗವಾದೊ   ತಾನಂದನ್ನಾ ತಾನನೊ ತಂದಾನ್ನಾನೊ
ಕಲ್ಲು ಕಡುಬು ಮಾಡಿ। ಮುಳ್ಳುಶಾವಿಗೆ ಹೂಡಿ
ಬನ್ನಿ ಎಲೆಯ ಪತರೊಳಲಿ ಪಾಂಡವರು
ಅಟ್ಟುಂಡು ಹೋದರು ವನವಾಸ
ಅತ್ತಿ ಮರದಡಿಲಿ ಅಟ್ಟುಂಡು ಹೋದವರ್ಯಾರು!
ಅತ್ತಿಕಾಯಿ ಒಲೆಹೂಡಿ ಪಾಂಡವರು   ತಾನಂದನ್ನಾ ತಾನನೊ ತಂದನಾನೊ
ಕುಂತಿ ಕುಟ್ಟ್ಯಾಣ ಕುಟ್ಟಿ   ಭೀಮ ಭಿಕ್ಷಾಬೇಡಿ
ಎಂತೋರಿಗೆಂತಾ ಗತಿ ಬಂತಪ್ಪಾ!
ಕಂಡಾರು ಕಾಯ್ದರು ದನಗಳಾ ಕುಂತ್ಯಪ್ಪಾ
ಶೋಕಾವ ಮಾಡ್ಯಾಳು ಮನದಲ್ಲೀ.......   ತಾನಂದನ್ನಾ ತಾನನೊ ತಂದಾನ್ನಾನೊ
ಒಪ್ಪಜಾಜಿ ಚಪ್ಪರ ಹೂಡಿ। ರೆಪ್ಪೆ ಹೊಯ್ದು ॥
ಮುಚ್ಚ್ಯೊದೊಂದು। ಬೆಡಗಾ ತೋರಿದಾ..... ತಾನಂದನ್ನಾ ತಾನನೊ ತಂದನಾನೊ
ತಾನಂದನ್ನಾ ತಾನನೊ ತಂದಾನ್ನಾನೊ
ಬೆಡಗ ತೋರಿದಾ ಅಲ್ಲಿ ಹರಿಯು ದೊರಕಿದಾ
ಹಟ್ಟಿಯಾ ಮನೆಯೋರೆ ಪಟ್ಟೆ ಕಂಬ ಸಾಲ್ನೋರೆ
ಪಟ್ಟಣ ಬಿಟ್ಟ ಬಗೆಯೇನು ಅತ್ತ್ಯವ್ವಾ! ಎನ್ನುತ್ತಾ
ತಂಗಿ ದ್ರೌಪದಿಯ ಕರೆಯಿರಿ.... ಅಂದಾನು ॥
ಅಕ್ಷಯ ಪಾತ್ರೆ ತಲೆ ಮೇಲೆ ಇಟ್ಟುಕೊಂಡು
ಬಾವರೈವರಿಗೆ ಊಣ ಬಡಿಸು ತಂಗ್ಯವ್ವಾ।   ತಾನಂದನ್ನಾ ತಾನನೊ ತಂದನಾನೊ
ಸತ್ಯವುಳ್ಳ ಪಾಂಡವರು ಸತ್ತ.... ರೆಂದನಬೇಡಿ
ಬಿತ್ತಿ ಹೋದರವರು। ಹೊಲದಲ್ಲಿ ಅವರೇಯಾ॥ ತಾನಂದನ್ನಾ ತಾನನೊ ತಂದನಾನೊ

ಚುಂಚನಗಿರಿ ಪ್ರವಾಸ

ಅಂದು ಬೆಳಿಗ್ಗೆ 6 ಗಂಟೆಗೆ ಮಂದಿರ ಶಶಿಯವರ ವ್ಯಾನು ಶ್ರೀ ಓಂಕಾರೇಶ್ವರ ದೇವಾಲಯದ ಬಳಿ ವೃಷ್ಟಿಕಾಯನ್ನೊಡೆದು 17 ಜನ ಮಹಿಳೆಯರನ್ನು ಹೊತ್ತ ಸುಸಜ್ಜಿತ ವ್ಯಾನಿನ ಸೀಟುಗಳಲ್ಲಿ ಕುಳಿತು ಆರಾಮಾಗಿ ಹಾಸನದ ದಾರಿ ಹಿಡಿದು ಮುಂದೆ ಆದಿಚುಂಚನಗಿರಿಯನ್ನು ಮಧ್ಯಾಹ್ನ 12 ಕ್ಕೆ ತಲುಪಿದಾಗ ಗಿರಿ ಬಂಡೆಗಳ ಚುಂಚನಗಿರಿ ಬೆಟ್ಟ ನಮಗೆ ಸ್ವಾಗತ ನೀಡಿತು. ಮಧ್ಯಾಹ್ನ ಹನ್ನೆರಡು ಆಗಿದ್ದರಿಂದ ನಮ್ಮನ್ನು ಆದರದಿಂದ ಸ್ವಾಗತಿಸಿದ ಮಠದ ಸ್ವಾಮಿಗಳ ಶಿಷ್ಯವೃಂದವು ನಮ್ಮ ಗುಂಪಿನವರನ್ನು ತಾವು ಮಡಿಕೇರಿಯವರೇ ಎಂದು ಕೇಳಿ ಸ್ವಾಮಿಗಳ ದರ್ಶನ ಮಾಡಿಸಿದಾಗ ನಮ್ಮ ಆಯಾಸವೆಲ್ಲಾ ಪರಿಹಾರವಾಗಿ ಸಾರ್ಥಕ ಎನಿಸಿತು. ಗುಂಪಿನ ಹಿರಿಯರಾದ ರಾಧಕ್ಕನವರು ಒಂದು ಮನವಿ ಪತ್ರದೊಡನೆ ಸಂಸ್ಕೃತಿಯನ್ನು ಪ್ರತಿಬಿಂಬಿಸುವ ಪಸೆಮಣೆ ಪುಸ್ತಕವನ್ನು ಸಲ್ಲಿಸಿದಾಗ ಮುಗುಳ್ನಗೆಯಿಂದ ಸ್ವೀಕರಿಸಿದ ಸ್ವಾಮಿಗಳು ನಮಗೆ ಬೆಳಗಿನ ಉಪಹಾರವನ್ನು ಸ್ವೀಕರಿಸಿ ನಂತರ ತನ್ನನ್ನು ಭೇಟಿಯಾಗಲು ತಿಳಿಸಿದರು. ಸುಮಾರು 1 ಗಂಟೆಗಳ ಕಾಲ ಮಠದ ಇತರ ಬ್ರಾಂಚ್‌ನ ಎಂಟು ಮಂದಿ ಸ್ವಾಮಿಗಳೊಂದಿಗೆ ಮೀಟಿಂಗು ನಡೆಸಿ ಬಂದು ಅಲ್ಲಿನ ವಿಶಾಲವಾದ ಸಭಾಂಗಣದಲ್ಲಿ ಸ್ವಾಮಿಗಳು ಕುರ್ಚಿಯಲ್ಲಿ ಕುಳಿತು ನಮ್ಮನ್ನು ಅವರ ಎದುರು ಪಕ್ಕದಲ್ಲಿ ಕೂರಲು ತಿಳಿಸಿದರು. ನಂತರ ನಮ್ಮನ್ನು ಬಂದ ವಿಷಯ ವಿಚಾರಿಸಿದರು. ಆಗ ಅವರು ಲೋಕಕಲ್ಯಾಣ ಸೇವೆಗಳಾದ ಆಸ್ಪತ್ರೆ, ಶಾಲೆ ಹಲವು ತರದ ವಿದ್ಯಾಕೇಂದ್ರಗಳು, ಕ್ಯಾನ್ಸರ್ ರಿಸರ್ಚ್ ಸೆಂಟರ್ ಇತ್ಯಾದಿಗಳ ಬಗ್ಗೆ ಹೇಳಿದರು. ಆಗ ನಾವು ನಮಗೆ ಒಂದು ಸ್ಕೂಲನ್ನು ತೆರೆಯುವ ಅಭಿಲಾಷೆ ಕೇಳಿದ್ದಕ್ಕೆ ಅವರು ಸ್ಕೂಲ್ ನಡೆಸುವುದು ಕಷ್ಟ ಅದಕ್ಕಿಂತ ಹೆಣ್ಣು ಮಕ್ಕಳ ವಸತಿನಿಲಯ ಮತ್ತು ಹೆಣ್ಣುಮಕ್ಕಳಿಗೆ ಸಂಬಂಧಪಡುವ ಪ್ರಯೋಜನಕಾರಿ ಕೇಂದ್ರಗಳನ್ನೇ ಸ್ಥಾಪಿಸಲು ಸಹಾಯ ಮಾಡುವುದಾಗಿ ಭರವಸೆಯಿತ್ತರು. ಅಲ್ಲದೆ ನಮ್ಮದೇ ಹೆಸರಿನಲ್ಲಿ ಎಲ್ಲಿಯಾದರೂ ಸರಕಾರಿ ಜಾಗವಿದ್ದರೆ ಅಲ್ಲಿ ಸ್ಥಾಪನೆ ಮಾಡುತ್ತೇವೆ. ಆದರೆ ಹೆಸರು ಮಾತ್ರ ನಮ್ಮದು ಬಾಕಿ ಎಲ್ಲಾ ಕೆಲಸಗಳೂ ನಿಮ್ಮದು ಎಂದು ಭರವಸೆಯಿತ್ತರು. ಆತರ ಕೇಂದ್ರ ಸ್ಥಾಪನೆ ಆದರೆ ಕೊಡಗಿನಲ್ಲಿ ಹಲವಾರು ಸಮಸ್ಯೆಗಳು ಪರಿಹಾರವಾಗುತ್ತಿದ್ದುವೇನೊ ಎನಿಸಿತು ಆ ಕ್ಷಣದಲ್ಲಿ.

ಆದಿನ ನಮ್ಮನ್ನು ಇರಿಸಿಕೊಳ್ಳಲು ಎಲ್ಲಾ ಏರ್ಪಾಡನ್ನೂ ಸಂಪಾಜೆಯ ದೇವಿ ಪ್ರಸಾದರು ತಿಳಿಸಿದುದರಿಂದ ಆದಿನ ಅಲ್ಲಿದ್ದು ಕುರುಡರ ಶಾಲೆಯ ಪ್ರೋಗ್ರಾಂ ನೋಡಲು ಕೇಳಿಕೊಂಡರು. ನಾವು ಮುಂದೆ ಗುರುಗಳ ಆಶೀರ್ವಾದ ಪಡೆದು ಹೊರಡಲು ಹೋದಾಗ ಅವರು ನಮಗೆ 111 ಭಾವ ಚಿತ್ರವಿರುವ ಚಿತ್ರಗಳನ್ನು ಪ್ರಚಾರಕ್ಕಾಗಿ ಕೊಟ್ಟರು. ಆ ದಿನ ಚುಂಚನಗಿರಿಯ ದರ್ಶನ ಪಡೆದು ವಯಸ್ಸನ್ನು ಮರೆತು ಬೆಟ್ಟ ಹತ್ತಿಳಿದು ಬಂದೆವು. ವಾಪಾಸಾಗುತ್ತಾ ಶ್ರವಣ ಬೆಳಗೊಳದ ಗೋಮಟೇಶ್ವರನ ದರ್ಶನ ಮಾಡಿಕೊಂಡು ಮಧ್ಯರಾತ್ರಿ ಮಡಿಕೇರಿಯನ್ನು ತಲುಪಿದೆವು.

ಪ್ರತಿಯೊಬ್ಬರನ್ನೂ ಅವರವರ ಮನೆಗೆ ತಲುಪಿಸಿ ಶಶಿಯವರು ನಮ್ಮೊಡನೆ ಸಂತೋಷವಾಗಿ ಈ ದಿನ ಕಳೆಯಿತೆಂದು ನಮಗೆ ವಂದನೆಗಳನ್ನು ಹೇಳುತ್ತಾ ವಾಪಾಸಾದರು.

ರೈತ ಹೆಣ್ಮಕ್ಕ ಮತ್ತೆ ಅವರ ಸಮಸ್ಯೆಗ

ಕಮಲಕ್ಕ ಏನ್ ಗೌರಿ ಎತ್ತ ಹೊರ್ಟ? ಕತ್ತಲಾಗ್ತಾವುಟ್ಟು, ಮಳೆ ಬ್ಯಾರೆ ಬರ್ತಾ ಉಟ್ಟಲೆ ಅಲ್ಲಾ. ತಲೆಮ್ಯಾಲೆ ಅಷ್ಟ್ ದೊಡ್ಡ ಹೊರೆ ಉಟ್ಟು, ಎಂತದ್ ಅದ್?

ಗೌರಿ ನೋಡಕ್ಕಾ ಮಳೆಗಾಲ ಬಾತಲೆ ಗದ್ದೆ ತ್ವಾಟ ಕೆಲ್ಸ ಅದ್ ಇದ್ ಏನಾದರೊಂದು ಕೆಲ್ಸ. ಇದ್ದೆ ಇದ್ದದೆ. ಈ ಹಳ್ಳಿ ಕೆಲ್ಸತೇಳ್ರೆ ಒಂದು ಗಳಿಗೆ ಪುರ್ಸೊತ್ತ್ ಇರ್ದುಲೆಪ್ಪ. ಯಾಗಾರ್ ಪುರ್ಸೊತ್ತು ಸಿಕ್ಕ್‌ಕಾಕನ ನಾವು ಈ ಕೆಲ್ಸ ಮಾಡುವೆ.

ಕಮಲಕ್ಕ ಹಂಗೆ ಹೇಳ್‌ಬಡ ಗೌರೀ. ಈ ಪ್ಯಾಟೆಲಿರೊವ್ರುಕ್ಕಿಂತ ಹಳ್ಳಿಲಿ ಇರೊವೆ ವಾಸಿ. ತ ನನ್ನ ಗ್ಯಾನ ನೀವೆಲ್ಲಾ ತಿಳ್ಕಂಡಂಗೆ ಪ್ಯಾಟೆಲಿ ಕಷ್ಟ ಇಲ್ಲೆತೇನಿಲ್ಲೆ. ಅದ್ ಸೆರಿ ಇಷ್ಟೊಂದು ಕುಕ್ಕೆಗಳ ಕಟ್ಟಿ ಹೊತ್ತ್ಕೊಳಲ್ಲಾ ಆ ಹೊರೆನ ಇಳ್ಸಿ ಆ ಕಲ್ಲ್‌ನ ಮ್ಯಾಲೆ ಮಡ್ಗ್. ಸ್ವಲ್ಪ ಹೊತ್ತು ಕುದ್ದ್ ಮಾತಾಡ್ವೊ ಬಸ್ ಬಾಕೆ ಇನ್ನೂ 10 ನಿಮ್‌ಸವುಟ್ಟು. ಅಲ್ಲಾ.. ನೀನ್ ಇಷ್ಟೊಂದು ಕುಕ್ಕೆಗಳ್ನ ತಕಂಡ್ ಎಲ್ಲಿಗೆ ಹೊರ್ಟೊಳಾ. ಹೇಳ್ ಪರ್ವಾಗಿಲ್ಲೆ ಎಲ್ಲವ್ರುಕು ಕಷ್ಟ ಇದ್ದದ್ದೆ. ಸಂಕೋಚ ಯಾಕೆ? ಅವರವರ ಕಸುಬು ಕೆಲ್ಸ ಮಾಡಿಕೆ ಸಂಕೋಚ ಯಾಕೆ ಪಡೊಕು?

ಗೌರಿ ನೋಡು ಕಮಲಕ್ಕಾ. ನೀನಾದರೆ ಸರ್ಕಾರದ ಉದ್ಯೋಗಲಿವಳ. ನಾವಿಬ್ರೂ ಒಟ್ಟಿಗೆ ಓದ್ತಾಯಿದ್ದರೂ ನೀನ್ ಓದಿ ಪ್ಯಾಟೆ ಸೇರ್ದ. ಈಗ ಕರ್ಜಿಗೆ ಹಣ ಬೇಕಲೆ? ಏನ್ ಮಾಡ್ದು ಹೇಳ್ ಇದ್ ನಮ್ಮ ಮಾಂವ ನೆಯ್ದ ಕುಕ್ಕೆಗ. ಅವ್ರು ಕೆಲ್ಸಂದ ನಿವೃತ್ತಿ ಆದಮ್ಯಾಲೆ ಅವರ ಅಪ್ಪ ಮಾಡ್ತಾಯಿದ್ದ ಬಿತ್ತದ ಕೆಲ್ಸನ ಗ್ಯಾನ ಮಾಡ್ಕಂಡ್ ಏನಾರ್ ಒಂದು ಮಾಡ್ತಾಯಿದ್ದವೆ. ಮಾತ್ರ ಅಲ್ಲಾ ಅವ್ರು ಬಿತ್ತಂದ ವ್ಯವಸಾಯಕ್ಕೆ ಬೇಕಾದ ಎಲ್ಲಾ ತರದ ವಸ್ತುಗಳ್ನ ನೆಯ್ದವೆ. ಹಂಗಾಗಿ ನಾವು ಮಾರ್ಕೆಟ್‌ಂದ ಯಾವ ವಸ್ತುಗಳ್ನ ಸ ಕ್ರಯಕ್ಕೆ ತಾದುಲೆ. ಅವ್ರು ನೆಯ್ದ ಕುಕ್ಕೆಗ ವಳ್ಳೆ ಬ್ಯಾಳಿಕೆ ಬಂದದೆ. ಹಂಗೆ ಈ ಕುಕ್ಕೆಗಳ್ನ ಅಚೆಕರೆ ಮನೆವು ತಕಂಡ್‌ಬಾತೇಳ್ಡೊ. ಅದ್ಕೆ ಇಷ್ಟೊತ್ತಿಗೆ ಹೊರ್ಟೆ.

ಕಮಲಕ್ಕಾ ಹೋ ಬಾರಿ ಲಾಯ್ಕ ನೆಯ್ದೊಳೊ. ಈಗ ಇಂತಹ ಕೆಲ್ಸನ್ನೆಲ್ಲಾ ಯಾರ್ ಮಾಡುವೆ ಹೇಳ್. ಕಲ್ತವೆ ಅಪ್ರೂಪ. ಎಲ್ಲವೂ ಮಾರ್ಕೆಟ್‌ಂದ ಒಂದಕ್ಕೆ ಎರಡ್ ಹಣಸೊರ್ದ್ ತಂದವೆ. ಇಂತಹ ಗುಡಿಕೈಗಾರಿಕೆಗಳ್ನ ಕಲ್ತವರ್‌ಂದ ತಿಳ್ಕಂಡ್ ಮನೆಕೆಲ್ಸಕ್ಕೆ ಉಪಯೋಗ್ಸಿಕಂಡ್ ಬ್ಯಾರೆಯವ್ರರೆ ಮಾರಾಟ ಮಾಡ್ರೆ ಹಣನೂ ಉಳ್ದ. ಹಂಗೆ ನಮ್ಮ ಜನಪದ ಗ್ರಾಮೀಣಕಲೆನ ಉಳ್ದದೆ. ಉದಾಹರಣೆಗೆ ಗೌರಿ. ಮಳೆಗಾಲ ಕೆಲ್ಸಕ್ಕೆ ಸಂಬಂದಿಸಿದಂಗೆ ಬೇಕಾದ ಗೊರ್ಗ, ಬರ್‌ಂಜಿ ಪಲಕ್ಕಿ ಪಚ್ಚೆ ಕಾಫಿ ಕುಯ್ಯಕ್ಕೆ ಕುಕ್ಕೆ ಬೆಳೆ ಹೊರೆ ಕಟ್ಟಿಕೆ ನಾರ್‌ಂದ ಹಗ್ಗ ಮಾಡ್ದು ಇದರ್ನೆಲ್ಲಾ ಮನೆಲಿ ಕುದ್ದ್‌ಕಂಡ್ ಮಾಡ್ರೆ ಸಮಯನೂ ಕಳ್ದದೆ. ಸಣ್ಣ ಸಣ್ಣ ಕರ್ಜಿ ನಿಭಾಯಿಸಕ್.

ಗೌರಿ ನೀನೋನೊ ಸುಲ್ಭಾಗಿ ಹೇಳ್ದ ಕಮಲಕ್ಕಾ. ಮಾರಾಟ ಮಾಡಿಕೆ ತಲೆ ಹೊರೆಲಿ ಹೊರಿಕೆ ಆದ್ಯಾ? ಮತ್ತೆ ತಕಂಬವ್ರು ಸನಬೇಕಲೆ? ಹಿಂಗೆ ಯಾರಾರ್ ಬಂದ್ ಕೇಳ್ರೆ ಮಾಂವ

ಸೇಸ್ಟ್ ಕೊಟ್ಟಿವೆ. ನಾನೂ ಹಿಂಗೆ ತಲೆಲಿ ಹೊತ್ಕಂಡ್ ಹೋನೆ.

ಕಮಲ ಅದ್ಕೆ ಏನ್ ಮಾಡೋಕು ಗೊತ್ತುಟ್ಟಾ ಗೌರಿ! ನಿಮ್ಮ ಊರ್‌ಲಿ ಒಂದಸ್ಟ್ ಹೆಣ್ಮಕ್ಕ ಸೇರಿ ಒಂದು ಸಂಘಟ ಮಾಡ್ಕಣಿ. ಈಗ ನೋಡು ಸ್ತ್ರೀಶಕ್ತಿ, ಸ್ವಸಹಾಯ ಸಂಘದಂತ ಇನ್ನೂ ಬೇಕಸ್ಟ್ ಯೋಜನೆಗ ಇದ್ದ್, ಅವರಂಗೆ ಈಗ ಎಷ್ಟೊ ಸಂಘ ಸಂಸ್ಥೆಗ ಹೆಣ್ಮಕ್ಕಳಿಗಾಗಿ, ಅದರ್ಲೂ ನಸ ಗ್ರಾಮಗಳ ಅಭಿವೃದ್ಧಿಗಾಗಿಯೇ ಇದ್ದದೆ. ನೀವೆಲ್ಲಾ ಸೇರಿ ಸಂಘದ ಮುಕಾಂತರ ನೀವು ಮಾಡ್‌ದಂತ ಕೈಕೆಲ್ಸತೇಳ್ರೆ ಗುಡಿ ಕೈಗಾರಿಕೆ ತೇಳಿ ಏನುಟ್ಟೊ ಆ ವಸ್ತ್‌ಗಳ್ನ ಮಾರಾಟ ಮಾಡ್ರೆ ವಳ್ಳದ್. ಒಮ್ಮೆ ಒಂದು ಕಡೆ ವಳ್ಳ ಗುಣಮಟ್ಟದ ವಸ್ತ್ ಸಿಕ್ಕಿದೆ ತೇಳ್ರೆ ಅದ್ಕೆ ಬೇಡಿಕೆ ಬಂದೆ ಬಂದದೆ.

ಗೌರಿ ಹೌದು ಕಮಲಕ್ಕಾ ನೀನ್ ಹೇಳ್ದ್ ನಿಜ. ಈಚೆಗೆ ಹೆಣ್ಮಕ್ಕ ಕೆಸ್ರ್‌ಗದ್ದೆಲಿ ಓಡ್ದು ಹಗ್ಗ ಜಗ್ಗಾಟದಂತ ಸಾಹಸ ಆಟಗಳ್ಲಿ ಗೆದ್ದ್ ಬಹುಮಾನ ಪಡ್ದೊಳೊ ನಿಂಗೆ ಗೊತ್ತುಟಾ!

ಕಮಲ ಹೌದು. ಪೇಪರ್ಲಿ ಓದ್ಯೊಳೆ ಅದ್ ಮಾತ್ರ ಅಲ್ಲ. ಇನ್ನ್ ಮುಂದೆ ನೀವು ತಿಂಗಳಿಗೊಂದು ಬಿಡುವು ಮಾಡ್ಕಂಡ್ ಎಲ್ಲಾ ಹೆಣ್ಮಕ್ಕ ಸೇರಿ ಚರ್ಚೆ ಮಾಡೊಕು ಸಾಂಸ್ಕೃತಿಕ ಕಾರ್ಯಕ್ರಮಗಳ್ನ ಸಣ್ಣ ಸಣ್ಣ ಪ್ರವಾಸಗಳ್ನ ನಡ್ಸೊಕು. ಹಂಗೆ ನರ್ಸರಿಗಳ್ನ ಮಾಡಿ ಗಿಡಗಳ್ನ ಬೆಳ್ಸೊಕು ಇದ್ಕೆ ಸರ್ಕಾರಂದ ಸಹಾಯ ಧನ ತೇಳಿಸಿಕ್ಕಿದೆ. ಸಮಯ ಇರ್‌ಕನ ಮನೆ ಮುಂದೆ ಜಾಗಯಿದ್ದರೆ ಹೂತ್ಟಾಟ ಹಿಂದ್‌ಗಡೆ ಜಾಗಯಿದ್ದರೆ ಖರ್ಚಿಗೆ ತರ್ಕಾರಿ ಬೆಳ್ಸಕ್.

ಈ ತರ ಕಾರ್ಯಕ್ರಮಗಳ್ನ ಮಾಡಿಕಂಡ್‌ಯಿದ್ದರೆ ಶರೀರದ ಆಯಾಸ ಪರಿಹಾರಾಗಿ ಮನ್ಸ್‌ಗೆ ನೆಮ್ಮದಿ ಸಹ ಕಂಡ್‌ಕಣಕ್ ಅಲ್ಲಾ ಗೌರಿ!

ಗೌರಿ ಹೌದು ನೀನ್‌ಹೇಳ್ದೊನೊ ಸರಿ. ಹಳ್ಳಿಲಿ ಇನ್ನೂ ಏನೇನೊ ಎಷ್ಟ್‌ಷ್ಟೊ ಕೆಲಸ ಮಾಡಕ್. ಈಗ ನೋಡು ಮಳೆಗಾಲ ಬರ್‌ತಾವುಟ್ಟು. ಬಂದುಟು. ಪಣ್‌ಪುಳಿ ಹಣ್ಣಾಗುವ ಸಮಯ. ಅದರ್‌ಂದ ಸ ವಳ್ಳ ಆದಾಯ ಪುಟ್ಟು. ಇವರ ಗಿಡಗಳ್ನ ಸ ಈಗ ನರ್ಸರಿಲಿ ಬೆಳ್ಸುವೆ. ನಾನೂ 2 ಗಿಡ ತಂದ್ ನೆಟ್ಟೊಳೆ 1 ವರ್ಸಕ್ಕೆ ಫಸಲ್ ಕೊಟ್ಟಿದೆ ತೇಳ್ದೊ. ಈಗ ನೋಡ್ರೆ 5 ವರ್ಸಾದ್ರೂ ಫಸಲ್ ಬುಟ್ಟಿತ್‌ಲೆ.

ಕಮಲಕ್ಕ ಅಲ್ಲಾ, ಗೌರೀ ನೀನ್ ಪಣ್‌ಪುಳಿ ತೇಳ್ದ್ ನೋಡು ಗ್ಯಾನಾತ್ ನಂಗೆ. ಒಂದು ಕುಪ್ಪಿ ಪೆಂಗಾರ್ ಮಾಡಿಕೊಡು ದುಡ್ಡು ಎಸ್ಟಾದರೂ ಪರ್ವಾಗಿಲ್ಲೆ. ಈಗೆಲ್ಲಾ ಹುಳಿನೀರ್‌ಗೆ ಬಾರಿ ರೇಟ್‌ಗಡಾ ಹೋ.. ಬಸ್ ಬಾತ್ ಕಂಡದೆ ಇನ್ನೊಮ್ಮೆ ಕಾಂಬಕನ ಮಾತಡ್ದೊ. ಮನೆಲಿ ಎಲ್ಲವುಕು ನನ್ನ ನಮಸ್ಕಾರ ತಿಳ್ಸ್‌ಆತಾ! ಹೇಳ್ದೆಲ್ಲಾ ನೆನ್‌ಪುಲಿ ಇಟ್ಕ್‌ಕ ಆತಾ!

ಗೌರಿ (ಮನ್ಸ್‌ಲಿ) ಅಲ್ಲಾ, ನನ್ನ ತಲೆಲಿದ್ದ ಕುಕ್ಕೆಗಳ್ನ ನೋಡ್ದ ತಕ್ಷಣ ಎಷ್ಟೊಂದು ವಿಷಯ ಗೊತ್ತಾತ್.. ಹೌದು.. ನಾನ್ ನಮ್ಮ ನೆರೆಕರೆ ಎಲ್ಲಾ ಹೆಣ್ಮಕ್ಕಳ್ನ ಅಕ್ಕಂದ್‌ಸ್ನ ಸೇರ್ಸಿ.. ಹಿಂಗೆ ಕಮಲಕ್ಕ ಹೇಳ್ದ ಮಾತ್‌ನ ನಮ್ಮ ಸರೋಜಕ್ಕಂಗೂ ತಿಳ್ಸಿನೆ. ಇದ್ಕೆಲ್ಲಾ ಸರೋಜಕ್ಕನೆ ಸರಿ.

ಆತ್. ಕಮಲಕ್ಕಾ ಹೋಗಿ ಬಾ ತೇಳಿ ಕೈಯ್ಯಾಡ್ಸಿದೆ ಗೌರಿ.

ಜನಪದ ಕಸೂತಿಯಲ್ಲಿ ಮಹಿಳೆ

ಮನುಷ್ಯ ಸದಾ ಚೈತನ್ಯವಾಗಿ ಇರಲು ತನ್ನ ಪರಿಸರದಲ್ಲಿ ಏನಾದರೊಂದು ಹುಡುಕುತ್ತಾ ಇರುವಾಗ ಆತ ಪಟ್ಟ ಶ್ರಮ ಕಲೆಯ ಹುಟ್ಟಿಗೆ ಕಾರಣವಾಗಿದೆ ಎಂದು ಗುರುತಿಸಿದ್ದಾರೆ ವಿದ್ವಾಂಸರು ಮನುಷ್ಯ ತನ್ನ ನಿತ್ಯ ಜೀವನದಲ್ಲಿ ಹಂತ ಹಂತವಾಗಿ ತನ್ನ ಬದುಕನ್ನು ಸಾರ್ಥಕ ಮಾಡುತ್ತಾ ಇರುವಾಗ ಉಂಟಾದ ಭಯ, ಆಯಾಸ, ಉತ್ಸಾಹ ಇವುಗಳ ಗುರುತಿಸುವಿಕೆಯನ್ನು ಕಲೆ ಎಂದು ಕರೆಯಲಾಗಿದೆ.

ಪ್ರಾಚೀನ ಕಾಲದಿಂದಲೂ ಜನಪದ ಕಲೆ ಹೆಚ್ಚು ಮನ್ನಣೆ ಪಡೆದ ಕಲೆಯಾಗಿದೆ. ಜನಪದ ಕಲೆಯು ಕಲೆಯ ಆತ್ಮವೆನಿಸಿದೆ. ಗ್ರಾಮೀಣ ಜನರ ಮನಸ್ಸನ್ನು ಸೆರೆಹಿಡಿದ ಅವರ ಆನಂದ, ಅಂದ, ಚೆಂದ ಮತ್ತು ದುಡಿಮೆ ಸಮಯದಲ್ಲಿ ಸೃಷ್ಟಿಯಾದ ಕಲೆ ಎನಿಸಿದೆ. ಇದನ್ನು ಗ್ರಾಮೀಣ ಜನರು ನೆಲ, ಗೋಡೆ, ಚರ್ಮ, ತಾಳೆಗರಿ, ರಟ್ಟುಗಳಲ್ಲಿ ದಾರದ ಸಾಧನೆಯ ಮೂಲಕ ಎಂದರೆ ಹೊಲಿಗೆಯ ಮೂಲಕ ತೋರಿಸಿದ್ದಾರೆ

ಹೀಗೆ ಬಟ್ಟೆ ಮಾಧ್ಯಮದಲ್ಲಿ ದಾರ ಸೂಜಿಗಳಿಂದ ನಿರ್ಮಿತವಾದುದು ಕಸೂತಿ ಕಲೆ ಎನಿಸಿದೆ. ಕೈ ಕಸೂತಿಯು ಜನಪದ ಮಾದರಿಯಾದರೆ ಯಂತ್ರ ಕಸೂತಿಯು ನಾಗರಿಕ ಮಾದರಿಯದ್ದಾಗಿದೆ. ಕರ್ನಾಟಕ ಕಸೂತಿ ಕಲೆಯು ಮಹಿಳೆಯರಿಂದ ಉಳಿದುಕೊಂಡಿದೆ ಕಾರಣ ಅವುಗಳಲ್ಲಿ ಸೌಂದರ್ಯ ಧರ್ಮ ವೃತ್ತಿ ಪ್ರಯೋಜನ ಮತ್ತು ಮನರಂಜನೆಯ ಮೂಲವೆಂದು ವಿಂಗಡಿಸಲಾಗಿದೆ. ಕರ್ನಾಟಕದ ಧಾರವಾಡ ಸುತ್ತಮುತ್ತ ಮಹಿಳೆಯರ ನಂಬಿಕೆ ಧಾರ್ಮಿಕ, ಸಾಮಾಜಿಕ, ಮಾನಸಿಕ ಭಾವನೆಗಳು ಸ್ತ್ರೀ ಜೀವನ ಚಿತ್ರಗಳು ಕಸೂತಿಯ ಮೂಲಕ ಪ್ರಕಟಗೊಂಡು ಅವರ ಅಭಿರುಚಿ ಆಸಕ್ತಿ ಜನಪದರ ನಂಬಿಕೆ ಶ್ರಮದ ಫಲವಾಗಿ ಸ್ವಪ್ರತಿಭೆಯಿಂದ ಪೂರೈಕೆಯಾಗಿದೆ. ದೇವರ ಮೇಲಿನ ನಂಬಿಕೆಯನ್ನು ಕೂಡಾ ಕಸೂತಿಯ ಮೂಲಕ ಅರಳಿಸಿದ್ದಾರೆ.

ಹೀಗೆ ಮಹಿಳೆಯರ ವಿರಾಮ ಪ್ರಯೋಜನಕ್ಕಾಗಿ ಗೆರೆಗಳನ್ನು ಎಳೆದು ಬಣ್ಣ ತುಂಬಿಸಿ ಜೀವ ತುಂಬಿ ಕಲೆಯನ್ನು ಜೀವಂತ ಮಾಡಲು ಶ್ರಮಿಸಿ ಮಹಿಳೆಯರು ಕಲೆಯ ಹುಟ್ಟಿಗೆ ಕಾರಣವಾಗಿ ಅದನ್ನು ಶಾಶ್ವತವಾಗಿ ಉಳಿಸಿಕೊಂಡರು. ಕಸೂತಿ ಕಲೆ ಮಹಿಳೆಯರದ್ದೇ ಸೊತ್ತು ಎಂದಿದ್ದರೂ ಸಂಪ್ರದಾಯಸ್ಥೆಯರಾದ ಮಹಿಳೆಯರು ಮನೆಯಲ್ಲಿ ಕುಳಿತು ವಿರಾಮ ಜೀವನದ ಸಮಯದಲ್ಲಿ ಬಟ್ಟೆಯ ಮೇಲೆ ದಾರಗಳಿಂದ ತಮ್ಮ ಭಾವನೆಯನ್ನು ಮೂಡಿಸಿ ಕಸೂತಿ ಕಲೆಯ ಸೌಂದರ್ಯವನ್ನು ಹೆಚ್ಚಿಸಿದರು. ಹೀಗಾಗಿ ಕಸೂತಿಯಲ್ಲಿ ಧರ್ಮಮೂಲ, ಸೌಂದರ್ಯ ಮೂಲ ಮತ್ತು ವೃತ್ತಿಮೂಲವೆಂದು ವಿಂಗಡಿಸಿದ್ದಾರೆ. ಕಸೂತಿ ಕಲೆ ಪ್ರಕೃತಿ ಸ್ಫೂರ್ತಿ ಮತ್ತು ಮನುಷ್ಯ ಕಲ್ಪನೆಗಳ ಮೂಲಕ ಬಂದಿರುತ್ತದೆ. ಪೂರ್ವ ವೈದಿಕ ಕಾಲದಲ್ಲಿ ಬಾಳಿದ ಜನರ ಸಂಸ್ಕೃತಿ ಬಹಳ ಉಚ್ಚಮಟ್ಟದಾಗಿತ್ತೆಂದು ಆಕಾಲದಲ್ಲೂ ಚರ್ಮ ಮತ್ತು ಉಡುಪುಗಳಿಗೆ ಚಿನ್ನದ ಎಳೆಗಳಿಂದ ಕಸೂತಿ ಹಾಕಿದ್ದರೆ ಮಹೆಂಜೋದಾರೊದಲ್ಲಿ ಕಂಚಿನ ಸೂಜಿಗಳನ್ನು ಹಾಗೂ ಮಗದರ ಕಾಲದಲ್ಲಿ ಮಸ್ಲಿನ್ ಬಟ್ಟೆಯ ಮೇಲೆ ಕಸೂತಿ ಹಾಕುತ್ತಿದ್ದರೆನ್ನಲಾಗಿದೆ.

ಮೊಗಲರ ಆಳ್ವಿಕೆ ಕಾಲದಲ್ಲಿ ಭಾರತಕ್ಕೆ ಬಂದ ಕಸೂತಿ ಕಲೆಯನ್ನು ಹಿಂದೂ ಮತ್ತು ಮುಸ್ಲಿಂ ಅರಸರು ಪ್ರೋತ್ಸಾಹಿಸಿ ಬೆಳೆಸಿದರು. ಭಾರತದ ಕಸೂತಿ ಕಲೆಯ ಮೇಲೆ ವಿದೇಶಿಯರ ಪ್ರಭಾವದಿಂದ ಶೈಲಿಗಳು ಬದಲಾಗಿದ್ದು ಮಣಿಪುರ ಸ್ತ್ರೀಯರ ರೇಷ್ಮೆ ಹೊಲಿಗೆಯ ಕಲೆ, ಬನಾರಸದ ಕಲಾಬತ್ತಿನ ಕಸೂತಿ ಸೀರೆ ಭಾರತದ ಮಹಿಳೆಯರ ಕಲಾಭಿರುಚಿಗೆ ಸಾಕ್ಷಿಯಾಗಿದೆ. ಹಿಂದೆ ಧನಿಕ ಮನೆಯ ಸ್ತ್ರೀಯರು

ಕೂಡಾ ಪ್ರತಿದಿನ ಗಂಟೆ ಗಟ್ಲೆ ಕಸೂತಿ ಹೊಲಿಗೆಯಲ್ಲಿ ನಿರತರಾಗಿರುತ್ತಿದ್ದರು. ಕಸೂತಿ ಕಲೆಯು ಸುಂದರವಾಗಿ ಮನ ಮೋಹಕವಾಗಿದ್ದು ಮನಸಿಗೆ ಮುದ ನೀಡುತ್ತದೆ. ಆದ್ದರಿಂದ ಹೆಂಗಸರು ವಿರಾಮ ವೇಳೆಯಲ್ಲಿ ಮನರಂಜನೆಯೊಂದಿಗೆ ಹಣ ಸಂಪಾದನೆ ಮಾಡುತ್ತಾ ನೆರೆಮನೆಯವರಿಗೂ ಹೇಳಿಕೊಡುತ್ತಾ ವಿರಾಮ ಕಾಲದ ಸದುಪಯೋಗಕ್ಕಾಗಿ ಕಸೂತಿ ಕಲೆಯನ್ನೇ ಬಳಸಿಕೊಂಡರು.

ಇತ್ತೀಚೆಗೆ ಸಂಘ ಸಂಸ್ಥೆಗಳು ಕೂಡಾ ತರಬೇತಿಯನ್ನು ಕೊಡುತ್ತಿದ್ದು ಕಸೂತಿಯ ಬೆಳವಣಿಗೆಯಲ್ಲಿ ಮಹತ್ತರ ಪಾತ್ರ ವಹಿಸಿವೆ. ಹೀಗೆ ಉತ್ತರ ಕರ್ನಾಟಕದಲ್ಲಿ ಕಸೂತಿ ಕಲೆ ಉಳಿದಿದೆ. ಇದರಲ್ಲಿ ಹೆಣೆಯುವವರಲ್ಲಿ ತೋರುವ ಸಮಾಧಾನ ಮತ್ತು ನೋಡುವವರಲ್ಲಿ ಕಾಣುವ ತೃಪ್ತಿ ಮುಖ್ಯವಾಗಿದೆ. ಕಸೂತಿ ಹಾಕಿದ ಉಡುಪುಗಳನ್ನು ಧರಿಸುವುದು ನಾಗರಿಕರಲ್ಲಿ ವಿಶೇಷವೆನಿಸಿದೆ. ಕಸೂತಿಯ ಸಾಂಪ್ರದಾಯಿಕ ವಿನ್ಯಾಸಗಳನ್ನೇ ಯಂತ್ರಗಳ ಮೂಲಕವೂ ಕಾಣಬಹುದು. ವಾಣಿಜ್ಯ ದೃಷ್ಟಿಯಿಂದ ಕಸೂತಿ ಕಲೆಗೆ ಹೆಚ್ಚಿನ ಮಹತ್ವ ಬರುತಿದ್ದು ಪ್ರತಿಷ್ಠೆಯ ಸಂಕೇತವಾಗಿ ಸಾಂಸ್ಕೃತಿಕ ಹಿರಿಮೆಯನ್ನು ಪಡೆದು ಕೊಳ್ಳುತ್ತಿರುವುದು ಗಮನಿಸಬೇಕಾದ ಅಂಶ.

ಕಸೂತಿ ಕಲೆಯೊಡನೆ ಮಹಿಳೆಯರ ಮನರಂಜನೆಯ ಪ್ರತೀಕವಾಗಿ ಮಂಗಳಕರ ಚಿಹ್ನೆಯಾಗಿ ಗೃಹಲಂಕಾರ ವಸ್ತುವಾಗಿ ಆತ್ಮದ ಅಭಿವ್ಯಕ್ತಿಗೆ ಒಂದು ಮಾಧ್ಯಮವಾಗಿ ಮಂಗಳಕರ ಅಲಂಕಾರಿಕ ಶುಭ ಸೌಭಾಗ್ಯ ಜೀವನ ಶ್ರದ್ಧೆ ಆರ್ಥಿಕ ಮಟ್ಟ ತೋರುವ ಮಧ್ಯವರ್ತಿ ಇದಾಗಿದೆ.

ಮಡ್ಕೇರಿ ದಸರ

ಸ್ವರ್ಗ ನೋಡೊಕಾ ನೀವು ಸ್ವರ್ಗ ನೋಡಾಕಾ
ಬೇಕು ತೇಳ್ರೆ ಪೋಂಬ ಬನ್ನಿ ಮಡ್ಕೇರಿ ದಸರಕ್ಕೆ
ಮಡ್ಕೇರಿ ಮಳೆ ಮಂಜ್ ಮೀರಿ ಇರ್‌ಳ್ ಬೆಳ್‌ಕಾತ್
ಇರ್‌ಳ್ ಬೆಳಕಾತ್ ದೇವಲೋಕ ಸೃಷ್ಟಿ ಆತ್
ಚಾಮುಂಡೇಶ್ವರಿ ಕರಗ ಗಾ। ನಾಕ್ ದಿಕ್ಕ್‌ಗಳ್‌ಂದಾ
ಮುಂದೆ ಚಂಡೆ ಸದ್ದ್. ಹಿಂದೆ ದೇವಿ ಕರಗಾ।
ವಾದ್ಯ ಕೊಣ್ತ್‌ದ ಮಧ್ಯ ಯುವಕರ ಗುಂಪು ಅಲ್ಲಿ
ನವರಾತ್ರಿ ದಿನದಾ ದಸರಾ ನೋಡಿಕೆ ಪೋರ್ದು ಅಲ್ಲಿ
ದಾರಿ ದಾರ್ಲಿ ನೋಟಾ ನಡ್ದ್ ನೋಡ್‌ದೆ ಲಾಯ್ಕಾ
ನಡ್ದ್ ನೋಡುದೇ ಲಾಯ್ಕಾ। ಎಲ್ಲೆಲ್ಲೂ ರಾಕ್ಷಸರಾ ಕಾಟಾ
ಉಗಿವ ಹೊಗೆನಾ ನೋಡ್ರೆ। ಕಾರುವ ಬೆಂಕಿನ ಕಂಡ್ರೆ
ಸ್ವರ್ಗ ನೋಡೊಕಾ ನೀವು ಸ್ವರ್ಗ।
ವಿದ್ಯುತ್ ಚಾಲನೆ ತೇರ್‌ಲಿ। ಚಂಡ ಮುಂಡ ರಾಕ್ಷಸರ್।
ರಾಕ್ಷಸರ ಆರ್ಭಟ ನಡುಲೆ ಮಡ್ಕೇರಿ ನಗರ ನಡ್‌ಗಿದೆ
ಪಿರಿ ಪಿರಿ ಮಳೆ ಕ್ವಾಟಗಾಳಿ ವರುಣನ ಹೆದ್ರಿಕೆ ನಡುಲೆ
ಮಡ್ಕೇರಿ ಮಳೆ ಮಂಜ್ ಮೀರಿ। ಬನ್ನಿ ಪೋಯಿ ದಸರಕ್ಕೆ।।

ಕೆಸು:

ಸಾಮಾನ್ಯವಾಗಿ ಮಳೆ ಬಂದ ನಂತರ ಬೆಳೆಯುವುದು ಕೆಸು. ಇದರಲ್ಲಿ ಹಲವು ವಿಧಗಳಿದ್ದರೂ ಗೆಡ್ಡೆ, ದಂಟು, ಸೊಪ್ಪು, ಬೇರುಗಳು ಉಪಯೋಗವಂತೂ ರೈತರಿಗೆ ದಿನದ ಊಟದಿಂದ ಹಿಡಿದು ಹಬ್ಬದವರೆಗೂ ತಿನಿಸು ತಯಾರಿ ಬಹಳ ರುಚಿ. ಕೆಸುವಿನ ಸಾಂಬಾರು, ಪಲ್ಯವೊ ಊಟಕ್ಕಿದ್ದರೆ ಇದೇನಪ್ಪಾ ಕೆಸುವಿನ ಸಾರೆ? ಅಂದರೆ ಕೆಲವರಿಗೆ ಅಲರ್ಜಿ ಕಡಿತ ಹಾಗಾಗಿ ಬೇಡದ ವಸ್ತುವಾದರೂ ಸಾಮಾನ್ಯ ವರ್ಷದ ಎಲ್ಲಾ ಸಮಯದಲ್ಲೂ ನಮಗೆ ಸಿಕ್ಕುವುದು ಕರಿಕೆಸು. ಇದರ ದಂಟು ಕಪ್ಪಾಗಿದ್ದು ನೀರು ಇರುವ ಎಲ್ಲಾದರೂ ಸರಿ ಬೆಳೆಯುತ್ತದೆ. ಏನಿಲ್ಲೆಂದರೂ ಕರಿಕೆಸುವಿನ ಪಲ್ಯ ಕೆಲವರಿಗೆ ತುಂಬಾ ಪ್ರಿಯವಾದ ಪಲ್ಯ. ಇದರ ಚಿಗುರು ದಂಟುಗಳು ಒಣ ಮೆಣಸಿನ ಒಗ್ಗರಣೆಯಲ್ಲಿ ನಿಂಬೆ ಹುಳಿ ರುಚಿಯೊಂದಿಗೆ ವಿಶೇಷ ಪಲ್ಯ, ವಿವಿಧ ಬಗೆಯ ಕೆಸುವನ್ನು ನಾವು ಮನೆ ಅಂಗಳದಲ್ಲೇ ಬೆಳೆಸ ಬಹುದು. ಇದಕ್ಕೆ ಗೊಬ್ಬರ ಚಪ್ಪರ ಬೇಕಾಗಿಲ್ಲ.

ಈಗ ಮುಖ್ಯವಾಗಿ ಮಳೆ ಬಿದ್ದ ನಂತರ ಮರಗಳಲ್ಲೊ ಬಂಡೆಗಳಲ್ಲೊ ಹುಟ್ಟುವ ಮರಕೆಸು ಬಹಳ ಹೆಸರು ಮಾಡಿದೆ. ಅದರ ಸೊಪ್ಪಿನಿಂದ ತಯಾರಾಗುವ ವಿವಿಧ ಮಾದರಿಯ ತಿನಿಸುಗಳು ನಮ್ಮ ಗೃಹಿಣಿಯರ ಕೈಯಲ್ಲಿ ಪತ್ರೊಡೆ, ಉಪ್ಪಿಟ್ಟು, ಬೇರಿನಿಂದ ದಂಟಿನಿಂದ ಹುರಿದು ಒಡೆದುಹಾಕಿದ ಇಲಾತಿಕಾಳು (ಬೀನ್ಸ್) ಬೆಳ್ಳುಳ್ಳಿ ಒಗ್ಗರಣೆ ತೆಂಗಿನಕಾಯಿ ಮಸಾಲೆಯಿಂದ ಹೆಚ್ಚು ರುಚಿಯಾಗಿರುತ್ತದೆ. ಪತ್ರೊಡೆಯಿಂದ ಒಂದು ಹೊತ್ತು ಕಳೆಯುವುದೂ ಇದೆ.

ಕೆಸುವಿನ ಎಲೆಯ ಪತ್ರೊಡೆ:

(ಕರಿಕೆಸ, ಮಲೆಯಾಳಕೆಸ, ಮರಕೆಸ)

10-15 ಎಲೆ

1 ಪಾವು ಬೆಳ್ತಕ್ಕಿ	1 ಹಿಡಿ ಕಡ್ಲೆಬೇಳೆ
1 ಅಚ್ಚು ಬೆಲ್ಲ	1 ಹಿಡಿ ಹೆಸರು ಕಾಳು
10 ಕೆಂಪು ಮೆಣಸು	ಚೂರು ಇಂಗು

ಪಟ್ಟೆ, ಲವಂಗ, ಸಾಕಷ್ಟು ಉಪ್ಪು, ನಿಂಬೆ ಗಾತ್ರದ ಹುಣಸೆ ಹುಳಿ

ಅಕ್ಕಿ ಮತ್ತು ಹೆಸರು ಕಾಳನ್ನು 1 ಗಂಟೆ ನೆನೆಹಾಕಿ ನಂತರ ಉಳಿದ ಸಾಮಾನುಗಳನ್ನು ಚಟ್ನಿಯಂತೆ ನೀರು ಹಾಕಿ ಕಲ್ಲಿನಲ್ಲಿ ರುಬ್ಬಬೇಕು. ಕೆಸುವಿನ ಎಲೆ ಬೆನ್ನಿನಲ್ಲಿ ದಪ್ಪ ನಾರು ಇದ್ದರೆ ಅದನ್ನು ತೆಗೆದು ತೊಳೆದು ನಂತರ ಇದ್ದ ಎಲೆಗಳಲ್ಲಿ ದೊಡ್ಡದನ್ನು ಆರಿಸಿ ರುಬ್ಬಿದ ಹಿಟ್ಟನ್ನು ತೆಳ್ಳಗೆ ಚಮಚದಲ್ಲಿ ಸವರಬೇಕು. ಇದೇ ರೀತಿ 5 ಎಲೆಗಳಿಗೆ ಸವರಿ ಒಂದಾದ ನಂತರ ಒಂದು ಇಟ್ಟು ಎಡಬಲ ಬದಿಗಳನ್ನು ಮಡಚಿ ಹಾಸಿಗೆಯಂತೆ ಸುತ್ತಿ ಬಾಳೆನಾರು ಅಥವಾ ನೂಲಿನಲ್ಲಿ 2 ಕಡೆ ಕಟ್ಟಿ, ಹಾಕಿ ಕಳಸಿಗೆಯಲ್ಲಿ ಬೇಯಿಸಬೇಕು. ಬೆಂದ ಮೇಲೆ ತಿನ್ನಬಹುದು. ರುಚಿ ಬೇಕಿದ್ದರೆ ಬಿಲ್ಲೆ ಬಿಲ್ಲೆಯಾಗಿ ಕತ್ತರಿಸಿ ದೋಸೆ

ಕಾವಲಿಯಲ್ಲಿ ಎಣ್ಣೆ ಸವರಿ ; ಬದಿಯನ್ನು ಕಾಯಿಸಿ ತಿನ್ನಬಹುದು. ಅದರ ಮೇಲೆ ನಿಂಬೆ ಹಣ್ಣಿನ ರಸವನ್ನು ಹಾಕಬಹುದು. ಅಥವಾ ಕಳಸಿಗೆಯಲ್ಲಿ ಬಿದಿರ ಕಟ್ಟಿಯಿಟ್ಟು, ಬಟ್ಟಲಲ್ಲಿ ಹೊಯ್ದು ಬೇಯಿಸಿ ಚಿಕ್ಕ ದಾಗಿ ಕತ್ತರಿಸಿ ಎಣ್ಣೆಹಾಕಿ ಒಗ್ಗರಣೆಕೊಟ್ಟು ಉಪಯೋಗಿಸಬಹುದು.

ಎಳ್ಳಡಿಗೆ

ನಮಸ್ಕಾರ, ಯಾವಾಗ್ಲೂ ಎಲ್ರಿಗಿಂತ ಮೊದಲು ಬಂದು ನಮ್ಮನ್ನೆಲ್ಲಾ ಇದಿರು ನೋಡ್ತಾ ಇದ್ರಲ್ಲಾ.. ಆದರೆ ಇವತ್ತು ಈಗ ಬರ್ತಾ ಇದ್ದೀರಿ. ಏನು ಹೊರಡುವಷ್ಟರಲ್ಲಿ ಯಾರಾದರೂ ನೆಂಟ್ರು ಬಂದ್ರಾ ಹೇಗೆ?

ನಮಸ್ಕಾರ ಎಲ್ರಿಗೂ, ಅದೇನು ವಿಷಯ ಬಾರಿ ಚರ್ಚೆ ನಡೆದಿದೆ?

ಹಾಗೇನೂ ಇಲ್ಲ. ಇವತ್ತು ತುಂಬಾ ಬಿಸಿಲಿತ್ತು ನೋಡಿ,- ಅಕ್ಕಿ -ಕೊತ್ತಂಬರಿ, ಎಳ್ಳು- ಮೆಂತೆ- ಇವನ್ನೆಲ್ಲಾ ತೊಳೆದು ಒಣ ಹಾಕಿದ್ದೆ. ಅದೇನು ಬಹಳ ಗಂಭೀರ ವಿಷಯ ಚರ್ಚಿಸುವಂತಿದೆ.

ಹೌದು, ನಾವು ಮಹಿಳಾ ಉದ್ಯೋಗಿಗಳ ವಿಷಯ ಮಾತನಾಡ್ತಾ ಇದ್ದೆವು. ಅದ್ಸರಿ ಎಳ್ಳುಮೆಂತೆ ತೊಳೆದು ಹಾಕಿದೆ ಎಂದಿರಲ್ಲಾ ಅದು ಏಕೆ ಎಳ್ಳಡಿಗೆ ಎಂದರೆ ಯಾವ ಅಡಿಗೆ? ಅದನ್ನು ತಯಾರಿಸುವ ಬಗೆ ಏನೇನು ವಸ್ತುಗಳು ಬೇಕೆಂದು ಸ್ವಲ್ಪ ವಿವರವಾಗಿ ತಿಳಿಸುತ್ತೀರಾ?

ಓ ಅದಕ್ಕೇನು ಧಾರಾಳವಾಗಿ ತಿಳಿಸುವ. ಎಳ್ಳಡಿಗೆಯನ್ನು ತಯಾರಿಸಲು ಎಳ್ಳು, ಮೆಂತೆ, ತೆಂಗಿನಕಾಯಿ, ಎಣ್ಣೆ ಬೆಲ್ಲ ಇವಿಷ್ಟು ವಸ್ತುಗಳು ನಿಷ್ಪತಿ ಪ್ರಕಾರ ಬೇಕು.

ಒಂದು ಕೆ.ಜಿ. ಎಳ್ಳು, 3 ದೊಡ್ಡ ತೆಂಗಿನಕಾಯಿ, ಅರ್ಧ ಕೆ.ಜಿ. ಬೆಲ್ಲ, ಅರ್ಧ ಕೆ.ಜಿ. ಮೆಂತೆ, ಕಾಲು ಲೀಟರ್ ಎಣ್ಣೆ, ಸ್ವಲ್ಪ ತುಪ್ಪ, ತುಪ್ಪವನ್ನು ರುಚಿಗೆ ಕಡಿಮೆ ಪ್ರಮಾಣದಲ್ಲಿ ಹಾಕಿದರೂ ಸಾಕು.

ಎಳ್ಳು ಮತ್ತು ಮೆಂತೆಯನ್ನು ಬೇರೆ ಬೇರೆಯಾಗಿ ತೊಳೆದು ಬಿಸಿಲಿನಲ್ಲಿ ಚೆನ್ನಾಗಿ ಒಣಗಿಸಬೇಕು. ನಂತರ ಎಳ್ಳನ್ನೂ ಸಿಡಿಯುವ ಹಾಗೆ ಹುರಿದಿಟ್ಟು ಮೆಂತೆಯನ್ನು ಸಹ ಕೆಂಪಗೆ ಹುರಿದು ಬೇರೆ ಬೇರೆಯಾಗಿ ಪುಡಿಮಾಡಬೇಕು. ಬೆಲ್ಲದ ಅಚ್ಚನ್ನು ಚೂರಿಯಿಂದ ಹೆರೆದು ಇಟ್ಟುಕೊಂಡು ತೆಂಗಿನಕಾಯಿ ಅಥವಾ ಕೊಬ್ಬರಿಯನ್ನು ತುರಿದು ಅಗಲವಾದ ದಪ್ಪ ಪಾತ್ರೆಯಲ್ಲಿ ಹಾಕಿ ಸಣ್ಣ ಉರಿಯಲ್ಲಿ ತಿರುಗಿಸುತ್ತಾ ಇರಬೇಕು. ತಳಹಿಡಿಯದಂತೆ ಎಚ್ಚರ ವಹಿಸಬೇಕು. ತುರಿಯು ಕೆಂಪಗಾಗಿ ಹಿಸುಕಿ ನೋಡಿದರೆ ಎಣ್ಣೆ ಬರುವಂತಿರಬೇಕು. ಕೊಬ್ಬರಿಯಾದರೆ ಹೆಚ್ಚು ಕಾಯಿಸುವುದು ಬೇಡ. ಈಗ ತುರಿಯನ್ನು ಎಣ್ಣೆಗೆ ಹಾಕಿ ತಿರುಗಿಸಬೇಕು. ಚೆನ್ನಾಗಿ ಬಿಸಿಯಾದ ನಂತರ ಮೆಂತೆ ಪುಡಿಯನ್ನು ಸೇರಿಸಿ ಮಿಶ್ರಮಾಡಿ ಸಣ್ಣ ಉರಿಯಲ್ಲಿ ಬೇಯಿಸುವುದು. ಮೆಂತೆ ಪುಡಿ ಬೆಂದ ನಂತರ ಎಳ್ಳುಪುಡಿ ಮತ್ತು ಹೆರೆದ ಬೆಲ್ಲದ ಪುಡಿಯನ್ನು ಅದರ ಜೊತೆಯಲ್ಲಿ ಚೆನ್ನಾಗಿ ಮಿಶ್ರಮಾಡಬೇಕು. ಸರಿಯಾಗಿ ಮಿಶ್ರವಾದ ನಂತರ ಇಳಿಸಿ ಆರಲು ಬಿಡುವುದು. ಆರಿದ ನಂತರ ಒಂದು ಪಾತ್ರೆಯಲ್ಲಿ ಅಂದರೆ ಡಬ್ಬದಲ್ಲಿ ತುಂಬಿಸಿಟ್ಟುಕೊಳ್ಳಬೇಕು ಬೇಕಾದಾಗ ತಿನ್ನುವುದು. ಕೆಲವು ದಿನ ಕೆಡದಂತೆ ಇರುತದೆ.

ಅಲ್ಲಾ ಈ ಅಡಿಗೆಯನ್ನು ಯಾರೂ ಬೇಕಾದರೂ ತಿನ್ನಬಹುದಾ? ಮತ್ತು ಇದರಿಂದ ಆಗುವ ಪ್ರಯೋಜನ ಏನು? ಸ್ವಲ್ಪ ತಿಳಿಸುತ್ತೀರಾ?

ಇದು ತುಂಬಾ ಕೊಬ್ಬಿನಂಶ ಇರುವ ಪದಾರ್ಥ. ನಿಶಕ್ತರಿಗೂ ಮತ್ತು ಬಾಣಂತಿಯರಿಗೂ ದೇಹಕ್ಕೆ ಪುಷ್ಟಿ ನೀಡುವ ಔಷಧಿಯ ಅಡುಗೆಯಾಗಿರುತ್ತದೆ. ಆದರೆ ಬಾಯಿ ರುಚಿಗೆಂದು ಇದನ್ನು ಹೆಚ್ಚು ತಿಂದರೆ ಆರೋಗ್ಯ ಕೆಟ್ಟೀತು ಜೋಕೆ. ನೀವೆಲ್ಲರು ನಿಮ್ಮ ನಿಮ್ಮ ಮನೆಯಲ್ಲಿ ತಯಾರಿಸಿ ತಿಂದು ನೋಡಿ ಮತ್ತೆ ಬೇರೆಯವರಿಗೂ ಕಲಿಸಿಕೊಡಿ.

ಎಳ್ಳುಡಿಗೆ ಮಾಡುವ ವಿಧಾನ ಮತ್ತು ಅದಕ್ಕೆ ಬೇಕಾದ ಸಾಮಾನು ಮತ್ತೆ ಅದರ ಸೇವನೆಯಿಂದ ಪ್ರಯೋಜನವನ್ನು ತಿಳಿಸಿಕೊಟ್ಟ ನಿಮಗೆ ತುಂಬಾ ವಂದನೆಗಳು.

ಬಾಣಂತಿ ಔಷಧಿ

ವಿಜ್ಞಾನ ಮುಂದುವರಿಯದಿದ್ದ ಅಂದಿನ ಕಾಲದಲ್ಲಿ ಹಳ್ಳಿಗಳಲ್ಲೇ ಕೆಲವು ಹೆಣ್ಮಕ್ಕಳು ಪ್ರತಿಫಲಾಪೇಕ್ಷೆಯಿಲ್ಲದೆ ಸೇವೆ ಸಲ್ಲಿಸುತ್ತಿದ್ದುದರಲ್ಲಿ ಹೆರಿಗೆ ಸೇವೆಯು ಮಾನವೀಯತೆ ದೃಷ್ಟಿಯಿಂದಲೂ ಪ್ರೀತಿ ಒಗ್ಗಟ್ಟು ವಿಶ್ವಾಸದಿಂದಲೂ ನಡೆಯುತ್ತಿತ್ತು. ಆ ಸಂದರ್ಭಗಳಲ್ಲಿ ಪ್ರತಿ ಕಾಯಿಲೆಗಳಿಗೆ ಹೆರಿಗೆಯಾದ ಬಾಣಂತಿಯರಿಗೆ ಚಿಕ್ಕ ಮಕ್ಕಳಿಗೆ ಹಿತ್ತಲಲ್ಲಿ ಕಾಡಿನಲ್ಲಿ ಬೆಳೆಯುವ ಮತ್ತು ಮನೆಯಂಗಳದಲ್ಲಿ ಬೆಳೆಸುವ ಗಿಡ ಮೂಲಿಕೆಗಳಿಂದ ಔಷಧಿಗಳನ್ನು ಕಂಡುಕೊಂಡಿದ್ದರು. ಅದರಂತೆ ಒಂಬತ್ತು ದಿನ ಬಾಣಂತಿಯರಿಗೆ ಕೊಡುವ ಔಷಧಿಗಳನ್ನು ಇಲ್ಲಿ ಕೊಡಲಾಗಿದೆ. ಇಂದು ಪರಿಸರದಲ್ಲಿ ಈ ಔಷಧಿಯ ಗಿಡ ಮೂಲಿಕೆಗಳು ನಶಿಸಿ ಅಳಿವ ಅಂಚಿನಲ್ಲಿರುವುದು ವಿಷಾದದ ಸಂಗತಿ.

ಬಾಣಂತಿ ಔಷಧಿ:-

1. ಕಪ್ಪು ಜೀರಿಗೆ ಎರಡು ಚಮಚ, ನಂಜಿನ ಬೀಜ ಎರಡು ಚಮಚ, ಕಂಯ್ಯುಳ್ಳಿರಸ ಎರಡು ಚಮಚ, ಬೆಳ್ಳುಳ್ಳಿ 8ಎಸಳು ಚೂರು ಹಸಿ ಅರಶಿನ ಗಟ್ಟಿಯಾಗಿ ಅರೆದು ಚೆನ್ನಾಗಿ ಕುದಿಸಿ ಕುಡಿಯುವುದು
2. ಮಗೆ ಸಂಬಾರ:- ಎರಡು ಚೂರು ತೆಂಗಿನಕಾಯಿ, ಸಂಬಾರ, ಈರುಳ್ಳಿ ಒಂದು, ಜೀರಿಗೆ, ಒಳ್ಳೆ ಮೆಣಸು, ಓಮಕ್ಕಿ, ಬೆಳ್ಳುಳ್ಳಿ 10 ಎಸಳು. ಮೆಣಸು 2 ನಾಲ್ಕು ಲೋಟ ನೀರು ಸೇರಿಸಿ ಕುದಿಸಿ ಎರಡುವರೆ ಲೋಟ ಮಾಡಿ 2 ಅಥವಾ 3 ಸಲ ಕುಡಿಯುವುದು.
3. ಬೈನೆ ಕೆತ್ತೆ ಸ್ವಲ್ಪ ಒಡಿವಾಳ ಮುಕ್ಕಾಲು ಮೊಳ ಉದ್ದದ ತುಂಡು, ಓಮಕ್ಕಿ, ಒಳ್ಳೆ ಮೆಣಸು, ಬೆಳ್ಳುಳ್ಳಿ 8 ಎಸಳು ಸೇರಿಸಿ ಕುಟ್ಟಿ ಕುದಿಸಿ ಕುಡಿಯುವುದು.
4. ಸಣ್ಣ ಚುಂಡೆ ಮತ್ತು ಗಿಣಕೆ ಸೊಪ್ಪು ಸೇರಿಸಿ ಅರೆದು ಕುದಿಸಿ ಕುಡಿಯುವುದು.
5. ಹಾಗಲ ಸೊಪ್ಪು ಸ್ವಲ್ಪ ಒಳ್ಳೆ ಮೆಣಸು ಜಾಸ್ತಿ ಸೇರಿಸಿ ಕುಟ್ಟಿ ಕುದಿಸಿ ಕುಡಿಯುವುದು. ಹಾಗೂ ಬೆಳ್ಳುಳ್ಳಿ ಪಾಯಸ ಮಾಡುವುದು.
6. ಗಜ್ಜುಗದ ಚಿಗುರು ಬೆಳ್ಳುಳ್ಳಿ ಒಳ್ಳೆ ಮೆಣಸು ಸೇರಿಸಿ ಅರೆದು ಕುದಿಸಿ ಕುಡಿಯುವುದು.
7. ಕಟ್ರೆ ಬಳ್ಳಿ-ಬೆಳ್ಳುಳ್ಳಿ ಒಳ್ಳೆ ಮೆಣಸು ಸೇರಿಸಿ ಅರೆದು ಕುದಿಸಿ ಕುಡಿಯುವುದು.
8. ಗಾಳಿ ಸೊಪ್ಪು ಮತ್ತು ದೊಡ್ಡಪತ್ರೆ

9. ಪೊಲ್ಲಿ ಸೊಪ್ಪು ಕುಡಿಯುವುದು ಮತ್ತು ಮೈಗೆ ತಿಕ್ಕುವುದು, ಪ್ರತಿಯೊಂದಕ್ಕು ಕಂಯ್ಯುಳಿ ರಸ ಸ್ವಲ್ಪ ಮತ್ತು ಹಸಿ ಅರಶಿನ ಸೇರಿಸ ತಕ್ಕದ್ದು. ಹಾಗೂ ಬಾಣಂತಿಯೊಡನೆ ಮಗುವಿಗೂ ಒಂದು ತೊಟ್ಟು 9 ದಿನ ಕೊಡುವುದು.

1. ನಾಲಗೆಯಲ್ಲಿ ಬಿಳಿ ಅಕ್ರ ಬಂದರೆ ಅಕ್ರಕಾಯಿ ಮೊಸರು ಮಜ್ಜಿಗೆಯಲ್ಲಿ ಅರೆದು ಬಾಯಿಗೆ ಕೊಡುವುದು.
2. ಕೆಮ್ಮುಲಿಗೆ, ಲವಂಗ, ವಿಳ್ಯದ ಎಲೆರಸ ಅಥವಾ ಕರಿ ತುಳಸಿ ರಸದಲ್ಲಿ ಕೊಡುವುದು.
3. ಜಾಯಿಕಾಯಿ ಮೊಸರಿನಲ್ಲಿ ಅಥವಾ ಹಸುವಿನ ತುಪ್ಪದಲ್ಲಿ ಕೊಡುವುದು
4. ಇಂಗು ಎದೆ ಹಾಲಿನಲ್ಲಿ ಅರೆದು ಕೊಡುವುದು.

ಮನೆ ಅಂಗಳ ತೋಟದಲ್ಲಿ ಸಿಕ್ಕುವ ಔಷಧಿಗಳು

ದೊಡ್ಡ ಪತ್ರೆ, ಪಂಚ ಪತ್ರೆ, ಬಿಳಿ ದಾಸವಾಳ, ನಾಗದಾಳಿ, ನರ್ಗಿಸ, ಕರಿತುಳಸಿ ಬಜೆ, ಪುದೀನ, ರಾಮ ತುಳಸಿ ಹಾಗೂ ಗಜ್ಜುಗ, ನೆಕ್ಕಿ, ಕೂರಂಬೇರು, ಕಾಮ ಕಸ್ತೂರಿ, ಲವಂಗ, ಇಪ್ಪುಲಿ ಗರ ಗಸ ಬಳ್ಳಿ, ಬೈನೆ ಮರದ ಸಿಪ್ಪೆ, ಉದುರು ಬಳ್ಳಿ (ಜೊಂಪೆ ಬೇರು ಗೆಣಸುತರ) ಒಡಿವಾಳ-ಕಟ್ರೆ ಬೇರು, ಕಟ್ರೆ ಬಳ್ಳಿ, ಕೋರನ ಕೊಳ್ಳಿ-ಮುಳ್ಳುಸೊಪ್ಪು, ಕಹಿಬೇವು, ಮಾದ್ರುಳಿಹೂ, ಪೇರ್ಲ ಚಿಗುರು, ಚಂಡೆ ಬಳ್ಳಿ, ಉಮಿ ಬಳ್ಳಿ, ಬಾದಂಗೊಲ್ಲಿ.

<u>ನ್ಯಾಪಸಕ್ಕೆ</u>:

ಈರುಳ್ಳಿ ರಸ, ಬಜೆ ರಸ, ಜೇನು ಸೇರಿಸಿ ಒಂದು ಚಮಚ ಒಂದು ವಾರ ಸೇವಿಸುವುದು.

<u>ಗಂಟಲು ಕೆರೆತಕ್ಕೆ</u>:

ಉಪ್ಪು, ಕರಿಮೆಣಸು, ಶುಂಠಿ, ಬೆಳ್ಳುಳ್ಳಿ ಮತ್ತು ತುಳಸಿ ಎಲೆ ಕಷಾಯ ಮಾಡಿ ಕುಡಿಯುವುದು ಮತ್ತು ಮುಕ್ಕಳಿಸುವುದು ಬಾಯೊಳಗಿನ ರೋಗಕ್ಕೂ ಮತ್ತು ವಾಯು ಸಂಬಂಧ ರೋಗಕ್ಕೂ ಉತ್ತಮ ಔಷಧಿ

<u>ವಾಂತಿ ಭೇದಿ ರಕ್ತ ಭೇದಿಗಳಿಗೆ</u>:- ತಕ್ಷಣಪರಿಹಾರ

ಒಂದು ನಿಂಬೆ ಹುಳಿ ರಸ ಅಷ್ಟೆ ಪ್ರಮಾಣದ ಸಕ್ಕರೆ ಮಿಶ್ರ ಮಾಡಿ 2 ಸಲ ಕುಡಿಯುವುದು.
ಒಂದು ನಿಂಬೆ ರಸ ಹಣ್ಣಿನ ರಸಕ್ಕೆ ಉಪ್ಪು ಸೇರಿಸಿ ಕುಡಿಯುವುದು.
ರಕ್ತ ಭೇದಿಗೆ ನೇರಳೆ ಹಣ್ಣು, ಬೈನೆ ಗಿಡದ ತಿರುಳು ರಾಮಬಾಣ.

<u>ತಲೆ ಕೂದಲಿಗೆ</u> :-

ಬಿಳಿದಾಸವಾಳದ ಸೊಪ್ಪು, ಮದುರಂಗಿ ಸೊಪ್ಪು, ಕರಿಬೇವು ಸೊಪ್ಪು, ತಿಮರೆ ಸೊಪ್ಪು ಎಲ್ಲಾವನ್ನು ಕುಟ್ಟಿ ಹರಳೆಣ್ಣೆ 1/4ಲಿ, ತೆಂಗಿನೆಣ್ಣೆ 1/4ಎಳ್ಳೆಣ್ಣೆ 1/4ಲಿ. ಸಮ ಪ್ರಮಾಣದಲ್ಲಿ ಸೇರಿಸಿ ಕಾಯಿಸಿ ಇಟ್ಟುಕೊಂಡು ಉಪಯೋಗಿಸುವುದು.

ಕೊಡಗಿನ ಜಾನಪದ ಕಲೆಗಳ ಅಳಿವು ಉಳಿವು

ಕೊಡಗು ಜಾನಪದ ಮತ್ತು ಸಾಂಸ್ಕೃತಿಕ ಪರಿಷತ್ತು ಕೊಡಗಿನ ಜನಪದ ಕಲೆಗಳ ಅಳಿವು ಉಳಿವು ಎಂಬಂತೆ ಸಾರ್ವಜನಿಕರಿಗಾಗಿ ಪ್ರಬಂಧ ಸ್ಪರ್ಧೆ ಏರ್ಪಡಿಸಿರುವುದು ಸ್ವಾಗತಾರ್ಹವಾಗಿದೆ. ಅಳಿವ ಅಂಚಿನಲ್ಲಿರುವ ಜಾನಪದ ಕಲಾ ಪ್ರಕಾರಗಳನ್ನು ಪ್ರೋತ್ಸಾಹಿಸಿ ಬೆಳೆಸುವ ಈ ಯೋಜನೆ ಕೊಡಗು ನಾಡಿನ ಎಲ್ಲಾ ಜನಾಂಗದವರ ಮಿಲನಕ್ಕೆ ಆಸ್ಪದವಾಗುತ್ತದೆ ಎಂಬುದು ಮುಖ್ಯವಾಗಿದೆ. ಇಂತಹ ಕಲೆಗಳನ್ನು ಒಟ್ಟಾಗಿ ಆಡಲು ಪ್ರದರ್ಶಿಸಲು ಹೊರಟಾಗ ಕಲಾವಿದರು ತಮ್ಮಿಂದ ತಾವೇ ಆತ್ಮೀಯರಾಗುತ್ತಾರೆ. ಇಲ್ಲಿ ಜಾತಿ ಜನಾಂಗದ ಪ್ರಶ್ನೆ ಬರುವುದಿಲ್ಲ. ತಮ್ಮ ಕಲೆಯನ್ನು ಪ್ರದರ್ಶಿಸಲು ಒಮ್ಮತ ಮನಸಿನಿಂದ ಕೂಡಿದ ಕಲಾವಿದರು ಅಪರ ಕಲೆಯನ್ನು ಮೆಚ್ಚುವುದು ಸಹಜ. ಒಂದು ಜನಾಂಗದ ಅಥವಾ ಒಂದು ಊರಿನ ಜಾನಪದ ಕಲೆಯನ್ನು ಇನ್ನೊಂದು ಜನಾಂಗದವರು ಅಥವಾ ಇನ್ನೊಂದು ಊರಿನವರು ನೋಡಿ ಸರಿ ತಪ್ಪುಗಳನ್ನು ವಿಮರ್ಶೆ ಮಾಡಬಹುದು. ಒಬ್ಬರ ಕಲೆಯನ್ನು ಇನ್ನೊಬ್ಬರು ನೋಡಿ ಮೆಚ್ಚುವುದು ಅಂತರಾಳದಿಂದ ಬರುವ ಆತ್ಮೀಯತೆ ಪ್ರೀತಿ ವಿಶ್ವಾಸಕ್ಕೆ ಒಗ್ಗಟ್ಟಿಗೆ ನಾಂದಿಯಾಗುತ್ತದೆ.

ಕೊಡಗಿನ ಎಲ್ಲಾ ಜನಾಂಗದ ಕಲಾವಿದರು ಒಟ್ಟುಗೂಡಿ ಪ್ರದರ್ಶನ ನೀಡುವಾಗ ಅದೊಂದು ಅಪೂರ್ವ ಕಲಾ ಸಂಗಮವೆನಿಸುತ್ತದೆ. ಆ ಸಂಗಮಕ್ಕೆ ಪ್ರೋತ್ಸಾಹದ ಬೆಳಕು ಕಲಾ ಮಂದಿರವಾಗಲು ಕಾರಣವಾಗುತ್ತದೆ. ಆ ಕಲಾ ಮಂದಿರವನ್ನು ಉಳಿಸಿ ಬೆಳೆಸುವುದು ಜನಪದರದೊಳಗಿರುತ್ತದೆ. ಹಾಗೂ ಜನಪದ ಕಲಾವಿದರ ಕೆಲಸವಾಗಿರುತ್ತದೆ. ಈ ಕೆಲಸಕ್ಕೆ ಮುಖ್ಯವಾಗಿ ಆರ್ಥಿಕ ನೆರವು ಮುಖ್ಯವಾಗಿರುತ್ತದೆ.

ಕೊಡಗು ಜಿಲ್ಲೆಗೆ ಸಂಬಂಧಿಸಿದಂತೆ ಹೆಚ್ಚಿನ ಜಾನಪದ ಕಲೆಗಳಲ್ಲಿ ಪುರುಷರು ಮುಖ್ಯ ಪಾತ್ರವಹಿಸುತ್ತಾರೆ. ವ್ಯವಸಾಯದ ಕಸುಬಿನಲ್ಲಿ ಭತ್ತದ ವ್ಯವಸಾಯ ಮುಖ್ಯವಾಗಿದ್ದು, ಈ ಕೆಲಸ ಮುಗಿಸಿದ ರೈತನಿಗೆ ವಿಶ್ರಾಂತಿಯ ಅವಶ್ಯಕತೆಯಿತ್ತು. ಆಗ ಜನರೇ ಕಂಡುಕೊಂಡ ಪರಿಹಾರ ಕೈಲ್ ಪೊಮು ಎಂಬ ಹೆಸರಲ್ಲಿ ಭಾರಗುಂಡು ಎಸೆತ, ತೆಂಗಿನಕಾಯಿಗೆ ಕಲ್ಲು ಹೊಡೆಯುವುದು ನಾಟಿಗದ್ದೆಯ ಓಟ ಹಾಗೂ ತಮ್ಮ ಬಲಾಬಲ ಪ್ರದರ್ಶನ ಮಾಡುವಂತಹ ಹಗ್ಗ ಜಗ್ಗಾಟದ ಜಾನಪದ ಕ್ರೀಡಾ ಕಲೆಗಳಲ್ಲಿ ಮನರಂಜನೆ ಕಂಡು ಕೊಂಡರು. ನಂತರ ವರ್ಷದ ಅನ್ನಕ್ಕೆ ಧಾನ್ಯಲಕ್ಷ್ಮಿಯ ಹೆಸರಿಟ್ಟು ಪೂಜಿಸಿ ತಮ್ಮ ಸಂತಸ ಮತ್ತು ನೆಮ್ಮದಿಗಾಗಿ ಹುತ್ತರಿ ಎಂಬ ಹಬ್ಬವನ್ನು ಆಚರಿಸತೊಡಗಿದರು. ನಾಗರಿಕತೆ ಬಾರದ ಅಂದಿನ ಇಂತಹ ದಿನಗಳಲ್ಲಿ ತಮ್ಮ ಸಂಬಂಧಿಕರೊಡನೆ ಕೂಡಿ ಆಡಿ ಉಣ್ಣುವುದು ಅಂದಿನ ದಿನಗಳ ಜಾನಪದ ಬದುಕಿಗೆ ಮೆರುಗು ಎಂಬುವುದಿತ್ತು. ಹುತ್ತರಿ ಹಬ್ಬದ : ದಿನವೂ ಊರಿನ ಗಂಡಸರು ಬೆಳದಿಂಗಳ ರಾತ್ರಿ ಕೋಲಾಟ, ಬೊಳಕಾಟಗಳನ್ನು ಆಡುತ್ತಾ ಸಂತೋಷ ಪಡುತ್ತಿದ್ದರು.

ಕೊಡಗು ಜಾನಪದಕ್ಕೆ ಕೊಡಗಿನ ವಿವಿಧ ಜನಾಂಗವರ ಕೊಡುಗೆ ಬಹಳ ಮುಖ್ಯವಾದುದು. ಕೊಡಗಿನ ಸೋಮವಾರಪೇಟೆಯ ಒಕ್ಕಲಿಗ ಜನಾಂಗದವರ ಬೀಸುಕತ್ತಿ ಜಿಲ್ಲೆಯಲ್ಲೇ ಅತ್ಯಂತ

ಆಕರ್ಷಣೀಯ ಕಲೆ ಎಂದರೆ ತಪ್ಪಾಗಲಾರದು. ಜಮ್ಮ ಮಾಪಿಳ್ಳೆಯರ ದಪ್ಪಾಟದ ತಾಳದ ಲಯದ ರಭಸವಂತೂ ಅದ್ಭುತವೇ ಸರಿ. ಕೊಡವರ ವೀರ ಕತ್ತಿಯಾಟ ಜಾನಪದದ ಕಪ್ಪೆಯಾಟ ಕೊಡವತಿಯರ ಧಾರ್ಮಿಕತೆಯನ್ನು ಸೂಸುವ ಉಮ್ಮತ್ತಾಟ, ಭಾಗಮಂಡಲದ ಕಾವೇರಮ್ಮ ದೇವಿಗೆ ಒಪ್ಪಿಸುವ ಕೋಲಾಟ ಅಲ್ಲದೆ ಕೊಡಗಿನ 18 ವರ್ಗದ ಜನಾಂಗದವರ ಎಲ್ಲಾ ಜಾನಪದ ಕಲೆಗಳು ಒಂದಲ್ಲ ಒಂದು ರೀತಿಯಲ್ಲಿ ಇಗ್ಗುತ್ತಪ್ಪ ಕಾವೇರಮ್ಮ ದೇವರಿಗೆಂದೆ ಅರ್ಪಿಸುವ ದೇವರ ಸೇವೆಯಾಗಿದೆ.

ಉಳಿದಂತೆ ಚೆಂಬುಪಿನ ಸಿದ್ದವೇಷ ತನ್ನ ಕಲೆಯನ್ನು ಉಳಿಸಿಕೊಂಡಿದೆ. ಹುತ್ತರಿಯಲ್ಲಿ ಮನೆ ಹಾಡುವ ಸುಂದರವಾದ ಜೋಗಿಯ ಆಟ ನಶಿಸಿದ ಕಲೆಯಲ್ಲಿ ಒಂದೆನ್ನಬಹುದು. ಕೈಯಲ್ಲಿ ಅಂಗರೆಕೋಲು ಮೈಯೆಲ್ಲಾ ಒಣ ಬಾಳೆಯ ಎಲೆ, ತಲೆಗೆ ಬಾಳೆ ಎಲೆಯ ಟೋಪಿ, ಕುತ್ತಿಗೆಯಲ್ಲಿ ಚೆಂಡು ಹೂವಿನ ಜೋಗಪ್ಪ ಮಕ್ಕಳನ್ನು ಅಣಕಿಸುತ್ತಾ ಬರುವ ದೃಶ್ಯ ಚರಿತ್ರೆಗೆ ಸೇರಿದೆ. ಸ್ವಾಭಾವಿಕವಾದ ಎರವ ಹೆಂಗಸರ ಕುಣಿತ ಉಳಿಯುವುದರಲ್ಲಿ ಆ ಜನಾಂಗದ ಯುವತಿಯರು ಆಸಕ್ತಿವಹಿಸಬೇಕು. ಹಬ್ಬ ಹರಿದಿನಗಳಲ್ಲಿ ಧಾರ್ಮಿಕತೆಯ ಹೆಸರಿಗೆ ಮಲೆಯರು, ಪಣಿಕರು, ಬಣ್ಣರು, ಕಾಪಾಳರ ಕೊಡುಗೆ ಮುಖ್ಯವಾಗಿದೆ. ಊರಿನ ಮೇದನು ತನ್ನ ಚಂಡೆಯನಾದವನ್ನು ಇಡೀ ಊರಿಗೆ ಪ್ರಸಾರ ಮಾಡುವುದರ ಮೂಲಕ ಮತ್ತು ತನ್ನ ಕೈ ಕಲೆಯನ್ನು ಪಟ್ಟೆ ಮೊರವನಲೆ ಇವುಗಳ ಉಳಿಸುವಿಕೆ ಮುಖ್ಯ ಪಾತ್ರವಹಿಸುವು ದರಿಂದ ಅವನು ಕೊಡಗಿನ ದೇವರ ಕೃಪೆಗೆ ಪಾತ್ರನು. ಶುಭ ಅಶುಭ ಕಾರ್ಯಗಳಲ್ಲಿ ಕುಂಬಾರ ಮತ್ತು ಮಡಿವಾಳನ ಪಾತ್ರವು ಮುಖ್ಯವಾದುದು. ಹಾಗೆಯೇ ವಾದ್ಯಗಾರನ ಕಲೆ ಮಹತ್ವ ಪೂರ್ಣ. ತೆರೆ ಮತ್ತು ಕೋಲಗಳು ಇಲ್ಲಿನ ಜಾನಪದ ಕೊಡುಗೆಗೆ ಮೆರುಗು ನೀಡಿವೆ.

ಕೊನೆಯದಾಗಿ ಕೊಡಗು ಅರೆ ಗನ್ನಡ ಗೌಡ ಜನಾಂಗದವರ ಎಲ್ಲಾ ಜಾನಪದ ಕಲೆಗಳೂ ಕೊಡಗಿನ ಆಟಗಳೊಂದಿಗೆ ಬೆರೆತು ಹೋಗಿವೆ. ಗೌಡ ಮಹಿಳೆಯರಿಗಾಗಿಯೇ ಇರುವ ಶುಭ ಸೋಬಾನದ ಹಾಡುಗಳು ಜಾನಪದ ಸಾಹಿತ್ಯರಂಗದಲ್ಲಿ ಸ್ವಲ್ಪಮಟ್ಟಿಗೆ ಉಳಿದಿದೆ ಎನ್ನಬಹುದು. ಇವರು ಭತ್ತವನ್ನು ತಂದು ಹೊಸ್ತು ಎಂಬ ಹೆಸರಿನಲ್ಲಿ ಇಗ್ಗುತ್ತಪ್ಪ ಕಾವೇರಮ್ಮ ದೇವರಿಗೆ ನೈವೇದ್ಯ ಮಾಡಲು ಭತ್ತವನ್ನು ಕುಟ್ಟಿ ಅಕ್ಕಿ ಮಾಡುವ ಒಂದು ಕಲೆ ಆಧುನಿಕತೆಯಿಂದ ನಶಿಸಿದ್ದರೂ ಇವರಾಡುವ ಕೋಲಾಟ ಶಿವ ಪಾರ್ವತಿಯ ಉಮ್ಮತ್ತಾಟದ ಮಟ್ಟಕ್ಕೆ ನಿಲ್ಲುವಂತಹದ್ದು. ಹೀಗೆ ಕೊಡಗು ಜಿಲ್ಲೆಯ ಜಾನಪದ ಕಲೆಯು ಅತ್ಯಂತ ಸಿರಿವಂತಿಕೆಯನ್ನು ವಿಭಿನ್ನತೆಯನ್ನೂ ಹೊಂದಿದೆ ಎಂಬುವುದರಲ್ಲಿ ಎರಡು ಮಾತಿಲ್ಲ.

ಕೊಡಗು ಜಿಲ್ಲೆಯ ಜಾನಪದ ಕಲೆಯನ್ನು ಉಳಿಸಲು ಮೊದಲಿಗೆ ಆಯಾ ಊರಿನ ಪ್ರಮುಖರು, ಹಿರಿಯರು ಮುಖ್ಯ ಪಾತ್ರ ವಹಿಸಬೇಕು. ಪರ ಊರುಗಳಿಂದ ಕರೆಸಿ ಪ್ರದರ್ಶನ ನೀಡುವ ಬದಲು ಊರಿನ ಯುವ ಸಂಘ ಸಂಸ್ಥೆಗಳ ಮೂಲಕ ಅಥವಾ ಜನಾಂಗದವರ ಮೂಲಕ ಯುವಕ ಯುವತಿಯರಿಗೆ ತರಬೇತು ನೀಡಿ ಆಯಾ ಹಬ್ಬ ಹರಿದಿನಗಳಿಗೆ ಸಂಬಂಧಿಸಿದಂತೆ ಊರಿನ ಆಲದ ಕಟ್ಟೆ ಅಂಬಲ ಮತ್ತು ದೇವಸ್ಥಾನಗಳಲ್ಲಿ ಪ್ರದರ್ಶನ ನೀಡುವ ವ್ಯವಸ್ಥೆಯಾಗಬೇಕು. ವರ್ಷಕ್ಕೊಮ್ಮೆ ಕಡ್ಡಾಯವಾಗಿ ಬೊಳಕಾಟ ದಂತಹ ಆಟಗಳನ್ನು ದೇವಸ್ಥಾನಗಳಲ್ಲಿ ದೇವರು ಬಲಿಬರುವ ಮೊದಲು ಸೇವೆ ಆಗಬೇಕು.

ಆಟಗಳು ಜನಾಕರ್ಷಣೀಯವಾದಾಗ ಜನ ಸಮುದಾಯವು ಸೇರುತ್ತದೆ. ಉದಾ: ಇಗ್ಗುತ್ತಪ್ಪ, ಪಾಲೂರು, ಭಾಗಮಂಡಲದಂತಹ ಹೆಸರಾಂತ ದೇವಸ್ಥಾನಗಳಲ್ಲಿ ಈ ಪರಿಪಾಠವನ್ನು ಪ್ರತಿಯೊಬ್ಬರು ಕಲಿತಾಗ ನಶಿಸುತ್ತಿರುವ ಜಾನಪದ ಕಲೆಗೆ ಜೀವಂತಿಕೆ ತುಂಬಬಹುದು.

ಪ್ರದರ್ಶನ ವ್ಯವಸ್ಥೆ ಮಾಡಬೇಕು. ಬೇರೆ ಜಿಲ್ಲೆಗಳ ಜಾನಪದ ಕಲೆಯಂತೆ ಹಬ್ಬ ಹರಿದಿನಗಳಲ್ಲಿ ದೇವರು ಬಲಿ ಬರುವ ಮೊದಲು ದೇವಸ್ಥಾನ ಸುತ್ತಲೂ ಯುವಕ ಯುವತಿಯರ ಗುಂಪು ಸಾಲುಗಟ್ಟಿ ದೀಪ ಕಳಸದ ಪ್ರದರ್ಶನ ನೀಡಬೇಕು. ಬೊಳಕಾಟ ದಂತಹ ಕಲೆಯನ್ನು ಯುವಕರು ಕಡ್ಡಾಯವಾಗಿ ಕಲಿಯಬೇಕು. ಉದಾಹರಣೆಗೆ ಕೊಡಗಿನ ದೊಡ್ಡ ದೇವಸ್ಥಾನಗಳಲ್ಲಿ (ಇಗ್ಗುತ್ತಪ್ಪ, ಪಾಲೂರು, ಭಾಗಮಂಡಲದಲ್ಲಿ) ಈ ಪರಿಪಾಠವನ್ನು ಜಾತಿ ಭೇದವಿಲ್ಲದೆ ಪ್ರಯತ್ನಿಸಿದಾಗ ಕೊಡಗಿನ ಜಾನಪದ ಕಲೆಯನ್ನು ಜನಾಕರ್ಷಣೀಯ ಮಾಡಿದಾಗ ಜಾನಪದ ಕಲೆಯನ್ನು ಉಳಿಸುವ ಯಶಸ್ವಿ ಪ್ರಯತ್ನ ಯಾಕಾಗುವುದಿಲ್ಲ?

ಜಾನಪದ ಕಲೆಯನ್ನು ಉಳಿಸಲು ಜಾನಪದ ಸಾಂಸ್ಕೃತಿಕ ಪರಿಷತ್ತು ಮುಖ್ಯ ಪಾತ್ರ ವಹಿಸಬೇಕು. ಪ್ರತಿ ಊರಿನಲ್ಲಿ ಸಾಧ್ಯವಾಗದಿದ್ದರೆ ಮಂಡಲದ ಮೂಲಕ 2 ವರ್ಷಕ್ಕೊಮ್ಮೆಯಾದರೂ ಪ್ರದರ್ಶನಕ್ಕೆ ಅವಕಾಶವಿರಬೇಕು. ಇದರಲ್ಲಿ ಕನ್ನಡ ಸಂಸ್ಕೃತಿ ಅಧಿಕಾರಿಗಳ ಪಾತ್ರವು ಪ್ರೋತ್ಸಾಹದಾಯಕವಾಗಿ ಆರ್ಥಿಕ ನೆರವು ನೀಡುವುದರ ಮೂಲಕ ತಮ್ಮ ಮಹತ್ವವನ್ನು ಉಳಿಸಿಕೊಳ್ಳಬೇಕು. ಎಲ್ಲಾ ಕಲೆ ಮತ್ತು ಕಲಾವಿದರನ್ನು ಪ್ರೋತ್ಸಾಹಿಸಲು ಆರ್ಥಿಕ ನೆರವು ಮುಖ್ಯವೆಂಬುದು ಎಲ್ಲರಿಗೂ ತಿಳಿದ ವಿಷಯವಾಗಿದೆ.

ಕೊಡಗಿನ ಗೌರಮ್ಮ

ಸಾಮೂಹಿಕ ಅನಿಷ್ಟ ಪದ್ಧತಿಗಳ ಮೇಲೆ ಸೌಜನ್ಯಯುತ ದಂಗೆ ಎಬ್ಬಿಸಿದ ಗೌರಮ್ಮ ತಮ್ಮ 19 ನೇ ವಯಸಿನಲ್ಲಿ ಕಥಾಲೋಕಕ್ಕೆ ಪಾದಾರ್ಪಣೆ ಮಾಡಿದರು. ಇವರು ಶೋಷಿಸಲ್ಪಟ್ಟ ಅವಹೇಳನಕ್ಕೆ ಒಳಗಾದ ಮಹಿಳೆಯರ ಹಾಗೂ ಹರೆಯದ ಯುವತಿಯರ ಕಾರ್ಪಣ್ಯ ತಮ ಜೀವನದ ಕುರಿತು ಸುಧಾರಣೆಯ ಲೇಖನಿಯ ಖಡ್ಗ ಹಿಡಿದು ಬೀಸಿದವರು. ತಮ್ಮ ಕಥಾ ಸರಣಿಯಲ್ಲಿ ಸಾಮಾಜಿಕ ಪರಿವರ್ತನೆಯ ಬೀಜ ಬಿತ್ತಿದವರು. 21 ಸಣ್ಣಕತೆಗಳಲ್ಲಿ, ಮುನ್ನಾದಿನ ಮರದಬೊಂಬೆ, ಆಹುತಿ, ಮನುವಿನ ರಾಣಿ, ಚಿಗುರು, ಕಂಬನಿ ಪ್ರಮುಖ ಕಥೆಗಳಾಗಿವೆ. ಇವರು ತನ್ನ 27 ನೇ ವಯಸಿನಲ್ಲಿ 21 ಕಥೆಗಳನ್ನು ಬರೆದು ವಿಧಿ ವಶರಾದವರು. ಇವರು ಕೊಡಗಿನ ಮಹಿಳಾ ಕಥೆಗಾರ್ತಿ ಗೌರಮ್ಮ ಎಂದೇ ಪ್ರಸಿದ್ಧರಾದವರು. ಕನ್ನಡ ಸಾಹಿತ್ಯ ಪರಿಷತ್ತು ಪ್ರತಿ ವರ್ಷ ಮಹಿಳಾ ಲೇಖಕಿಯರ ಉತ್ತಮ ಕೃತಿಗಳಿಗೆ ಪ್ರೋತ್ಸಾಹ ಕೊಡುವ ನಿಟ್ಟಿನಲ್ಲಿ ಸ್ಪರ್ಧೆಯನ್ನು ಇಟ್ಟು ದತ್ತಿ ಪ್ರಶಸ್ತಿ ನೀಡುತ್ತಿದೆ.

.: ಶುಭಂ :.



ಬೈತಡ್ಕ ಜಾನಕಿ ಬೆಳ್ಯಪ್ಪ

ಹಿನ್ನುಡಿ

ಕರ್ನಾಟಕದ ನಾನಾ ಪ್ರದೇಶಗಳಲ್ಲಿ ನೆಲೆಸಿರುವ ವಿವಿಧ ಜನಾಂಗಗಳ ಜನರ ವಿಭಿನ್ನ ಸಂಸ್ಕೃತಿಗಳನ್ನು ನಾವು ಅರಿಯಬೇಕಾದರೆ ಆಯಾ ಜಾತಿ ಜನಾಂಗಗಳ ಸಂಸ್ಕೃತಿಗಳ ಕುರಿತು ಆಳವಾಗಿ ಅಭ್ಯಾಸ ಮಾಡಬೇಕಾಗುತ್ತದೆ.

ಸುಮಾರು 350 ವರ್ಷಕ್ಕೂ ಮೊದಲು ಕೊಡಗಿಗೆ ದಕ್ಷಿಣ ಕನ್ನಡ ಭಾಗದಿಂದ ಬಂದ ಅರೆಗನ್ನಡ ಭಾಷೆಯನ್ನಾಡುವ ಗೌಡ ಜನಾಂಗದವರು ಅವರದೇ ಆದ ವಿಭಿನ್ನ ಸಂಸ್ಕೃತಿಯನ್ನು ಹೊಂದಿದವರಾಗಿರುತ್ತಾರೆ. ಇವರ ಪದ್ಧತಿ-ಪರಂಪರೆ, ಮದುವೆ-ನಾಮಕರಣ, ಹುಟ್ಟು-ಸಾವು ಹಾಗೂ ಆಚಾರ-ವಿಚಾರಗಳ ಧಾರ್ಮಿಕ ವಿಧಿ ವಿಧಾನಗಳು ಅವರದೇ ಆದ ರೀತಿಯಲ್ಲಿ ಬೆಳಕು ಚೆಲ್ಲಿದೆ. ಬಯಲು ಸೀಮೆಯ ಒಕ್ಕಲಿಗೌಡರು, ದಕ್ಷಿಣ ಕನ್ನಡ ಭಾಗದ ಅರೆಗನ್ನಡ ಗೌಡ ಜನಾಂಗದವರು ಕೃಷಿಕರಾಗಿದ್ದು ಅರೆಗನ್ನಡ ಭಾಷೆಯನ್ನಾಡುವ ಜನಸಮುದಾಯ. ಅವರು ಶುಭಕಾರ್ಯಗಳಲ್ಲಿ ಶೃಂಗೇರಿ ಶಾರದೆಯನ್ನು (ಸಬ್ಬಮ್ಮ) ಆರಾಧಿಸುತ್ತಿದ್ದರು. ಅನಂತರ ಮನೆ ದೇವರಾಗಿ ತಿರುಪತಿ ಶ್ರೀ ವೆಂಕಟರಮಣನನ್ನು ಆರಾಧಿಸುತ್ತಿದ್ದಾರೆ.

ಮಡಿಕೇರಿಯ ನಿವಾಸಿ ಶ್ರೀಮತಿ ಬೈತಡ್ಕ ಜಾನಕಿ ಬೆಳ್ಯಪ್ಪ ಅವರು ಅರೆಭಾಷಿಕ ಗೌಡ ಜನರ ಪದ್ಧತಿ-ಪರಂಪರೆ, ಸಂಸ್ಕೃತಿಗಳ ಆಚರಣೆಯ ಕುರಿತು **"ಅಕ್ಷಯ"** ಎಂಬ ಹೆಸರಿನ ಸಂಗ್ರಹ ಯೋಗ್ಯ ಪುಸ್ತಕವನ್ನು ಹೊರತಂದಿದ್ದಾರೆ. ಈ ಹಿಂದೆ ಇವರು ಸೋಬಾನೆ ಸಂಸ್ಕೃತಿಯ ದಾಖಲೆಗಳನ್ನು ಆಧರಿಸಿ ಹಸೆಮಣೆ ಎಂಬ ಪುಸ್ತಕ ಪ್ರಕಟಿಸಿದ್ದಾರೆ.

ಆಧುನಿಕ ಯುಗದಲ್ಲಿ ನಮ್ಮ ಸಂಸ್ಕೃತಿ, ಆಚಾರ, ವಿಚಾರ, ಪದ್ಧತಿ ಪರಂಪರೆಗಳು ದೂರವಾಗುತ್ತಿರುವುದನ್ನು ಅವಲೋಕಿಸಿದಾಗ ನಮ್ಮ ಪೀಳಿಗೆಗೆ ನಾವು ಆಯಾ ಕಾಲಕ್ಕೆ ತಕ್ಕಂತೆ ಇಂತಹ ಪದ್ಧತಿ ಸಂಸ್ಕೃತಿಗಳ ಸದುದ್ದೇಶಗಳನ್ನು ಒಳಗೊಂಡ ಮಾಹಿತಿಗಳನ್ನು ನೀಡಬೇಕಾಗಿರುವುದು ಅನಿವಾರ್ಯವಾಗಿದೆ. ಗೌಡ ಅರೆಗನ್ನಡ ಭಾಷಿಕ ಜನಾಂಗಕ್ಕೆ ಮಾರ್ಗದರ್ಶನ ನೀಡಬಲ್ಲ **"ಅಕ್ಷಯ"** ಹಿಂದಿನ ತಲೆಮಾರಿನ ಸಂಸ್ಕೃತಿಯನ್ನು ಪ್ರತಿಬಿಂಬಿಸಿರುವ ಕೃತಿಯಾಗಿದೆ.

ಶ್ರೀಮತಿ ಬೈತಡ್ಕ ಜಾನಕಿ ಬೆಳ್ಯಪ್ಪ ಅವರು ಅಪಾರ ಶ್ರಮವಹಿಸಿ ಪ್ರಕಟಿಸಿರುವ ಈ ಕೃತಿಯನ್ನು ಕೊಡಗು ಗೌಡ ಜನಾಂಗದ ಬಾಂಧವರು ಓದಿ ಸಮುದಾಯದ ಪದ್ಧತಿ-ಪರಂಪರೆಯ ಬಗ್ಗೆ ಚಿಂತನೆ ಹರಿಸಿದರೆ ಅದು ಒಟ್ಟು ಸಮಾಜದ ಸಂಸ್ಕೃತಿಯನ್ನು ಉಳಿಸಿ ಬೆಳೆಸಲಿದೆ. ಈ ನಿಟ್ಟಿನಲ್ಲಿ ಈ ಪುಸ್ತಕ ಗೌಡ ಅರೆಭಾಷಿಕ ಜನಸಮುದಾಯಕ್ಕೆ ಮಾರ್ಗದರ್ಶನ ಮಾಡುವ ಕೃತಿಯಾಗಿ ರೂಪುಗೊಂಡಿದೆ ಎಂದು ಹೇಳಬಯಸುತ್ತೇನೆ.

ಟಿ.ಪಿ. ರಮೇಶ್
ಅಧ್ಯಕ್ಷರು
ಕನ್ನಡ ಸಾಹಿತ್ಯ ಪರಿಷತ್, ಕೊಡಗು ಜಿಲ್ಲೆ, ಮಡಿಕೇರಿ.

Printed at : Sri Krishna Computers & Printers, Mdk. Ph : 224919, Mob : 94481 35592